"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

18ನೇ ಮಾರ್ಚ್ 2020
ಬುಧವಾರ

## ವಿಷಯಾನುಕ್ರಮಣಿಕೆ

1. **ಸಭೆಯ ಮುಂದಿಡಲಾದ ಕಾಗದ ಪತ್ರಗಳು.**

2. **ಕಾರ್ಯದರ್ಶಿಯವರ ವರದಿ**

3. **ವರದಿಯನ್ನೊಪ್ಪಿಸುವುದು**

4. **ವಿತ್ತೀಯ ಕಾರ್ಯಕಲಾಪ**
   **(ಪೂರಕ ಅಂದಾಜುಗಳನ್ನು ಒಪ್ಪಿಸುವುದು)**

5. **ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ**

   – ಶ್ರೀ ಹೆಚ್.ಎಂ.ರೇವಣ್ಣ
   – ಶ್ರೀ ಗೋವಿಂದ ಎಂ.ಕಾರಜೋಳ (ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು)
   – ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
   – ಶ್ರೀ ವಿ.ಸೋಮಣ್ಣ (ವಸತಿ ಸಚಿವರು)
   – ಶ್ರೀ ಕೆ.ಅಬ್ದುಲ್ ಜಬ್ಬಾರ್
   – ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)
   – ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)

6. **ವರದಿಯನ್ನೊಪ್ಪಿಸುವುದು**

7. **ಶಾಸನ ರಚನೆ**
   **ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

   **ಅ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2020**
   – ಶ್ರೀ ಎಸ್.ಸುರೇಶ್‌ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
   – ಶ್ರೀ ಶರಣಪ್ಪ ಮಟ್ಟೂರ
   – ಶ್ರೀ ಕೆ.ಟಿ.ಶ್ರೀಕಂಠೇಗೌಡ
   – ಡಾ॥ ತೇಜಸ್ವಿನಿಗೌಡ
   – ಶ್ರೀ ಐವನ್ ಡಿ'ಸೋಜಾ
   – ಶ್ರೀ ಎಸ್.ಎಲ್.ಭೋಜೇಗೌಡ
   – ಡಾ॥ ವೈ.ಎ.ನಾರಾಯಣಸ್ವಾಮಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಕೆ.ಸಿ.ಕೊಂಡಯ್ಯ
– ಶ್ರೀ ಎಸ್.ವ್ಹಿ.ಸಂಕನೂರ
– ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು)
– ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ
– ಶ್ರೀ ಅರುಣ ಶಹಾಪುರ
– ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
– ಶ್ರೀ ಎನ್.ರವಿಕುಮಾರ್
– ಶ್ರೀ ಅ.ದೇವೇಗೌಡ
– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
– ಶ್ರೀ ಮರಿತಿಬ್ಬೇಗೌಡ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**8. ಪ್ರಕಟಣೆ**

**9. ರಾಜ್ಯದಲ್ಲಿ ಕೋವಿಡ್–19 (ಕೊರೊನಾ ವೈರಸ್) ವೈರಸ್‌ನ ಹರಡುವಿಕೆಯ ನಿಯಂತ್ರಣ ಹಾಗೂ ಕೈಗೊಳ್ಳಲಾಗುತ್ತಿರುವ ಮುನ್ನೆಚ್ಚರಿಕೆಗಳಿಗೆ ಸಂಬಂಧಿಸಿದಂತೆ ಸಚಿವ ಸಂಪುಟ ಸಭೆಯ ತೀರ್ಮಾನಗಳ ಬಗ್ಗೆ ಸಚಿವರಿಂದ ವಿವರಣೆ ಮತ್ತು ಚರ್ಚೆ.**

– ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)
– ಶ್ರೀ ಐವನ್ ಡಿ'ಸೋಜಾ
– ಡಾ॥ ಜಯಮಾಲ
– ಶ್ರೀ ಬಸವರಾಜ ಹೊರಟ್ಟಿ
– ಶ್ರೀ ಎಸ್.ಎಲ್.ಭೋಜೇಗೌಡ
– ಡಾ॥ ವೈ.ಎ.ನಾರಾಯಣಸ್ವಾಮಿ
– ಶ್ರೀ ಹೆಚ್.ಎಂ.ರೇವಣ್ಣ
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಮರಿತಿಬ್ಬೇಗೌಡ
– ಶ್ರೀ ಆರ್.ಬಿ.ತಿಮ್ಮಾಪುರ್
– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಆರ್.ಧರ್ಮಸೇನ
– ಶ್ರೀ ನಸೀರ್ ಅಹಮದ್
– ಶ್ರೀ ಎಂ.ಸಿ.ವೇಣುಗೋಪಾಲ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ವಿ.ಸೋಮಣ್ಣ (ವಸತಿ ಸಚಿವರು)
– ಶ್ರೀ ಪಿ.ಆರ್.ರಮೇಶ್
– ಶ್ರೀ ಗೋವಿಂದ ಎಂ.ಕಾರಜೋಳ (ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು)
– ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**10. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

1389 + 1390 + 1395 **ರಾಜ್ಯದಲ್ಲಿರುವ ಮುಜರಾಯಿ ದೇವಾಲಯಗಳ ಕುರಿತು**
– ಶ್ರೀ ಆರ್.ಧರ್ಮಸೇನ
– ಶ್ರೀ ಶ್ರೀ ಮರಿತಿಬ್ಬೇಗೌಡ
– ಡಾ॥ ಜಯಮಾಲ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು ಹಾಗೂ ಮುಜರಾಯಿ ಸಚಿವರು)

**1306 – ಭೂ ಪರಿವರ್ತನೆಗಾಗಿ ಬಂದ ಅರ್ಜಿಗಳ ಕುರಿತು.**
– ಶ್ರೀ ಎಸ್.ರವಿ
– ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)

**1307– ಬೀದರ್ ಜಿಲ್ಲೆಯಲ್ಲಿ NA ಮಾಡಲಾದ ಜಮೀನಿನ ಬಗ್ಗೆ**
– ಶ್ರೀ ಅರವಿಂದ ಕುಮಾರ್ ಅರಳಿ
– ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)

**1324 –ರಾಜ್ಯದ ಕೃಷಿ ವಿದ್ಯಾಲಯಗಳಿಗೆ ಏಕರೂಪ ನಿಯಮ ತರುವ ಕುರಿತು**
– ಶ್ರೀ ಎಂ.ಸಿ.ವೇಣುಗೋಪಾಲ್
– ಶ್ರೀ ಬಿ.ಸಿ.ಪಾಟೀಲ್ (ಕೃಷಿ ಸಚಿವರು)

**1314 –ತಾಳೂರು–ಕರೂರು – ಸಿರಿಗೆರೆ ಕ್ರಾಸ್ ರಸ್ತೆ ಅಭಿವೃದ್ಧಿ ಕಾಮಗಾರಿ**
– ಶ್ರೀ ಕೆ.ಸಿ.ಕೊಂಡಯ್ಯ
– ಶ್ರೀ ಗೋವಿಂದ ಎಂ.ಕಾರಜೋಳ (ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು)

**1354 –ಗ್ರಾಮ ಸಹಾಯಕರ ಖಾಯಂಗೊಳಿಸುವ ಬಗ್ಗೆ**
– ಶ್ರೀ ಬಸವರಾಜ ಹೊರಟ್ಟಿ
– ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**1412 –ಕಲ್ಯಾಣ ಕರ್ನಾಟಕ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಎಫ್.ಡಿ.ಎ. ಹುದ್ದೆಗಳ ಬಗ್ಗೆ**

– ಶ್ರೀ ಶರಣಪ್ಪ ಮಟ್ಟೂರ
– ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)

**1360 + 1367 + 1368 + 1326**
**ಬೀದರ್‌ನ ಔರಾದ್ (ಬಾ) ಪಟ್ಟಣದ ಪ್ರವಾಸಿ ಮಂದಿರದ ಜಮೀನಿನ ಬಗ್ಗೆ.**

– **ಡಾ॥ ಚಂದ್ರಶೇಖರ ಬಿ.ಪಾಟೀಲ್**
– **ಶ್ರೀ ತಿಪ್ಪಣ್ಣ ಕಮಕನೂರ**
– **ಶ್ರೀ ರಘುನಾಥರಾವ್ ಮಲ್ಕಾಪೂರೆ**
– ಶ್ರೀ ಶರಣಪ್ಪ ಮಟ್ಟೂರ
– ಶ್ರೀ ಗೋವಿಂದ ಎಂ.ಕಾರಜೋಳ (ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು)

**1391 –ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ವಸತಿ ಹಂಚಿಕೆ ಕುರಿತು**

– ಶ್ರೀ ಆರ್.ಧರ್ಮಸೇನ
– ಶ್ರೀ ವಿ.ಸೋಮಣ್ಣ (ವಸತಿ ಸಚಿವರು)

**1376 –ವಸತಿ ಯೋಜನೆಗಳಲ್ಲಿನ ಪ್ರಗತಿ ಮತ್ತು ಸಹಾಯಧನ ವಿಳಂಬವಾಗುತ್ತಿರುವ ಬಗ್ಗೆ.**

– ಶ್ರೀ ಟಿ.ಎ.ಶರವಣ
– ಶ್ರೀ ವಿ.ಸೋಮಣ್ಣ (ವಸತಿ ಸಚಿವರು)

**1300 –ಹೆದ್ದಾರಿ ಅಭಿವೃದ್ಧಿ**

– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**1411 –ಭೂ ಚೇತನ ಯೋಜನೆಯಲ್ಲಿ ರಾಯಚೂರು ಜಿಲ್ಲೆಗೆ ಮಂಜೂರಾಗಿರುವ ಜಮೀನು ಬಗ್ಗೆ.**

– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಗೋವಿಂದ ಎಂ.ಕಾರಜೋಳ (ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು)

**1357 –ಶಾಸಕರ ಆಪ್ತ ಸಹಾಯಕರಿಗೆ ವೇತನ ಬಿಡುಗಡೆ ವಿಳಂಬದ ಕುರಿತು.**

– ಶ್ರೀ ಅರುಣ ಶಹಾಪುರ್ (ಶ್ರೀ ಪುಟ್ಟಣ್ಣರವರ ಪರವಾಗಿ)
– ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)

**0634 –ರಾಜ್ಯದಲ್ಲಿ ಜಾತಿ ಆಧಾರಿತ ನಿಗಮಗಳ ಕುರಿತು.**

– ಶ್ರೀ ಕೆ.ಸಿ.ಕೊಂಡಯ್ಯ (ಶ್ರೀ ಯು.ಬಿ.ವೆಂಕಟೇಶ್‌ರವರ ಪರವಾಗಿ)
– ಶ್ರೀ ಗೋವಿಂದ ಎಂ.ಕಾರಜೋಳ (ಉಪಮುಖ್ಯಮಂತ್ರಿಗಳು ಹಾಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**11. ಪ್ರಕಟಣೆ**

**12. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.**

**ಅ) ದತ್ತಾಂಶಗಳ ಮಾಹಿತಿ ಮತ್ತು ಮಧ್ಯಾಹ್ನ ಉಪಹಾರ ಯೋಜನೆ ಅಡಿ ಸಾರ್ವಜನಿಕ ಶಿಕ್ಷಣ ಇಲಾಖೆಯಡಿ ಹೊರಗುತ್ತಿಗೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್ ಹಾಗೂ ಡಿ ದರ್ಜೆ ನೌಕರರ ಸೇವೆಯನ್ನು ಮುಂದುವರೆಸಿ, ಗೌರವಧನ ಹೆಚ್ಚಿಸುವ ಕುರಿತು.**

– ಶ್ರೀ ಮರಿತಿಬ್ಬೇಗೌಡ
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ)

**ಆ) ಕಾಳಿ ನದಿ ಮಲಪ್ರಭ ಮತ್ತು ಘಟಪ್ರಭ ನದಿಗಳ ಜೋಡಣೆ ಮಾಡುವ ಕುರಿತು.**

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಇ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ಹೊಸಕೋಟೆ ತಹಸೀಲ್ದಾರ್ ನಿರ್ಬಂಧ ವಿಧಿಸಿರುವುದರಿಂದ ಆಸ್ಪತ್ರೆಗಳಲ್ಲಿ ನೀರಿಲ್ಲದೆ ತೊಂದರೆಯಾಗಿರುವ ಬಗ್ಗೆ.**

– ಶ್ರೀ ಎಚ್.ಎಂ.ರೇವಣ್ಣ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**13. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು.**

**ಅ) ಗೋವಾದಲ್ಲಿರುವ ಕನ್ನಡಿಗರ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಪರವಾಗಿ)

**ಆ) ಮೈಸೂರು ಮತ್ತು ದಾವಣಗೆರೆಯಲ್ಲಿ ಹಕ್ಕಿಜ್ವರದ ಸೋಂಕು ಹರಡಿರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**14. ಗಮನ ಸೆಳೆಯುವ ಸೂಚನೆ**

**ರಾಜ್ಯ ಸರ್ಕಾರಿ ನೌಕರರಿಗೆ ವಸತಿ ಗೃಹ ಹಂಚಿಕೆ ಮಾಡುವ ಹಾಗೂ ಹಂಚಿಕೆಯಲ್ಲಿರುವ ನ್ಯೂನತೆಗಳ ಕುರಿತು.**

– ಡಾ॥ ವೈ.ಎ.ನಾರಾಯಣಸ್ವಾಮಿ

– ಶ್ರೀ ಗೋವಿಂದ ಎಂ.ಕಾರಜೋಳ(ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು)

<><><>

(510)/18.03.2020/11.10/ಎಸ್‌ಕೆ–ವಿಕೆ (ಎಂಡಿ)

**ಕರ್ನಾಟಕ ವಿಧಾನ ಪರಿಷತ್ತು**

**ಬುಧವಾರ, 18ನೇ ಮಾರ್ಚ್ 2020**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 11 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ) ಯವರು ಪೀಠದಲ್ಲಿ ಉಪಸ್ಥಿತರಿದ್ದರು**

~~~~~~~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~~

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 1. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) **ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಪ್ರಕರಣ 12(6)ರನ್ವಯ**

ಕರ್ನಾಟಕ ಲೋಕಾಯುಕ್ತ ಸಂಸ್ಥೆಯ 2015-16 ಮತ್ತು 2016-17ನೇ ಸಾಲಿನ ಕ್ರೋಢೀಕೃತ ವಾರ್ಷಿಕ ವರದಿಗಳು.

(2) **ಭಾರತ ಸಂವಿಧಾನದ ಅನುಚ್ಛೇದ 323(2)ರಂತೆ**

ಕರ್ನಾಟಕ ಲೋಕಸೇವಾ ಆಯೋಗದ 2018-19ನೇ ಸಾಲಿನ ವಾರ್ಷಿಕ ವರದಿ.

(3)**ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ 1951ರ ಕಲಂ 37(7)ರನ್ವಯ**

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

(4) **ಕಂಪನಿ ಅಧಿನಿಯಮ 2013ರ ಸೆಕ್ಷನ್ 394(2)ರನ್ವಯ**

ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತದ 2018-19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

(5) **ಕಂಪನಿ ಕಾಯ್ದೆ 2013ರ ಕಲಂ 394ರನ್ವಯ**

1. ತದಡಿ ಬಂದರು ನಿಯಮಿತದ 2018-19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)
2. ಹಾಸನ-ಮಂಗಳೂರು ರೈಲ್ವೆ ಅಭಿವೃದ್ಧಿ ನಿಗಮ ನಿಯಮಿತದ 2018-19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

(6) **ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಯ್ದೆ 1964ರ ಕಲಂ 25(5)(ಎ) ಮತ್ತು 86ರನ್ವಯ**

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2017-18ನೇ ಸಾಲಿನ ವಾರ್ಷಿಕ ಲೆಕ್ಕ ಮತ್ತು ಲೆಕ್ಕಪರೀಕ್ಷಕರ ವರದಿ ಹಾಗೂ 2018-19ನೇ ಸಾಲಿನ ವಾರ್ಷಿಕ ಸಾಧನಾ ವರದಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(7) **ಕಂಪನಿಗಳ ಕಾಯ್ದೆ 1956ರ ನಿಯಮ 619(ಎ)ಅಡಿಯಲ್ಲಿ**

ಕರ್ನಾಟಕ ರಾಜ್ಯ ಪೋಲಿಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ 2018–19ನೇ ಸಾಲಿನ ವಾರ್ಷಿಕವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)ಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಗೋವಿಂದ ಎಂ. ಕಾರಜೋಳ (ಉಪ ಮುಖ್ಯ ಮಂತ್ರಿಗಳು, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 2013ರ ನಿಯಮ 394(2)(1)ರನ್ವಯ**

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ 2016–17 ಮತ್ತು 2017–18ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಉಪ ಮುಖ್ಯ ಮಂತ್ರಿಗಳು, ಉನ್ನತ ಶಿಕ್ಷಣ ಮತ್ತು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ ಉದ್ಯಮ ಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

(1) **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ, 2009ರ ಪರಿಚ್ಛೇದ 7(4)ರನ್ವಯ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2017–18ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

(2) **ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಕಾಯ್ದೆ 1994ರ ನಿಯಮ 25ರ ಉಪ ನಿಯಮ(1)(2)ರನ್ವಯ**

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 2017–18ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಉಪ ಮುಖ್ಯಮಂತ್ರಿಗಳು, ಸಾರಿಗೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**ರಸ್ತೆ ಸಾರಿಗೆ ನಿಗಮಕಾಯ್ದೆ 1950 ಅಧಿನಿಯಮ 33 ಮತ್ತು 35(3)(4)ರನ್ವಯ**

1. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ 2018–19ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರ ಮತ್ತು ಪರಿಶೋಧನಾ ವರದಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):**–ಮಾನ್ಯ ಸಭಾಪತಿಯವರೇ,

**ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಅನುಚ್ಛೇದ 262(3) ಮತ್ತು 300ರ ಉಪ ಪ್ರಕರಣ (5)ರನ್ವಯ**

1. ಉಡುಪಿ ಜಿಲ್ಲಾ ಪಂಚಾಯತ್‌ನ 2016–17ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಆಡಿಟ್ ವರದಿ.
2. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
3. ಗದಗ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
4. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2014–15 ಮತ್ತು 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು.
5. ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
6. ದಾವಣಗೆರೆ ಜಿಲ್ಲಾ ಪಂಚಾಯತ್‌ನ 2016–17ನೇ ಸಾಲಿನ ಆಡಿಟ್ ವರದಿ ಹಾಗೂ ಧೃಢೀಕೃತ ವಾರ್ಷಿಕ ಲೆಕ್ಕಪತ್ರ.
7. ಬೀದರ್ ಜಿಲ್ಲಾ ಪಂಚಾಯತ್‌ನ 2015–16ನೇ ಸಾಲಿನ ಆಡಿಟ್ ವರದಿ ಹಾಗೂ ದೃಢೀಕೃತ ವಾರ್ಷಿಕ ಲೆಕ್ಕಪತ್ರ.
8. ಕೋಲಾರ ಜಿಲ್ಲಾ ಪಂಚಾಯತ್‌ನ 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಪ್ರತ್ಯೇಕ ಲೆಕ್ಕಪರಿಶೋಧನಾ ಪ್ರಮಾಣ ಪತ್ರ.
9. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
10. ಧಾರವಾಡ ಜಿಲ್ಲಾ ಪಂಚಾಯತ್‌ನ 2016–17ನೇ ಸಾಲಿನ ಲೆಕ್ಕಗಳ ಮೇಲಿನ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿ.
11. ಯಾದಗಿರಿ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಗಣಿ ಮತ್ತು ಭೂ ವಿಜ್ಞಾನ ಸಚಿವರ ಪರವಾಗಿ):**– ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 2013ರ ಕಲಂ 395ರ ಪ್ರಕಾರ**

ದಿ. ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ 2018–19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)ಯನ್ನು ಮಂಡಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಿರಿಯ ನಾಗರೀಕರ ಮತ್ತು ಅಂಗವಿಕರ ಸಬಲೀಕರಣ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**ಅಂಗವಿಕಲ ವ್ಯಕ್ತಿಗಳ(ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣಭಾಗವಹಿಸುವಿಕೆ) ಅಧಿನಿಯಮ–1995ರ ಸೆಕ್ಷನ್ –65(2)ರನ್ವಯ**

ರಾಜ್ಯ ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ ಕಛೇರಿಯ 2018–19ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ನಗರಾಭಿವೃದ್ಧಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

(1) **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರಕಲಂ 68ಡಿ ರನ್ವಯ**

ಆನೇಕಲ್ ಯೋಜನಾ ಪ್ರಾಧಿಕಾರದ 2018–19ನೇ ಸಾಲಿನ ವಾರ್ಷಿಕ ವರದಿ.

(2) **ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 48(5)ರನ್ವಯ**

1. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2018–19ನೇ ಸಾಲಿನ ಲೆಕ್ಕಪರಿಶೋಧನ ವರದಿ.
2. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2018–19ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಸಹಕಾರ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 29ಡಿ ರನ್ವಯ**

ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿಯಮಿತದ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಬಿ.ಸಿ.ಪಾಟೀಲ್ (ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1) **ಕೃಷಿ ವಿಶ್ವವಿದ್ಯಾಲಯಗಳ ಅಧಿನಿಯಮ 2009 ಕಲಂ 57 ರಂತೆ**

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಶಿವಮೊಗ್ಗದ 2018–19ನೇ ಸಾಲಿನ ವಾರ್ಷಿಕ ವರದಿ.

(2) **ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 394(2)ರನ್ವಯ**

ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತದ 2018–19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಹೆಚ್. ನಾಗೇಶ್, (ಅಬಕಾರಿ ಸಚಿವರು):–** ಮಾನ್ಯ ಸಭಾಪತಿಯವರೇ,

**1965 ರ ಕರ್ನಾಟಕ ಅಬಕಾರಿ ಅಧಿನಿಯಮದ ಪ್ರಕರಣ 71(4) ಮೇರೆಗೆ:**

1968 ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ಸಾರವರ್ಧಿತ ವೈನ್ ತಯಾರಿಕೆ) ನಿಯಮಗಳ ನಿಯಮ 2ಕ್ಕೆ ತಿದ್ದುಪಡಿಗೊಳಿಸಿ ದಿನಾಂಕ 25.10.2019ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಫ್‌ಡಿ 01 ಪಿಇಎಸ್ 2019ನ್ನು ಮಂಡಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರರ ಪರವಾಗಿ):–** ಮಾನ್ಯ ಸಭಾಪತಿಯವರೇ,

**1976ರ ಕರ್ನಾಟಕ ವೃಕ್ಷ ಸಂರಕ್ಷಣೆ ಅಧಿನಿಯಮದ ಪ್ರಕರಣ 23 (2)ರ ಮೇರೆಗೆ:**

ಕರ್ನಾಟಕ ವೃಕ್ಷ ಸಂರಕ್ಷಣೆ ಅಧಿನಿಯಮ 1976 1(3)ನೇ ಪ್ರಕರಣದಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ, ಕಾಯ್ದೆಯ ಎಲ್ಲಾ ಪ್ರಕರಣಗಳನ್ನು ನಗರ ಪ್ರದೇಶಗಳಲ್ಲಿ ಜಾರಿಗೊಳಿಸಲು ದಿನಾಂಕವನ್ನು ನೇಮಿಸಿ, ದಿನಾಂಕ 24.05.2019 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಅಪಜಿ 129 ಎಫ್‌ಎಎಫ್ 2018 ನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**2. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕ.ವಿ.ಪ:–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2020
2. ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2020
3. ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕ, 2020

(ಮುಂದು)

(511) 18.03.2020 11.20. ಟಿಸಿಹೆಚ್–ಎಕೆ

**(ಸಭಾಪತಿಯವರು ಉಪಸ್ಥಿತಿ)**

**3. <u>ವರದಿಯನ್ನೊಪ್ಪಿಸುವುದು</u>**

**ಶ್ರೀ ಎಸ್.ಎಲ್.ಧರ್ಮೇಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಅರ್ಜಿಗಳ ಸಮಿತಿಯ ಅಧ್ಯಕ್ಷನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 215ರ ರೀತ್ಯಾ 27ನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ಒಪ್ಪಿಸಲಾಯಿತು.

**4. <u>ವಿತ್ತೀಯ ಕಾರ್ಯಕಲಾಪ</u>**

**<u>ಪೂರಕ ಅಂದಾಜುಗಳನ್ನು ಒಪ್ಪಿಸುವುದು</u>**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು) (ಶ್ರೀ ಬಿ.ಎಸ್.ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, 2019–2020ನೇ ಸಾಲಿನ ಪೂರಕ ಅಂದಾಜುಗಳನ್ನು (ಮೂರನೇ ಹಾಗೂ ಅಂತಿಮ ಕಂತು) ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ಒಪ್ಪಿಸಲಾಯಿತು.

ಈಗ ಭಾರತ ಸಂವಿಧಾನದ ಮೇಲಿನ ವಿಶೇಷ ಚರ್ಚೆ. ಇವೊತ್ತು ಈ ಚರ್ಚೆಯನ್ನು ಮುಕ್ತಾಯಗೊಳಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 5. ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಬಹಳ ಉತ್ತಮವಾಗಿ ಸಂವಿಧಾನದ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ, ಅದಕ್ಕೆ ಬಹಳ ಸಂತೋಷವಾಗುತ್ತದೆ. ನಾವೆಲ್ಲರೂ ಕೂಡ ಅದನ್ನು ಒಪ್ಪಿಕೊಂಡು, ತಬ್ಬಿಕೊಂಡು, ಮುನ್ನಡೆಸಿಕೊಂಡು ಬರಬೇಕಾಗಿದೆ. ಸಂವಿಧಾನದಲ್ಲಿ ಮುಖ್ಯವಾಗಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಇದರ ಜೊತೆಗೆ ಮಾಧ್ಯಮಗಳನ್ನು ನಾಲ್ಕನೇ ಅಂಗವೆಂದು ನಾವೇ ಒಪ್ಪಿಕೊಂಡಿರುತ್ತೇವೆ. ಈ ನಾಲ್ಕು ಅಂಗಗಳು ಆಧಾರಸ್ಥಂಭಗಳಾಗಿವೆ. ಇವುಗಳ ವಿಶ್ಲೇಷಣೆ ಕೂಡ ಆಗಿದೆ. ಅದೇ ರೀತಿ ಸಂವಿಧಾನದಲ್ಲಿ ಎಲ್ಲರಿಗೂ ಸಮಾನತೆ ಸಿಗಬೇಕು ಎನ್ನತಕ್ಕಂಥ ವಿಚಾರದ ಮಂಡನೆಯ ಅಡಿಯಲ್ಲಿ ನ್ಯಾಯ, ಸಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಚಾರಗಳಲ್ಲಿ ಭಾರತದ ನಾಗರಿಕರನ್ನು ಸಂರಕ್ಷಿಸುವ ಸ್ವರೂಪವಾಗಿದೆ. ಈ ನಾಲ್ಕು ಅಂಗಗಳಲ್ಲಿ ಸಾಮಾಜಿಕ ನ್ಯಾಯದ ಬಗ್ಗೆ ಚರ್ಚೆ ಮಾಡುವಂತಹ ಪ್ರಯತ್ನವನ್ನು ಮಾಡುತ್ತೇನೆ. ಐದು ದಿನಗಳಲ್ಲಿ ಸಂವಿಧಾನದ ಬಗ್ಗೆ ಚರ್ಚೆ ನಡೆಸಿದಂತಹ ಸಂದರ್ಭದಲ್ಲಿ ಈ ವಿಷಯವನ್ನು ಯಾರೂ ಹೆಚ್ಚು ಮಾತನಾಡಲಿಲ್ಲ. ಆದರೆ, ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರಿಗೆ ನಾನು ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರು ನಿನ್ನೆ ದಿವಸ ಬಹಳ ಚೆನ್ನಾಗಿ ಸಾಮಾಜಿಕ ನ್ಯಾಯ, ಜಾತಿ ವ್ಯವಸ್ಥೆ ಬಗ್ಗೆ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಚಿಂತನೆಯನ್ನು ಈ ರಾಜ್ಯದ ಜನತೆಗೆ ಸದನದ ಮೂಲಕ ತಿಳಿಸುವಂತಹ ಪ್ರಯತ್ನವನ್ನು ಮಾಡಿದ್ದಾರೆ. ತುಳಿತಕ್ಕೆ ಒಳಗಾಗಿರತಕ್ಕಂಥ ನಾವು ಈ ಸಂದರ್ಭದಲ್ಲಿ ಜನತೆಯ ಪರವಾಗಿ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡಬೇಕಾಗಿರುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶ ಯಾವ ರೀತಿ ಇತ್ತು, ಈಗ ಯಾವ ರೀತಿ ಇದೆ ಎನ್ನುವುದನ್ನು ಅವಲೋಕನೆ ಮಾಡಿ ನೋಡಿದಾಗ, ಸ್ವಾತಂತ್ರ್ಯ ಪೂರ್ವದಲ್ಲಿ ಜಾತಿ ವ್ಯವಸ್ಥೆ, ಸಾಮಾಜಿಕ ನ್ಯಾಯದ ಚಿಂತನೆಗೆ ಪ್ರಥಮವಾಗಿ ಹೆಚ್ಚು ಒತ್ತು ಕೊಟ್ಟವರು ಮಹಾರಾಷ್ಟ್ರದಲ್ಲಿ ಮಾಹಾತ್ಮ ಜ್ಯೋತಿರಾವ್‌ಪುಲೆ, ಸಾಹು ಮಹಾರಾಜರು, ಮತ್ತು ಕೇರಳದ ನಾರಾಯಣ ಗುರುಗಳು. ಮಾನ್ಯ ನಾರಾಯಣ ಗುರುಗಳ ಬಗ್ಗೆ ನಾವೆಲ್ಲರೂ ಕೂಡ ಅತಿ ಸಂತೋಷದಿಂದ ಹೇಳುವಂತಹ ವಿಷಯವಾಗಿದೆ. ಅವೊತ್ತಿನ ಜಾತಿ ವ್ಯವಸ್ಥೆಯನ್ನು ಕೇರಳದಲ್ಲಿ ದೇವಸ್ಥಾನಗಳಿಗೆ ಬಹಿಷ್ಕಾರ ಇದ್ದಂತಹ ಸಂದರ್ಭದಲ್ಲಿ, ನೀವು ದೇವಸ್ಥಾನಗಳಿಗೆ ನಮ್ಮನ್ನು ಕಳುಹಿಸದಿದ್ದರೂ ಪರವಾಗಿಲ್ಲ, ನಾವೇ ದೇವಸ್ಥಾನಗಳನ್ನು ಕಟ್ಟೋಣ ಎನ್ನತಕ್ಕಂಥ ಒಂದು ದಿಟ್ಟ ನಿಲುವನ್ನು ಪಡೆದು, ಆ ಜನರನ್ನು ಸಂಘಟನೆ ಮಾಡಿ, ಅವರಿಗೆ ಆತ್ಮಸ್ಥೈರ್ಯ ತುಂಬಿರತಕ್ಕಂಥವರು ನಾರಾಯಣ ಗುರುಗಳು. ಅದೇ ರೀತಿ ಉಡುಪು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಉಡುಪನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಿಕೊಳ್ಳುವಂತಹ ಚಳವಳಿಯನ್ನು ಮಾಡಿದರು. ಮಹಿಳೆಯರ ಸ್ಥಾನಮಾನದ ಬಗ್ಗೆ ಚರ್ಚೆ ಮಾಡಿ ಅದರ ನೆರಳನ್ನು ಕಂಡಂತವರು ಮಾನ್ಯ ನಾರಾಯಣ ಗುರುಗಳು. ಅದೇ ರೀತಿ ತಮಿಳುನಾಡಿನ ಇ.ವಿ.ಪೆರಿಯಾರ್‌ರವರು ಕರ್ನಾಟಕದಲ್ಲಿ ಜನಿಸಿದ್ದರೂ ಕೂಡ ಅವರು ಅಲ್ಲಿ ಕಾರ್ಯಸ್ಥಾನವಾಗಿ ಭಾರತದ ಮೂಲನಿವಾಸಿಗಳು ದ್ರಾವಿಡರು ಎನ್ನತಕ್ಕಂಥದ್ದನ್ನು ಪ್ರತಿಪಾದಿಸಿದರು. ದ್ರಾವಿಡ ಪಕ್ಷದ ಸಂಘಟನೆಯಲ್ಲಿ ಇಡೀ ಭಾರತದಲ್ಲಿ ಆ ಚಳವಳಿಯನ್ನು ತೀವ್ರಗೊಳಿಸಿ, ದ್ರಾವಿಡರ ಮೂಲಭೂತ ಹಕ್ಕುಗಳನ್ನು, ಮೂಲಭೂತ ನಿವಾಸಿಗಳಿಗೆ ಧ್ವನಿ ಕೊಟ್ಟಂಥವರು ಮಾನ್ಯ ಇ.ವಿ.ಪರಿಯಾರ್‌ರವರು. ಅದೇ ರೀತಿ ಕರ್ನಾಟಕದಲ್ಲಿ ನಮ್ಮ ರಾಜ ಮನೆತನದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕೂಡ ಜನಪರ ಕಾರ್ಯಗಳನ್ನು ಮಾಡಿದ್ದಾರೆ. ನಾನು ಇವತ್ತಿನ ದಿವಸ ಅವರನ್ನು ನೆನಪಿಸಿಕೊಳ್ಳುವುದಕ್ಕೆ ಬಹಳ ಸಂತೋಷವಾಗುತ್ತದೆ. ಅಂದಿನ ಅವರ ಆಡಳಿತದಲ್ಲಿ ಅವೊತ್ತು ಕೂಡ ಮೀಸಲಾತಿ ಬೇಕು ಎನ್ನತಕ್ಕಂಥ ಉದ್ದೇಶವನ್ನಿಟ್ಟುಕೊಂಡು ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂದು ವರ್ಗದ ಚಿಂತನೆಯನ್ನು ಮತ್ತು ಸಮೀಕರಣವನ್ನು ಮಾಡಿ, ಆ ಒಂದು ಪ್ರಯತ್ನವನ್ನು 'ಮಿಲ್ಲರ್ ವರದಿ'ಯ ಆಧಾರದ ಮೇಲೆ ಕರ್ನಾಟಕದಲ್ಲಿ ಪ್ರಥಮವಾಗಿ ಜಾರಿಗೆ ತಂದರು. ನಮಗೆ ಮೈಸೂರು ಮಹಾರಾಜರ ಬಗ್ಗೆ ಹೇಳುವುದಕ್ಕೆ ಬಹಳ ಸಂತೋಷವಾಗುತ್ತದೆ. ಈ ರಾಷ್ಟ್ರದಲ್ಲಿ ಸುಮಾರು 500 ಸಂಸ್ಥಾನಗಳಿದ್ದಂತಹ ರಾಜಮನೆತನಗಳಲ್ಲಿ, ಬಹಳ ಒಳ್ಳೆಯ ಜನಪರವಾದಂತಹ, ಜನಸ್ನೇಹಿ ಕೆಲಸ ಮಾಡಿದವರಲ್ಲಿ ಪ್ರಥಮ ಸ್ಥಾನದಲ್ಲಿ ನಮ್ಮ ರಾಜ್ಯದ ಕೃಷ್ಣರಾಜ ಒಡೆಯರ್ ಮನೆತನ ಇದೆ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಅವರು ಎಲ್ಲಾ ರಂಗದಲ್ಲೂ ಕೂಡ ಅಭಿವೃದ್ಧಿ ಸಾಧಿಸಿದವರು. ಅದನ್ನೆಲ್ಲಾ ಗಮನಿಸಿದರೆ ನಮಗೆ ಹೆಮ್ಮೆ ಅನಿಸುತ್ತದೆ. ಅದೇ ರೀತಿ ಇವತ್ತಿನ ದಿವಸ ಕೇಂದ್ರದ ಚಿಂತನೆ ಮಾಡಿದಂತಹ ಸಂದರ್ಭದಲ್ಲಿ ನಮ್ಮ ಸಂವಿಧಾನದ ಅನುಚ್ಛೇದ 340ರ ಅಡಿಯಲ್ಲಿ ಶೈಕ್ಷಣಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿಯಲು ಮಾನ್ಯ ಕಾಕ ಕಾಲೇಲ್ಕರ್‌ರವರ ಅಧ್ಯಕ್ಷತೆಯಲ್ಲಿ ಮೊದಲನೆ ಹಿಂದುಳಿದ ವರ್ಗದ ಆಯೋಗವನ್ನು ರಚಿಸಲಾಯಿತು.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ.ರೇವಣ್ಣನವರು ಮಾತನಾಡುವಾಗ ಕೇರಳದ ನಾರಾಯಣ ಗುರುಗಳ ಬಗ್ಗೆ ಹೇಳಿದರು. ಆ ಕಾಲದಲ್ಲಿ ಸ್ವಾಮಿ ವಿವೇಕಾನಂದರವರು ಕೇರಳಕ್ಕೆ ಭೇಟಿ ಕೊಡುತ್ತಾರೆ. ಸ್ವಾಮಿ ವಿವೇಕಾನಂದರು ಅಲ್ಲಿನ ಜಾತಿ ವ್ಯವಸ್ಥೆಯನ್ನು ನೋಡಿ, ಕೇರಳ ಎನ್ನುವುದು ಒಂದು 'ಹುಚ್ಚು ಆಸ್ಪತ್ರೆ' ಎಂದು ಹೇಳಿದ್ದರು. ಅವೊತ್ತು ಅಷ್ಟೊಂದು ಜಾತಿಯ ಮೇಲಾಟ ನಡೆಯುತ್ತಿರುತ್ತದೆ. ಮಾನ್ಯ ಹೆಚ್.ಎಂ.ರೇವಣ್ಣನವರು ಮಂದಿರದ ಬಗ್ಗೆ ಹೇಳಿದರು. ಆಗ ಮಾನ್ಯ ನಾರಾಯಣ ಗುರುಗಳು ಎಲ್ಲರೂ ಪ್ರವೇಶ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬಹುದಾದಂತಹ ದೇವಸ್ಥಾನಗಳನ್ನು ಕಟ್ಟತಕ್ಕಂಥ ಕೆಲಸವನ್ನು ಮಾಡಿದ್ದರು. ಆ ಶಬ್ದ ಬಿಟ್ಟು ಹೋಗಿತ್ತು, ಅದಕ್ಕೆ ಹೇಳಿದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಬಹಳ ದಿನಗಳ ಮೇಲೆ ಈ ಸದನದಲ್ಲಿ ಒಳ್ಳೆಯ ಮಾತುಗಳು ಬರುತ್ತಿವೆ.

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ.ರೇವಣ್ಣನವರು ಮೈಸೂರಿನ ಮಹಾರಾಜರ ಬಗ್ಗೆ ಹೇಳಿದರು. ಬಹಳ ಸಂತೋಷ. 1889 ರಲ್ಲಿ ಎಸ್‌ಸಿ ಮತ್ತು ಎಸ್‌ಟಿ ಮಹಿಳಾ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವನ್ನು ಕೂಡ ಕಲ್ಪಿಸಿದ್ದರು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಅವರು ಅಷ್ಟೇ ಅಲ್ಲದೇ ಇವತ್ತಿನ ದಿವಸ KGID (Karnataka Government Insurance Department) ಸ್ಥಾಪನೆ ಮಾಡಿರುವುದು ಇರಬಹುದು, ಕೋಲಾರದ ಗೋಲ್ಡ್ ಮೈನ್ಸ್ ಇರಬಹುದು, MSIL (Mysore Sales International Limited) ಇರಬಹುದು, ಅವರ ಜನಪರ ಸೇವೆ ಮಾಡಿರತಕ್ಕಂಥ ಕಾರ್ಯಕ್ರಮಗಳು ಸಾಕಷ್ಟಿವೆ. ಆ ವಿಷಯದಲ್ಲಿ ಇಡೀ ಭಾರತದಲ್ಲಿ ಆಳ್ವಿಕೆ ಮಾಡಿರತಕ್ಕಂಥ ರಾಜ ಮನೆತನಗಳಲ್ಲಿ ಕರ್ನಾಟಕದ ಮೈಸೂರು ರಾಜ ಒಡೆಯರ್‌ರವರ ಮನೆತನ ಜನಸ್ನೇಹಿ ಮತ್ತು ಜನಪರ ಕಾರ್ಯಗಳನ್ನು ಮಾಡಿದ್ದಾರೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನನಗೆ ಒಂದು ವಿಷಯದಲ್ಲಿ ಸಂತೋಷವಾಗುತ್ತಿದೆ. ಏಕೆಂದರೆ, ಮೊನ್ನೆದಿವಸ ಮತ್ತು ನಿನ್ನೆ ದಿವಸದಿಂದ ಆಡಳಿತ ಪಕ್ಷದಲ್ಲಿರತಕ್ಕಂಥ ಡಾ॥ವೈ.ಎ.ನಾರಾಯಣ ಸ್ವಾಮಿಯವರು ಮತ್ತು ಇತರೆ ಸದಸ್ಯರು ಯಾರೂ ಕೂಡ ಮಧ್ಯದಲ್ಲಿ ಎದ್ದುನಿಂತು ಮಾತನಾಡುತ್ತಿಲ್ಲ. ನನಗೆ ಮಾತನಾಡುವುದಕ್ಕೆ ಅವಕಾಶಗಳನ್ನು ಕೊಡುತ್ತಿದ್ದಾರೆ. ಏಕೆಂದರೆ ಈ ಸಂವಿಧಾನದ ವಿಷಯವೇ ಅಂತಹದ್ದು. ನಾನು ಎರಡು–ಮೂರು ದಿನಗಳಿಂದಲೂ ಗಮನಿಸುತ್ತಿದ್ದೇನೆ. ಈ ವಿಷಯದ ಬಗ್ಗೆ ಒಬ್ಬರೂ ಕೂಡ ಮಾತನಾಡಲಿಲ್ಲ. ಅದಕ್ಕಾಗಿ ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದಕ್ಕೆ ಆಡಳಿತ ಪಕ್ಷದವರು ಕೂಡ ನಾನು ಮಾತನಾಡಲು ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಕೇಂದ್ರ ಸರ್ಕಾರದಲ್ಲಿ ಮಾನ್ಯ ಕಾಕ ಕಾಲೇಲ್‌ಕರ್ ರವರ ವರದಿ ಮೂಲಕ ಮೊದಲನೇ ಆಯೋಗ ಹಿಂದುಳಿದ ವರ್ಗದವರ ಬಗ್ಗೆ ಚಿಂತನೆ ಆಗಿತ್ತು. 1953ರಲ್ಲಿ ಮಾನ್ಯ ಕಾಕ ಕಾಲೇಲ್‌ಕರ್‌ರವರ ವರದಿ ರಚನೆಯಾದರೂ ಕೂಡ, 1955ರಲ್ಲಿ ಹಿಂದುಳಿದ ವರ್ಗಗಳ ಸಮಿತಿಯ ವರದಿಯನ್ನು ನೀಡುತ್ತಾರೆ. ಆದರೆ, ಅದು ಅನುಷ್ಠಾನಕ್ಕೆ ಬರುವುದಿಲ್ಲ. ಯಾವುದೇ ಸರ್ಕಾರಗಳು ಇರಬಹುದು, ಅದರ ಬಗ್ಗೆ ಚಿಂತನೆ ಮಾಡಿಲ್ಲ. ಈ ವಿಷಯದ ಬಗ್ಗೆ ನನ್ನ ಅನಿಸಿಕೆಯನ್ನು

ಹಂಚಿಕೊಳ್ಳುತ್ತಿದ್ದೇನೆ. ಈ ರಾಷ್ಟ್ರದಲ್ಲಿ 1979ರಲ್ಲಿ ಶ್ರೀ ಬಿ.ಪಿ.ಮಂಡಲ್‌ರವರ ಅಧ್ಯಕ್ಷತೆಯಲ್ಲಿ ಎರಡನೇ ಹಿಂದುಳಿದ ವರ್ಗಗಳ ಆಯೋಗ ರಚನೆಯಾಗುತ್ತದೆ. ಆದರೆ, ಸದರಿ ಆಯೋಗವು 1980ರಲ್ಲಿ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇಕಡ 27ರಷ್ಟು ಮೀಸಲಾತಿಯನ್ನು ಕೊಡಬೇಕು ಎನ್ನತಕ್ಕಂಥ ವರದಿಯನ್ನು ಕೊಡುತ್ತದೆ. ಆದರೆ, ಆ ವರದಿಯನ್ನು ಮಂಡನೆ ಮಾಡಿದರೂ ಕೂಡ ಕಾರ್ಯರೂಪಕ್ಕೆ ಬರುವುದಿಲ್ಲ. ಆ ವರದಿ 1990ರಲ್ಲಿ ರಚನೆಯಾದರೂ ಕೂಡ 1993ರಲ್ಲಿ ಅಂದಿನ ಪ್ರಧಾನ ಮಂತ್ರಿಗಳಾಗಿದ್ದಂತಹ ಸನ್ಮಾನ್ಯ ಪಿ.ವಿ.ನರಸಿಂಹರಾವ್ ರವರು ಇದನ್ನು ಜಾರಿಗೊಳಿಸುತ್ತಾರೆ. ಹಿಂದುಳಿದ ವರ್ಗಗಳಿಗೆ ಶೇಕಡ 27ರಷ್ಟು ಮೀಸಲಾತಿ ಕೊಡುವಂತಹ ಆದೇಶವನ್ನು ಹೊರಡಿಸುತ್ತಾರೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿ.ಪಿ.ಸಿಂಗ್‌ರವರು ಪ್ರಯತ್ನಪಟ್ಟಿದ್ದನ್ನೂ ಕೂಡ ತಾವು ಹೇಳಬೇಕು.

**ಶ್ರೀ ಹೆಚ್.ಎಂ.ರೇವಣ್ಣ:-** ಶ್ರೀ ಕೆ.ಎ.ತಿಪ್ಪೇಸ್ವಾಮಿಯವರೇ, ಅದನ್ನೂ ಕೂಡ ಪ್ರಸ್ತಾಪ ಮಾಡುತ್ತೇನೆ. ಮಂಡಲ್ ವರದಿಯನ್ನು ಜಾರಿಗೆ ತಂದವರು ಮಾನ್ಯ ವಿ.ಪಿ.ಸಿಂಗ್‌ರವರು ಎಂದು ಹೇಳುತ್ತೇನೆ. ಧನ್ಯವಾದಗಳನ್ನು ಹೇಳುವ ಸಂದರ್ಭದಲ್ಲಿ ಅವರ ಬಗ್ಗೆಯೂ ಕೂಡ ಹೇಳುತ್ತೇನೆ. ವಿ.ಪಿ.ಸಿಂಗ್‌ರವರು ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದಾಗ, ಈ ರಾಷ್ಟ್ರದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳೇ ಇದರ ಬಗ್ಗೆ ವಿರೋಧ ವ್ಯಕ್ತಪಡಿಸುವ ರೀತಿಯಲ್ಲಿ ಮೇಲ್ವರ್ಗದವರು ಮಾಡುತ್ತಾರೆ. ಆಗ ಇಡೀ ಭಾರತದಲ್ಲಿಯೇ ಆ ವರದಿಯನ್ನು ವಿರೋಧಿಸಿ ಬುಗಿಲೇಳುತ್ತದೆ. ಆದರೆ, ಅದರಿಂದ ಆದಂತಹ ಉಪಯೋಗವೇನೆಂದರೆ, ಇವತ್ತಿನ ದಿವಸ ಏನು ಕೇಂದ್ರದಲ್ಲಿ IAS, IPS, IRS, IFS ಇನ್ನಿತರೆ ಹುದ್ದೆಗಳಲ್ಲಿ ಭಾರತ ದೇಶದಲ್ಲಿ ಶೇ.27ರಷ್ಟು ಹಿಂದುಳಿದ ವರ್ಗದವರು ಉನ್ನತ ಹುದ್ದೆಗಳಲ್ಲಿ ಬರುವುದಕ್ಕೆ ಅವಕಾಶ ಮಾಡಿಕೊಟ್ಟಂಥವರು ಮಾನ್ಯ ವಿ.ಪಿ.ಸಿಂಗ್‌ರವರು ಎಂದು ಹೇಳುವುದಕ್ಕೆ ಹೆಮ್ಮೆ ಅನಿಸುತ್ತಿದೆ.

(ಮುಂದು...)

(512)18.3.2020/11.30/ಎಂ.ಎಂ.-ಎ.ಕೆ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಎಂ. ರೇವಣ್ಣ (ಮುಂದು):-**

ಭಾರತ ದೇಶದಲ್ಲಿ ಶೇ.27ರಷ್ಟು ಹಿಂದುಳಿದ ವರ್ಗದ ಜನರು ಬರುವ ಒಂದು ಅವಕಾಶವನ್ನು ವಿ.ಪಿ.ಸಿಂಗ್‌ರವರು ಈ ರಾಷ್ಟ್ರಕ್ಕೆ ಕಲ್ಪಿಸಿದ್ದಾರೆ ಎಂದು ಹೇಳುವುದಕ್ಕೆ ಬಹಳ ಹೆಮ್ಮೆಯಾಗುತ್ತದೆ. ಆದರೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡ ಶೇ.27ರಲ್ಲಿ ವರ್ಗೀಕರಣ ಆಗಿಲ್ಲ. ಇವತ್ತು ಕರ್ನಾಟಕ ರಾಜ್ಯದಲ್ಲಿ ವರ್ಗೀಕರಣದ ಅವಶ್ಯಕತೆ ಇದೆ ಎಂದು ಹೇಳಬಯಸುತ್ತೇನೆ. ಅದನ್ನು ಕೇಂದ್ರ ಸರ್ಕಾರ ಮಾಡಬೇಕು. ಅದೇ ರೀತಿ ಕರ್ನಾಟಕದಲ್ಲಿ ಮಂಡಲ ಪಂಚಾಯಿತಿಗಳಾದ ಮೇಲೆ ಎಷ್ಟು ಕ್ರಾಂತಿಗಳಾಗಿವೆ, ಎಷ್ಟು ಜನರು ಸಂತೋಷವನ್ನು ವ್ಯಕ್ತಪಡಿಸುತ್ತಿದ್ದಾರೆ ಎನ್ನುವುದರ ಜೊತೆಗೆ ಮತ್ತೊಂದು ಸಂತೋಷದ ಸುದ್ದಿ ಎಂದರೆ, ಕರ್ನಾಟಕ ರಾಜ್ಯದಲ್ಲಿ ಇವತ್ತು ಭಾರತದಲ್ಲಿ ಅತಿ ಹೆಚ್ಚಾಗಿ ಪ್ರಚಲಿತವಾಗಿರುವಂತಹದ್ದು, ಚಾಲ್ತಿಯಲ್ಲಿರುವಂತಹದ್ದು ಮೊದಲನೇ ಸ್ಥಾನದಲ್ಲಿ ಕರ್ನಾಟಕ ರಾಜ್ಯ ಇದೆ. ಇದಕ್ಕೆ ಪೂರಕವಾಗಿ ಹಿಂದಿನಿಂದ ನಡೆದಂತಹ ಸರ್ಕಾರಗಳು ತೆಗೆದುಕೊಂಡ ಕ್ರಮಗಳ ಸ್ಮರಣೆಯನ್ನು ಮಾಡುತ್ತೇನೆ. ಮೊದಲನೆಯದಾಗಿ ಶ್ರೀ ಕೃಷ್ಣರಾಜ ಒಡೆಯರ್‌ರವರು ಕೊಟ್ಟಂತಹ 'ಮಿಲ್ಲರ್ ಕಮಿಷನ್' ನೀಡಿದ ಮಿಲ್ಲರ್ ವರದಿ, ಅದು ಪ್ರಥಮ ಹೆಜ್ಜೆಯಾಗಿದೆ. ತದನಂತರ ಈ ರಾಜ್ಯದಲ್ಲಿ ಮೊದಲನೆ ಹಿಂದುಳಿದ ವರ್ಗದ ಸಮಿತಿ ಶ್ರೀ ನಾಗನಗೌಡರಿಂದ ಆಗುತ್ತದೆ. ಬಳ್ಳಾರಿಯ ಶ್ರೀ ನಾಗನಗೌಡರು 1956ರಲ್ಲಿ ಒಂದು ವರದಿಯನ್ನು ಕೊಡುತ್ತಾರೆ. ಆದರೆ ಆ ವರದಿ ಈ ರಾಜ್ಯದಲ್ಲಿ ಅನುಷ್ಠಾನಕ್ಕೆ ಬರುವುದಿಲ್ಲ. ಆದರೆ ನಾವು ಹೆಮ್ಮೆ ಪಡಬೇಕಾದಂತಹದ್ದು, ಶ್ರೀ ದೇವರಾಜ ಅರಸುರವರು ಈ ರಾಜ್ಯದ ಚುಕ್ಕಾಣಿ ಹಿಡಿದಂತಹ ಸಂದರ್ಭದಲ್ಲಿ ಮಾನ್ಯ ಎಲ್.ಜಿ. ಹಾವನೂರ್‌ರವರ ಕಮಿಷನ್ ರಚನೆಯಾಗುತ್ತದೆ. ಅದು ನಮಗೆಲ್ಲರಿಗೂ ಕೂಡ ಒಂದು ರೀತಿ ಅದನ್ನು ಯಾವ ಗ್ರಂಥ ಎಂದು ಹೇಳಬೇಕೋ; ನನಗೆ ಬಹಳ ಸಂತೋಷವಾಗುತ್ತದೆ, ಅದು ಬೈಬಲ್, ಖುರ್ರಾನ್ ಮತ್ತು ನಮ್ಮ 'ಭಗವದ್ಗೀತೆ' ಕೂಡ ಅಷ್ಟು ರೀತಿಯಲ್ಲಿ ಹಿಂದುಳಿದ ವರ್ಗದ ಜನರಿಗೆ ಇವತ್ತು ಏನಾದರೂ ಶೈಕ್ಷಣಿಕವಾಗಿ ಮತ್ತು ಎಲ್ಲಾ ಕ್ಷೇತ್ರದಲ್ಲಿ ಮುಂದೆ ಬರುವುದಕ್ಕೆ 'ಹಾವನೂರ್ ಕಮೀಷನ್' ನಮಗೆ ಸಹಕಾರಿಯಾಗಿದೆ. ಮೊದಲನೆಯದಾಗಿ ನಾನು ಮಾನ್ಯ ದೇವರಾಜ ಅರಸುರವರಿಗೆ ಈ ಸಂದರ್ಭದಲ್ಲಿ royal salute ಕೊಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಮಾನ್ಯ ಆಯನೂರು ಮಂಜುನಾಥ್‌ರವರು ಇಲ್ಲಿ ಇಲ್ಲ, ಅವರು ಹೇಳಿದರು, 'ನಾನು ಆಟೋ ಓಡಿಸುತ್ತಿದ್ದೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವತ್ತು ನಾನು ಇಲ್ಲಿ ಕುಳಿತಿದ್ದೇನೆ, ನನ್ನ ಹೋರಾಟ, ನಾನು ಮಾಡಿದ್ದಂತಹ ಸಂಘಟನೆ'ಯೆಂದು ಹೇಳಿದರು. ಮಂತ್ರಿಗಳ ಮಕ್ಕಳು ಮಂತ್ರಿಯಾಗುವುದು ದೊಡ್ಡದಲ್ಲ, ಮಂತ್ರಿಗಳ ಮಕ್ಕಳು ಎಂ.ಎಲ್.ಎ., ಆಗುವುದು ದೊಡ್ಡದಲ್ಲ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಇವತ್ತು ಕೊಟ್ಟಿರುವಂತಹ ಅವಕಾಶದಲ್ಲಿ ನಮ್ಮಂತಹವರು ಕೂಡ ಇಲ್ಲಿಗೆ ಬರುವುದಕ್ಕೆ ಅವಕಾಶವಾಯಿತು. ಅಂದರೆ, ನಮಗೆ ಎಂ.ಎಲ್.ಎ., ಗೆ ಮೀಸಲಾತಿ ಸಿಕ್ಕಿದೆ ಎಂದು ಹೇಳುತ್ತಿಲ್ಲ, ಮೀಸಲಾತಿ ಸಿಕ್ಕಿಲ್ಲ, ಸಿಗಬೇಕು ಅದನ್ನು ಆಮೇಲೆ ಹೇಳುತ್ತೇನೆ. ಆದರೆ ಈ ಚಿಂತನೆಯಾಗಿದ್ದು, ದೇವರಾಜ ಅರಸರು ಕೊಟ್ಟಂತಹ ಕೊಡುಗೆ, ಕಟ್ಟಕಡೆಯ 'ಪತ್ತಾರ್' ಬೆಳಗಾವಿಯ 'ಪತ್ತಾರ್' ಎಂಬುವವರನ್ನು ಮಂತ್ರಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಾರೆ. ‘ರಾಮಯ್ಯ’ ಎನ್ನುವವರನ್ನು ಮಂತ್ರಿ ಮಾಡುತ್ತಾರೆ. ಇವತ್ತು ಮಾನ್ಯ ಯಡಿಯೂರಪ್ಪನವರು ಗೆದ್ದಿರುವ ಜಾಗದಲ್ಲಿ ‘ವೆಂಕಟಪ್ಪ’ ಎಂಬ ವ್ಯಕ್ತಿ ಸಣ್ಣ ಸಮಾಜ, ದಲಿತರಲ್ಲಿ ಅದೊಂದು ಕೊರತೆ, ಸಮಾಜ ಅಂತಹ ವ್ಯಕ್ತಿಯನ್ನು ಈ ರಾಜ್ಯದಲ್ಲಿ ಮಂತ್ರಿ ಮಾಡಿದಂತಹ ಕೀರ್ತಿ ಶ್ರೀ ದೇವರಾಜ ಅರಸುರವರಿಗೆ ಸಲ್ಲುತ್ತದೆ. ಅದು ಸಮಾನ ಸಮಾಜದ ಚಿಂತನೆ. ಇವೆಲ್ಲ ಆಗುವುದಕ್ಕೆ ಪೂರಕವಾಗಿ; ಹರ್ಡಿ ಕಿತ್ತೂರು ಆ ಮೀಸಲಾತಿ ಬೇರೆ; ನಾನು ಹೇಳುತ್ತಿರುವುದು ಹಿಂದುಳಿದ ವರ್ಗಗಳ ಮೀಸಲಾತಿ ಬಗ್ಗೆ. ಹಿಂದುಳಿದ ವರ್ಗಗಳ ಮೀಸಲಾತಿಯಲ್ಲಿ ಆದಂತಹ ಬದಲಾವಣೆಗಳು ಮತ್ತು ಅವರ ಸುಧಾರಣೆಗೆ, ಬಲವರ್ಧನೆಗೆ ಇದು ಸಹಾಯವಾಗಿದೆ ಎಂಬ ವಿಷಯವನ್ನು ಮಂಡನೆ ಮಾಡುತ್ತಿದ್ದೇನೆ. ಅದರ ಜೊತೆಗೆ ಮುಂದೆ 2-3 ಆಯೋಗಗಳು ಬಂದವು. ಅದು ವೆಂಕಟಸ್ವಾಮಿ ಆಯೋಗ ಮತ್ತು ಚಿನ್ನಪ್ಪ ರೆಡ್ಡಿ ಆಯೋಗ, ಆ ಆಯೋಗಗಳಲ್ಲಿ ನಮಗೆ ನ್ಯಾಯ ಸಿಗಲಿಲ್ಲ. ವೆಂಕಟಸ್ವಾಮಿ ಆಯೋಗ ನಿಜವಾಗಿಯೂ ಕೂಡ ಬಹಳಷ್ಟು ಒತ್ತು ಕೊಟ್ಟಂತಹ ಆಯೋಗ. ಆದರೆ ಅವತ್ತು ಸರ್ಕಾರ ನಡೆಸತಕ್ಕಂತಹವರಲ್ಲಿ ಇಚ್ಛಾಶಕ್ತಿ ಇರಲಿಲ್ಲ. ಅದನ್ನು ಜಾರಿಗೊಳಿಸಲಿಲ್ಲ. ಇವತ್ತು ‘ಮಂಡಲ್ ಕಮಿಷನ್’ ಬರುವುದಕ್ಕೂ ಕೂಡ ಕಾರಣ Indira Sawhney & Others v. Union of Indiaಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಕೊಟ್ಟಂತಹ ತೀರ್ಪಿನ ಆಧಾರದ ಮೇಲೆ ಅದು ನಮಗೆ ಸಿಕ್ಕಿತು. ಅಲ್ಲಿ ನಮಗೆ ನ್ಯಾಯಾಂಗದ ಸಹಾಯವಾಯಿತು. ‘ವೆಂಕಟಸ್ವಾಮಿ ಆಯೋಗವು’ ನಿಜವಾಗಿಯೂ ಒಳ್ಳೆಯ ಆಯೋಗ. ಇದರಲ್ಲಿ ವಿದ್ಯಾರ್ಹತೆ ಮೇಲೆ, ಶೈಕ್ಷಣಿಕ ಆಧಾರದ ಮೇಲೆ ಜನಗಣತಿ ಮಾಡಿ ಅವರ ಹಿಂದುಳಿದಿರುವಿಕೆಯನ್ನು ಗುರುತಿಸಿದ ಪ್ರಥಮ ಆಯೋಗ ಎಂದರೆ, ವೆಂಕಟಸ್ವಾಮಿ ಆಯೋಗ. ತದನಂತರ ಕೇಂದ್ರ ಸರ್ಕಾರದ ಮತ್ತು ಕೋರ್ಟ್‌ನ ತೀರ್ಮಾನದಂತೆ ‘ಶಾಶ್ವತ ಹಿಂದುಳಿದ ಆಯೋಗ’ದ ಪರಿಕಲ್ಪನೆ ಈ ರಾಜ್ಯದಲ್ಲಿ ಪ್ರಾರಂಭವಾಯಿತು. ಆಗ Prof. Ravivarma Kumar ಅಂತಹವರು ಮುಂತಾದವರು ಬಂದರು. ಅದು ಕೂಡ ಚಾಲನೆಯಾಗಲಿಲ್ಲ. ಇವತ್ತು ನಾವೆಲ್ಲಾ ಇಷ್ಟಪಡುವಂತಹ ಕಾಂತರಾಜ್ ರವರ ಹೆಸರಿನಲ್ಲಿರುವ ಶಾಶ್ವತ ಆಯೋಗದಲ್ಲಿ ಸುಮಾರು 179 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 1931ರಲ್ಲಿ ಸಾಮಾಜಿಕ ಚಿಂತನೆಯಡಿಯಲ್ಲಿ ಜನಗಣತಿಯಾಗಿತ್ತೋ ಅದಾದ ಮೇಲೆ ಭಾರತದಲ್ಲಿ ಜಾತಿ ಆಧಾರದ ಮೇಲೆ ಜನಗಣತಿಯಾಗಿಲ್ಲ, ಶೈಕ್ಷಣಿಕವಾಗಿ ಮತ್ತು ಎಲ್ಲಾ ರಂಗದಲ್ಲಿಯೂ ಉನ್ನತಿಯನ್ನು ಅಳೆಯುವುದಕ್ಕೋಸ್ಕರ 1931ರಲ್ಲಿ ಭಾರತ ಸರ್ಕಾರದ ಜನಗಣತಿಯಾದ ಮೇಲೆ ಇಲ್ಲಿಯವರೆಗೂ ಆಗಿರಲಿಲ್ಲ. ಆದರೆ ಅದಕ್ಕೆ ಅತ್ಯಧಿಕ ಚಾಲನೆ ಕೊಟ್ಟವರು ಮಾನ್ಯ ಸಿದ್ದರಾಮಯ್ಯನವರು ಕಳೆದ ಸರ್ಕಾರದಲ್ಲಿ ಆ ಶಾಶ್ವತ ಆಯೋಗಕ್ಕೆ ಸುಮಾರು 179 ಕೋಟಿ ರೂಪಾಯಿಗಳನ್ನು ಕೊಡುವ ಮೂಲಕ 54 questionnaire ಗಳನ್ನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟು ಮನೆ ಮನೆಗೆ ಸುತ್ತಿ, ಎಲ್ಲಾ ಮಾಹಿತಿಗಳನ್ನು ಕೊಡುವ ಕೆಲಸಗಳಾಗಿದೆ. ಆದರೆ ಆ ವರದಿ ಇವತ್ತು ಎಲ್ಲಿದೆ? ಆ ವರದಿ ಜಾರಿಯಾದರೆ; ಇವತ್ತು ಒಂದು ಮಾತು ಹೇಳುತ್ತೇನೆ, ಇಲ್ಲಿ ಬಹಳ ಜನರು ವಿವಿಧ ಸಂಘಟನೆಗಳಲ್ಲಿ, ವಿವಿಧ ಸಮಾಜದಲ್ಲಿ ಇರುವವರು ಇದ್ದೀರಿ. ನಾವು ಹೇಳುತ್ತೇವೆ, ಕುರುಬರು ಸುಮಾರು 70 ಲಕ್ಷ ಇದ್ದೇವೆ, ವಿಶ್ವಕರ್ಮ 40–50 ಲಕ್ಷ ಎಂದು ಹೇಳುತ್ತಾರೆ ಹಾಗೂ ಗಂಗಾಮತಸ್ಥರು ಅಥವಾ ಕೋಳಿಮತಸ್ಥರು ಅವರು ಕೂಡ 35–40 ಲಕ್ಷ ಎಂದು ಹೇಳುತ್ತಾರೆ. ಈ ರೀತಿ ಎಲ್ಲಾ ಸಮಾಜಗಳನ್ನು ಲೆಕ್ಕ ಹಾಕಿ ನೋಡಿದರೆ ಸುಮಾರು 6 ಕೋಟಿ 40 ಲಕ್ಷಕ್ಕಿಂತ ಜಾಸ್ತಿಯಾಗುತ್ತದೆ. 10 ಕೋಟಿಗೂ ಜಾಸ್ತಿಯಾಗುವ ಪರಿಸ್ಥಿತಿ ಇರುವಂತಹ ಸಂದರ್ಭದಲ್ಲಿ ಇಷ್ಟು ಖರ್ಚು ಮಾಡಿ, ಇಷ್ಟು ಶ್ರಮ ಪಟ್ಟು ಎಷ್ಟು ಜನರು ಅದಕ್ಕೆ Enumerators ಕೊಟ್ಟು ಎಲ್ಲಾ ಮಾಡಿ ದಾಖಲೆಯನ್ನು ತಯಾರು ಮಾಡಿದಂತಹ ಸಂದರ್ಭದಲ್ಲಿ ಆ ದಾಖಲೆ/ವರದಿ ಕಸದ ಬುಟ್ಟಿಯಲ್ಲಿದೆಯೋ, ಎಲ್ಲಿದೆಯೋ ನನಗೆ ಗೊತ್ತಿಲ್ಲ, ಈ ಸರ್ಕಾರ ಅದನ್ನು ಬಿಡುಗಡೆ ಮಾಡಬೇಕು, ಅದನ್ನು ಮೊದಲು ಒಪ್ಪಿಕೊಳ್ಳಿ. ಬಿಡುಗಡೆಯಾಗುವುದರ ಮೇಲೆ ಚಿಂತನೆ ಚರ್ಚೆಗಳಾಗಲಿ. ಆ ವರದಿಯನ್ನು ಪಡೆದುಕೊಳ್ಳದೇ ಇಷ್ಟು ಖರ್ಚು ಮಾಡಿರುವ ಆ ವರದಿಯನ್ನು ಹಾಗೆ ಬಿಟ್ಟಿದ್ದೇವೆ ಎಂದು ಹೇಳಿದರೆ ಇದು ಸಾಮಾಜಿಕ ನ್ಯಾಯಕ್ಕೆ ಮಾಡಿದಂತಹ ಕೊಲೆ ಎಂದು ನನ್ನ ಅಭಿಪ್ರಾಯ. ಅದೇ ರೀತಿ ಇದರ ಉದ್ದೇಶ ಏನು? ಇವತ್ತು ನಾವು ಸಾಮಾಜಿಕ ನ್ಯಾಯದ ಅಡಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತೇವೆ. ಮಾನ್ಯ ಹಿರಿಯರಾದಂತಹ ಉಪಮುಖ್ಯಮಂತ್ರಿಯವರಾದ ಶ್ರೀ ಗೋವಿಂದ ಕಾರಜೋಳರವರು ಇಲ್ಲಿಯೇ ಇದ್ದಾರೆ. ಅವರಿಗೆ ಇದರ ಬಗ್ಗೆ ಚಿಂತನೆ ಇದೆ, ಮೊನ್ನೆ ಮಾತನಾಡಿದಂತಹ ಸಂದರ್ಭದಲ್ಲಿ ಬಹಳ ಚೆನ್ನಾಗಿ ಹೇಳಿದರು. ಯಾರೋ ಅಭಿವೃದ್ಧಿಯಾಗಿಲ್ಲ ಎಂದು ಹೇಳಿದಾಗ, ಭಾರತದಲ್ಲಿ ಅಭಿವೃದ್ಧಿಯನ್ನು ಕಂಡಿದ್ದೇವೆ, ಪರಿಸ್ಥಿತಿ ಬದಲಾಗಿದೆ ಎಂದು ಹೇಳಿದ್ದನ್ನು ನಾವು ಸಂತೋಷದಿಂದ ಒಪ್ಪುತ್ತೇವೆ. ಆದರೆ ಇದನ್ನು ಏತಕ್ಕೆ ಕೇಳುತ್ತಿದ್ದೇವೆ ಎಂದರೆ, ಯಾರ್‍ಯಾರೋ, ಯಾವ್ಯಾವ ರಂಗದಲ್ಲಿ ಹಿಂದೆ ಇದ್ದಾರೆ ಎನ್ನುವ ಮಾಹಿತಿ ಅದರಲ್ಲಿ ಸಿಗುತ್ತದೆ. ಅವರಿಗೆ ಯಾವ ಸವಲತ್ತನ್ನು ಸರ್ಕಾರ ಕೊಡಬೇಕು ಎಂಬಂತಹ ಮಾನದಂಡ ಈ ವರದಿಯಿಂದ ಸಿಗುತ್ತದೆ. ಯಾವ ಸಮಾಜ ಮುಖ್ಯವಾಹಿನಿಗೆ ಬರಬೇಕು, ಯಾವ ಸಮಾಜಕ್ಕೆ ಸಹಾಯ ಆಗಿಲ್ಲ ಎಂಬ ಮಾಹಿತಿಗಳನ್ನು ಪಡೆಯುವುದಕ್ಕೆ; ಇನ್ನೊಂದು ದೊಡ್ಡ ದುರಂತವೆಂದರೆ, 'ಕೆನೆ ಪದರ' ಎಂದು ಮಾಡಿ ನಮಗೆ ಶೇ.50ಕ್ಕೆ ಮೀಸಲಾತಿಗೆ ನಿಲ್ಲಿಸಿ ಬಿಟ್ಟಿದ್ದಾರೆ. ಶೇ.50ರ ಮೇಲೆ ಮೀಸಲಾತಿ ಕೊಡಬಾರದು ಎಂದು ಯಾರು ಹೇಗೆ ಹೇಳುತ್ತಾರೆ ಎಂಬುದನ್ನು ಕೂಡ ನಾವು ಯೋಚನೆ ಮಾಡಬೇಕಾಗಿದೆ, ಚರ್ಚೆಯಾಗಬೇಕಾಗಿದೆ. ಇಂತಹ ಸಂದರ್ಭದಲ್ಲಿ ಶೇ.50 ಹೋಗಲಿ ನಮಗೆ ಸಿಗಬೇಕಾದಂತಹ ಪಾಲು ಸಿಗಬೇಕಾದರೆ, ಈ ವರದಿ ಜಾರಿಗೆ ಬಂದರೆ, ಈ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರದಿಯನ್ನು ಒಪ್ಪಿದರೆ ಅದರಲ್ಲಿ ನಮ್ಮ ಶ್ರೇಣೀಕೃತ ಸಮಾಜದ ಅಡಿಯಲ್ಲಿ ಹೇಗೆ ನಾವು ಕುಳಿತಿದ್ದೇವೋ, 'ಮನುಧರ್ಮ ಶಾಸ್ತ್ರ'ದಲ್ಲಿ ಹೇಳಿದ ಹಾಗೆ ತಲೆಯಲ್ಲಿ ಹುಟ್ಟಿದವರು, ಭುಜದಲ್ಲಿ ಹುಟ್ಟಿದವರು, ಹೊಟ್ಟೆಯಲ್ಲಿ ಹುಟ್ಟಿದವರು, ಕಾಲಿನಲ್ಲಿ ಹುಟ್ಟಿದವರನ್ನು ನೋಡುವುದರ ಬದಲು ಮಾನ್ಯ ಜೆ.ಹೆಚ್. ಪಟೇಲ್‌ರವರು ಹೇಳಿದ ಹಾಗೆ ನಮ್ಮಪ್ಪನಿಗೆ ಹುಟ್ಟಿದವರು ಎಂದು ಹೇಳಿದ ಮಾತು ನನಗೆ ಜ್ಞಾಪಕಕ್ಕೆ ಬರುತ್ತಿದೆ. ಅದು ನಮ್ಮ ತಂದೆಗೆ ಹುಟ್ಟಿದ್ದೇವೆ ಎಂದು ಹೇಳುವುದು, ಇದು ಜೆ.ಹೆಚ್. ಪಟೇಲ್‌ರವರು ಹೇಳಿದಂತಹ ಮಾತು. ಈ ಚರ್ಚೆಯಲ್ಲಿ ಸದನದಲ್ಲಿ ನಾವು ಒತ್ತಾಯ ಮಾಡುತ್ತೇವೆ, ಖಂಡಿತವಾಗಿಯೂ ಈ ವರದಿಯನ್ನು ಸರ್ಕಾರ ಮೊದಲು ತೆಗೆದುಕೊಳ್ಳಬೇಕು, ತೆಗೆದುಕೊಂಡು ಆಮೇಲೆ ಚರ್ಚೆಯಾಗಲಿ. ತೆಗೆದುಕೊಳ್ಳದೇ ಬಿಟ್ಟಿರುವ ವರದಿಗಳನ್ನು ನೋಡಿದ್ದೇವೆ. ಸರ್ಕಾರ ಇದಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ಕೊಡುತ್ತಾ ಇದೆ ಎನ್ನುವುದು ಗೊತ್ತಾಗುತ್ತದೆ. ಅದಕ್ಕಾಗಿ ಈ ಸದನದ ಮೂಲಕ ಕಾಂತರಾಜ್ ರವರ ವರದಿಯನ್ನು ತೆಗೆದುಕೊಳ್ಳಬೇಕು ಎಂಬ ಒತ್ತಾಯದ ಜೊತೆಗೆ ಈ ರಾಜ್ಯದಲ್ಲಿ ಮಾನ್ಯ ಹಾವನೂರ್‌ರವರು ಕೊಟ್ಟಂತಹ ವರದಿಯ ಮುಖೇನ;

(ಮುಂದು)

(513) 18-03-2020/ 11-40/ ಕೆಹೆಚ್-ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಹೆಚ್.ಎಂ.ರೇವಣ್ಣ (ಮುಂದು):-**

ಮೊನ್ನೆಯ ದಿವಸ ಮಾನ್ಯ ಲಹರ್ ಸಿಂಗ್ ಸಿರೋಯಾರವರು ಒಂದು ಮಾತನ್ನು ಹೇಳಿದರು. ಅವರ ಹೆಸರನ್ನು ಹೇಳಿದ ತಕ್ಷಣ ಅವರು ನಿಂತುಕೊಂಡು ಬಿಡುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಶ್ರೀ ಡಿ. ದೇವರಾಜು ಅರಸುರವರು ಸಾಮಾಜಿಕ ನ್ಯಾಯದ ಚಿಂತನೆಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಕೊಟ್ಟಿರುವಂತಹ ಒತ್ತು ಬಹಳ ಮುಖ್ಯವಾಗಿದೆ. ಇದರಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳನ್ನು ಮತ್ತು ವಿದ್ಯಾರ್ಥಿವೇತನವನ್ನು ಕೊಟ್ಟಿರುವಂತಹದ್ದು, ಭಾರತದಲ್ಲಿಯೇ ಕರ್ನಾಟಕ ಮೊದಲನೆಯದು ಎಂದು ಹೇಳಬಹುದು. ಅಂತಹ ಒಂದು ಸಂದರ್ಭದಲ್ಲಿ ಇವತ್ತಿನ ದಿವಸ 25 ಲಕ್ಷ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನವನ್ನು ಪಡೆಯುತ್ತಿದ್ದಾರೆ. ಎರಡೂವರೆ ಲಕ್ಷ ವಿದ್ಯಾರ್ಥಿಗಳು ಹಾಸ್ಟೆಲ್‌ಗಳ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಇದು ಈ ರಾಜ್ಯದ ಯುವ ಸಂಪತ್ತು ಎಂದು ಹೇಳಬಹುದು. ಇವರನ್ನು ನಾವು ಈ ದೇಶಕ್ಕೆ ಅರ್ಪಿಸುವಂತಹ ಸಂದರ್ಭದಲ್ಲಿ ಅವರಿಗೆ ಒತ್ತು ಕೊಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:-** ಮಾನ್ಯ ಹೆಚ್.ಎಂ.ರೇವಣ್ಣನವರೇ, 5 ಲಕ್ಷಗಿಂತ ಜಾಸ್ತಿ ಇದ್ದಾಗ ಆ ರೀತಿಯಾಗುತ್ತದೆ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು subject to clarification. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರ ಜೊತೆಗೆ ಮಾನ್ಯ ಸಿದ್ದರಾಮಯ್ಯನವರು ಈ ರಾಜ್ಯಕ್ಕೆ ಕೊಟ್ಟಂತಹ 2-3 ಕೊಡುಗೆಗಳೆಂದರೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆಯ ಆಧಾರದ ಮೇಲೆ ಶೇಕಡಾ 24.1 ರಷ್ಟು ಇವತ್ತು ಬರುವಂತಹ ರಾಜ್ಯದ ಸಂಪತ್ತನ್ನು ಹಂಚಬೇಕೆಂದು ಕಾನೂನನ್ನು ತಂದಿದ್ದಾರೆ. ಇದನ್ನು ಕಾನೂನಾತ್ಮಕವಾಗಿ ಇಡೀ ಭಾರತದಲ್ಲಿ ಮೊದಲನೆ ರಾಜ್ಯವೆಂದರೆ ಅದು ಕರ್ನಾಟಕ ರಾಜ್ಯ ಎಂದು ಹೇಳಬಹುದು. ಇದು ನಮಗೆ ಹೆಮ್ಮೆ ತರುತ್ತದೆ. ಇದರ ಜೊತೆಗೆ ಆರ್ಟಿಕಲ್-340 ರಡಿಯಲ್ಲಿ ಈ ರಾಜ್ಯ ತೆಗೆದುಕೊಂಡಂತಹ ಕ್ರಮಗಳು ಆಗುತ್ತಿವೆ. ಅದೇ ರೀತಿ ಆರ್ಟಿಕಲ್-315(4) ಮತ್ತು 315(5) ಶಿಕ್ಷಣಕ್ಕೆ ಮೀಸಲಾತಿಯಾಗಿದೆ. ಆರ್ಟಿಕಲ್ 16(4) ಉದ್ಯೋಗದ ಮೀಸಲಾತಿಯಾಗಿದೆ. ಇದು ಹಿಂದುಳಿದ ವರ್ಗಕ್ಕೆ ಆಶಾಕಿರಣವಾಗಿದೆ. ಇದರ ಜೊತೆಗೆ ಆರ್ಟಿಕಲ್-341 ಮತ್ತು ಆರ್ಟಿಕಲ್-342 ರಲ್ಲಿ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿಗೆ ಸೇರಬೇಕಾದಂತಹ ಸಾಮಾಜಿಕ ನ್ಯಾಯವನ್ನು ಇವತ್ತು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದನ್ನು ಮಾಡಬೇಕೆಂಬುದು ನಮ್ಮ ಅನಿಸಿಕೆಯಾಗಿದೆ. ಈ ಸಂದರ್ಭದಲ್ಲಿ ಆರ್ಟಿಕಲ್-334ರಲ್ಲಿ ಎಸ್.ಸಿ., ಎಸ್.ಟಿ., ವರ್ಗಗಳಿಗೆ ಮೀಸಲಾತಿಯನ್ನು ಕೊಡುವಂತಹದ್ದು ಕೇಂದ್ರ ಸರ್ಕಾರದ ತೀರ್ಮಾನವಾಗಿದೆ. ಇದು ಭಾರತದ ಹಿರಿಮೆ. ಆ ದೃಷ್ಟಿಯಲ್ಲಿ ಇವತ್ತಿನ ದಿವಸ ಲೋಕಸಭೆ ಮತ್ತು ವಿಧಾನಸಭೆಯ ಚುನಾವಣೆಯಲ್ಲಿ ಗೆದ್ದು, ಇಲ್ಲಿಗೆ ಬಂದು, ಅವರು ಭಾಗವಹಿಸುವುದಕ್ಕೆ ಈ ಒಂದು ಆರ್ಟಿಕಲ್-334 ಇವತ್ತು ನಮಗೆ ವರದಾನವಾಗಿದೆ. ಇಲ್ಲದಿದ್ದರೆ ಇದರ ಬಗ್ಗೆ ನೆನ್ನೆಯ ದಿವಸ ಎಲ್ಲಾ ಮಾನ್ಯ ಸದಸ್ಯರು ಮಾತನಾಡಿದ್ದೇವೆ. ಹಿಂದುಳಿದ ವರ್ಗದವರಿಗೆ ಯಾವುದೇ ರೀತಿಯ ಮೀಸಲಾತಿ ಇಲ್ಲ. ದಲಿತ ವರ್ಗದವರು ಈ ಒಂದು ಮನೆಗೆ ಬರುವಂತಹ ಅವಕಾಶ ಸಿಗುತ್ತಿತ್ತೆ ಎನ್ನುವುದರ ಬಗ್ಗೆ ಒಂದು ಬಾರಿ ಯೋಚನೆ ಮಾಡಬೇಕಾಗುತ್ತದೆ. ಇನ್ನು ಚುನಾವಣೆಯ ಬಗ್ಗೆ ನೆನ್ನೆಯ ದಿವಸ ಎಲ್ಲಾ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಚುನಾವಣೆ ಹೇಗೆ ನಡೆಯುತ್ತದೆ, ಹಣ ಬಲ, ತೋಳು ಬಲ, ಜಾತಿ ಬಲ, ಇವೆಲ್ಲವುದರ ಬಗ್ಗೆ ನೆನ್ನೆಯ ದಿವಸ ಚರ್ಚೆಯಾಗಿದೆ. ನನ್ನ ಬಗ್ಗೆ ಒಂದೇ ಒಂದು ಮಾತಿನಲ್ಲಿ ಹೇಳಬೇಕಾದರೆ, ಇವತ್ತು ನಾನು ಕೂಡ ವಿದ್ಯಾರ್ಥಿ ನಾಯಕನಾಗಿ ಬಂದವನು. ನನಗೆ ಜಾತಿಯ ಬಗ್ಗೆ ಗೊತ್ತಿರಲಿಲ್ಲ. ನಾನು ಚುನಾವಣೆಗೆ ನಿಂತ ಮೇಲೆ ಈ ವಿಷಯ ಚರ್ಚೆಗೆ ಪ್ರಾರಂಭವಾಯಿತು. ನನ್ನ ಕ್ಷೇತ್ರದಲ್ಲಿ 2700 ಜನರು ನಮ್ಮ ಸಮಾಜದವರು ಇದ್ದಾರೆ. ಆದರೆ, ನನ್ನನ್ನು ಆಯ್ಕೆ ಮಾಡಿದ ಸಮಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನನಗೆ ಇವತ್ತಿನ ದಿವಸ ಹೆಮ್ಮೆ ತಂದಿದೆ. ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಾನು ಈ ಜಾಗದಲ್ಲಿ ನಿಂತುಕೊಂಡು ಕೆಲಸ ಮಾಡುವಂತಹ ಒಂದು ಅವಕಾಶ ದೊರೆತಿರುವುದಕ್ಕೆ ನಾನು ಹೆಮ್ಮೆಪಡುತ್ತೇನೆ. ಇದರ ಬಗ್ಗೆ ನನಗೆ ಬಹಳ ಸಂತೋಷವಿದೆ. ಇದೇ ರೀತಿ ಮುಂದಿನ ದಿನಮಾನಗಳಲ್ಲಿ ಲೋಕಸಭೆ, ರಾಜ್ಯಸಭೆ, ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಹಿಂದುಳಿದ ವರ್ಗದವರಿಗೂ ಕೂಡ ಮೀಸಲಾತಿಯನ್ನು ತರಬೇಕೆನ್ನುವ ಒತ್ತಾಯವನ್ನು ಈ ಸದನದ ಮೂಲಕ ಮಾಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, 'ಸಮ ಪಾಲು, ಸಮ ಬಾಳು', ಮತ್ತು ಸಾಮಾಜಿಕ ನ್ಯಾಯವನ್ನು ಸಹ ಕೇಳುತ್ತೇವೆ. ಈ ಕಾರ್ಯಕ್ರಮ ಎಲ್ಲಿ ಜಾರಿಗೆ ಬರುತ್ತಿದೆ. ಈ ವಿಧೇಯಕವು ಕೇಂದ್ರ ಸರ್ಕಾರದಲ್ಲಿ ಬಾಕಿಯಲ್ಲಿದೆ. ಲೋಕಸಭೆಯಲ್ಲಿ lay ಆಯಿತು. ಆದರೆ, ಅಲ್ಲಿ ಮಧ್ಯದಲ್ಲಿ ಮೀಸಲಾತಿ ಬರಬೇಕೆನ್ನುವ ದೃಷ್ಟಿಯಿಂದ ಅದು ನಿಂತಿದೆ. ಮಹಿಳಾ ಮೀಸಲಾತಿಯ ಅಡಿಯಲ್ಲಿ ಈ ವಿಧೇಯಕ ಕೇಂದ್ರ ಸರ್ಕಾರದಲ್ಲಿ ಬಂದಿದೆ. ಈ ವಿಧೇಯಕವನ್ನು ಅನುಷ್ಠಾನಕ್ಕೆ ತರಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಸಂವಿಧಾನದ 15(4), 15(5) . . .

**ಶ್ರೀ ಗೋವಿಂದ ಎಂ.ಕಾರಜೋಳ (ಉಪ ಮುಖ್ಯಮಂತ್ರಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಂದು ನಿಮಿಷ ಯೀಲ್ಡ್ ಆದರೆ, ಮಾನ್ಯ ಹೆಚ್.ಎಂ.ರೇವಣ್ಣನವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಇವರು ಮೀಸಲಾತಿ ವ್ಯವಸ್ಥೆಯ ಬಗ್ಗೆ ಮಾತನಾಡಿದ್ದಾರೆ. ಮೀಸಲಾತಿಯಲ್ಲಿ ಬರುವಂತಹ ಅನೇಕ ಉಪಜಾತಿಗಳ ಬಗ್ಗೆ ಇವತ್ತು ದೇಶ ಉದ್ದಗಲಕ್ಕೂ ಹೋರಾಟಗಳನ್ನು ಮಾಡುತ್ತಿದ್ದಾರೆ. ಉದಾಹರಣೆಗೆ, ಹಿಂದುಳಿದ ವರ್ಗಗಳ ಜಾತಿಗೆ ಮೀಸಲಾತಿ ಎಂದು ಮಾನ್ಯ ಸದಸ್ಯರು ಹೇಳಿದರು. ಅದರಿಂದ, ಅಲ್ಲಿ ಬರುವಂತಹ ಎಲ್ಲಾ ಉಪಜಾತಿಗಳಿಗೂ ಮೀಸಲಾತಿ ಸೌಲಭ್ಯ ಸಿಗುತ್ತಿಲ್ಲ. ಮೀಸಲಾತಿ ವಿಷಯದಲ್ಲಿ ಬಹುಸಂಖ್ಯಾತರು ಯಾರಿದ್ದಾರೋ, ಅದು ಅವರ ಪಾಲಾಗುತ್ತಿದೆ. ಅದಕ್ಕೆ ತಾವು ಸ್ವಲ್ಪ ವಿಶಿಷ್ಟವಾದ ಒತ್ತನ್ನು ಕೊಡಬೇಕೆಂಬುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಮಾನಸಿಕ ಚಿಂತನೆ ಏನೆಂಬುದು ನನಗೆ ಗೊತ್ತಾಯಿತು.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಹೆಚ್.ಎಂ.ರೇವಣ್ಣನವರೇ, ಇನ್ನೊಂದು ನಿಮಿಷ ನಾನು ಮಾತನಾಡಿ ಮುಗಿಸುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಗೋವಿಂದ ಎಂ.ಕಾರಜೋಳರವರೇ ಪರಿಶಿಷ್ಟ ಜಾತಿಯ ಬಗ್ಗೆ ಸದಾಶಿವ ಆಯೋಗ ಬರುವಂತಹದ್ದು ಒಂದು ವರ್ಗೀಕರಣ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಇನ್ನೊಂದು ನಿಮಿಷದಲ್ಲಿ ನಾನು ಇದರ ಬಗ್ಗೆ ಮಾತನಾಡಿ ಮುಗಿಸುತ್ತೇನೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಸ್ವಾತಂತ್ರ ಬಂದ ನಂತರ ಮೀಸಲಾತಿ ಇರುವಂತಹದ್ದು ಆದಿವಾಸಿಗಳಿಗೆ ಮತ್ತು ಗುಡ್ಡಗಾಡು ಪ್ರದೇಶದಲ್ಲಿ ವಾಸವಾಗಿರುವಂತಹವರಿಗೆ, ಅಲೆಮಾರಿ ಜನಾಂಗದವರು, ಬುಡಕಟ್ಟು ಜನಾಂಗದವರಿಗೆ ಇವತ್ತಿನ ದಿವಸ ಮೀಸಲಾತಿ ವ್ಯವಸ್ಥೆ ಸಿಗುತ್ತಿಲ್ಲ. ನಾವು ಉದ್ದೇಶಕ್ಕಾಗಿ ಮೀಸಲಾತಿ ವ್ಯವಸ್ಥೆಯನ್ನು ನಮ್ಮ ಪೂರ್ವಜರು ಸ್ವಾತಂತ್ರ ಬಂದ ನಂತರ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಮತ್ತು ಮಹಾತ್ಮ ಗಾಂಧಿಯವರ ಆಶಯಗಳಿಗೆ ಅನುಗುಣವಾಗಿ ಬಂದಂತಹ ಮೀಸಲಾತಿ ಯಾರ ಸಲುವಾಗಿ ಮೀಸಲಾತಿ ಇದೆಯೋ, ಅವರಿಗೆ ಮೀಸಲಾತಿ ಸಿಗುತ್ತಿಲ್ಲ. ಅದರ ಬಗ್ಗೆ ಒತ್ತು ಕೊಟ್ಟು ಮಾತನಾಡಬೇಕೆಂದು, ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವಂತಹ ಮಾತುಗಳನ್ನು ನಾನು ಒಪ್ಪುತ್ತೇನೆ. ಅದರಲ್ಲಿ ಏನಾಗಿದೆ ಎಂದರೆ, ಇನ್ನು ಕೆಳಗೆ ಇರುವಂತಹ ಜನರು ಮೇಲೆ ಬರಬಾರದು ಎಂದು ಈ ರೀತಿ ಮಾಡುತ್ತಾರೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ಅದನ್ನೇ ನಾನು ಸಹ ಹೇಳಿದ್ದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಆವತ್ತಿನ ಪರಿಸ್ಥಿತಿಯನ್ನು ನೋಡಿ, ಜನರು ಮುಂದೆ ಬರಲಿ ಎಂದು ಹೇಳಿದರು. ಅವರು ಇನ್ನು ಮುಂದೆ ಬಂದಿರುವುದಿಲ್ಲ. ಅವರು ಅಲ್ಲಿಯೇ ಇನ್ನು ಕುಳಿತುಕೊಂಡಿದ್ದಾರೆ. ಇನ್ನು ನಾವು, ನೀವು ಅವರು ಅಲ್ಲಿಯೇ ಇನ್ನು ಕುಳಿತುಕೊಂಡಿರುವುದನ್ನು ನೋಡುತ್ತಿದ್ದೇವೆ. ಅವರಿಗೆ ಏನು ಮಾಡುತ್ತೀರಾ ಎಂದು ಕೇಳುತ್ತಿದ್ದಾರೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಅದರ ಸಲುವಾಗಿಯೇ ಅದರ ಬಗ್ಗೆ ಹೆಚ್ಚು ಒತ್ತನ್ನು ಕೊಡಬೇಕೆಂದು ನಾನು ಆಗಲೇ ಹೇಳಿದ್ದೇನೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಇದು ಪ್ರಾರಂಭವಾಗಿದೆಯಷ್ಟೇ. ಇದೇನು ಅಂತ್ಯ ಅಲ್ಲ. ಎಲ್ಲಾ ಪ್ರಕ್ರಿಯೆಗಳು ನಡೆಯಲಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ರೇವಣ್ಣನವರೇ, ತಾವು ಈಗ ಎಸ್.ಟಿ., ಹೋಗಬೇಕು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಅದೆಲ್ಲಾ ಆಮೇಲೆ ಆಗುತ್ತದೆ. ತಾವು ಈ ರೀತಿ ನೇರವಾಗಿ ಹೇಳುವುದಾದರೆ ಅದಕ್ಕೂ ಸಹ ಉತ್ತರವನ್ನು ಹೇಳುತ್ತೇನೆ. ಇದರ ಬಗ್ಗೆ ಒಂದೇ ಒಂದು ಮಾತಿನಲ್ಲಿ ಹೇಳುತ್ತೇನೆ. ಈಗ ಮಾನ್ಯ ಗೋವಿಂದ ಎಂ. ಕಾರಜೋಳರವರು ಒಂದು ಮಾತನ್ನು ಹೇಳಿದರು. ಅದನ್ನು ಸ್ವಲ್ಪ ಕೇಳಿಸಿಕೊಳ್ಳಿ. ಕುಲಶಾಸ್ತ್ರ ಅಧ್ಯಯನ ಆಗಿದೆ, ನಾವು ಬೆಂಗಳೂರಿನಲ್ಲಿರುವ ಕುರುಬರು ಪ್ಯಾಂಟ್–ಷರ್ಟ್‌ಗಳನ್ನು ಹಾಕಿಕೊಂಡಿರುವವರನ್ನೇ ನೋಡಿ, ನಾವು ಮಾತನಾಡುವುದಲ್ಲ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ಸ್ವಲ್ಪ ವಿಷಯವನ್ನು ತಿಳಿಸುತ್ತೇನೆ. ಕುರಿ ಕಾಯುವಂತಹ ಊರಿನಿಂದ ಊರಿಗೆ ಅಲೆಮಾರಿಯಾಗಿ ಓಡಾಡುವಂತಹ ಆ ಜನರು ಇನ್ನು ಇದ್ದಾರೆ ಸ್ವಾಮಿ. ಅವರಿಗೆ ಇನ್ನು ಯಾವುದೇ ರೀತಿಯ ಸೌಲಭ್ಯಗಳು ಸಿಗುತ್ತಿಲ್ಲ. ಅದರ ಬಗ್ಗೆ ಅವರಿಗೆ ಸ್ವಲ್ಪ ಹೇಳಿಬಿಡುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ.ರೇವಣ್ಣನವರು ಅವರನ್ನು ಕುರುಬರು ಎಂದು ಒಪ್ಪಿಕೊಳ್ಳುವುದಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಗೋವಿಂದ ಎಂ.ಕಾರಜೋಳರವರೇ ತಾವು ಆ ರೀತಿ ಹೇಳಬೇಡಿ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ನಮ್ಮ ಕಡೆ ಕುರಿ ಕಾಯುವವರು ಊರು ಊರು ಅಲೆಯುವ ಅಲೆಮಾರಿಗಳು ಇದ್ದಾರಲ್ಲವೇ, ಇದರ ಬಗ್ಗೆ ಮಾನ್ಯ ಎಸ್.ಆರ್.ಪಾಟೀಲ್‌ರವರಿಗೂ ಮತ್ತು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗೂ ಗೊತ್ತಿದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಹೆಚ್.ಎಂ.ರೇವಣ್ಣರವರೇ ಒಂದು ನಿಮಿಷ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಅವರ ಮನೋಸಿದ್ಧತೆ ಬಗ್ಗೆ ಕೇಳಬೇಡಿ ಸ್ವಾಮಿ. ಅವರ ಮನೋಸಿದ್ಧತೆ ಬೇರೆಯೇ ಇದೆ. ತಾವು ನೇರವಾಗಿ ಕೇಳಿದರೂ ಸಹ ಅವರು ನೇರವಾಗಿ ಹೇಳಬೇಕಾಗುತ್ತದೆ. ಇದರ ಬಗ್ಗೆ ಯಾರ್‍ಯಾರು ಮಾತನಾಡುತ್ತಾರೆ. ಅವರ ಒಳ ಮರ್ಮ ಏನಿದೆ ಎಂಬುದು ನಮಗೆ ಅರ್ಥವಾಗುತ್ತದೆ. ಇದರ ಬಗ್ಗೆ ಅನಿಸಿಕೆಗಳು ನೊಂದವರಿಗೆ ಗೊತ್ತು. ಇದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳುವವರಿಗೆ ಬಹಳ ಚೆನ್ನಾಗಿ ಇರುತ್ತದೆ. ಇವರು ಸಮಾನತೆ ಬಗ್ಗೆ ಮಾತನಾಡುತ್ತಾರೆ. ಇವರೆಲ್ಲಾ ಸಮಾನತೆಯ ಬಗ್ಗೆ ಮಾತನಾಡಬೇಕಾದರೆ, ಅದರಲ್ಲಿ ಅವರ ಹಸಿವು, ಅವರು ಪಟ್ಟಿರುವಂತಹ ಪಾಡು, ಜೀವನದಲ್ಲಿ ಕಷ್ಟ ಬಂದಿದ್ದಾಗ, ಅವರು ನಡೆದುಕೊಂಡು ಬಂದ ದಾರಿಯಲ್ಲಿ ಬಂದಾಗ ಅವರಿಗೆ ಇದರ ಬಗ್ಗೆ ಗೊತ್ತಾಗುತ್ತದೆ. ಜಾತಿಯ ಆಧಾರದ ಮೇಲೆ ಮಾತನಾಡಿದರು. ಇವರು ಕೇಳಿದರೂ ಇಲ್ಲ. ಮಾನ್ಯ ಆಯನೂರು ಮಂಜುನಾಥ್‌ರವರನ್ನು ಕೇಳಿ ನಾನು ಒಪ್ಪುತ್ತೇನೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರನ್ನು ಕೇಳಿದರೆ ನಾನು ಒಪ್ಪುವುದಿಲ್ಲ. ಏಕೆಂದರೆ, ಅವರ ಮನೋಸಿದ್ಧತೆ ಏನು ಎಂಬುದು ನನಗೆ ಗೊತ್ತಿದೆ. ಈಗ ನನ್ನನ್ನು ಬಿಡಿ. ಈಗ ನಾನು ಸ್ವಲ್ಪ ವಿಚಾರಗಳ ಬಗ್ಗೆ ಮಾತನಾಡುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ನನ್ನ ಆಸೆ ಏನೆಂದರೆ, ಮೀಸಲಾತಿ ವ್ಯವಸ್ಥೆ ಯಾರ ಸಲುವಾಗಿ ಜಾರಿಗೆ ಬಂದಿತು, ಅವರಿಗೆ ಇವತ್ತು ತಲುಪುತ್ತಿಲ್ಲ. ಅದರ ಬಗ್ಗೆ ಹೆಚ್ಚು ಒತ್ತನ್ನು ಕೊಡುವಂತಹ ಮತ್ತು ಸದನದಿಂದ ಬೆಳಕನ್ನು ಚೆಲ್ಲುವಂತಹ ಕೆಲಸ ಆಗಬೇಕು.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸಚಿವರಾದ ಮತ್ತು ಮಾನ್ಯ ಉಪಮುಖ್ಯಮಂತ್ರಿಗಳಾದ ಗೋವಿಂದ ಎಂ.ಕಾರಜೋಳರವರು ಏನು ವಿಷಯವನ್ನು ಹೇಳಿದರು. ಅಲೆಮಾರಿ ಜನಾಂಗದ ಕುರುಬರ ಬಗ್ಗೆ ನೀವೇ ಒಪ್ಪಿಕೊಳ್ಳುವುದಿಲ್ಲ. ಇದರ ಬಗ್ಗೆ ಬಹಳ ಜವಾಬ್ದಾರಿಯಿಂದ ಮತ್ತು ವಿಶ್ವಾಸದಿಂದ ಪ್ರೀತಿಯನ್ನು ಪಡೆಯಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸಮಾಜದಲ್ಲಿ ಉಪ ಜಾತಿಗಳು ಯಾವುದೂ ಇಲ್ಲ. ಉಪ ಜಾತಿಗಳಿದ್ದರೂ ಕೂಡ ನಮ್ಮಲ್ಲಿ ಇರುವುದು ಒಂದೇ ಒಂದು ಜಾತಿ, ಅದು 'ಕುರುಬ ಸಮಾಜ', ಇದರಲ್ಲಿ ಉಪ ಜಾತಿಗಳು ಬೇರೆ ಇರಬಹುದು. ನಮ್ಮಲ್ಲಿ ಇರುವುದು ಒಂದೇ ಸಂಘ. ಅದು 'ಕರ್ನಾಟಕ ಪ್ರದೇಶ ಕುರುಬರ ಸಂಘ', ನಮ್ಮಲ್ಲಿ ಇರುವುದು ಒಂದೇ ಪೀಠ 'ಕಾಗಿನೆಲೆ ಸಂಸ್ಥಾನದ ಮಹಾ ಗುರು ಪೀಠ' ನಮ್ಮಲ್ಲಿ ಬೇರೆ ಯಾವುದೇ ವ್ಯತ್ಯಾಸ ಇಲ್ಲ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ನಾನು ಹೇಳಿರುವ ವಿಚಾರವನ್ನು ಸರಿಯಾಗಿ ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಮಾನ್ಯ ಎಸ್.ಆರ್.ಪಾಟೀಲ್‌ರವರೇ ಮತ್ತು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ ತಾವು ಸಹ ನಾನು ಹೇಳುವುದನ್ನು ದಯವಿಟ್ಟು, ಕೇಳಬೇಕು. ಮಾನ್ಯ ಸದಸ್ಯರಾದ ರಘುನಾಥ ರಾವ್ ಮಲ್ಕಾಪೂರೆರವರು ಹೇಳಿದರು. ಇವತ್ತು ಊರಿನ ಹೊರಗಡೆ ಇರುವಂತಹ ಕುರಿದೊಡ್ಡಿಯವರ ಜೊತೆಯಲ್ಲಿ ಇವರು ಬೀಗತನವನ್ನು ಮಾಡಿದ್ದಾರೆಯೇ, ಇವರು ಅವರ ಜೊತೆಯಲ್ಲಿ ರಕ್ತ ಸಂಬಂಧವನ್ನು ಬೆಳೆಸಿದ್ದಾರೆಯೇ, ಇವರು ಎಂದೂ ಕೂಡ ರಕ್ತ ಸಂಬಂಧವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಳೆಸಿರುವುದಿಲ್ಲ. ಇದರ ಬಗ್ಗೆ ಬೇಕಾದರೆ ಕೇಳಿ. ನಮ್ಮ ಸಮಾಜದಲ್ಲಿ 'ಮಾದರು' ಎಂದರೆ ಒಂದೇ ಜಾತಿ ಅಲ್ಲ. ಅದರಲ್ಲಿ 10 ಉಪಜಾತಿಗಳಿವೆ. Scavengers ಎಂದರೆ ಪೌರ ಕಾರ್ಮಿಕರು ಅಲ್ಲ. Scavengers ಎಂದರೆ, ಪಾಯಖಾನೆ ತೊಳೆಯುವವರು ಎಂದು ಹೇಳುತ್ತೇವೆ. ಅವರು ನಮ್ಮ ಜಾತಿಯವರೇ, ಅವರಿಗೆ ಮಾಂಗ್ ಗಾರುಡಿ ಎಂದು ಹೇಳುತ್ತೇವೆ. ಅವರ ಜೊತೆಗೆ ಇವತ್ತಿಗೂ ಕೂಡ ಬೀಗತನವನ್ನು ಮಾಡಿರುವುದಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇನ್ನು ಕನ್ನಡ ಶಬ್ದದಲ್ಲಿ ಹೇಳಬೇಕೆಂದರೆ, . . .

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಬೆಂಗಳೂರಿನಲ್ಲಿ ಪೌರಕಾರ್ಮಿಕರು ಇದ್ದಾರೆ, ಅವರು ನಮ್ಮ ಜನಾಂಗಕ್ಕೆ ಸೇರಿದವರು, ಅವರ ಜೊತೆಯಲ್ಲಿ ಎಷ್ಟು ಜನರು ಬೀಗತನವನ್ನು ಮಾಡಿದ್ದಾರೆ? ನಾನು ಹೇಳುವುದೇನೆಂದರೆ, ಅಷ್ಟು ಸರಾಸಗಟಾಗಿ ಹೇಳಬೇಡಿ. ನಮ್ಮ ಊರಿನ ಹತ್ತಿರ ಕುರಿ ಕಾಯುವವರು ಇದ್ದಾರೆ. ಕುರಿದೊಡ್ಡಿಗಳು ಇವೆ. ಅವರು ಊರಿನ ಒಳಗೂ ಬರುವ ಹಾಗಿಲ್ಲ ಮತ್ತು ಅವರ ಜೊತೆಯಲ್ಲಿ ಯಾರೂ ಕೂಡ ಸಂಬಂಧವನ್ನು ಬೆಳೆಸುವುದಿಲ್ಲ.

**ಸಭಾಪತಿಯವರು:-** ಮಾನ್ಯ ಹೆಚ್.ಎಂ.ರೇವಣ್ಣನವರೇ, ಇವತ್ತು ಇದು ಮುಗಿಯಬೇಕು. ಈಗಾಗಲೇ ಪ್ರಾರಂಭ ಮಾಡಿ ಅರ್ಧ ಗಂಟೆ ಆಯಿತು. ಇವತ್ತು ಇದನ್ನು ಮುಗಿಸಲೇಬೇಕು.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಇದಕ್ಕೆ ನನ್ನ ಆಸೆಯೇನೆಂದರೆ, ಅವರ ಸಲುವಾಗಿಯೂ ಸಹ ಸದನದಲ್ಲಿ ಚರ್ಚೆಯಾಗಬೇಕು.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಹೆಚ್.ಎಂ.ರೇವಣ್ಣನವರೇ ಒಂದು ನಿಮಿಷ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(514) 18/03/2020/11:50/ಎಸ್‌ಪಿಆರ್/ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆಯನೂರು ಮಂಜುನಾಥ್ (ಮುಂದು):-**

ಮಾನ್ಯ ಸಭಾಪತಿಯವರೇ, ಭಾರತ ದೇಶದ ಸಂವಿಧಾನದ ಬಗ್ಗೆ ಚರ್ಚೆಯನ್ನು ಮಾಡುತ್ತಿರುವ ಸಂದರ್ಭದಲ್ಲಿ ಸಮಾನತೆಯ ಅಂಶವನ್ನು ನಾವು ಒಪ್ಪಿಕೊಂಡಿದ್ದೇವೆ. ಮೀಸಲಾತಿ ಬೇಕೇ ಬೇಕು ಎನ್ನುವ ಪ್ರಶ್ನೆ ...

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ನಂತರದಲ್ಲಿ ತಾವು ಮಾತನಾಡುತ್ತೀರಲ್ಲವೇ? ಈ ಚರ್ಚೆಯನ್ನು ಮುಗಿಸಬೇಕು. ಸಂವಿಧಾನದ ಮೇಲೆ ಚರ್ಚೆ ಪ್ರಾರಂಭಿಸಿ ಇಲ್ಲಿಗೆ ಏಳು ದಿವಸಗಳಾಯಿತು. ಈ ವಿಚಾರದಲ್ಲಿ ನನಗೆಲ್ಲವೂ ತಿಳಿದಿದ್ದರೆಯಾದರೂ ನಾನೇನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ನನಗೇನಾದರೂ ಮಾತನಾಡಲು ಅವಕಾಶವಿದ್ದರೆ...

**ಸಭಾಪತಿಯವರು:-** ತಾವು ಸದನಕ್ಕೆ ಬಂದರೆ ಮಾತನಾಡಬಹುದು. ಆದರೆ ತಾವು ಆಗಾಗ ಮಾತ್ರವೇ ಸದನಕ್ಕೆ ಬರುತ್ತಿರುತ್ತೀರಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ಯಾವುದೇ ವಿವರಕ್ಕೆ ಹೋಗುವುದಿಲ್ಲ. ಬಹಳ ಸೂಕ್ಷ್ಮ ಹಂತದ ಮಾತುಗಳು ಇಲ್ಲಿ ಪ್ರಸ್ತಾಪವಾಗಿವೆ. ಮೀಸಲಾತಿ ಕೆಳಹಂತದ ಜನರಿಗೆ ತಲುಪುತ್ತಿಲ್ಲ, ಅದು ಅವರಿಗೆ ತಲುಪಲೇ ಬೇಕು. ನಾನು ಕೇವಲ ಒಂದೆರಡು ವಾಕ್ಯಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಯಾರು ಮೀಸಲಾತಿಯನ್ನು ಪಡೆದುಕೊಳ್ಳುವುದಕ್ಕೆ ಅರ್ಹರಿದ್ದಾರೋ ಅವರುಗಳು ಮೊದಲನೇ ಪಂಕ್ತಿಯಲ್ಲಿ ಊಟಕ್ಕೆ ಕುಳಿತುಕೊಂಡಿರುವವರು ಇನ್ನೂ ಮೇಲೆ ಏಳಲೇ ಇಲ್ಲ. ಅವರುಗಳು ಎರಡನೆ ಹಾಗೂ ಮೂರನೆ ಪಂಕ್ತಿಯ ಜನಕ್ಕೆ ಅವಕಾಶ ನೀಡುತ್ತಿಲ್ಲ. ಮೊದಲನೆ ಪಂಕ್ತಿಯಲ್ಲಿ ಕುಳಿತುಕೊಂಡು ಊಟ ಮಾಡಿರುವವರು ಬಲಿಷ್ಠರಾದರು. ಅವರು ತಾವು, ತಮ್ಮ ಮಕ್ಕಳು ಮತ್ತು ತಮ್ಮ ಮೊಮ್ಮಕ್ಕಳು ಹೀಗೆ ಮಾಡುತ್ತಿದ್ದಾರೆ ಹೊರತು ತಮ್ಮ ಊರಿನ ಕೇರಿಯಲ್ಲಿರುವ ಇನ್ನೂ ಯಾರು ಮೀಸಲಾತಿಯ ಒಂದು ರುಚಿಯನ್ನೇ ನೋಡದೇ ಇರುವ ಹಂತದಲ್ಲಿದ್ದಾರೆ; ಅಲ್ಲಿಯೂ ಸಹ ಸಮಾನತೆಯನ್ನು ತರುವ ದೃಷ್ಟಿಯಿಂದ ಆಲೋಚನೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕು. ಮೊದಲನೆ ಪಂಕ್ತಿಯಲ್ಲಿ ಊಟಕ್ಕೆ ಕುಳಿತವರು ಎರಡನೆ ಪಂಕ್ತಿಯವರಿಗೆ ಅವಕಾಶ ಮಾಡಿಕೊಡಬೇಕು. ಅವರುಗಳು ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಮಾತ್ರವೇ ಕಾಪಾಡಬಾರದು ಎನ್ನುವ ಸಲಹೆಯನ್ನು ಕೊಡುತ್ತೇನೆ.

**ಸಭಾಪತಿಯವರು:–** ಈ ಕಾರಣಕ್ಕಾಗಿ ಡಾ|| ಬಿ.ಆರ್.ಅಂಬೇಡ್ಕರ್‌ರವರು ಸಹಪಂಕ್ತಿ ಭೋಜನ ಎಂದು ಹೇಳಿದ್ದಾರೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮೀಸಲಾತಿ ಎನ್ನುವುದು ದೊರೆತಿರುವವರಿಗೆ ಮಾತ್ರವೇ ದೊರೆಯುತ್ತಿದೆ. ಅದು ಸಿಗದೇ ಇರುವವರಿಗೂ ಸಹ ದೊರೆಯುವಂತಾಗಬೇಕು.

**ಶ್ರೀ ಹೆಚ್.ಎಂ.ರಮೇಶ್ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಜಾತಿ ಆಧಾರದ ಮೇಲೆ ಮಂತ್ರಿಗಳನ್ನಾಗಿ ಮಾಡುತ್ತಾರೆ ಅಲ್ಲವೇ? ಅವರು ಕುರುಬ ಸಮುದಾಯಕ್ಕೆ ಸೇರಿದವರಾಗಿರಬೇಕು...

**ಡಾ|| ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಮೀಸಲಾತಿಯ ...

**ಸಭಾಪತಿಯವರು:–** ಹೇಗೆ ಮಾಡಬೇಕೆಂದು ಮಾನ್ಯ ರಮೇಶ್ ಗೌಡರವರನ್ನು ಕೇಳಿ.

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರು ಹಿಂದುಳಿದ ವರ್ಗಗಳ ಬಗ್ಗೆ ಮಾತನಾಡುತ್ತಿದ್ದಾರೆ. ಅವರು ನನ್ನ ಮಾತುಗಳನ್ನು ಕೇಳಬೇಕೇ ವಿನಃ ಕೋಪ ಮಾಡಿಕೊಳ್ಳಬಾರದು.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೇರೆ ಎಲ್ಲಾ ಸದಸ್ಯರುಗಳು ಬಹಳಷ್ಟು ಸಮಯ ಮಾತನಾಡಿದ್ದಾರೆ. ಆದರೆ, ನನಗೆ ಮಾತನಾಡಲು ಹತ್ತು ನಿಮಿಷವೂ ಸಹ ದೊರೆತಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರು ಏಕೆ ಕೋಪ ಮಾಡಿಕೊಳ್ಳುತ್ತಿದ್ದಾರೆ? ನಾನು ತಮ್ಮೊಂದಿಗೆ ಮಾತನಾಡುತ್ತಿದ್ದೇನೆ. ಆದರೆ ಮಾನ್ಯ ಸದಸ್ಯರು ನನಗೆ ನೇರವಾಗಿ ಹೇಳುತ್ತಿದ್ದಾರೆ. ಅವರು ತಮಗೆ ಹೇಳಬೇಕು.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಕುಳಿತುಕೊಂಡಿಲ್ಲ.

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ನಾನು ನಿಮಗೆ ಹೇಳಿದ್ದೇನೆಯೇ ವಿನಃ ಮಾನ್ಯ ರೇವಣ್ಣನವರಿಗೆ ಹೇಳಿಲ್ಲ.

**ಸಭಾಪತಿಯವರು:-** ಮಾನ್ಯ ರಮೇಶ್ ಗೌಡರೇ, ನೀವು ಆ ರೀತಿಯಾಗಿ ಎದ್ದು ಮಾತನಾಡುವಂತಿಲ್ಲ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:-** ಮಾನ್ಯ ರೇವಣ್ಣನವರೇ ನೀವು ನಿಮ್ಮ ಮಾತುಗಳನ್ನು ಮುಂದುವರೆಸಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ನಂಜುಂಡಿ ವಿಶ್ವಕರ್ಮರವರು ಸಾವಿರ ಕೋಟಿ ರೂಪಾಯಿಗಳ ಸರದಾರರಾಗಿದ್ದು, ಅವರು ಯಾವ ರೀತಿಯಾಗಿ ಹಿಂದುಳಿದವರಾಗಿದ್ದಾರೆ? ಹೀಗಾಗಿ ಅವರು ಸುಮ್ಮನೆ ಕುಳಿತುಕೊಳ್ಳಲಿ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಮುಂದೆ ನಾನು ಇನ್ನೂ ಸಹ ಬಡವನಾಗಿದ್ದು, ಅವರು ಶ್ರೀಮಂತರಾಗಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಬಡವ, ಶ್ರೀಮಂತನ ಅಳತೆಯನ್ನು ಯಾವ ರೀತಿಯಾಗಿ ಮಾಡುತ್ತಾರೆ ಎನ್ನುವುದನ್ನು ಬೇರೆಯವರು ಒಪ್ಪಲಿ ಅಥವಾ ಬಿಡಲಿ, ಅದನ್ನು ಮಾನ್ಯ ಗೋವಿಂದ ಎಂ.ಕಾರಜೋಳ ರವರು ಮಾತ್ರ ಒಪ್ಪುತ್ತಾರೆ. ಮಾನ್ಯ ಮಂತ್ರಿಗಳಾದ ಶ್ರೀ ಅಶೋಕರವರು ಹೀಗೇಕೆ ನೋಡುತ್ತಿದ್ದಾರೆ? ನಾನು ಅವರನ್ನು ಎಡಗಣ್ಣಿನಿಂದ ನೋಡುತ್ತಿದ್ದೇನೆ. ಸಾಮಾಜಿಕ ನ್ಯಾಯದ ಬಗ್ಗೆ ಚಿಂತನೆ ಮಾಡುವುದಾದರೆ, 10 ಎಕರೆ ಜಮೀನನ್ನು ಹೊಂದಿರುವ ಒಬ್ಬ ದಲಿತ ಮುಂದೆ ಬಂದರೆ ಅಥವಾ ಏನೂ ಇಲ್ಲದಿರುವ ಒಬ್ಬ ಸವರ್ಣೀಯ ಮುಂದೆ ಬಂದರೆ, ಯಾರಿಗೆ ಮರ್ಯಾದೆಯನ್ನು ಕೊಡುತ್ತಾರೆ? ಇಂತಹ ತಾರತಮ್ಯವನ್ನು ಹೊಗಲಾಡಿಸಬೇಕೆನ್ನುವುದು ನನ್ನ ಅನಿಸಿಕೆಯಾಗಿದೆ. ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರ ಬಗ್ಗೆ ಅಂದರೆ, ಆರ್ಥಿಕವಾಗಿ ಹಿಂದುಳಿದವರ ಬಗ್ಗೆ ಮಾತನಾಡುತ್ತಿದ್ದೇನೆ. ಮಾನ್ಯ ನಂಜುಂಡಿ ವಿಶ್ವಕರ್ಮರವರು ಒಂದು ಸಾವಿರ ಕೋಟಿ ರೂಪಾಯಿಗಳನ್ನು ಹೊಂದಿರಬಹುದು ಹಾಗೂ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಎರಡು ಸಾವಿರ ಕೋಟಿ ರೂಪಾಯಿಗಳನ್ನು ಹೊಂದಿರಬಹುದು. ಅವರು ಕಳೆದ 40 ವರ್ಷಗಳಿಂದ ಶಾಸಕರಾಗಿದ್ದಾರೆ. ನಾವು ಇವತ್ತಿನ ದಿವಸ ಬಂದಿರಬಹುದು. ಇದು ಮುಖ್ಯವಲ್ಲ. ಮಾನ್ಯ ರಮೇಶ್ ಗೌಡರೇ ನನ್ನಿಂದ ನಿಮಗೆ ಬೇಜಾರಾಗಿದ್ದರೆ, Sorry. ನಾನು ಯಾವ ಸದಸ್ಯರೂ ಮಾತನಾಡದೇ ಇರುವ ವಿಷಯದ ಬಗ್ಗೆ ಮಾತನಾಡಲು 10 ನಿಮಿಷಗಳನ್ನು ತೆಗೆದುಕೊಂಡಿದ್ದೇನೆ. ಅವರು ತಮ್ಮ ಪಕ್ಕದಲ್ಲಿ ಕುಳಿತಿರುವ ಸದಸ್ಯರನ್ನು ಬೇಕಾದರೆ ಕೇಳಬಹುದು. ನಾನು ಅವರ ಮೇಲೆ ಕೋಪ ಮಾಡಿಕೊಂಡಿಲ್ಲ. ದಯಮಾಡಿ ಮಾನ್ಯ ಸದಸ್ಯರು ಬೇಜಾರು ಮಾಡಿಕೊಳ್ಳುವುದು ಬೇಡ. ಈ ಸಂದರ್ಭದಲ್ಲಿ ಚರ್ಚೆಯು ಬಹಳ ಚೆನ್ನಾಗಿ ನಡೆಯುತ್ತಿದೆ. ಬೇರೆಯವರಿಗೆ ಮೀಸಲಾತಿ ಸಿಗುತ್ತಿಲ್ಲ; ಮೀಸಲಾತಿಯಲ್ಲಿ ಇರುವವರಿಗೆ ಮಾತ್ರವೇ ಮೀಸಲಾತಿ ದೊರೆಯುತ್ತಿದೆ ಎಂದು ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿದರು. ಇದು ಸತ್ಯವಾದುದು. ಈ ರೀತಿಯ ತಾರತಮ್ಯವನ್ನು ಹೋಗಲಾಡಿಸಲು ನಾವು ಪ್ರಯತ್ನಿಸಬೇಕು. ನೆಗಡಿಯಾಯಿತೆಂದು ಮೂಗನ್ನೇ ಕೊಯ್ಯುವಂತಹ ಕೆಲಸ ಮಾಡುವುದು ಬೇಡ. ಯಾರ ಮನಸ್ಸಿನಲ್ಲೂ ...

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾನು ಹೇಳುತ್ತೇನೆ. ಹಿಂದುಳಿದ ಜಾತಿಯವರನ್ನು ಹಾಗೂ ದಲಿತರನ್ನು ಹೇಗೆ ಅಳೆಯುತ್ತಾರೆಂದು ಮಾನ್ಯ ವೈ.ಎ.ನಾರಾಯಣಸ್ವಾಮಿಯವರಿಗೆ ಗೊತ್ತಿಲ್ಲ. ಏಕೆಂದರೆ, ಅವರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ...

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನೂ ಸಹ ಮಾನ್ಯ ರೇವಣ್ಣನವರಂತೆ ಗ್ರಾಮೀಣ ಪ್ರದೇಶದಿಂದ ಬಂದವನಾಗಿದ್ದು, ನನಗೆ ಎಲ್ಲಾ ವಿಚಾರಗಳು ತಿಳಿದಿವೆ. Backward Champion ಕೇವಲ ರೇವಣ್ಣನವರು ಮಾತ್ರವೇ ಅಲ್ಲ. ನಾವುಗಳು ಸಾಮಾಜಿಕ ನ್ಯಾಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇವುಗಳ ಬಗ್ಗೆ ಮಾತನಾಡುತ್ತೇವೆ. ನನ್ನ ಭಾವನೆ ಏನೆಂದರೆ, ಒಬ್ಬ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ನಾನು ಆ ವಿಚಾರದ ಬಗ್ಗೆ ಮಾತನಾಡುವುದಿಲ್ಲ. ನಾನು ನನ್ನ ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್ ರವರು ಹೇಳಿರುವುದಕ್ಕೆ ಪೂರಕವಾಗಿ ಅಷ್ಟೇ ನಾನು ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದು, ಒಂದು ನಿಮಿಷದಲ್ಲಿ ನಾನು ಹೇಳುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪಿಕೊಂಡಿದ್ದೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮ ಊರಿನಲ್ಲಿ ಕೂಲಿ ಕೆಲಸ ಮಾಡುತ್ತಿರುವ ಪರಿಶಿಷ್ಟ ಜಾತಿಯವರ ಮಗ ಬೇರೆ ಐ.ಎ.ಎಸ್. ಅಧಿಕಾರಿಯ ಮಗನ ಜೊತೆ ಕಾಂಪಿಟ್ ಮಾಡುವುದಕ್ಕಾಗುತ್ತದೆಯೇ? ಇದರ ಬಗ್ಗೆ ಮಾನ್ಯ ರೇವಣ್ಣನವರು ತಿಳಿಸಬೇಕು.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ನಾನು ಎರಡು-ಮೂರು ವಿಷಯಗಳಲ್ಲಿ ನನ್ನ ಸಲಹೆಗಳನ್ನು ನೀಡುತ್ತೇನೆ. ಸಂವಿಧಾನದ ಬಗ್ಗೆ ಚರ್ಚೆಯನ್ನು ಮಾಡುತ್ತಿರುವುದರಿಂದ ಇದರ ಬಗ್ಗೆ ರಾಜ್ಯದ ಜನತೆಗೆ ಬೆಳಕನ್ನು ಚೆಲ್ಲಿದ್ದೇವೆ. ಇದರ ಜೊತೆಗೆ ನಮ್ಮಲ್ಲಿನ ಬಹಳಷ್ಟು ಸದಸ್ಯರಿಗೆ ಹಿಂದುಳಿದ ವರ್ಗಗಳ ಮೀಸಲಾತಿ ವಿಷಯವೇ ಗೊತ್ತಿಲ್ಲ. ಚರ್ಚೆಯಿಂದಾಗಿ ಅಂತಹ ಸದಸ್ಯರಿಗೆ ವಿಷಯವು ತಿಳಿಯುತ್ತಿದೆ. ಸಂವಿಧಾನದ ಮೇಲೆ ಚರ್ಚೆ ಮಾಡುವಂತಹ ಒಳ್ಳೆಯ ಕೆಲಸ ಮಾಡಿದ್ದಾರೆ. ಇದೇ ರೀತಿಯಾಗಿ ಕೃಷಿ ಮತ್ತಿತರೆ ವಿಷಯಗಳ ಮೇಲೆ ಚರ್ಚೆಯನ್ನು ಮಾಡೋಣ. ವಿಷಯಾಧಾರಿತ ಚರ್ಚೆಗಳಿಗೆ ತಾವು ಸಂದರ್ಭಾನುಸಾರ ಅನುಮತಿಯನ್ನು ನೀಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮೀಸಲಾತಿಯ ಅವಶ್ಯಕತೆ ಇದೆ ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ಆದರೆ ಮೀಸಲಾತಿಯನ್ನು ಪಡೆಯುವವರು ನಿರಂತರವಾಗಿ ಅಂದರೆ, ಒಂದೇ ಕುಟುಂಬದ ಮೂರ್‍ನಾಲ್ಕು ಜನರು ಮೀಸಲಾತಿ ವ್ಯಾಪ್ತಿಯಲ್ಲಿ ಸರ್ಕಾರಿ ಹುದ್ದೆ ಮತ್ತು ಉನ್ನತ ಸ್ಥಾನಗಳನ್ನು ಪಡೆದಿರುತ್ತಾರೆ. ಆದರೆ ಅದೇ ಸಮುದಾಯದ ಮತ್ತೊಬ್ಬ ವ್ಯಕ್ತಿ ಅವನ ಜೀವನದುದ್ದಕ್ಕೂ ಕೂಲಿ ಕೆಲಸವನ್ನು ಮಾಡಿಕೊಂಡಿರುತ್ತಾನೆ. ಮೀಸಲಾತಿ ಎನ್ನುವುದು ಒಂದೇ ಕುಟುಂಬಕ್ಕೆ ಮತ್ತು ಒಂದೇ ವ್ಯವಸ್ಥೆಗೆ ಮೀಸಲಿಡಬೇಕೇ ಅಥವಾ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೀಸಲಾತಿಗಳು ಎಲ್ಲಾ ವರ್ಗದ ಬಡವರಲ್ಲಿ ಹಂಚಿಕೆಯಾಗಬೇಕೆ ಎನ್ನುವುದರ ಬಗ್ಗೆ ಚರ್ಚೆಯನ್ನು ಮಾಡಬೇಕು.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ನಾನು ಮಾನ್ಯ ಗೋವಿಂದ ಎಂ.ಕಾರಜೋಳರವರನ್ನು ಕೇಳಬೇಕಾಗುತ್ತದೆ. ಏಕೆಂದರೆ, ಆ ವಿಷಯದ ಬಗ್ಗೆ ನಾನು ಮಾತನಾಡಿಲ್ಲ. ಅದನ್ನು ಸರಿಪಡಿಸಬೇಕು ಎನ್ನುವುದನ್ನು ಒಳಗೊಂಡಂತೆ ನಾನು ನನ್ನ ಮಾತುಗಳನ್ನು ಮುಂದುವರೆಸುತ್ತಿದ್ದೇನೆ. ನಾನು ವಿಷಯಾಂತರ ಮಾಡುತ್ತಿಲ್ಲ. ಸಂವಿಧಾನದ ಅನುಚ್ಛೇದ 340, 341 ಮತ್ತು 342 ಗಳು ಇಲ್ಲದಿದ್ದರೆ ನಮಗೆ ಈ ರೀತಿಯ ಅವಕಾಶ ಸಿಗುತ್ತಿತ್ತೇ ಎನ್ನುವುದರ ಬಗ್ಗೆ ನಾನು ಹೇಳಿದ್ದೇನೆ. ಎಲ್ಲಾ ಕಾನೂನಿನಲ್ಲಿ ನ್ಯೂನತೆ ಇದೆ. ರಾಜ್ಯಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಪತ್ರಿಕಾ ರಂಗಗಳ ವ್ಯವಸ್ಥೆಗಳಲ್ಲಿಯೂ ಸಹ ನ್ಯೂನತೆಗಳಿವೆ. ಆದರೆ ಕೇವಲ ರಾಜ್ಯಾಂಗ ವಿಚಾರಕ್ಕೆ ಬಂದಾಗ ಮಾತ್ರವೇ ಈ ರೀತಿಯ ಚರ್ಚೆಗಳು ಆಗುತ್ತವೆ ಈ ಸದನದಲ್ಲಿ ಸ್ವಲ್ಪ ಯೋಚನೆಯನ್ನು ಮಾಡೋಣವೆಂದು ನಾನು ತಿಳಿಸುತ್ತೇನೆ. ರಾಜ್ಯಾಂಗದಲ್ಲಿ ನ್ಯೂನತೆ ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ನಮಗೆ ಅವಶ್ಯಕವಿರುವ ಸವಲತ್ತುಗಳನ್ನು ಕೇಳುವ ಸಂದರ್ಭದಲ್ಲಿ, ನಿನ್ನೆಯ ದಿವಸ ಮಾನ್ಯ ರವಿಕುಮಾರ್‌ರವರು ಹಾಗೂ ಇನ್ನಿತರೆ ಸದಸ್ಯರುಗಳು ಬೇರೆ ಬೇರೆ ವಿಷಯಗಳ ಬಗ್ಗೆ ಮಾತನಾಡುವಾಗ ಯಾರೂ ಸಹ ಅಡ್ಡಿ ಪಡಿಸಲಿಲ್ಲ. ಈ ಕಾರಣಕ್ಕಾಗಿ ನಾನು ಮಾನ್ಯ ರಮೇಶ್‌ಗೌಡರವರಿಗೆ ಹೇಳಿದ್ದೇನೆ. ಇದನ್ನು ಬಿಟ್ಟರೆ ಬೇರೆ ಯಾವ ಉದ್ದೇಶವೂ ಇಲ್ಲ. ದಯಮಾಡಿ ಇನ್ನು ಹೆಚ್ಚಿನ ಕಾಲಾವಕಾಶವನ್ನು ನೀಡಿ. ಇನ್ನೆರಡು ವಿಷಯಗಳ ಬಗ್ಗೆ ನಾನು ಮಾತನಾಡುತ್ತೇನೆ. ಮಾನ್ಯ ಸದಸ್ಯರುಗಳು ಮಧ್ಯದಲ್ಲಿ ಮಾತನಾಡಿ, ನಾನು ಮಾಡನಾಡುವ ದಿಕ್ಕನ್ನು ಬದಲಾಯಿಸುವುದು ಬೇಡ.

ದಿವಂಗತ ರಾಜೀವ್ ಗಾಂಧೀಯವರು ಪಂಚಾಯತ್ ರಾಜ್ ವ್ಯವಸ್ಥೆಗೆ ಸಂಬಂಧಪಟ್ಟಂತೆ ಸಂವಿಧಾನದ ಅನುಚ್ಛೇದಕ್ಕೆ 73 ನೇ ತಿದ್ದುಪಡಿಯನ್ನು ಮಾಡಿದರು. ಒಂದು ವೇಳೆ ಇದನ್ನು ಮಾಡದಿದ್ದರೆ, ಇವತ್ತಿನ ದಿವಸ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಎಲ್ಲಾ ವರ್ಗದ ಜನರು ರಾಜಕೀಯಕ್ಕೆ ಬರುವುದಕ್ಕೆ ಆಗುತ್ತಿತ್ತೇ? ಮಾನ್ಯ ಗೋವಿಂದ ಎಂ.ಕಾರಜೋಳ ರವರು ಪ್ರಸ್ತಾಪಿಸಿದಂತೆ, ದಲಿತ ವರ್ಗಕ್ಕೆ ಸೇರಿದ ಎಂದರೆ, ಶೌಚಾಲಯಗಳನ್ನು ಶುದ್ಧ ಮಾಡುತ್ತಿದ್ದ 'ನಾರಾಯಣ' ಎಂಬಾತ ಮೈಸೂರಿನಲ್ಲಿ ಮೇಯರ್ ಆಗಿ ಆಯ್ಕೆಯಾಗಿದ್ದು ಯಾವ ಆಧಾರದ ಮೇಲೆ? ಇದು ರಾಜೀವ್ ಗಾಂಧೀಯವರು ಮೀಸಲಾತಿಗೆ ಸಂಬಂಧಿಸಿದಂತೆ, 73 ನೇ ತಿದ್ದುಪಡಿಯನ್ನು ಮಾಡಿದ್ದರಿಂದ ಸಾಧ್ಯವಾಯಿತು. ಇವತ್ತಿನ ದಿವಸ ಹೆಣ್ಣುಮಕ್ಕಳಿಗೆ ಮೀಸಲಾತಿಯನ್ನು ನೀಡಲಾಗಿದೆ. ಈ ಮೊದಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಣ್ಣುಮಕ್ಕಳಿಗೆ ಶೇಕಡಾ 33 ರಷ್ಟು ನೀಡುತ್ತಿದ್ದರು ಈಗ ಅದನ್ನು ಶೇಕಡಾ 50 ಕ್ಕೆ ಹೆಚ್ಚಿಸಲಾಗಿದೆ. ಇದರಿಂದಾಗಿ ಪಂಚಾಯಿತಿ ವ್ಯವಸ್ಥೆಯಲ್ಲಿ ಹೆಣ್ಣುಮಕ್ಕಳೇ ಜಾಸ್ತಿಯಾಗಿದ್ದಾರೆ. ಮಹಿಳಾ ಮೀಸಲಾತಿಯಿಂದಾಗಿ ಮಹಿಳೆಯವರು ಸಮಾಜದಲ್ಲಿ ಧೈರ್ಯವಾಗಿ ತಮ್ಮ ಹಕ್ಕುಗಳನ್ನು ಪಡೆಯಲು ಹೊರಗೆ ಬಂದರು. ಈ ಮೊದಲು ಮಾನ್ಯ ಸೋಮಣ್ಣನವರು ಬಹಳ ಮಹಿಳೆಯರನ್ನು ಚುನಾವಣೆಯಲ್ಲಿ ನಿಲ್ಲಿಸಿ, ಗೆಲ್ಲಿಸುತ್ತಿದ್ದರು. ಅದರ ಪರಿಣಾಮವಾಗಿ ಜಿ.ಪಿ.ಎ. ಗಳ ಸಂಖ್ಯೆ ಜಾಸ್ತಿಯಾಗುತ್ತಿತ್ತು. ಹೆಣ್ಣುಮಕ್ಕಳು ವ್ಯವಸ್ಥೆಯಲ್ಲಿ ಇರುತ್ತಿದ್ದರು, ಆದರೆ ಗಂಡು ಮಕ್ಕಳು ಆಡಳಿತವನ್ನು ನಡೆಸುತ್ತಿದ್ದರು. ಸ್ವಲ್ಪ ದಿನಗಳು ಕಳೆದ ನಂತರ ಜಿ.ಪಿ.ಎ. ಗಳ ಸಂಖ್ಯೆಯೂ ಸಹ ಕಡಿಮೆಯಾಗಿದೆ. ಇತ್ತೀಚೆಗೆ ಒಳ್ಳೆಯ ಸುಶಿಕ್ಷಿತ ಹೆಣ್ಣುಮಕ್ಕಳು ರಾಜಕೀಯಕ್ಕೆ ಬರುತ್ತಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಹೆಂಡತಿಯರನ್ನು ಕೂಡಿಸಿ, ಅವರ ಗಂಡಂದಿರು ಆಳ್ವಿಕೆಯನ್ನು ನಡೆಸುತ್ತಿದ್ದರು. ಹೀಗಾಗಿ ಅವುಗಳು ದೃಢೀಕೃತ ಜೆರಾಕ್ಸ್ ಪ್ರತಿಗಳಾಗಿವೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಮಾನ್ಯ ಸೋಮಣ್ಣನವರು ಇಲ್ಲವೆಂದು ಹೇಳಲಿ. ನಾನು ಅಲ್ಲಿಯೇ ವಾಸವಾಗಿದ್ದೆನು.

**ಶ್ರೀ ವಿ.ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರು ಹೇಳಿರುವುದು ನಿಜ. 1983 ನೇ ಸಾಲಿನಿಂದ ನಾನು ಕಾರ್ಪೋರೇಟರ್ ಆಗಿ ಕೆಲಸ ನಿರ್ವಹಿಸಿದ್ದೇನೆ. ನಾನು ನಗರ ಪಾಲಿಕೆಯ ಅಧ್ಯಕ್ಷನಾಗಿ, ಎರಡು ಬಾರಿ ನಗರ ಪಾಲಿಕೆಯ ಸದಸ್ಯನಾಗಿ ಹಾಗೂ ಪಕ್ಷದ ನಾಯಕನಾಗಿ ಕೆಲಸ ನಿರ್ವಹಿಸಿದ್ದೇನೆ. ಈ ಮೊದಲು ಬೆಂಗಳೂರು ನಗರದಲ್ಲಿ ಮೀಸಲಾತಿಯು ಅಷ್ಟೊಂದು ಪ್ರಮಾಣದಲ್ಲಿರಲಿಲ್ಲ.

**(ಮುಂದು)**

(515)/18-3-2020/12-00/ಎಲ್ಎಂ/ವಿಕೆ

**ಶ್ರೀ ವಿ.ಸೋಮಣ್ಣ**(ಮುಂದು):-

ಮಾನ್ಯ ಹೆಚ್.ಡಿ. ದೇವೇಗೌಡರು ಪ್ರಧಾನ ಮಂತ್ರಿಗಳಾಗಿ ಮತ್ತು ಶ್ರೀ ಜೆ.ಎಚ್.ಪಟೇಲ್‌ರವರು ಮುಖ್ಯಮಂತ್ರಿಗಳಾದ ಮೇಲೆ, ಇದೆಲ್ಲವು ಒಂದು ಹಂತಕ್ಕೆ ಬಂದ ಮೇಲೆ ಎಲ್ಲಾ ವರ್ಗದವರಿಗೆ ಮೀಸಲಾತಿಯನ್ನು ಕೊಡಲಾಯಿತು. ಆಗ ಹೆಣ್ಣುಮಕ್ಕಳಿಗೆ 51% ಮೀಸಲಾತಿ ಕೊಡಲಾಯಿತು. ಇದು ಆಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಾಗಲೇ 20 ವರ್ಷಗಳಾಗಿದೆ. ಈಗ ಹೆಣ್ಣು ಮಕ್ಕಳು ಸ್ವಂತವಾಗಿ ನಿಂತುಕೊಂಡು ತಮ್ಮ ತನವನ್ನು ದೃಢೀಕರಣ ಮಾಡುವ ಪ್ರಸಂಗ ಬಂದಿದೆ. ಜಿಪಿಎ ನಿಲ್ಲಿಸದೆ ಹೋಗಿದ್ದರೆ ಬಹಳ ಕಷ್ಟವಾಗುತ್ತಿತ್ತು. ಅವತ್ತು ಒಬ್ಬರನ್ನು ಹಿಡಿದುಕೊಂಡು ತಂದು ನಿಲ್ಲಿಸಿ ಗೆಲ್ಲಿಸಿ ಮೇಯರ್ ಕೂಡಾ ಮಾಡಲಾಯಿತು. ಪ್ರಾರಂಭಿಕವಾಗಿ ಸ್ವಲ್ಪ ಕಷ್ಟವಾಗುತ್ತದೆ. ಆದರೆ ಮುಂದಕ್ಕೆ ಹೋದ ಹಾಗೆ ನಮಗೆ ಅನುಕೂಲವಾಗುತ್ತದೆ ಎನ್ನುವುದಕ್ಕಿಂತ, ಈ ರೀತಿ ಮಾಡಲಾಗಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು.

**ಶ್ರೀ ಎಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಗಳೆ, ಎಲ್ಲಾ ಜಾತಿಯಲ್ಲಿಯು ಜಿಪಿಎ ಗಳು ಇದ್ದಾರೆ. ಒಂದು ವರ್ಗಕ್ಕೆ ಸಿಮೀತವಾಗಿಲ್ಲ.

**ಸಭಾಪತಿಯವರು:-** ರೇವಣ್ಣನವರೆ ನೀವು ಮಾತನಾಡಲು ಪ್ರಾರಂಭ ಮಾಡಿ 40 ನಿಮಿಷಗಳಾದವು. ಈಗ ಮುಕ್ತಾಯಗೊಳಿಸಿ.

**ಶ್ರೀ ಎಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಗಳೆ, ಒಂದು ಸಂತೋಷದ ಸಂಗತಿ ಎಂದರೆ, ಸ್ವಾತಂತ್ರ್ಯಪೂರ್ವದಲ್ಲಿ ಇದರ ಬಗ್ಗೆ ಚಿಂತನೆ ಮಾಡಲು ಹೇಳಿಕೊಟ್ಟವರನ್ನು ನಾವು ಜ್ಞಾಪಿಸಿಕೊಳ್ಳಲೇ ಬೇಕು. Sri Jyotirao Phule, Sri Shahu Maharaj,Sri Narayana Swamy,Sri Periyar E.V. Ramasamy, Sri Nalwadi Krishnaraja Wadiyar, Sri Vishwanath Pratap Singh, ಶ್ರೀ ವಿ.ಪಿ.ಸಿಂಗ್, Sri B.P.Mandal, Sri P.V. Narasimha Rao and Sri Devaraju Urs ಮೀಸಲಾತಿ ವಿಷಯವನ್ನು ಮಾತನಾಡುವಾಗ ಬ್ರಾಹ್ಮಣರು ನಮ್ಮ ವಿರೋಧಿಗಳು ಎಂದು ಮಾತನಾಡುವುದಿಲ್ಲ. ಆದರೆ ಭೇದಭಾವವಿರಬಾರದು ಎಂದು ಆಸೆ ಪಡುತ್ತೇವೆ. ಬ್ರಾಹ್ಮಣರು ಈ ರಾಷ್ಟ್ರಕ್ಕೆ ಕೊಟ್ಟ ಕೊಡುಗೆ ಬಹಳಷ್ಟು ಇದೆ. ಕನಕದಾಸರನ್ನು ಈ ಪ್ರಪಂಚಕ್ಕೆ ತೋರಿಸಲು ಪ್ರಯತ್ನ ಮಾಡಿದವರು ವ್ಯಾಸರಾಯರು. ಸಾಮಾಜಿಕ ಪರಿವರ್ತನೆಗೆ ಕೆಲಸ ಮಾಡಿದವರು ಬ್ರಾಹ್ಮಣರು ಬಹಳ ಜನರು ಇದ್ದಾರೆ. ಬ್ರಾಹ್ಮಣರನ್ನು ವಿರೋಧ ಮಾಡುತ್ತಿಲ್ಲ. ನಮ್ಮ ಹಕ್ಕನ್ನು ಕೇಳುವ ಸಂದರ್ಭದಲ್ಲಿ ವಿಷಯವನ್ನು ಮಂಡಿಸುತ್ತಿದ್ದೇನೆ. ಕನಕದಾಸರನ್ನು ಈ ಪ್ರಪಂಚಕ್ಕೆ ತೋರಿಸುವ ಸಂದರ್ಭದಲ್ಲಿ ಉಡುಪಿ ಘಟನೆ ಇರಬಹುದು, 'ಸ್ವರ್ಗಕ್ಕೆ ಯಾರು ಹೋಗುತ್ತೀರಿ' ಎಂದು ವ್ಯಾಸರಾಯರು ಎಲ್ಲ ಶಿಷ್ಯರನ್ನು ಕೇಳುತ್ತಾರೆ. ಆಗ ಅಲ್ಲಿ ಇರುವ ಪಂಡಿತರು 'ನಾನು ಹೋಗುತ್ತೇನೆ, ನಾನು ಹೋಗುತ್ತೇನೆ' ಎಂದು ಹೇಳುತ್ತಾರೆ. ಕೊನೆಗೆ ವ್ಯಾಸರಾಯರು ಕನಕದಾಸರನ್ನು 'ನಾನು ಸ್ವರ್ಗಕ್ಕೆ ಹೋಗುತ್ತೇನಾ' ಎಂದು ಕೇಳುತ್ತಾರೆ, ಅದಕ್ಕೆ ಕನಕದಾಸರು 'ನೀವು ಹೋಗುವುದಿಲ್ಲ ಸ್ವಾಮಿ' ಎಂದು ಹೇಳುತ್ತಾರೆ. ನೀನು ಹೋಗುತ್ತಿಯಾ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳಿದಾಗ, ಕನಕದಾಸರು 'ನಾನು ಹೋದರೆ ಹೋದೇನು' ಎಂದು ಹೇಳುತ್ತಾರೆ. ನಾನು ಹೋದರೆ ಹೋದೇನು ಎಂದರೆ, 'ನಾನು' ಎನ್ನುವ ಅಹಂಕಾರ ಹೋದರೆ ಹೋದೇನು ಎನ್ನುವ ಮಾತನ್ನು ಅನೇಕ ಶತಮಾನಗಳ ಹಿಂದೆಯೇ ಕನಕದಾಸರು ಹೇಳಿದ್ದಾರೆ. ಅದನ್ನು ಒರೆಗೆ ಹಚ್ಚಿದವರು ಕನಕದಾಸರು. ಶ್ರೀ ವೈಷ್ಣವಸಭಾ ಇದೆ, ಇದರಲ್ಲಿ ರಾಮಾನುಜಾಚಾರ್ಯರು ಸ್ನಾನಕ್ಕೆ ಹೋಗುವಾಗ ಒಬ್ಬರೆ ಹೋಗುತ್ತಿದ್ದರು. ಸ್ನಾನ ಮಾಡಿ ವಾಪಸ್ ಬರುವಾಗ ಹರಿಜನ ವ್ಯಕ್ತಿಯ ಮೇಲೆ ಕೈಇಟ್ಟುಕೊಂಡು ಬಂದು ಪೂಜೆ ಮಾಡುತ್ತಿದರು. ಇವತ್ತು ನಮ್ಮ ಊರಿನ  ರಾಘವೇಂದ್ರಸ್ವಾಮಿ ಮಠಕ್ಕೆ ಹೋದರೆ ಹೂವನ್ನು ಎಸೆಯುತ್ತಾರೆ. ನಮ್ಮ ಊರಿನಲ್ಲಿ ನಾನೇ ಮಠದ ಕಟ್ಟಡ ಕಟ್ಟಿಸಿದ್ದೇನೆ, ಬೋರವೆಲ್ ಕೊರೆಯಿಸಿದ್ದೇನೆ, ತೇರು ಕೊಡಿಸಿದ್ದೇನೆ, ಪೂಜೆ ಮಾಡುವವರ ಬಟ್ಟೆಯನ್ನು ನೋಡಿದರೆ ವಾಂತಿಯಾಗುತ್ತದೆ ಅವರು ನಾನು ಮಠಕ್ಕೆ ಹೋದಾಗ ಹೂವನ್ನು ಎಸೆಯುತ್ತಾರೆ. ಇದರಿಂದ ನಮ್ಮ ಮನಸ್ಸಿಗೆ ನೋವಾಗುತ್ತದೆ. ಈ ತಾರತಮ್ಯ ಬೇಡ ಎಂದು ನಾವು ಹೇಳುವುದು. ಡಾ: ಭೀಮರಾವ್ ಅಂಬೇಡ್ಕರ್‌ರವರಿಗೆ, ಅಂಬೇಡ್ಕರ್ ಎಂದು ಹೆಸರು ಕೊಟ್ಟವರು ಅವರ ಗುರುಗಳು. ಗುರುಗಳು ಬ್ರಾಹ್ಮಣರು. ಹೇಳಿ ಎಂದರೆ ನಾನು ಇನ್ನು ಒಂದು ಗಂಟೆ ಮಾತನಾಡುತ್ತೇನೆ. ಮನು ಶಾಸ್ತ್ರವನ್ನು ಓದಬೇಕು.

**ಶ್ರೀ ಸುನೀಲ್ ಸುಬ್ರಹ್ಮಣ್ಯ:–** ಎಲ್ಲವನ್ನು ಹೇಳಿಬಿಡಿ.

**ಶ್ರೀ ಎಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಗಳೆ, ಮನುಧರ್ಮ ಶಾಸ್ತ್ರದಲ್ಲಿ ಮತ್ತು ಹಿಂದಿನಿಂದ ನಡೆದುಕೊಂಡು ಬಂದಿರುವುದರಲ್ಲಿ ಏನೇನು ಆಗಿದೆ ಎನ್ನುವುದನ್ನು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಸಂವಿಧಾನದ ಮೇಲೆ ಮಾತನಾಡಿ. ಮನುಧರ್ಮ ಬೇರೆ ಸಮಯದಲ್ಲಿ ಮಾತನಾಡಿ.

**ಶ್ರೀ ಎಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಗಳೆ, ಉಡುಪಿ ಅಷ್ಟೊಂದು ಪ್ರಚಾರಕ್ಕೆ ಬರಲು ಕಾರಣವೇನು. ದೇವಸ್ಥಾನದ ಒಳಗೆ ಹರಿಜನರನ್ನು ಬಿಡುವುದಿಲ್ಲ. ನಮ್ಮನ್ನು ಬಿಡುವುದಿಲ್ಲ ನಾವು ಶೂದ್ರರು. ಕನಕದಾಸರು ಶೂದ್ರರು ಎಂದು ದೇವಸ್ಥಾನದ ಒಳಗೆ ಬಿಡಲಿಲ್ಲ. ಆದರೆ ಆತ ದೇವರನ್ನೆ ತನ್ನ ಕಡೆಗೆ ತಿರುಗಿಸಿಕೊಂಡರು. ಈ ಶ್ರೇಣಿತರ ಸಮಾಜದವರು ತಮಗೆ ಬೇಕಾದ ವಿಷಯಗಳನ್ನು ಮಾತ್ರ ಪ್ರಚಾರ ಮಾಡುತ್ತಾರೆ. ಇಂತಹ ವಿಚಾರಗಳ ಬಗ್ಗೆ ಮಾತನಾಡುವುದೆ ಇಲ್ಲ. ಇಂತಹ ವಿಷಯಗಳಿಗೆ ಗಾಳಿ ಕಟ್ಟುತ್ತಾರೆ.

**ಡಾ: ಜಯಮಾಲ:–** ಇವತ್ತು ಕೂಡಾ ಕೆಳವರ್ಗದ ಜನರಿಗೆ ನೀರನ್ನು ಮೇಲಿಂದ ಹಾಕುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಗಳೆ, ಅವರು ಹೇಳುವುದು ನಿಜ. ಇವತ್ತು ಕೂಡಾ ದೂರ ಕೂಡಿಸಿ ಊಟ ಹಾಕುತ್ತಾರೆ. ಮಾನ್ಯ ಹೊರಟ್ಟಿಯರವರೇ ಹೇಳಿದರು, ಕೆಳವರ್ಗದವರನ್ನು ಹೊಟೇಲ್ ಹೊರಗೆ ಕೂಡಿಸಿ ಊಟ ಕೊಡುತ್ತಿದ್ದರು ಎಂದು.

**ಡಾ: ತೇಜಸ್ವಿನಿ ಗೌಡ:–** ಮಹಿಳೆಯರ ಬಗ್ಗೆ ಮೊನ್ನೆ ಚರ್ಚೆ ಮಾಡಲಾಯಿತು. ಮಹಿಳೆಯನ್ನೆ ಮೈಲಿಗೆ ಎನ್ನುವ ಪರಿಸ್ಥಿತಿ ಇವತ್ತು ಇದೆ. ಜಾತಿ ವಿಚಾರ ಬಿಟ್ಟುಬಿಡಿ. ಮಹಿಳೆಯೇ ಒಂದು ಮೈಲಿಗೆ ಎನ್ನುವ ಜಾತಿ. ಯಾವ ಮಹಿಳೆಯ ಹೊಟ್ಟೆಯಿಂದ ಹುಟ್ಟುತ್ತಾರೆ ಅಂತಹ ಮಹಿಳೆಯನ್ನೇ ಮೈಲಿಗೆ ಎನ್ನುತ್ತಾರೆ.

**ಶ್ರೀ ಎಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಗಳೆ, ಮಾನ್ಯ ಸುನೀಲ್‌ರವರು ಎಲ್ಲವನ್ನು ಹೇಳಿ ಎಂದಿದ್ದಕ್ಕೆ ಇದೆಲ್ಲವನ್ನು ಹೇಳಬೇಕಾಯಿತು. ರಾಷ್ಟ್ರದಲ್ಲಿ ಆಗಿರುವ ಅನೇಕ ಪರಿವರ್ತನೆಗಳಿಗೆ ಕಾರಣರಾದವರಲ್ಲಿ ಬ್ರಾಹ್ಮಣರು ಇದ್ದಾರೆ. ಜಾತಿ ಮೇಲೆ ಯಾರನ್ನು ಗುರುತಿಸಬಾರದು. ಎಲ್ಲಾ ವರ್ಗದಲ್ಲಿ ಒಳ್ಳೆಯವರು ಇದ್ದಾರೆ. ಸಾಮಾಜಿಕ ಚಿಂತನೆ ಮಾಡುವವರು ಇದ್ದಾರೆ. ಅದು ಬೇರೆ ವಿಚಾರ.

ಇನ್ನು ಎರಡು ವಿಚಾರಗಳನ್ನು ಹೇಳಿಬಿಡುತ್ತೇನೆ, ಕೆಲವೆ ಜನರ ಕೈಯಲ್ಲಿ ಆಸ್ತಿ, ಆಡಳಿತ, ರಾಜಕೀಯ, ಅಧಿಕಾರ ಇತ್ತು. ಅದನ್ನು ಉದ್ದೇಶಿಸಿ ಡಾ: ಅಂಬೇಡ್ಕರ್‌ರವರು "ಭಾರತ ಬಹಳ ಪ್ರಯಾಸಪಟ್ಟು ಸ್ವಾತಂತ್ರ್ಯವನ್ನು ಹೊಂದಿದೆ, ಮತ್ತೆ ಕಳೆದುಕೊಂಡರೆ ಅದನ್ನು ಮರಳಿ ಪಡೆಯುವುದು ದುಸ್ತರ. ಈ ನೆಲವು ಸ್ವಾತಂತ್ರ್ಯ ಕಳೆದುಕೊಳ್ಳುವುದಕ್ಕೆ ಮುಖ್ಯ ಕಾರಣ ಜಾತಿ, ಧರ್ಮ, ಸಂಘರ್ಷ, ತಾರತಮ್ಯ ಮತ್ತು ನಂಬಿಕೆ ದ್ರೋಹ ಕಾರಣ" ಎಂದು ಹೇಳಿದರು. ಡಾ: ಬಿ. ಆರ್. ಅಂಬೇಡ್ಕರ್‌ರವರ ಪ್ರಕಾರ, ಮಹಮದ್‌ಬೀನ್ ಕಾಶೀಮ್ ದಂಡೆತ್ತಿ ದಾದರ ಪ್ರದೇಶದ ದಂಡನಾಯಕರು ಲಂಚಪಡೆದು ಕಾಶೀಮ್‌ನ ಏಜೆಂಟರಾಗುತ್ತಾರೆ. ಇದು ಭಾರತದ ಇತಿಹಾಸ. ಇತಿಹಾಸವನ್ನು ಬಲ್ಲವರು, 'ಇತಿಹಾಸವನ್ನು ರಚನೆ ಮಾಡಬಲ್ಲರು' ಅದೇ ರೀತಿ ಮಹಮದ್ ಘೋರಿ ಭಾರತದ ಪೃಥ್ವಿರಾಜ್‌ರ ವಿರುದ್ಧ ದಂಡೆತ್ತಿ ಬಂದಾಗ ಅವರಿಗೂ ನಮ್ಮವರೆ ಸಹಾಯ ಮಾಡುತ್ತಾರೆ. ಶಿವಾಜಿ ಮಹಾರಾಜರು ಹಿಂದುಗಳ ಪರವಾಗಿ ಹೋರಾಟ ಮಾಡುವಾಗ ರಜಪೂತರು ಅವರಿಗೆ ಸಹಾಯ ಮಾಡುತ್ತಾರೆ. ಇದು ಈ ರಾಷ್ಟ್ರದಲ್ಲಿ ನಡೆದುಕೊಂಡು ಬಂದಿರುವಂತಹ ನಡವಳಿಕೆ. ಇದೆಲ್ಲವು ಬೇಡ ಎಂದೇ ಸಮ–ಸಮುದಾಯದ ಚಿಂತನೆ, ಸಾಮಾಜಿಕ ನ್ಯಾಯ, ಸಮಬಾಳು, ಸಮಜೀವನ ಎನ್ನುವುದನ್ನು ಡಾ: ಬಿ.ಆರ್.ಅಂಬೇಡ್ಕರ್‌ರವರು ಇಡೀ ಸಮಾಜಕ್ಕೆ ತೋರಿಸಿಕೊಟ್ಟಿದ್ದಾರೆ. ಸಂವಿಧಾನದಲ್ಲಿರುವ ಈ ಲಿಖಿತ ಪ್ರಸ್ತಾವನೆಯನ್ನು ಯಾವುದೇ ಸರ್ಕಾರ ಬರಲಿ ಇನ್ನು ಉಳಿಸಿಕೊಳ್ಳಲಾಗಿದೆ. Basic structure

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತು ಮೂಲಭೂತ ಹಕ್ಕುಗಳನ್ನು ಬದಲಾಯಿಸಲು ಎಲ್ಲಿಯು ಪ್ರಯತ್ನಗಳು ಆಗಿರುವುದಿಲ್ಲ. ಮುಂದೆಯು ಆಗುವುದಿಲ್ಲ. ಬಿಜೆಪಿ ಸರ್ಕಾರ ಬರಲಿ, ಕಮ್ಯುನಿಷ್ಟ್ ಬರಲಿ, ಮಾನ್ಯ ಎಚ್.ಡಿ.ದೇವೇಗೌಡರು ಈ ದೇಶವನ್ನು ಆಳಿದರು. ಯಾವುದೇ ಸರ್ಕಾರ ಬರಲಿ ಈ basic structure ನ್ನು ಬದಲಾಯಿಸಲು ಸಾಧ್ಯವಿಲ್ಲ, ಈ ಪ್ರಸ್ತಾವನೆಯಲ್ಲಿ ಯಾವುದೇ ಬದಲಾವಣೆ ಮಾಡಲು ಸಾಧ್ಯವಿಲ್ಲ. ಇದರ ಬಗ್ಗೆ ಅನೇಕ ಚರ್ಚೆಗಳನ್ನು ಮಾಡಿದ್ದೇವೆ. ಅದಕ್ಕೆ ಅನೇಕ ನಿದರ್ಶನಗಳು ಇವೆ. ಹಿಂದೆಯು ಆಡಳಿತವು ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ ಹೇಗೆ ಕೆಲಸ ಮಾಡುತ್ತಿದ್ದವು... ಬುದ್ಧ, ಬಸವ, ವಾಲ್ಮೀಕಿ, ಕನಕ, ಅಂಬೇಡ್ಕರ್ ಇವರೆಲ್ಲರೂ ಸಮಾಜ ಸುಧಾರಕರು. ಇವರ ಚಿಂತನೆಗಳು ಇವತ್ತಿಗೂ ಪ್ರಸ್ತುತ. ಬುದ್ಧನ ಕಾಲದಲ್ಲಿದ ಸಂಘ ವ್ಯವಸ್ಥೆ ಬಗ್ಗೆ ಹೇಳುತ್ತೇನೆ. *".... the Sanghas knew and observed all the rules of Parliamentary procedure known to modern times. They had rules regarding seating arrangements, rules regarding motions, resolutions, quorum, whip, counting of votes, voting by ballot, censure motion, regularization, res judicata etc. Although these rules of parliamentary procedure were applied by the Buddha to the meetings of the Bhikshu Sanghas, he must have borrowed them from the rules of the political assemblies functioning in the country in his time....."* ಎಂದರೆ ಸಂವಿಧಾನವನ್ನು ರಚನೆ ಮಾಡುವ ಸಂದರ್ಭದಲ್ಲಿ ಎಲ್ಲಾ ಅಂಶಗಳನ್ನು ಅವರು ತೆಗೆದುಕೊಂಡಿದ್ದಾರೆ ಎನ್ನುವುದನ್ನು ಗಮನಿಸಬೇಕಾಗುತ್ತದೆ. ಎಲ್ಲರ ವಿಚಾರಗಳನ್ನು ಹೇಳುವ ಪ್ರಯತ್ನ ಮಾಡಿದ್ದೇನೆ ಎಂದು ನಾನು ಅಂದುಕೊಳ್ಳುತ್ತೇನೆ. ಇವತ್ತು ಶ್ರೀ ಬಸವಣ್ಣನವರ ವಚನಗಳನ್ನು ಹೇಳುತ್ತೇವೆ, ಕನಕದಾಸರ ಜಯಂತಿ ಮಾಡುತ್ತೇವೆ, ಆದರೆ ಈ ಕಾನೂನುಗಳನ್ನು ತರವಲ್ಲಿ ಜನಪ್ರಿಯವಾದ 3–4 ಕಾನೂನುಗಳನ್ನು ಹೇಳುತ್ತೇನೆ. " 2005ರಲ್ಲಿ ತಂದಿರುವ ಉದ್ಯೋಗ ಖಾತ್ರಿ" ಇದನ್ನು ತರದೆ ಇದ್ದಿದ್ದರೆ ಇವತ್ತು ಎಷ್ಟು ಕಷ್ಟವಾಗುತ್ತಿತ್ತು ಎನ್ನುವುದನ್ನು ಯೋಚನೆ ಮಾಡಬೇಕು. " 2009ರಲ್ಲಿ ತಂದ ಕಡ್ಡಾಯ ಶಿಕ್ಷಣ" "2011ರಲ್ಲಿ ತಂದಿರುವ ಆಹಾರ ಕಾಯಿದೆ" "2005 ರಲ್ಲಿ ತಂದಿರುವ ರಾಷ್ಟ್ರೀಯ ಗ್ರಾಮೀಣ ಉದ್ಯೋಗ". ಇವುಗಳು ಈ ರಾಜ್ಯಕ್ಕೆ ನಮ್ಮ ಪಕ್ಷ ಕೊಟ್ಟಿರುವಂತಹ ಕೊಡುಗೆ. ಇವು ಜನಸ್ನೇಹಿ ಕಾಯಿದೆಗಳು ಎಂದು ಈ ಸಂದರ್ಭದಲ್ಲಿ ಹೇಳಿ, ಮಾತನಾಡಲು ಅವಕಾಶ ಕೊಟ್ಟ ಸಭಾಪತಿಯವರಿಗೆ ಮತ್ತು ತಾಳ್ಮೆಯಿಂದ ಕೇಳಿದ ನನ್ನ ಸ್ನೇಹಿತರಿಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(516) 12.10 12.3.2020 bsd-vk

**Sri N. Ravi Kumar:-** ಮೊನ್ನೆ ಕೇಂದ್ರ ಸರ್ಕಾರವು ಒ.ಬಿ.ಸಿ. ಯ National Commission for Backward Classes ಗೆ ಮಾನ್ಯತೆಯನ್ನು ಕೊಟ್ಟಿದೆ.

**ಶ್ರೀ ಹೆಚ್.ಎಂ. ರೇವಣ್ಣ:–** ಅದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡಬಹುದಾಗಿರುತ್ತದೆ.

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಭಾರತದ ಸಂವಿಧಾನದ ಬಗ್ಗೆ ಚರ್ಚೆ ಏರ್ಪಡಿಸಿರುವುದು ಒಂದು ಮಹತ್ವದ ವಿಷಯವಾಗಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕಾನೂನು ಸಚಿವರು, ವಿರೋಧ ಪಕ್ಷದ ನಾಯಕರು ಹಾಗೂ ಹಿರಿಯ ಶಾಸಕರು ಅವರ ಅನುಭವದ ಮಾತುಗಳನ್ನು ಹಾಗೂ ಸಂವಿಧಾನದಲ್ಲಿರುವ ಮಹತ್ವದ ವಿಷಯಗಳ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ. ನಾನು ಈ ವಿಚಾರವಾಗಿ ಎರಡೂ ಮನೆಯ ಸದಸ್ಯರುಗಳನ್ನು ಒಳಗೊಂಡು seminar ನ Retired Supreme Court Judges ಗಳಾದ ಮಾನ್ಯ ಸಂತೋಷ್ ಹೆಗ್ಡೆರವರು ಆಗಿರಬಹುದು, ಮಾನ್ಯ ರವಿಕುಮಾರ್ ವರ್ಮಾರವರು ಆಗಿರಬಹುದು, ಮಾನ್ಯ ಉದಯ ಹೊಳ್ಳರವರು ಆಗಿರಬಹುದು, ಇಂತಹವರುಗಳನ್ನು ಕರೆಸಿ lecture ಕೊಡಿಸುವುದು ಉಪಯುಕ್ತ ಎಂದು ಹೇಳುತ್ತೇನೆ. ಇವತ್ತಿನವರೆಗೂ ಬಹಳ ಜನರು ಎಲ್ಲಾ ವಿಚಾರಗಳ ಬಗ್ಗೆ ಮಾತನಾಡಿದ್ದು, ಯಾವ ವಿಚಾರಗಳು ಮಾತನಾಡಲು ಉಳಿದಿಲ್ಲ. ಆದರೆ ನಾನು ಸ್ವಲ್ಪ ಮಾತನಾಡಿದ ವಿಚಾರದಲ್ಲಿಯೇ ಮಾತನಾಡಬೇಕಾಗಿದೆ.

ಇನ್ನು ಸಂವಿಧಾನವನ್ನು ಬಿಟ್ಟು ನಾವು ಏನು ಕೆಲಸ ಮಾಡುತ್ತಿದ್ದೇವೆ ಎಂದು ಹೇಳುವಾಗ ಮೊದಲನೆಯದಾಗಿ election ಬಗ್ಗೆ ಹೇಳಬೇಕಾಗಿದೆ. ಮಾನ್ಯ ಸಭಾಪತಿಯವರೇ, ಇವತ್ತು ನಮ್ಮ ದೇಶದಲ್ಲಿ election ನಿಜವಾಗಲೂ ಬಹಳ ಕೆಟ್ಟ ಪರಿಸ್ಥಿತಿಯಲ್ಲಿದೆ. ಇತ್ತೀಚೆಗಂತೂ ಮಧ್ಯಮ ವರ್ಗದವರು, ಅಲ್ಪಸಂಖ್ಯಾತರು ಅಥವ ಅತೀ ಸಣ್ಣ ಜನರು electionಗಳ ಬಗ್ಗೆ ಗಮನಹರಿಸಲು ಸಾಧ್ಯವೇ ಇಲ್ಲ. ಅವರು electionಗೆ ನಿಂತುಕೊಳ್ಳುವುದೇ ದೂರವಾಗಿದೆ. ಇವರಿಗೆ ಈ ದೇಶದಲ್ಲಿ ಚುನಾವಣೆ ಕಡೆ ಗಮನಹರಿಸಲೂ ಸಾಧ್ಯವಾಗದ ಪರಿಸ್ಥಿತಿ ಉದ್ಭವವಾಗಿದೆ. ಇವತ್ತು ನಾವು ಈ ಕಡೆ ಇದ್ದೇವೆ, ಅವರು ಆ ಕಡೆ ಇದ್ದಾರೆ, ನಾವು ನಾಳೆ ಕಡೆ ಹೋಗಬಹುದು, ಅವರು ಈ ಕಡೆ ಬರಬಹುದು. ಆದರೆ ಇಂತಹ ಪರಿಸ್ಥಿತಿ ಮುಂದುವರೆದರೆ ಮಧ್ಯಮವರ್ಗದವರು ಯಾರು ಇರದಂತಹ ಪರಿಸ್ಥಿತಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ಮಾಣವಾಗುತ್ತದೆ. ಬರೀ ಶ್ರೀಮಂತರು ಬಂದು ಕುಳಿತುಕೊಳ್ಳುವ ಜಾಗವಾಗುತ್ತದೆ, ಇದರಲ್ಲಿ ಎರಡನೆಯ ವಿಚಾರವೇ ಇಲ್ಲ. ಇದಕ್ಕೆ ಮಾನ್ಯ ಟಿ.ಎನ್. ಶೇಷನ್ ರವರಂತಹ Officers ಗಳನ್ನು ಮುಂದೆ ತಂದು, ನಮ್ಮ ದೇಶದಲ್ಲಿ ಬೇಕಾದಷ್ಟು ಬುದ್ಧಿವಂತರಿದ್ದು, ಅವರುಗಳ ಮುಖಾಂತರ ಸುಧಾರಿಸಬೇಕು. ಇಂತಹ ದೊಡ್ಡ ಕಾಯಿಲೆಯನ್ನು ಸುಧಾರಿಸುವುದ ಹೇಗೆ ಎಂದು ಎಲ್ಲರೂ ಸೇರಿ ಯೋಚನೆ ಮಾಡುವ ಪರಿಸ್ಥಿತಿ ಬಂದಿದೆ. ಏಕೆಂದರೆ ಇದನ್ನು ಕೇವಲ ಸಾಮಾನ್ಯರು ಸುಧಾರಿಸುವುದಕ್ಕೆ ಆಗುವುದಿಲ್ಲ, ಇದನ್ನು ಕಾನೂನು ರೀತ್ಯಾ ಸುಧಾರಿಸಬೇಕು. ಮಾನ್ಯ ಶೇಷನ್‌ರವರು ಬರುವುದಕ್ಕಿಂತ ಮುಂಚೆ ಚುನಾವಣೆ ಯಾವ ರೀತಿ ಇತ್ತು ಎಂಬುದನ್ನು ಎಲ್ಲರೂ ನೋಡಿರಬಹುದು. ಆಗ banner ಗಳನ್ನು ಕಟ್ಟಲು ಜಾಗವೇ ಇರುತ್ತಿರಲಿಲ್ಲ. ಯಾರು ಬೇಕಾದರೂ banner ಗಳನ್ನು ಹಾಕಿಕೊಳ್ಳುತ್ತಿದ್ದರು. ಆದರೆ ಇವತ್ತು ಅಂತಹ ಪರಿಸ್ಥಿತಿಯಿಂದ free ಆಗಿ ಕಾಣುತ್ತಿದೆ. Election ಇದ್ದರೂ ಸಹ banner ಗಳ ಕಾಟ ತಪ್ಪಿದೆ. ಆದರೆ only cash ಮಾತ್ರ ನಡೆಯುತ್ತಿದೆ. ಆದ್ದರಿಂದ ಇಂತಹವುಗಳನ್ನು ತಡೆಗಟ್ಟಿ ಸುಧಾರಣೆ ತರುವ ಪರಿಸ್ಥಿತಿಗಳ ಬಗ್ಗೆ ಗಮನಹರಿಸಬೇಕು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ದಾವಣಗೆರೆಯಲ್ಲಿ ಮೊನ್ನೆ ಚುನಾವಣೆ ನಡೆಯಿತು. ಅದರಲ್ಲಿ ಕಾಂಗ್ರೆಸ್ 22 ಜನ, ಜೆಡಿ(ಎಸ್) 1 ಮತ್ತು Independent 1 ಇತ್ತು. ಅಂದರೆ ನಾವು 24 plus ಇಬ್ಬರು MLC ಗಳು ಮತ್ತು ನನ್ನನ್ನು ಸೇರಿಸಿಕೊಂಡು 27 ಜನ ಇದ್ದೆವು. ಬಿಜೆಪಿ ಪಕ್ಷದವರು 17 ಜನ ಗೆದ್ದಿದ್ದರು. ನಾಲ್ಕು ಜನIndependent ಗಳಲ್ಲಿ ಒಂದು MP ಮತ್ತು ಒಂದು MLA ಇದ್ದರು. ಆದರೆ ಇದರಲ್ಲಿ ಬೆಂಗಳೂರಿನಿಂದ 8 ಜನ MLC ಗಳು involve ಆದರು. 17 ಜನ ಗೆದ್ದಿದ್ದರೂ ಬೆಂಗಳೂರಿನಿಂದ 8 ಜನ MLC ಗಳು ಓಟು ಹಾಕುವುದಕ್ಕೆ ಬಂದರು. ಅಂತಹ ಪರಿಸ್ಥಿತಿಯಲ್ಲಿ ನಾವು boycott ಮಾಡಿ ಹೊರಗೆ ಬಂದೆವು. ಆ ಮಾತು ಬೇರೆ. ಆದರೆ ಇಲ್ಲಿಂದ 8 ಜನ export ಆಗಿ ನಾವು ಹೊರಗೆ ಬರುವಂತೆ ಆಯಿತು. ಜಾಸ್ತಿ majority ಬಂದವರು ಹೊರಗೆ ಬಂದು ಕಡಿಮೆ ಇದ್ದವರು ಒಳಗೆ ಕುಳಿತುಕೊಳ್ಳುವಂತೆ ಆಯಿತು. ಇಂತಹ ಪರಿಸ್ಥಿತಿ ಉದ್ಭವವಾಗಿತ್ತು. ನಮ್ಮ ಅಂಬೇಡ್ಕರ್‌ರವರು ಇಂತಹ ಕನಸನ್ನು ಕಂಡಿರಲಿಲ್ಲ. ಆ ಕಾಲದ 1984ರಲ್ಲಿ ಮಾನ್ಯ ನಜ್ಹೀರ್ ಸಾಬ್ ಮತ್ತು ಮಾನ್ಯ ಅಜೀಜ್ ಸೇಠ್‌ರವರ election ನೋಡಿದ್ದೆನು. ಮಾನ್ಯ ಸಭಾಪತಿಯವರೇ, ಯಾರಿಗಾದರೂ ರೂ.10, ರೂ.20 ಗಳನ್ನು ಕೊಡುವುದಕ್ಕೆ ಹೋದರೆ ಆ ಕಡೆ ಈ ಕಡೆ ನೋಡಿ ದುಡ್ಡು ತೆಗೆದುಕೊಳ್ಳುತ್ತಿದ್ದರು. ಅಂತಹ ಪರಿಸ್ಥಿತಿ ಇತ್ತು. ಆದರೆ ಈಗ ರಸೀದಿ ಹಾಕುವುದೊಂದೇ ಬಾಕಿ ಉಳಿದಿದೆ. ಅವರು ಅಷ್ಟು ಕೊಡುತ್ತಿದ್ದಾರೆ, ನೀವು ಎಷ್ಟು ಕೊಡುತ್ತೀರಿ, ಬೇರೆ ಮಾತನಾಡುವುದೇ ಬೇಡ ಎಂದು ಹೇಳುತ್ತಾರೆ. Teachers'

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Constituency, Graduates' Constituency ಗಳಿಂದ ಹಿಡಿದು ವಿದ್ಯಾವಂತರು ಎಂದು ಹೇಳುವವರೆಲ್ಲರೂ ಮೊದಲನೆಯದಾಗಿ ಬರುತ್ತಾರೆ. ನಂತರ ಸಣ್ಣ ಸಣ್ಣವರು ಬರುತ್ತಿದ್ದಾರೆ. ಏಕೆಂದರೆ ಅವರ rate ಜಾಸ್ತಿಯಾಗಿ, ಬಾಕಿಯವರದ್ದೆಲ್ಲಾ ಕಡಿಮೆ ಇದೆ. ಆದರೆ without that, ಮಾತನಾಡುವವರಿಗೆ value ಇಲ್ಲ ಎಂಬ ಪರಿಸ್ಥಿತಿ ಉದ್ಭವವಾಗಿದೆ. ಮಾನ್ಯ ಸಭಾಪತಿಯವರೇ, ಏನೋ ಪುಣ್ಯಕ್ಕೆ ಮಾನ್ಯ ಅಂಬೇಡ್ಕರ್‌ರವರು ಬಡ ಕುಟುಂಬದಲ್ಲಿ ಹುಟ್ಟಿದರು. ಅವರ ಬಗ್ಗೆ ನಮ್ಮ ದೇಶದಲ್ಲಿ ಒಂದು ಹಿಂದಿ serial ಪ್ರಸಾರವಾಗುತ್ತಿದೆ. ಅವರು ಶಾಲೆಯಲ್ಲಿ ಓದುತ್ತಿರುವಾಗ ಅವರನ್ನು last ಗೆ ಕುಳ್ಳಿರಿಸುತ್ತಾರೆ. ಅವರನ್ನು ಮಕ್ಕಳ ಜೊತೆ ಕುಳ್ಳಿರಿಸುವುದಿಲ್ಲ. ಅವರು ಒಂದು ಸಾರಿ ಬಡತನದ ಊಟವಾದ ರೋಟಿ ಮತ್ತು ಮೆಣಸಿನಕಾಯಿ ತರುತ್ತಿದ್ದು, ಮೆಣಸಿನಕಾಯಿಯನ್ನು ತಿಂದುಬಿಡುತ್ತಾರೆ. ಆಗ ಜಾಸ್ತಿ ಖಾರ ಆಗಿ ಅದೇ school ನಲ್ಲಿ ನೀರು ಕುಡಿಯಲು ಬಿಡುವುದಿಲ್ಲ ಮತ್ತು ನೀರನ್ನು ಕೊಡುವುದಿಲ್ಲ. Last ಗೆ teacher ಬಂದು ಹೇಳಿದ ಮೇಲೆ ನೀರನ್ನು ಮೇಲಿನಿಂದ ಹಾಕುತ್ತಾರೆ, ಆ ನೀರನ್ನು ಕುಡಿಯುತ್ತಾರೆ. ಎರಡನೆಯದಾಗಿ ಒಂದು ಸಾರಿ ಹುಡುಗುವಾಗಿದ್ದಾಗ hair cutting ಮಾಡಿಸುವುದಕ್ಕೆ ಹೋದಾಗ ಬಟ್ಟೆ ಎಲ್ಲವನ್ನೂ ಕಟ್ಟುತ್ತಾರೆ. ಬಟ್ಟೆ ಕಟ್ಟದ ಮೇಲೆ ಹಜಾಮನಿಗೆ ಯಾರೋ ಒಬ್ಬರು ಅವನು ಯಾವ ಜಾತಿ ಗೊತ್ತೇ ಎಂದು ಕೇಳಿ, ನಂತರ ಇಂತಹ ಜಾತಿಯವನು ಎಂದು ಹೇಳಿದ ಕೂಡಲೇ ಎದ್ದೇಳು ಮೇಲೆ ಎಂದು ಹೊರಗೆ ಕಳುಹಿಸುತ್ತಾನೆ. ಅಲ್ಲಿಂದ ಆ ಹಜಾಮ ಎಮ್ಮೆಗೆ cutting ಮಾಡುತ್ತಾನೆ. ಆಗ ಅಂಬೇಡ್ಕರ್‌ರವರು ಮನುಷ್ಯನಾದ ನನಗೆ cutting ಮಾಡದೇ ಎಮ್ಮೆಗೆ cutting ಮಾಡುತ್ತೀಯಲ್ಲಪ್ಪ ಎಂದು ಕೇಳುತ್ತಾರೆ. ಆಗ ಅವನು ನಡೆ ನೀನು ಎಂದು ಕಳುಹಿಸುತ್ತಾನೆ. ಇದು ಆಗ ಮಾತ್ರ ಇತ್ತು ಎಂದಲ್ಲ, ಮೊನ್ನೆ ನಮ್ಮ ರಾಜ್ಯದ ಮೂರ್ನಾಲ್ಕು ಜಿಲ್ಲೆಗಳಲ್ಲಿ ನಡೆದಿದೆ. ಇವತ್ತು ಹೋಟೇಲ್‌ಗಳಲ್ಲಿ ಅಂತಹವರಿಗೆ ಚಿಪ್ಪುಗಳನ್ನು ಹೊರಗೆ ಇಡುವುದು, ಹೋಟೇಲ್ ಹಿಂದುಗಡೆ ಕೂರಿಸುವುದು ನಡೆಯುತ್ತಿದೆ. ಮೊನ್ನೆ ಒಂದು ಕಡೆ ಹರಿಜನರ ಮನೆಯಲ್ಲಿ ಯಾರಾದರೂ ತೀರಿಕೊಂಡರೆ ಆ area ದ ಹೋಟೇಲ್‌ಗಳನ್ನು ಬಂದ್ ಮಾಡುತ್ತಿದ್ದಾರೆ. ಏಕೆಂದರೆ ಅವರು ಶವವನ್ನು ಹೂಳಿ ಮತ್ತೆ ಹೋಟೇಲ್‌ಗೆ ಬಂದು ಟೀ ಕುಡಿಯಬಹುದು ಎಂದು ಬಂದ್ ಮಾಡುತ್ತಿದ್ದಾರೆ. ಈ ಪರಿಸ್ಥಿತಿಯನ್ನು ನಿನ್ನೆಯ newspaper ನಲ್ಲಿ ನೋಡಿದೆ. ಇದೆಲ್ಲವನ್ನು ನಾವು ಸರಿಮಾಡುತ್ತೇವೆ ಎಂದು ಹೇಳುತ್ತೇವೆ ಅಷ್ಟೇ. ಇದನ್ನು ನಾವು ಸ್ವಲ್ಪ ಸ್ವಲ್ಪ ಮನಸ್ಸನ್ನು change ಮಾಡಿ ಮಾಡಿಕೊಂಡರೆ ದೇಶದಲ್ಲಿ ಎಲ್ಲರೂ ಬದುಕುವುದಕ್ಕೆ ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಈ ದೇಶದಲ್ಲಿ recent ಆಗಿ CAA (Citizenship Amendment Act) and NRC (National Register of Citizens) ವಿಚಾರಗಳು ಬಂದಿವೆ. ಮಾನ್ಯ ಸಭಾಪತಿಯವರೇ, ಸಂವಿಧಾನದಲ್ಲಿ 1969-70ರಲ್ಲಿ ಹುಟ್ಟಿದ ಮತ್ತು ಸತ್ತ ದಿನಗಳನ್ನು register ಮಾಡಬೇಕೆಂದು ಆಯಿತು. ಈಗ CAA, NRC and NPR (National Population Register)ಗಳಲ್ಲಿ ತಂದೆ-ತಾಯಿಗಳ date of birth ಕೊಡಿ ಎಂದರೆ ಎಲ್ಲಿಂದ ತರುವುದು? ನಾನು ಇಲ್ಲಿ ಕುಳಿತಿರುವ ಮಾನ್ಯ ಸದಸ್ಯರುಗಳಿಗೆ ಕೇಳುತ್ತೇನೆ. ಇವರುಗಳಲ್ಲಿ ಎಷ್ಟು ಜನರಿಗೆ date of birth certificate ಇದೆ? 1960, 1970 ರ ನಂತರ ಹುಟ್ಟಿರುವವರದ್ದು ಬಂದಿರಬಹುದು. ಆದರೆ 1956, 1957ನೇ ಇಸವಿಗಳಲ್ಲಿ ಹುಟ್ಟಿರುವವರಿಗೆ date of birth certificate ಗಳನ್ನು ಎಲ್ಲಿಂದ ತರಬೇಕು. ನಮಗೆ ಇಲ್ಲ ಎಂದರೆ ನಮ್ಮ ತಂದೆ-ತಾಯಿಗಳ date of birth certificate ಎಲ್ಲಿಂದ ಬರುತ್ತದೆ? ಆದ್ದರಿಂದ ಜನರಿಗೆ ತೊಂದರೆಯಾಗುವ ಕಾನೂನುಗಳನ್ನು ತರುವುದಕ್ಕೆ ಹೋಗಬಾರದು. ಕಾನೂನಿಂದ ಜನರಿಗೆ ಲಾಭವಾಗಬೇಕು ಎಂಬುದು ಕಳಕಳಿಯ ವಿನಂತಿ. ಮಾನ್ಯ ಸಭಾಪತಿಯವರೇ, NPR ಮತ್ತು CAA ವಿಚಾರಗಳಲ್ಲಿ ಏಪ್ರಿಲ್ 15ರಿಂದ ಜನಗಣತಿ start ಆಗುತ್ತಿದೆ. ಅಂದರೆ census start ಆಗುತ್ತಿದೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಈಗ coronavirus ಪ್ರಭಾವ ಇದೆ. ನನ್ನ ತಂಗಿಯವರಾದ ಮಾನ್ಯ ಜಯಮಾಲರವರು CAA, NRC, NPR ಗಳು coronavirus ಗಿಂತ danger ಇದೆ ಎನ್ನುವ ಮಾತನ್ನು ಹೇಳಿದರು. ಅದಕ್ಕಾಗಿ coronavirus ಹೋಗುವವರೆಗೂ census ಅನ್ನು ಮುಂದೆ ಹಾಕಬೇಕೆಂದು ಕೇಳಿಕೊಳ್ಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮುಂದು)

(517)/18.03.2020/12.20/ಹೆಚ್‌ವಿ-ಬಿಎನ್‌ಎಸ್

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಸಂವಿಧಾನದ ಮೇಲೆ ಮಾತನಾಡುವುದಕ್ಕೆ ತಯಾರಿದ್ದೀರಾ? ಇವತ್ತು ಊಟಕ್ಕೆ ಹೋಗುವುದರೊಳಗಾಗಿ ಈ ಚರ್ಚೆಯನ್ನು ಮುಕ್ತಾಯಗೊಳಿಸಬೇಕಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ನಾನು ಈಗ ಮಾತನಾಡುವುದಕ್ಕೆ ಪ್ರಾರಂಭಿಸಿದರೆ ಊಟಕ್ಕೆ ಹೋಗುವುದರೊಳಗೆ ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಮಧ್ಯಾಹ್ನ 1.30 ಗಂಟೆಗೆ ಸಚಿವ ಸಂಪುಟ ಸಭೆ ಇದೆ. ಅಷ್ಟರೊಳಗೆ ಸದನವನ್ನು ಮುಗಿಸಬೇಕೆನ್ನುವುದು ನನ್ನ ವಿನಂತಿಯಾಗಿದೆ. ತಾವು ಹೇಗೆ ಹೇಳಿದರೆ ಆ ರೀತಿ ನಡೆದುಕೊಳ್ಳುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಬೇರೆ ಸದಸ್ಯರಿಗೆ ಮಾತನಾಡಲು ಅವಕಾಶ ದೊರೆಯಲಿ ಎನ್ನುವ ದೃಷ್ಟಿಯಿಂದ ನಾನು ಇಲ್ಲಿಯವರೆಗೆ ಮಾತನಾಡಿಲ್ಲ. ಬಹಳಷ್ಟು ಜನ ಹೊಸ ಸದಸ್ಯರಿದ್ದಾರೆ. ಬಹಳಷ್ಟು ಜನ ಸದಸ್ಯರು ಸಂವಿಧಾನದ ಮೇಲೆ ಮಾತನಾಡುವವರಿದ್ದಾರೆ ನಾನೇ ಪ್ರಾರಂಭದಲ್ಲಿ ಮಾತನಾಡಿದರೆ ಅವರಿಗೆ ಅವಕಾಶ ಸಿಗುವುದಿಲ್ಲವೆಂದು ಎಲ್ಲ ಸದಸ್ಯರಿಗೂ ಅವಕಾಶ ದೊರೆಯಲಿ ಎನ್ನುವ ಸದುದ್ದೇಶದಿಂದ ನಾನು ಕೊನೆಯಲ್ಲಿ ಮಾತನಾಡಲು ನಿರ್ಧರಿಸಿದ್ದೆ. ಈಗ ಮಾನ್ಯ ಎಂ.ನಾರಾಯಣಸ್ವಾಮಿಯವರು ಮಾತನಾಡುತ್ತಾರೆ. ನಂತರ ನಾನು ಮಾತನಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ತಮ್ಮ ಮಾತುಗಳನ್ನು 10 ನಿಮಿಷಗಳಲ್ಲಿ ಮುಕ್ತಾಯಗೊಳಿಸಿ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯ ಸಭಾಧ್ಯಕ್ಷರಿಗೆ ಮತ್ತು ವಿಧಾನ ಪರಿಷತ್ತಿನ ಸಭಾಪತಿಗಳಾದ ತಮಗೆ ಈ ಸದನದ ಮೂಲಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಸಂವಿಧಾನ ರಚನೆಯಾಗಿ ಸುಮಾರು 70 ವರ್ಷಗಳು ಕಳೆದ ನಂತರ ಎರಡೂ ಸದನಗಳಲ್ಲಿ ಭಾರತದ ಸಂವಿಧಾನದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ತಮಗೆ ನಾನು ಆಭಾರಿಯಾಗಿದ್ದೇನೆ. ಅಷ್ಟು ಸುಲಭವಾಗಿ ಸಂವಿಧಾನ ರಚನೆಯಾಗಲಿಲ್ಲ. ಸಂವಿಧಾನ ರಚನೆ ಮಾಡುವುದಕ್ಕೆ ಡಾ||ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬಹಳಷ್ಟು ನೋವು ದುಃಖ–ದುಮ್ಮಾನಗಳನ್ನು ಅನುಭವಿಸಿದ್ದಾರೆ. ಭಾರತದ ಸಂವಿಧಾನ ಯಾವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಲ್ಲಿ ರಚನೆಯಾಯಿತು ಎನ್ನುವುದರ ಬಗ್ಗೆ ಹೇಳಬೇಕಾದರೆ, 1933ರಲ್ಲಿ ಭಾರತಕ್ಕೆ ತನ್ನದೇ ಆಗಿರುವ ಸಂವಿಧಾನದ ಅವಶ್ಯಕತೆ ಇದೆಯೆಂದು ಪಂಡಿತ್ ಜವಹರಲಾಲ್ ನೆಹರುರವರು ಬ್ರಿಟಿಷರನ್ನು ಒತ್ತಾಯಿಸುತ್ತಾರೆ. 1934ನೇ ಇಸವಿಯಲ್ಲಿ ನಡೆದಂತಹ ಕಾಂಗ್ರೆಸ್ ಪಕ್ಷದ ಅಧಿವೇಶನದಲ್ಲಿ ಕಾರ್ಯಕಾರಿ ಸಮಿತಿಯವರು ಒಂದು ಗೊತ್ತುವಳಿಯನ್ನು ಅಂಗೀಕರಿಸಿ, ಬ್ರಿಟಿಷ್ ಸರ್ಕಾರಕ್ಕೊಂದು ಬೇಡಿಕೆಯನ್ನು ನೀಡುತ್ತಾರೆ. ಅವರು ಅದಕ್ಕೆ ಒಪ್ಪಿಯನ್ನು ಸಹ ಕೊಡುತ್ತಾರೆ. ಆದಾದ ನಂತರ ಬ್ರಿಟನ್‌ನ್ನಿನ ಪ್ರಧಾನ ಮಂತ್ರಿಗಳಾಗಿದ್ದ ಕ್ಲೆಮೆಂಟ್ ಹರ್ಪಲೇ ಎನ್ನುವವರು 1946ರಲ್ಲಿ ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡುವ ಭರವಸೆಯನ್ನು ನೀಡುತ್ತಾರೆ. ಆಗ ನಮ್ಮದೇ ಆದ ಸಂವಿಧಾನವನ್ನು ರಚನೆ ಮಾಡಲು, ಸಮಿತಿಯನ್ನು ರಚನೆ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ನೀಡುತ್ತಾರೆ. ಅದಕ್ಕೊಂಡು ಕರಡು ಸಮಿತಿಯನ್ನು ರಚನೆ ಮಾಡುತ್ತಾರೆ. ಆ ಕರಡು ಸಮಿತಿಗೆ ಡಾ॥ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗುತ್ತದೆ. ಸಂವಿಧಾನವನ್ನು ರಚನೆ ಮಾಡುವ ಜವಾಬ್ದಾರಿಯನ್ನು ಅಂಬೇಡ್ಕರ್‌ರವರಿಗೆ ನೀಡಲಾಗುತ್ತದೆ. ಡಾ॥ಬಾಬು ರಾಜೇಂದ್ರ ಪ್ರಸಾದ್‌ರವರು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಎಲ್ಲ ವರ್ಗದ, ಎಲ್ಲ ಧರ್ಮದ ಜನರನ್ನೊಳಗೊಂಡಂತೆ, ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಯಾರ್‍ಯಾರು ಮೇಧಾವಿಗಳಿದ್ದರು ಎಲ್ಲರನ್ನೂ ಒಳಗೊಂಡಂತೆ ಸಂವಿಧಾನ ಸಮಿತಿಯನ್ನು ರಚನೆ ಮಾಡಲಾಯಿತು. ಈ ರಾಷ್ಟ್ರದ ಪ್ರಜೆಗೆ ಅನ್ಯಾಯವಾಗಬಾರದು ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಅಂದೇ ಸಂವಿಧಾನ ರಚನೆಯ ಬಗ್ಗೆ ಆಲೋಚನೆಯನ್ನು ಮಾಡಿದ್ದರು. ಆಗ ನಮ್ಮ ದೇಶದ ಜನಸಂಖ್ಯೆ ಸುಮಾರು 30 ಕೋಟಿಗಳಷ್ಟಿತ್ತು. ಕಾರ್ಖಾನೆಗಳನ್ನು ಸ್ಥಾಪನೆ ಮಾಡಿ ವಸ್ತುಗಳನ್ನು ಉತ್ಪಾದನೆ ಮಾಡುವಂತಹ ಶಕ್ತಿ ನಮಗಿರಲಿಲ್ಲ. ಆಹಾರದ ಕೊರತೆಯನ್ನು ಎದುರಿಸುತ್ತಿದ್ದೆವು. ಈಗ ನಾವು 21ನೇ ಶತಮಾನದಲ್ಲಿದ್ದೇವೆ. ಭಾರತ ದೇಶ ಬೃಹತಾಕಾರವಾಗಿ ಬೆಳೆದಿದೆ. ಸುಮಾರು 130 ಕೋಟಿ ಜನಸಂಖ್ಯೆಯನ್ನು ಹೊಂದಿದ್ದೇವೆ. ಪ್ರಪಂಚದ ಮುಂದುವರೆದ ದೇಶಗಳಲ್ಲಿ ನಮ್ಮ ದೇಶವೂ ಒಂದಾಗಿದೆ. ಸಂವಿಧಾನ ರಚನೆ ಮಾಡಿದಂತಹ ಸಂದರ್ಭದಲ್ಲಿ ದೇಶದ ಪರಿಸ್ಥಿತಿ ಯಾವ ರೀತಿಯಲ್ಲಿತ್ತು, ಇವತ್ತು ಹೇಗೆ ಬದಲಾವಣೆ ಹೊಂದಿದೆ ಎನ್ನುವುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಆದರೆ, ಸಂವಿಧಾನ ಬದಲಾವಣೆಯಾಗಿಲ್ಲ. ಅವತ್ತು ಕೊಟ್ಟಂಥ ಸಂವಿಧಾನದಲ್ಲಿ ಅಳವಡಿಸಿರುವ ಕಾನೂನಿನ ಚೌಕಟ್ಟಿನಲ್ಲಿ ನಾವು ನಡೆದುಕೊಂಡು ಹೋಗುತ್ತಿದ್ದೇವೆ. ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಮುಂದಾಲೋಚನೆ ಮತ್ತು ದೂರಾಲೋಚನೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ.

ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸಂವಿಧಾನವನ್ನು ರಚನೆ ಮಾಡುವಂತಹ ಸಂದರ್ಭದಲ್ಲಿ ಬಹಳಷ್ಟು ಅವಮಾನಗಳನ್ನು ಎದುರಿಸಬೇಕಾಗಿತ್ತು. ಯಾರೋ ಒಬ್ಬ ವ್ಯಕ್ತಿ, 'ಒಬ್ಬ ದಲಿತ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸಂವಿಧಾನವನ್ನು ರಚನೆ ಮಾಡುವುದಾದರೆ ನಾವೆಲ್ಲರೂ ಏತಕ್ಕೋಸ್ಕರ ಇರಬೇಕು?' ಎನ್ನುವ ಮಾತನಾಡಿದ್ದರು. ಈ ಎಲ್ಲ ಚುಚ್ಚು ನುಡಿಗಳನ್ನು ಸಹಿಸಿಕೊಂಡು ಡಾ||ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸಂವಿಧಾನದ ಕರಡು ಪ್ರತಿಯನ್ನು ತಯಾರು ಮಾಡಿಕೊಟ್ಟಿದ್ದರು. ಹಲವಾರು ಬದಲಾವಣೆಗಳ ನಂತರ ಎಲ್ಲರೂ ಅದನ್ನು ಒಪ್ಪಿಕೊಳ್ಳುತ್ತಾರೆ. 1946ರಲ್ಲಿ ಮೊದಲನೆಯ ಸಭೆ ಸೇರಿ ಸಂವಿಧಾನದ ರಚನೆಯ ಕಾರ್ಯವನ್ನು ಪ್ರಾರಂಭಿಸಿದ್ದರು. ಒಂದು ವರ್ಷ ಎರಡು ತಿಂಗಳ ಅವಧಿಯಲ್ಲಿ ರೂಪುಗೊಂಡ ಮೊದಲನೆಯ ಕರಡನ್ನು ದಿನಾಂಕಃ21–2–1948ರಲ್ಲಿ ಭಾರತ ದೇಶದ ಜನತೆಯ ಮುಂದಿಡುತ್ತಾರೆ. ಅದರ ಮೇಲೆ ಚರ್ಚೆಗೂ ಅವಕಾಶವನ್ನು ಮಾಡಿಕೊಡುತ್ತಾರೆ. 'ನಾವು ಬರೆದಿರುವುದೇ ಅಂತಿಮವಲ್ಲ, ಇದರಲ್ಲಿ ಯಾವುದಾದರೊಂದು ಬದಲಾವಣೆ ತರಬೇಕಾದರೆ, ಅದನ್ನು ತಾವು ಸೂಚಿಸಬಹುದು' ಎಂದು ಜನತೆಗೆ ಆಹ್ವಾನ ನೀಡುತ್ತಾರೆ. ದೇಶದ ಜನರು ಸುಮಾರು 7635 ತಿದ್ದುಪಡಿಗಳನ್ನು ತರುತ್ತಾರೆ. ಅದರಲ್ಲಿ ಯಾವುದು ಸಮಂಜಸವಾಗಿದೆಯೋ ಅದನ್ನು ಅಳವಡಿಸಿಕೊಂಡು ಅಂತಿಮವಾದ ಕರಡು ಪ್ರತಿಯನ್ನು ಡಾ||ಬಾಬಾ ಸಾಹೇಬ್ ಅಂಬೇಡ್ಕರ್‌ರವರು 26ನೇ ನವೆಂಬರ್ 1949ರಲ್ಲಿ ಭಾರತ ಸರ್ಕಾರಕ್ಕೆ ಸಲ್ಲಿಸುತ್ತಾರೆ. 1950 ಜನವರಿ 26ನೇ ತಾರೀಖಿನಂದು ಭಾರತ ಸರ್ಕಾರ ಅದನ್ನು ಅಂಗೀಕರಿಸುತ್ತದೆ. ಅಂದಿನಿಂದ ಸಂವಿಧಾನ ಜಾರಿಯಾಗುತ್ತದೆ. ರಾಮಾಯಣ ಮತ್ತು ಭಗವದ್ಗೀತೆಗಳನ್ನು ಯಾವ ರೀತಿ ಪವಿತ್ರ ಭಾವನೆಯಿಂದ ಮತ್ತು ಭಯಭಕ್ತಿಗಳಿಂದ ಸ್ವೀಕಾರ ಮಾಡುತ್ತೇವೆಯೋ ಅದೇ ರೀತಿ ಸಂವಿಧಾನವನ್ನು ಒಂದು ಪವಿತ್ರವಾದ ಗ್ರಂಥವೆಂದು ನಾವು ಭಾವಿಸಿಕೊಳ್ಳಬೇಕಾಗುತ್ತದೆ. ಡಾ||ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸುಮಾರು 60 ದೇಶಗಳಲ್ಲಿ ಸಂಚರಿಸಿ ಅಲ್ಲಿ ಯಾವ ರೀತಿಯಲ್ಲಿ ಸಂವಿಧಾನವನ್ನು ರಚನೆ ಮಾಡಿದ್ದಾರೆ ಎನ್ನುವುದನ್ನು ಅಧ್ಯಯನ ಮಾಡಿ, ಅವುಗಳಲ್ಲಿರುವ ಒಳ್ಳೆಯ ಅಂಶಗಳನ್ನು ಮತ್ತು ನಮ್ಮ ದೇಶಕ್ಕೆ ಅನ್ವಯಿಸುವ ಅಂಶಗಳನ್ನು ಅಳವಡಿಸಿಕೊಂಡು ಸಂವಿಧಾನವನ್ನು ರಚನೆ ಮಾಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಇವತ್ತು ಆ ಸಂವಿಧಾನಕ್ಕೆ ಯಾವ ರೀತಿಯಲ್ಲಿ ಗೌರವ ಕೊಡುತ್ತಿದ್ದೇವೆ ಎನ್ನುವುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಒಕ್ಕೂಟ ರಾಷ್ಟ್ರದ ಸಂವಿಧಾನದಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಈ ಮೂರು ಆಧಾರ ಸ್ತಂಭಗಳಾಗಿವೆ. ಇತ್ತೀಚೆಗೆ ಪತ್ರಿಕಾರಂಗವೂ ಒಂದು ಆಧಾರ ಸ್ತಂಭ ಎನ್ನುವ ತೀರ್ಮಾನಕ್ಕೆ ಬಂದಿದ್ದೇವೆ. ಶಾಸಕಾಂಗ ಎಲ್ಲದಕ್ಕಿಂತ ಮೇಲ್ಮಟ್ಟದಲ್ಲಿದೆ. ನಮ್ಮೆಲ್ಲರನ್ನು ಲಾ ಮೇಕರ್ಸ್ ಎಂದು ಕರೆಯುತ್ತಾರೆ. ಆದರೆ, ಇವತ್ತಿನ ದಿವಸ ಏನಾಗುತ್ತಿದೆ? ಎಲ್ಲೋ ಒಂದು ಕಡೆ ನಮ್ಮ ಮೇಲೆ ಸವಾರಿ ಮಾಡುವುದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾರಂಭವಾಗಿದೆ. ಕಾರ್ಯಾಂಗವನ್ನು ತೆಗೆದುಕೊಂಡರೆ, ಇಲ್ಲಿರುವ ಅಧಿಕಾರಿ ವರ್ಗ, ನಾನು ಎಲ್ಲರನ್ನೂ ದೂಷಣೆ ಮಾಡುತ್ತಿಲ್ಲ. ಅಧಿಕಾರಿಗಳು ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆಂದರೆ, ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಆ ಕಾನೂನಿನಲ್ಲಿರುವ ನ್ಯೂನತೆಯನ್ನು ಹುಡುಕುವುದಕ್ಕೆ ಪ್ರಾರಂಭಿಸಿದ್ದಾರೆ. ಇವತ್ತು ಏನಾದರೊಂದು ಕೆಲಸವಾಗಬೇಕಾದರೆ, ಕಾನೂನು ಪ್ರಕಾರವಾಗಿರುವ ದಾಖಲೆಗಳ ಪ್ರಕಾರ ಕೆಲಸ ಮಾಡಿಕೊಡಿ ಎಂದು ಕೇಳಿದರೆ, ಅಧಿಕಾರಿಗಳು ಅದಕ್ಕೆ ಏನಾದರೊಂದು ಪ್ರಶ್ನಾರ್ಥಕ ಚಿಹ್ನೆ ಹಾಕಿ ಇಟ್ಟಿರುತ್ತಾರೆ.

(518) 18.3.2020 12.30 ಪಿಕೆ:ಬಿಎನ್‌ಎಸ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಎಂ.ನಾರಾಯಣಸ್ವಾಮಿ(ಮುಂದುವರೆದಿದೆ):**

ಆದರೆ ಅವರಿಗೆ ಸಲ್ಲಬೇಕಾದ ಲಂಚ ಸಂದ ಕೂಡಲೇ ಇವೆಲ್ಲವನ್ನೂ ಮರೆಮಾಚಿ ಕೆಲಸವನ್ನು ಮಾಡಿಕೊಡುವಂಥದ್ದು ಆಗುತ್ತಿದೆ. ಮಾನ್ಯ ಕಂದಾಯ ಸಚಿವರು ನಿನ್ನೆ ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. 'ಅಧಿಕಾರಿ ವರ್ಗದವರು ಮಾಡುವ ನ್ಯೂನತೆಗಳನ್ನು ಕಂಡುಹಿಡಿದು ಅವರಿಗೆ ಶಿಕ್ಷೆ ಕೊಡಬೇಕು ಎಂದು ವರ್ಗಾವಣೆ ಮಾಡಿದರೆ ಕೋರ್ಟ್‌ನಿಂದ ಸ್ಟೇ ತೆಗೆದುಕೊಂಡು ಬರುತ್ತಾರೆ. ನಾನು ಅಸಹಾಯಕ ಪರಿಸ್ಥಿತಿಯಲ್ಲಿದ್ದೇನೆ' ಎಂದು ಮಾನ್ಯ ಸಚಿವರು ಹೇಳಿದರು. ಇದು ನಿಜ ಕೂಡ. ಹಾಗಾದರೆ ನಾವು ಯಾವರೀತಿ ಇವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಆಗುತ್ತದೆ? ಇವತ್ತಿನ ದಿವಸ ನಾವು ಯಾವ ಘಟ್ಟದಲ್ಲಿದ್ದೇವೆ? ನಮ್ಮ ಈ ಸದನಕ್ಕೆ ಗೌರವವೇ ಇಲ್ಲವೇ? ಅವರು ನಮ್ಮ ಮೇಲೆ ಸವಾರಿ ಮಾಡುವ ಕೆಲಸ ಮಾಡುತ್ತಿದ್ದಾರೆ. ಸಾರ್ವಜನಿಕರು ರಾಜಕಾರಣಿಗಳನ್ನು ವಿಲನ್‌ಗಳಂತೆ ನೋಡುತ್ತಿದ್ದಾರೆ. ಅಧಿಕಾರಿಗಳು ಮಾಡುವ ತಪ್ಪಿಗೆ ಅವರನ್ನು ದೂಷಣೆ ಮಾಡುತ್ತಿಲ್ಲ. ಆದರೆ ಬಿಳಿ ಬಟ್ಟೆ ಹಾಕಿಕೊಂಡು ಓಡಾಡುವ ರಾಜಕಾರಣಿಗಳು ಇವತ್ತು ವಿಲನ್‌ಗಳಾಗಿ ಬಿಟ್ಟಿದ್ದೇವೆ. ಇದಕ್ಕೆ ಕೊನೆ ಎಲ್ಲಿದೆ? ಉದಾಹರಣೆಗೆ ಒಂದು ವಿಷಯ ಹೇಳುತ್ತೇನೆ. ಯಾವುದಾದರೂ ಕಂದಾಯ ದಾಖಲೆಗಳ ಬಗ್ಗೆ ಮಾತನಾಡುವುದಾದರೆ, ನನ್ನ ಸ್ವಂತ ಜಮೀನನ್ನು ಪಹಣಿಗೆ ಎಂಟ್ರಿ ಮಾಡುವಾಗ 'ನಾರಾಯಣಸ್ವಾಮಿ' ಎನ್ನುವುದರ ಬದಲಾಗಿ 'ನಾರಾಯಣಪ್ಪ' ಎಂದು ಎಂಟ್ರಿ ಮಾಡಿರುತ್ತಾರೆ. ಅದನ್ನು ಬದಲಾವಣೆ ಮಾಡಿಸಬೇಕಾದರೆ ಬಹಳ ಸರ್ಕಸ್ ಮಾಡಬೇಕು; 2-3 ವರ್ಷಗಳಾದರೂ ಬದಲಾವಣೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ, ಆ ಜಮೀನಿನ ಮೇಲೆ ಯಾರಾದರೂ ಮೂಲ ದಾಖಲೆಯೆಂದು ಒಂದು ದಾಖಲೆಯನ್ನು ಸೃಷ್ಟಿ ಮಾಡಿ Assistant Commissioner Court ಗೆ ಹಾಕಿಕೊಳ್ಳುತ್ತಾರೆ. ಅಲ್ಲಿ ನಮ್ಮ ವಿರುದ್ಧವಾಗಿ ಆರ್ಡರ್ ಆದಾಗ, ಆ ಆರ್ಡರ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಂಡು Deputy Commissioner Court ಗೆ appeal ಹೋಗಬೇಕು. D.C. ಹತ್ತಿರ ಹೋಗಿ, ಕೊಡಬೇಕಾದುದನ್ನು ಕೊಟ್ಟು ನನ್ನ ಸ್ವಂತ ಜಮೀನನ್ನು ವಾಪಸ್ಸು ಪಡೆದುಕೊಳ್ಳಬೇಕಾದ ಪರಿಸ್ಥಿತಿ ಇದೆ. ಇದು ಎಲ್ಲಾ ಕಡೆ ನಡೆಯುತ್ತದೆ. ಪೋಡಿ ಮಾಡಿಸಬೇಕಾದರೆ ದುಡ್ಡು ಕೊಡಬೇಕು, ಕಂದಾಯ ಅಧಿಕಾರಿಗಳಿಗೆ ದುಡ್ಡು ಕೊಡಬೇಕು. ನನ್ನ ಆಸ್ತಿಗೆ ತೆರಿಗೆ ಕಟ್ಟಬೇಕಾದರೂ ದುಡ್ಡು ಕೊಡಬೇಕು.

**ಶ್ರೀ ಕೆ.ಗೋವಿಂದರಾಜ್:-** ಗುರುತು ಪರಿಚಯ ಹೇಳಿದರೆ, ನಾರಾಯಣಸ್ವಾಮಿಯವರ ಕಡೆಯವರು ಎಂದು ಹೇಳಿದರೆ 5 ಕೊಡುವ ಕಡೆ 3 ಕೊಡಿ ಎಂದು ಹೇಳುತ್ತಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಇಂತಹ ಕೆಲಸ ಆಗಬೇಕಾದರೆ ಇಷ್ಟು ಕೊಡಬೇಕು; ದುಡ್ಡು ಕೊಟ್ಟರೆ ಯಾರ influence ಬೇಕಾಗುವುದಿಲ್ಲ. 'ನೇರವಾಗಿ ಬಂದು ಮಾಡಿಸಿಕೊಂಡು ಹೋಗಿ 'ಎನ್ನುವ ಮಟ್ಟಕ್ಕೆ ಹೋಗಿ ತಲುಪಿದೆ. ಇದಕ್ಕೆ ಹೇಗೆ ಕಡಿವಾಣ ಹಾಕುತ್ತೀರಿ?

ಮಾನ್ಯ ಸಭಾಪತಿಯವರೇ, ನಾವು ನ್ಯಾಯಾಂಗದ ಬಗ್ಗೆ ಮಾತನಾಡಿದೆವು. ನಾನು ಇವತ್ತು ಮಾತನಾಡಲು ತಂಬಾ ತಯಾರಿ ಮಾಡಿಕೊಂಡು ಬಂದಿದ್ದೆ. ಆದರೆ ಸಮಯ ಇಲ್ಲದಿರುವುದರಿಂದ ಸಂಕ್ಷಿಪ್ತವಾಗಿ ಮಾತನಾಡುತ್ತೇನೆ.

ನಮ್ಮ ಒಬ್ಬ ಸದಸ್ಯರು ಮಾತನಾಡುತ್ತಾ, ನ್ಯಾಯಾಧೀಶರಿಗೆ 5-6 ಬೆಡ್ ರೂಮ್‌ಗಳಿರುವ ಮನೆಗಳನ್ನು ಕೊಡುತ್ತಾರೆ; ಅದರ ಅವಶ್ಯಕತೆ ಇದೆಯೇ ಎಂದು ಕೇಳಿದರು. ಅದನ್ನು ನಾವು ಪ್ರಶ್ನೆ ಮಾಡುವುದಿಲ್ಲ. ನ್ಯಾಯಾಧೀಶರಿಗೆ ಏನು ಸವಲತ್ತು ಕೊಡಬೇಕೋ ಕೊಡಲಿ, ಬೇಡ ಎನ್ನುವುದಿಲ್ಲ. ನಾನು ಒಂದು ಉದಾಹರಣೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವುದಾದರೂ ಒಂದು ಕೇಸ್ ಸಿವಿಲ್ ಕೋರ್ಟ್‌ನಲ್ಲಿರುತ್ತದೆ, ಸಿವಿಲ್ ಕೋರ್ಟ್‌ನಲ್ಲಿ ನ್ಯಾಯ ತನ್ನ ಪರವಾಗಿ ಇರುತ್ತದೆ ಎಂದು ಆ ವ್ಯಕ್ತಿಗೆ ಗೊತ್ತಿರುತ್ತದೆ. ವಕೀಲರು ಕೂಡ ಸೂಕ್ತ ರೀತಿಯಲ್ಲಿ ವಾದ ಮಾಡಿರುತ್ತಾರೆ, ಸಾಕ್ಷಿಗಳನ್ನು ಪ್ರಸ್ತುತ ಪಡಿಸಿರುತ್ತಾರೆ. ಆದರೆ, ಪ್ರಭಾವಕ್ಕೆ ಒಳಗಾಗಿಯೋ ಅಥವಾ ಒತ್ತಡಕ್ಕೆ ಮಣಿದೋ ಆತನ ವಿರುದ್ಧ ತೀರ್ಪು ಬರುತ್ತದೆ. ಸಿವಿಲ್ ಕೋರ್ಟ್‌ನಲ್ಲಿ ನಮ್ಮ ವಿರುದ್ಧವಾಗಿ ಜಡ್ಜ್‌ಮೆಂಟ್ ಬಂದಾಗ ನಾವು ಹೈಕೋರ್ಟ್‌ಗೆ ಹೋಗುತ್ತೇವೆ. ಹೈಕೋರ್ಟ್‌ನಲ್ಲಿ ಮತ್ತೆ ಎಲ್ಲವನ್ನೂ ಪರಿಶೀಲನೆ ಮಾಡಿ, ಕೆಳಹಂತದ ಕೋರ್ಟ್‌ನಲ್ಲಿ ಕೊಟ್ಟಿರುವ ಜಡ್ಜ್‌ಮೆಂಟ್ ತಪ್ಪು ಎಂದು ಹೇಳಿ ನಮ್ಮ ಪರವಾಗಿ ತೀರ್ಪು ಬಂದಿರುತ್ತದೆ. ಆಗ Lower Court Judge ಮೇಲೆ ನೀವು ಕ್ರಮ ಕೈಗೊಳ್ಳುತ್ತೀರಾ? ಅವರು ತಪ್ಪು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿರುವುದಿಲ್ಲವೇ? ಇಂಥವರನ್ನು ಯಾರು ಕೇಳಬೇಕು? Lower Court ನಲ್ಲಿ ನಮ್ಮ ವಿರುದ್ಧ ಬಂದ ಜಡ್ಜ್‌ಮೆಂಟ್ ತಪ್ಪಾಗಿದ್ದು, Higher Court ನಲ್ಲಿ ನಮ್ಮ ಪರವಾಗಿ ಬಂದಾಗ, Lower Court ನ ನ್ಯಾಯಾಧೀಶ ತಪ್ಪು ಮಾಡಿದ್ದಾನೆ ಎಂದು ಅವರಿಗೆ ಯಾರು ಶಿಕ್ಷೆ ಕೊಡುತ್ತಾರೆ? ಇದನ್ನು ನಾವು ಕೇಳುವ ಹಾಗಿಲ್ಲ. ಸಂವಿಧಾನದಲ್ಲಿ ಇವೆಲ್ಲವೂ ಅಡಕವಾಗಿವೆ. ಆದರೆ ನಾವು ಕೇಳುವುದಿಲ್ಲ. ಕನಿಷ್ಠ ನಾವಾದರೂ ಇದರ ಬಗ್ಗೆ ಮಾತನಾಡಬೇಕು, ಆದರೆ ಮಾತನಾಡಲು ನಮಗ್ಯಾರಿಗೂ ಧೈರ್ಯವಿಲ್ಲ. ಸದನದಲ್ಲಿ ನಾವು ಸದಸ್ಯರು ಯಾರೂ ಧ್ವನಿ ಎತ್ತುವುದಿಲ್ಲ. ನಮ್ಮದೇ ಕೇಸು ಕೋರ್ಟ್‌ನಲ್ಲಿದ್ದು ನಾವು ಇಲ್ಲಿ ಧ್ವನಿ ಎತ್ತಿದರೆ ನಮ್ಮ ವಿರುದ್ಧವಾಗಿ ತೀರ್ಪು ಬರುತ್ತದೆ ಎಂದು ಭಯಪಡುತ್ತೇವೆ. ಹೀಗಾಗಿ ನಾವ್ಯಾರು ಈ ಕುರಿತು ಮಾತನಾಡುವುದಿಲ್ಲ. ಇಂತಹ ಪರಿಸ್ಥಿತಿಗೆ ನಾವು ಬಂದಿದ್ದೇವೆ. ನಾವು ಮಾನ್ಯ ನ್ಯಾಯಾಧೀಶರ ಬಗ್ಗೆ ಮಾತನಾಡಿದೆವು. ನಾನು ಒಂದು ಉದಾಹರಣೆ ಹೇಳುತ್ತೇನೆ. ಇತ್ತೀಚಿಗೆ ದೆಹಲಿಯಲ್ಲಿ ಸಿಎಎ–ಎನ್‌ಆರ್‌ಸಿ ಬಗ್ಗೆ ಸಾರ್ವಜನಿಕರು ಪ್ರತಿಭಟನೆ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಸಾರ್ವಜನಿಕ ಆಸ್ತಿ–ಪಾಸ್ತಿಗೆ ನಷ್ಟ ಉಂಟಾಗುತ್ತದೆ. ದೆಹಲಿ ಹೈಕೋರ್ಟ್‌ನ ಒಬ್ಬ ನ್ಯಾಯಾಧೀಶರು, 'ಯಾರು ಇದಕ್ಕೆ ಪ್ರಚೋದನೆ ಮಾಡಿದರೋ. ಯಾರು ಪ್ರಚೋದನಕಾರಿ ಭಾಷಣ ಮಾಡಿದರೋ ಅವರ ಮೇಲೆ ತಕ್ಷಣ 24 ಗಂಟೆಯ ಒಳಗೆ ಎಫ್.ಐ.ಆರ್. ಹಾಕಬೇಕು' ಎಂದು ಹೇಳುತ್ತಾರೆ. ಅಂತಹ ನ್ಯಾಯಾಧೀಶರನ್ನು ರಾತ್ರಿ 2 ಗಂಟೆಗೆ ದೆಹಲಿಯಿಂದ ಪಂಜಾಬ್‌ಗೆ ವರ್ಗಾವಣೆ ಮಾಡಲಾಗುತ್ತದೆ.

**ಶ್ರೀ ಎಸ್. ಸುರೇಶ್‌ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):–** ಮಾನ್ಯ ಸಭಾಪತಿಯವರೇ, ದಾಖಲೆಗೆ ಸರಿಯಾದ ಮಾಹಿತಿ ಹೋಗಬೇಕು.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ನಾನು ಯಾರನ್ನೂ ದೂಷಣೆ ಮಾಡುತ್ತಿಲ್ಲ. ನಮ್ಮ ವ್ಯವಸ್ಥೆ ಎಲ್ಲಿಗೆ ಹೋಗಿದೆ ಎಂದು ಹೇಳುತ್ತಿದ್ದೇನೆ.

**ಶ್ರೀ ಎಸ್.ಸುರೇಶ್‌ಕುಮಾರ್:–** ಈ ಕುರಿತು ಸಂಬಂಧಪಟ್ಟ ನ್ಯಾಯಮೂರ್ತಿಗಳು ಕ್ಲ್ಯಾರಿಫಿಕೇಷನ್ ಕೊಟ್ಟಿದ್ದಾರೆ. ಫೆಬ್ರವರಿ 17ನೇ ತಾರೀಖಿನಂದೇ ನನ್ನ ಅಭಿಪ್ರಾಯ ಕೇಳಿದ್ದರು. ಹಾಗಾಗಿ ನನ್ನ ವರ್ಗಾವಣೆಗೂ ಈ ತೀರ್ಪಿಗೂ ಸಂಬಂಧ ಇಲ್ಲ ಎಂದು ಕ್ಲ್ಯಾರಿಫಿಕೇಷನ್ ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾವು Judiciary ಯನ್ನು ಪ್ರಶ್ನೆ ಮಾಡಲೇಬೇಕು, ಅದರಲ್ಲಿ ಎರಡು ಮಾತಿಲ್ಲ. ಆದರೆ, Judgment ನ್ನು ಪ್ರಶ್ನೆ ಮಾಡುವುದಕ್ಕೆ ಅಧಿಕಾರ ಇಲ್ಲ. ನಮ್ಮ ದೇಶದ ಕಾನೂನಿನಲ್ಲಿ Lower Court ನಿಂದ Higher Court ಗೆ, ಅಪೆಕ್ಸ್ ಕೋರ್ಟ್‌ವರೆಗೂ ಹೋಗಲು ನಾವು ವ್ಯವಸ್ಥೆ ಮಾಡಿಕೊಂಡಿದ್ದೇವೆ. Even, Quasi Judicial Court ನಲ್ಲಿ, A.C. Court ನಲ್ಲಿ ಏಕೆ ಹೀಗಾಯಿತು? D.C. Court ನಲ್ಲಿ ಏಕೆ ಹೀಗಾಯಿತು ಎಂದು ಪ್ರಶ್ನೆ ಮಾಡುವ ಹಾಗಿಲ್ಲ. ಆದರೆ ಅಪೀಲ್ ಹೋಗುವುದಕ್ಕೆ ಸಂವಿಧಾನದಲ್ಲಿ ಅವಕಾಶ ಇದೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಚಾರದ ಬಗ್ಗೆ ಸತ್ಯವನ್ನು ಹೇಳಬೇಕಾಗುತ್ತದೆ. ವಿರೋಧಕ್ಕೋಸ್ಕರ ಮಾತನಾಡಬಾರದು. Chief Justice of Delhi High Court, ಇವರಿಗೆ ವಾರೆಂಟ್ ಬಂದು ಒಂದು ವಾರದ ಮೇಲಾಗಿತ್ತು. (ಗೊಂದಲ) ಮಾನ್ಯ ಸಭಾಪತಿಯವರೇ, ತಪ್ಪು ದಾಖಲಾಗಿರುವುದನ್ನು ತೆಗೆಯಬೇಕಾಗುತ್ತದೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ನಾನು ಯಾವುದೇ ಜಡ್ಜ್ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಒಂದು ಕೋರ್ಟ್‌ನಿಂದ ಇನ್ನೊಂದು ಕೋರ್ಟ್‌ಗೆ transfer ಮಾಡುವುದು ತಪ್ಪು ಎಂದು ವಾದ ಮಾಡುತ್ತಿಲ್ಲ, ನಮ್ಮ ವ್ಯವಸ್ಥೆ ಹೇಗಿದೆ ಎಂಬ ಬಗ್ಗೆ ಹೇಳುತ್ತಿದ್ದೇನೆ.

(ಗೊಂದಲ)

**ಶ್ರೀ ಎಸ್.ಎಲ್ ಭೋಜೇಗೌಡ:–** ವಾರೆಂಟ್ ಬಂದಿದ್ದ ಆಧಾರದ ಮೇಲೆ ಅವರನ್ನು ವರ್ಗಾವಣೆ ಮಾಡಿದ್ದರು.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗತಾನೇ ನಿವೃತ್ತಿಯಾದ ಸುಪ್ರೀಂ ಕೋರ್ಟ್‌ನ ಜಡ್ಜ್‌ರವರು ತಾವು ನಿವೃತ್ತಿ ಆಗುವ ಒಂದು ವಾರಕ್ಕೆ ಮುಂಚೆ ಯಾವರೀತಿ ತೀರ್ಪುಗಳನ್ನು ಕೊಟ್ಟರು ಎನ್ನುವುದು ಗೊತ್ತಿದೆ. ಅವರನ್ನು ಇವತ್ತು ರಾಜ್ಯಸಭಾ ಸದಸ್ಯರನ್ನಾಗಿ ಮಾಡುತ್ತಾರೆ.

**ಸಭಾಪತಿಯವರು:–** ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಬೇರೆ ದಿನವನ್ನು ಇಟ್ಟುಕೊಳ್ಳೋಣ. ದಯವಿಟ್ಟು ಮುಗಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸುಪ್ರೀಮ್ ಕೋರ್ಟ್‌ನ ನ್ಯಾಯಾಧೀಶರು, ನಮಗೆ ನ್ಯಾಯವನ್ನು ಕೊಡುವುದಕ್ಕೆ ಕಟ್ಟುಪಾಡುಗಳಿವೆ, ನಮ್ಮ ಅನಿಸಿಕೆಗಳನ್ನು ನೇರವಾಗಿ ಹೇಳಿಕೊಳ್ಳುವುದಕ್ಕೆ ಆಗುತ್ತಿಲ್ಲ ಎಂದು ಪತ್ರಿಕಾ ಗೋಷ್ಠಿಯನ್ನು ಮಾಡುತ್ತಾರೆ. ವ್ಯವಸ್ಥೆ ಈ ರೀತಿ ಇದೆ, ಉಸಿರುಗಟ್ಟುವ ವಾತಾವರಣ ನಮಗಿದೆ, ಸರಿಯಾದ ರೀತಿಯಲ್ಲಿ ನ್ಯಾಯ ಕೊಡುವುದಕ್ಕೆ ಆಗುತ್ತಿಲ್ಲ, ನಮ್ಮ ಕೈಕಾಲುಗಳನ್ನು ಕಟ್ಟಿ ಹಾಕಿದ್ದಾರೆ ಎಂದು Press Conference ನಲ್ಲಿ ಹೇಳುತ್ತಾರೆ. ನಾವು ಇವತ್ತು ಇಂತಹ ವ್ಯವಸ್ಥೆಗೆ ಹೋಗಿದ್ದೇವೆ.

ಇನ್ನು ಚುನಾವಣೆ ಆಯೋಗ. ಚುನಾವಣಾ ಆಯೋಗ ಯಾವರೀತಿ ನಡೆದುಕೊಳ್ಳಬೇಕು ಎನ್ನುವುದನ್ನು ಸಂವಿಧಾನದಲ್ಲಿ ಹೇಳಲಾಗಿದೆ. ಮೊದಲ ಬಾರಿಗೆ 1952ರಲ್ಲಿ ಸಾರ್ವತ್ರಿಕ ಚುನಾವಣೆ ಬಂತು. ಆ ಚುನಾವಣೆಯಲ್ಲಿ ಸ್ಪರ್ಧೆ ಮಾಡುವವರು ಎಷ್ಟು ಜನರಿದ್ದರು ಎಂಬ ಬಗ್ಗೆ ಯೋಚನೆ ಮಾಡಬೇಕು. ಮಾನ್ಯ ಸದಸ್ಯರು ಮಾತನಾಡುತ್ತಾ, ಯಾವರೀತಿ ಚುನಾವಣೆಗಳಾಯಿತು ಎನ್ನುವುದನ್ನು ಹೇಳಿದರು. ಆವತ್ತಿನ ದಿನಗಳಲ್ಲಿ, ಕೇವಲ ನಮ್ಮ ಪರಿಚಯದ ಮೇಲೆ ಅಥವಾ ಜಾಸ್ತಿ ಎಂದರೆ ಎಲೆ-ಅಡಿಕೆ ಕೊಟ್ಟು ಓಟು ಹಾಕಿ ಎಂದು ಕೇಳುತ್ತಿದ್ದರು. ಆದರೆ ಇವತ್ತು, ವಿರೋಧ ಪಕ್ಷದವರು ಇಷ್ಟು ಕೊಡುತ್ತಾರೆ; ನೀವೆಷ್ಟು ಕೊಡುತ್ತೀರಾ ಎಂದು ಕೇಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಚುನಾವಣೆಗಳು ಎಲ್ಲಿಗೆ ಹೋಗುತ್ತಿವೆ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಸರ್ಕಾರ ರಚನೆಯಾದರೆ, ಆ ಸರ್ಕಾರ 5 ವರ್ಷಗಳ ಕಾಲ ಆಡಳಿತ ಮಾಡಬೇಕೆಂದು ಜನ ಆಯ್ಕೆ ಮಾಡಿ ಕಳುಹಿಸುತ್ತಾರೆ.

(ಮುಂದು . . .)

(519) 18-03-2020 12.40 ಡಿಎಸ್-ಜಿಆರ್

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):-**

ಆದರೆ, ಇವತ್ತಿನ ಪರಿಸ್ಥಿತಿ ಏನಾಗಿದೆ? ನಮ್ಮ ಕರ್ನಾಟಕ ವಿಧಾನಸಭೆಯಲ್ಲಿ 224 ಸದಸ್ಯರು ಇರಬೇಕು. ಸರ್ಕಾರ ರಚನೆ ಮಾಡುವುದಕ್ಕೆ 113 ಸದಸ್ಯರುಗಳಿರಬೇಕು. ಒಂದು ವೇಳೆ 125 ಜನರು ಗೆದ್ದಿದ್ದರೆ ಯಾರೋ ಒಬ್ಬ ಬಂಡವಾಳಶಾಹಿ ಬಂದು ಸಾವಿರಾರು ಕೋಟಿ ರೂಪಾಯಿಗಳನ್ನು ಇನ್ವೆಸ್ಟ್ ಮಾಡಿ ಈ ಸರ್ಕಾರವನ್ನು ಬೀಳಿಸಬೇಕೆಂದರೆ 20 ಜನರ ಕೈಯಲ್ಲಿ ರಾಜೀನಾಮೆ ಕೊಡಿಸಿ ಮತ್ತೆ ಚುನಾವಣೆಗೆ ಹೋಗುವಂತಹ ನಿದರ್ಶನ ಬಂದರೆ ಇವತ್ತಿನ ದಿವಸ ನಾವು ಎಲ್ಲಿಗೆ ಹೋಗಿ ತಲುಪಿದ್ದೇವೆ? ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ, ಮೊನ್ನೆ ಉಪಚುನಾವಣೆ ನಡೆಯಿತು. ಒಂದೊಂದು ಕ್ಷೇತ್ರದಲ್ಲಿ ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಯಾವ ಪುರುಷಾರ್ಥಕ್ಕಾಗಿ ನಾವು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚುನಾವಣೆ ಮಾಡಬೇಕಾಗಿದೆ? ನಾವು ನ್ಯಾಯ ಎಲ್ಲಿ ತಂದು ಕೊಡುತ್ತೇವೆ? ಇವತ್ತು ಮಧ್ಯಪ್ರದೇಶದಲ್ಲಿ ಸರ್ಕಾರ ನಡೆಯುತ್ತಿತ್ತು. ಅಲ್ಲಿ ಮತ್ತೆ ಯಾವುದೋ ಕಾಣದ ಕೈಗಳು ಇವತ್ತು ಶಾಸಕರುಗಳನ್ನು ಎತ್ತಾಕಿಕೊಂಡು ಬಂದು ಕರ್ನಾಟಕದ ಬೆಂಗಳೂರಿನ ಮಹಾನಗರದ ಹೋಟೆಲ್‌ನಲ್ಲಿ ಇಟ್ಟುಕೊಂಡಿದ್ದಾರೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ನಾರಾಯಣಸ್ವಾಮಿಯವರು ಸಂವಿಧಾನದ ಬಗ್ಗೆ ಮಾತನಾಡುವುದನ್ನು ಬಿಟ್ಟು ರಾಜಕಾರಣದ ಬಗ್ಗೆ ಮಾತನಾಡುತ್ತಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಸಂವಿಧಾನದ ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಇವತ್ತು ಏನು ವ್ಯವಸ್ಥೆಯಾಗಿದೆ ಎಂಬುದರ ಬಗ್ಗೆಯೂ ಮಾತನಾಡುತ್ತಿದ್ದೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ನಿಮ್ಮ ಪಕ್ಷ ಯಾವ್ಯಾವ ಸರ್ಕಾರಗಳನ್ನು ಕೆಡವಿದ್ದಾರೆ ಎಂಬುದರ ಬಗ್ಗೆಯೂ ಮಾತನಾಡಿ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಈಲ್ಡ್ ಆಗಿಲ್ಲ. ನಾನು ಸಂವಿಧಾನ ಪ್ರಜಾಪ್ರಭುತ್ವದ ಬಗ್ಗೆಯೇ ಮಾತನಾಡುತ್ತಿದ್ದೇನೆ. ಬೇರೆ ಯಾವುದನ್ನು ಮಾತನಾಡುತ್ತಿಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಅವರು ರಾಜಕಾರಣದ ಬಗ್ಗೆ ಮಾತನಾಡುತ್ತಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ರಾಜಕಾರಣ ಅಲ್ಲ, ಇವತ್ತಿನ ವ್ಯವಸ್ಥೆಯ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಇವತ್ತಿನ ದಿವಸ ಏನು ನಡೆಯುತ್ತಿದೆ? ಇಷ್ಟೆಲ್ಲಾ ನಡೆಯುತ್ತಿದ್ದರೂ ಚುನಾವಣಾ ಆಯೋಗ ಏನು ಮಾಡುತ್ತಿದೆ ಎಂದು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಇವತ್ತು ಏಕೆ ಇಷ್ಟು ಖರ್ಚು-ವೆಚ್ಚಗಳಾಗುತ್ತಿವೆ? ಕಾನೂನು ಏನು ಹೇಳುತ್ತದೆಂದರೆ, ಒಬ್ಬ ಶಾಸಕ ಚುನಾವಣೆಗೆ ನಿಂತರೆ ಅವನ ಖರ್ಚಿನ ಮಿತಿ 27 ಲಕ್ಷ ರೂಪಾಯಿಗಳಷ್ಟು ಇರಬೇಕು ಎಂದು ಇದೆ. ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿರುವುದು ಅವರ ಕಣ್ಮುಂದೆ ಇದೆ. ಹಾಗಾದರೆ ಚುನಾವಣಾ ಆಯೋಗದವರು ಏನು ಮಾಡುತ್ತಿದ್ದಾರೆ? ಇವತ್ತಿನವರೆಗೂ ಯಾರನ್ನಾದರೂ ಕರೆದು ಹಣ ಎಲ್ಲಿಂದ ಬಂತು ಎಂದು ಪ್ರಶ್ನೆ ಮಾಡಿದ್ದಾರೆಯೇ? ಇವತ್ತಿನ ದಿವಸ ಯಥೇಚ್ಛವಾಗಿ ಖರ್ಚು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಿದ್ದಾರೆ ಯಾರನ್ನಾದರೂ ಪ್ರಶ್ನೆ ಮಾಡಿದ್ದಾರೆಯೇ? ಇದು ನಮ್ಮ ವ್ಯವಸ್ಥೆ ಎಂದು ನಾನು ಹೇಳುತ್ತಿದ್ದೇನೆ. ನಾನು ಯಾವುದೇ ಸರ್ಕಾರವನ್ನು ಬ್ಲೇಮ್ ಮಾಡುತ್ತಿಲ್ಲ. ನಾವು ನಾಳೆ ಎಲ್ಲಿಗೆ ಹೋಗಿ ಮುಟ್ಟುತ್ತೇವೆ? ನಾವು ನಾಳೆ ಆಡಳಿತ ಪಕ್ಷದ ಸ್ಥಾನದ ಕಡೆಗೆ ಬರಬಹುದು, ಅವರು ವಿರೋಧ ಪಕ್ಷದ ಕಡೆಗೆ ಬರಬಹುದು.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ನಾರಾಯಣಸ್ವಾಮಿಯವರೇ,.....

**ಶ್ರೀ ಎಂ.ನಾರಾಯಣಸ್ವಾಮಿ:-** ನಾನು ಈಲ್ಡ್ ಆಗಿಲ್ಲ. ನೀವು ಕೂಡ ಅದರಲ್ಲಿ ಮೂಲ ಪುರುಷರೇ, ಸುಮ್ಮನೆ ಕುಳಿತುಕೊಳ್ಳಿ.

ಮಾನ್ಯ ಸಭಾಪತಿಯವರೇ, ಇವತ್ತು ಕಾನೂನು ಪ್ರಕಾರವಾಗಿ autonomous bodies ಯಾವ್ಯಾವು ಎಂದರೆ, C.B.I., R.B.I., Income Tax Department, Enforcement Directorate ಇವೆಲ್ಲವೂ ಕೂಡ autonomous bodies. ಆದರೆ ಸರ್ಕಾರ ಬಂದಂತಹ ಸಂದರ್ಭದಲ್ಲಿ ಇಂತಹ autonomous ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ನಮಗೆ ಅನುಕೂಲಕ್ಕೆ ತಕ್ಕ ಹಾಗೆ ನಾವು ನಡೆಸಿಕೊಳ್ಳುತ್ತಿದ್ದೇವೆ, ಇದು ಸರಿಯೇ? ಇದನ್ನು ನಾವು ಪ್ರಶ್ನೆ ಮಾಡಬೇಕಲ್ಲವೆ? ಇದರ ಬಗ್ಗೆ ನಾವು ಮಾತನಾಡಬೇಕಲ್ಲವೆ? ಸಂವಿಧಾನ ರಚನೆ ಆಯಿತು. ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದರು. ಅವರು 20 ಅಂಶಗಳ ಕಾರ್ಯಕ್ರಮವನ್ನು ತಂದರು. ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿದರು. ಯಾವ ಬಡವ ಧ್ವನಿ ಇಲ್ಲದ ವ್ಯಕ್ತಿ ಇದ್ದಾನೆಯೋ ಅವನು ಬ್ಯಾಂಕಿನೊಳಗೆ ಕಾಲಿಡಬೇಕೆಂದರೆ ಭಯ ಪಡುವಂತಹ ಪರಿಸ್ಥಿತಿ ಇತ್ತು. ಪ್ರಧಾನಮಂತ್ರಿಯಾಗಿದ್ದಂತಹ ಶ್ರೀಮತಿ ಇಂದಿರಾಗಾಂಧಿಯವರು ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿದ ಮೇಲೆ ಪ್ರತಿಯೊಬ್ಬರು ಕೂಡ ಬ್ಯಾಂಕಿಗೆ ಧೈರ್ಯವಾಗಿ ಬರುವಂತಹ ಕೆಲಸ ಮಾಡಿದರು. 20 ಅಂಶಗಳ ಕಾರ್ಯಕ್ರಮದಲ್ಲಿ ಉಳುವವನೇ ಭೂಮಿ ಒಡೆಯ ಎಂದು ಮಾಡಿದರು. ಯಾರ‍್ಯಾರು ಭೂಮಿಯಲ್ಲಿ ಉಳುತ್ತಿದ್ದರೋ ಧ್ವನಿ ಇಲ್ಲದವನು ಕೂಲಿ ಕೆಲಸ ಮಾಡಿಕೊಂಡು ಶ್ರೀಮಂತನ ಜಮಿನ್ದಾರ ಮನೆಯಲ್ಲಿ ಅವನ ಜಮೀನನ್ನು ಉಳುಮೆ ಮಾಡುತ್ತಿದ್ದನೋ ಅವನೇ ಮಾಲೀಕ ಎಂದು ಕಾನೂನು ತಂದರು. ಅದು ಒಳ್ಳೆಯದಲ್ಲವೇ? ಇಂತಹ ಒಳ್ಳೆಯ ಕಾನೂನು ತಂದರೆ ನಾವೆಲ್ಲರೂ ಸ್ವಾಗತ ಮಾಡಬೇಕಾಗುತ್ತದೆ. ಚುನಾವಣೆ ಬರುತ್ತದೆ ಹೋಗುತ್ತದೆ, ನಾವು ಚುನಾವಣಾ ಸಮಯದಲ್ಲಿ ರಾಜಕಾರಣ ಮಾಡೋಣ. ಆದರೆ, ಜನ ನಮ್ಮನ್ನು ಆಯ್ಕೆ ಮಾಡಿ ಅಧಿಕಾರಕ್ಕೆ ಬಂದಾಗ ನಮ್ಮ ಗುರಿ ಏನಾಗಬೇಕು, ಈ ರಾಜ್ಯ ಮತ್ತು ದೇಶದ ಜನರ ಕಷ್ಟವನ್ನು ಕಾಪಾಡುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸ ಮಾಡಬೇಕು. ಸ್ವಾತಂತ್ರ್ಯ ಬಂದು 72 ವರ್ಷಗಳಾಗಿವೆ. ಇನ್ನು ಜನರಿಗೆ ಕುಡಿಯುವುದಕ್ಕೆ ನೀರಿಲ್ಲ, ನಮ್ಮ ಮನೆ ಮುಂದೆ ಚರಂಡಿ ಇಲ್ಲ, ರಸ್ತೆ ಇಲ್ಲ, ಪಡಿತರ ಚೀಟಿ ಇಲ್ಲ, ಇನ್ನು ನಾವು ಇದರ ಬಗ್ಗೆಯೇ ಮಾತನಾಡುತ್ತಿದ್ದೇವೆ. ಯಾವಾಗ ಈ ಪರಿಸ್ಥಿತಿಯನ್ನು ನಾವು ಸುಧಾರಣೆ ಮಾಡುತ್ತೇವೆ? ಸ್ವಾತಂತ್ರ್ಯ ಬಂದು 72 ವರ್ಷಗಳಾಗಿವೆ. ಸ್ವಾತಂತ್ರ್ಯ ಬಂದು 25-30 ವರ್ಷ ಆಗಿರುವ ಸಣ್ಣಪುಟ್ಟ ರಾಷ್ಟ್ರಗಳು.....

**ಶ್ರೀ ಗೋವಿಂದ ಎಂ.ಕಾರಜೋಳ (ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ನಾರಾಯಣಸ್ವಾಮಿಯವರು ಚೆನ್ನಾಗಿ ಮಾತನಾಡುತ್ತಿದ್ದಾರೆ. Land Reforms Act ಬಗ್ಗೆ ಹೇಳಿದರು. ಉಳುವವನೇ ಭೂಮಿ ಒಡೆಯ ಎಂದು ಶ್ರೀಮತಿ ಇಂದಿರಾಗಾಂಧಿಯವರು ತಂದರು ಎಂದು ಹೇಳಿದರು. ಶ್ರೀಮತಿ ಇಂದಿರಾಗಾಂಧಿಯವರು ಇಡೀ ದೇಶಕ್ಕೆ ಪ್ರಧಾನ ಮಂತ್ರಿಯಾಗಿದ್ದರು. ಎಲ್ಲಾ ರಾಜ್ಯಗಳಲ್ಲೂ Land Reforms Act ಜಾರಿಯಾಗಿದೆಯೇ? ಇಲ್ಲಿ ಮಾನ್ಯ ದೇವರಾಜ ಅರಸು ರವರ ಇಚ್ಛೆಯಿಂದ ಈ ರಾಜ್ಯದಲ್ಲಿ Land Reforms Act ಸಮರ್ಪಕವಾಗಿ ಜಾರಿಯಾಯಿತು. ಆದರೆ, ಉಳಿದ ರಾಜ್ಯಗಳಲ್ಲಿ ಏಕೆ ಆಗಲಿಲ್ಲ ಎಂಬುದು ಪ್ರಶ್ನೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಇಡೀ ಭಾರತದಲ್ಲಿ ತುರ್ತು ಪರಿಸ್ಥಿತಿ ಬಂತು ಎಂದು ಎಲ್ಲರೂ ಮಾತನಾಡುತ್ತಾರೆ. ತುರ್ತು ಪರಿಸ್ಥಿತಿಯಲ್ಲೂ ಕೂಡ ಕರ್ನಾಟಕ ರಾಜ್ಯದಲ್ಲಿ ಮಾನ್ಯ ದೇವರಾಜ ಅರಸು ರವರ ಆಡಳಿತದಲ್ಲಿ ರಾಜ್ಯದ ಜನತೆಯ ಪರವಾಗಿ ಕೆಲಸ ಆಗಿರುವುದನ್ನು ನಾವೆಲ್ಲಾ ಒಪ್ಪುತ್ತೇವೆಂದು ಭಾವಿಸುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ದೇವರಾಜ ಅರಸು ರವರು ಮಾಡಿರುವಂತಹ ಒಳ್ಳೆಯ ಕೆಲಸಗಳನ್ನು ನಾವು ಇವತ್ತಿಗೂ ಮೆಚ್ಚಬೇಕಾಗುತ್ತದೆ, ಅಭಿನಂದಿಸಬೇಕಾಗುತ್ತದೆ. Land Reforms Act ಜಾರಿಗೆ ತಂದರು. ಅಷ್ಟಲ್ಲದೇ ಸಾಮಾಜಿಕ ನ್ಯಾಯ ಕೊಡುವುದಕ್ಕೆ ಒತ್ತು ಕೊಟ್ಟಿರುವುದು ಮಾನ್ಯ ದೇವರಾಜ ಅರಸರು ಎನ್ನುವುದನ್ನು ಮುಕ್ತ ಮನಸ್ಸಿನಿಂದ ಹೇಳಬೇಕಾಗುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಶ್ರೀಮತಿ ಇಂದಿರಾಗಾಂಧಿಯವರು ತಂದಿರುವಂಥ ಕಾನೂನನ್ನು ಅನುಷ್ಠಾನಕ್ಕೆ ತರುವುದಕ್ಕೆ ಮಾನ್ಯ ದೇವರಾಜ ಅರಸು ರವರು ಕರ್ನಾಟಕದಲ್ಲಿ ಯಾವ ರೀತಿ ಸಹಕಾರ ಕೊಟ್ಟರು ಎಂದರೆ ಇವತ್ತಿಗೂ ಅವರ ಫೋಟೋವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಟ್ಟುಕೊಂಡು ಪೂಜೆ ಮಾಡಬೇಕಾಗುತ್ತದೆ. ಅವರು ಮಾಡಿರುವಂತಹ ಕೆಲಸವನ್ನು ಪಕ್ಷಾತೀತವಾಗಿ ಅಭಿನಂದಿಸಬೇಕಾಗುತ್ತದೆ. ಅವರು ಅಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ನಾವು ಅಸ್ಪೃಶ್ಯತೆ ಬಗ್ಗೆ, ಸಮಾನತೆ ಬಗ್ಗೆ ಮಾತನಾಡುತ್ತೇವೆ. ಈ ರಾಷ್ಟ್ರದಲ್ಲಿ ಎಲ್ಲರಿಗೂ ಸಮಾನತೆ ಇರಬೇಕೆಂದು ಮಾತನಾಡುತ್ತೇವೆ. ಇದುವರೆಗೂ ನಮ್ಮ ಹಿರಿಯ ಸದಸ್ಯರು ಮಾತನಾಡಿದರು. ಉದಾಹರಣೆಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬಗ್ಗೆ ಒಂದು ವಾರದ ಹಿಂದೆ ಪ್ರಜಾವಾಣಿ ಪತ್ರಿಕೆಯವರು ಬರೆಯುತ್ತಾರೆ. ಮಾನ್ಯ ಸಚಿವರು ಮತ್ತು ಮಾನ್ಯ ಸಭಾನಾಯಕರು ಗಮನವಿಟ್ಟು ಕೇಳಬೇಕು. ಸಾಮೂಹಿಕ ವಿವಾಹದ ಬಗ್ಗೆ ಅವರೆಲ್ಲರೂ ನಮಗೆ ಪತ್ರವನ್ನು ಬರೆದಿದ್ದಾರೆ. ಇದರ ಬಗ್ಗೆ ಸೂಚನೆ ಕೊಡಬೇಕೆಂದು ಬರೆದಿದ್ದಾರೆ. ಯಾದಗಿರಿ ಜಿಲ್ಲೆಯಲ್ಲಿ ಸಾಮೂಹಿಕ ವಿವಾಹ ಆಗುತ್ತದೆ. ಎಲ್ಲಾ ಜಾತಿ ಜನಾಂಗದವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೆಣ್ಣು-ಗಂಡಿಗೆ ಒಂದು ಸಮುದಾಯ ಭವನದಲ್ಲಿ ತಾಳಿ ಕಟ್ಟಿಸುತ್ತಾರೆ. ಸ್ವಲ್ಪ ಮೇಲ್ವರ್ಗದ ಜನ ಅದೇ ಸಾಮೂಹಿಕ ವಿವಾಹದಲ್ಲಿ ದೇವಸ್ಥಾನದ ಒಳಗಡೆ ಕರೆದುಕೊಂಡು ಹೋಗಿ ತಾಳಿ ಕಟ್ಟಿಸುತ್ತಾರೆ. ಎಲ್ಲರಿಗೂ ಸಾಮೂಹಿಕ ವಿವಾಹದಲ್ಲಿ ಒಂದು ಕಡೆ ಭೋಜನದ ವ್ಯವಸ್ಥೆ ಮಾಡಿರುತ್ತಾರೆ. ಯಾರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಮದುವೆಯಾದರು ಅವರ ಸಂಬಂಧಿಕರೆಲ್ಲರೂ ಹೋಗಿ ಸಮುದಾಯ ಭವನದಲ್ಲಿ ಊಟ ಮಾಡುತ್ತಾರೆ. ಮೇಲ್ವರ್ಗದವರು ಬೇರೆ ಕಡೆ ಹೋಗಿ ಊಟ ಮಾಡುತ್ತಾರೆ. ಯಾರು ಈ ರೀತಿ ಮಾಡಿದ್ದಾರೆ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಅಸ್ಪೃಶ್ಯತೆ ಎಲ್ಲಿದೆ, ಸಮಾನತೆ ಎಲ್ಲಿದೆ? ಸಂವಿಧಾನ ಬಂದು 70 ವರ್ಷಗಳಾಗಿವೆ. ಎಲ್ಲರಿಗೂ ಸಮಾನತೆ ಸಿಕ್ಕಿದೆ ಎಂದು ನಾವು ಮಾತನಾಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ದೇವಸ್ಥಾನದ ಪುಣ್ಯ ಕ್ಷೇತ್ರಗಳ ಮೂಲಕ ಸಾಮೂಹಿಕ ಮದುವೆ ಯಾವುದೇ ಜಾತಿ, ವರ್ಗಗಳನ್ನು ಗಮನದಲ್ಲಿಟ್ಟುಕೊಳ್ಳದೇ ಸರ್ವರು ಸಮಾನರು ಎನ್ನುವ ರೀತಿಯಲ್ಲಿ ನಮ್ಮ ದೇವಸ್ಥಾನಗಳ ಮೂಲಕ ಮಾಡುತ್ತೇವೆ. ನೀವು ಬನ್ನಿ ಎಂದು ನಾನು ಹೇಳಿದ್ದೆ. ಅವರು ಕೂಡ ಶ್ರೀಮಂತರ ಮದುವೆಗೆ ಹೋಗುವ ಬದಲು ನಮ್ಮ ದೇವಸ್ಥಾನದ ಮದುವೆಗೆ ಬನ್ನಿ ಎಂದು ನಾನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, 'ಇನ್ನೂ ಇದೆ ಅಸ್ಪೃಶ್ಯತೆ' ಎಂಬ ಶೀರ್ಷಿಕೆ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಆ ಜಿಲ್ಲೆಯಲ್ಲಿ ಹಳ್ಳಿಯವರು ಹೇಳುತ್ತಾರೆ, ಇವತ್ತಿಗೂ ಕೂಡ ನಲ್ಲಿಯಲ್ಲಿ ನೀರು ಹಿಡಿಯುವುದಕ್ಕೆ ಹೋಗುವುದಕ್ಕಾಗುತ್ತಿಲ್ಲ. ಬಾವಿಯಲ್ಲಿ ನೀರು ಸೇದುವ ಹಾಗಿಲ್ಲ. ದೇವಸ್ಥಾನದ ಒಳಗಡೆ ಹೋಗುವ ಹಾಗಿಲ್ಲ. ರಸ್ತೆ ಬದಿಯಲ್ಲಿ ಟೀ ಅಂಗಡಿಯಲ್ಲಿ ಟೀ ಕುಡಿಯುವುದಕ್ಕೆ ಹೋಗುವ ಹಾಗಿಲ್ಲ. ಅವನೇ ಸ್ವಂತ ಲೋಟ ತೆಗೆದುಕೊಂಡು ಹೋಗಬೇಕು. ಅದರಲ್ಲಿ ಟೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುರಿಯುತ್ತಾನೆ, ಕುಡಿಯಬೇಕು, ಲೋಟ ತೊಳೆದು ಅವನ ಪಾಡಿಗೆ ವಾಪಸ್ ಬರಬೇಕು.

(ಮುಂದು)

**(520) 18.03.2020 12.50 ಎಸ್‌ವಿ-ಜಿಆರ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):-**

ಅಂತಹ ಪರಿಸ್ಥಿತಿ ಇವತ್ತೂ ಇದೆ ಎಂದು ಹೇಳಿ ಒಂದು ವಾರದ ಹಿಂದೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದು ನಮ್ಮಲ್ಲಿರುವ ಪರಿಸ್ಥಿತಿ.

ಇನ್ನು ನಾವು ಮೀಸಲಾತಿಯ ಬಗ್ಗೆ ಮಾತನಾಡುತ್ತೇವೆ. ಮಾನ್ಯ ಆಯನೂರು ಮಂಜುನಾಥ್ ಅವರು ಒಂದು ಮಾತನ್ನು ಹೇಳಿದರು. ಯಾರು ಮೀಸಲಾತಿಯಡಿಯಲ್ಲಿ ಸೌಲಭ್ಯವನ್ನು ಪಡೆದುಕೊಂಡು ಉನ್ನತ ಸ್ಥಾನಗಳಿಗೆ ಏರಿದ್ದಾರೆಯೋ ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಅವರು ಐ.ಎ.ಎಸ್., ಅಧಿಕಾರಿ ಇರಬಹುದು, ಎಂ.ಪಿ., ಇರಬಹುದು, ಎಂ.ಎಲ್.ಎ., ಇರಬಹುದು ಅಥವಾ ಮಂತ್ರಿ ಆಗಿರಬಹುದು. ಅವರ ಜಾತಿಯ ಒಬ್ಬ ಬಡವ ಅವರ ಮನೆಗೆ ಬಂದರೆ ಅವರು ಒಳಗೆ ಕರೆದು ಕೂರಿಸುತ್ತಾರೆಯೇ? ಅವನಿಗೆ ಕಾಫಿ ಅಥವಾ ಟೀ ಅನ್ನು ನೀಡುತ್ತಾರೆಯೇ? ಮೊದಲನೆಯ ಪಂಕ್ತಿ, ಎರಡನೆಯ ಪಂಕ್ತಿ ಮತ್ತು ಮೂರನೆಯ ಪಂಕ್ತಿ ಎನ್ನುವ ಮಾತನ್ನು ಮಾನ್ಯ ಆಯನೂರು ಮಂಜುನಾಥ್ ಅವರು ಹೇಳಿದರು. ಇದು ಸತ್ಯ. ಮೊದಲನೆಯ ಪಂಕ್ತಿಯಲ್ಲಿರುವವರು ಯಾರು ಮೀಸಲಾತಿಯ ಸೌಲಭ್ಯವನ್ನು ಪಡೆದುಕೊಂಡಿದ್ದಾರೆಯೋ ಅವರ ಕುಟುಂಬಸ್ಥರಿಂದ ಬರಬೇಕು. ಸಮಾಜದ ಕಟ್ಟಕಡೆಯ ಧ್ವನಿಯಾಗಿರುವವರ ಕುರಿತು ನಾವು ಯಾರೂ ಮಾತನಾಡುತ್ತಿಲ್ಲ. ಮೀಸಲಾತಿಯನ್ನು ಕೊಡಬೇಕು. ಅವರು ಮೇಲೆ ಬರಬೇಕಲ್ಲವೆ? ನಮ್ಮ ಜೊತೆಯಲ್ಲಿ ಅವರನ್ನೂ ಮೇಲೆ ಕರೆದುಕೊಂಡು ಹೋಗಬೇಕಲ್ಲವೆ? ಇದು ಏಕೆ ಇನ್ನೂ ಆಗುತ್ತಿಲ್ಲ?

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):-** ಮಾನ್ಯ ನಾರಾಯಣಸ್ವಾಮಿಯವರೇ, ಅದಕ್ಕೆ ಏನು ಮಾಡಬೇಕು ಎಂದು ನೀವು ಸಲಹೆಯನ್ನು ಕೊಡಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದಕ್ಕೆ ನಮ್ಮಲ್ಲಿ ಉದಾರವಾದ ಮನಸ್ಸಿರಬೇಕು. ರಾಜಕಾರಣಿಯಾಗಿರಲಿ, ಅಧಿಕಾರಿಯಾಗಿರಲಿ ಯಾರೇ ಆಗಿದ್ದರೂ ಕೂಡ ಸರ್ಕಾರ ಕೊಟ್ಟಿರುವ ಮೀಸಲಾತಿಯು ಸಮಾಜದ ಕಟ್ಟಕಡೆಯ ಮನುಷ್ಯನಿಗೆ ಸಿಗಬೇಕು ಎನ್ನುವಂತಹ ದೂರಾಲೋಚನೆ ನಮಗೆ ಬಾರದವರೆಗೆ ಇದಕ್ಕೆ ನ್ಯಾಯ ಸಿಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಕೊನೆಯದಾಗಿ ಮಾಧ್ಯಮದ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಎಲ್ಲರನ್ನೂ ಕೂಡ ದೂಷಣೆ ಮಾಡುವುದಿಲ್ಲ. ಒಳ್ಳೆಯವರು ಕೂಡ ಇದ್ದಾರೆ. ಮಾಧ್ಯಮಗಳು ಯಾವ ಮಟ್ಟಕ್ಕೆ ಹೋಗಿದೆಯೆಂದರೆ ಟಿ.ವಿ.ಚಾನೆಲ್‌ಗಳು ಭಯದ ವಾತಾವರಣವನ್ನು ನಿರ್ಮಾಣ ಮಾಡಿ ಟಿ.ಆರ್.ಪಿ., ರೇಟಿಂಗ್ ಅನ್ನು ಹೆಚ್ಚು ಮಾಡಿಕೊಳ್ಳಲಿಕ್ಕೆ ಹೊರಟಿದ್ದಾರೆ. ಒಂದು ಉದಾಹರಣೆಯನ್ನು ನಿಮಗೆ ಹೇಳುತ್ತೇನೆ. ನೋಟು ಅಮಾನ್ಯೀಕರಣವಾಗಿ ಹೊಸ 2000 ರೂಪಾಯಿಯ ನೋಟು ಚಲಾವಣೆಗೆ ಬಂದಾಗ ಒಂದು ಟಿ.ವಿ.ಚಾನೆಲ್‌ನಲ್ಲಿ ಹೇಳುತ್ತಾರೆ. ಆ 2000 ರೂಪಾಯಿ ನೋಟಿನಲ್ಲಿ ಒಂದು ಚಿಪ್ ಇದೆ. ಈ ನೋಟನ್ನು ಕಾಳಸಂತೆಯಲ್ಲಿ ಯಾರಾದರೂ ಕಪ್ಪುಹಣ ಶೇಖರಿಸಿದ್ದರೂ 100 ಅಡಿ ಆಳದಲ್ಲಿಟ್ಟರೂ ಕೂಡ ಉಪಗ್ರಹದ ಮೂಲಕ ಕಂಡು ಹಿಡಿಯಬಹುದು. ಸುಮಾರು ನಾಲ್ಕೈದು ವರ್ಷಗಳ ಹಿಂದೆ ಪ್ರಳಯವಾಗಿ ಪ್ರಪಂಚ ಮುಳುಗಿ ಹೋಗುತ್ತದೆ, ಬೆಂಗಳೂರು ಭೂಪಟದಲ್ಲಿ ಇರುವುದೇ ಇಲ್ಲ ಎಂದು ಹೇಳಿ ಬೆಳಿಗ್ಗೆಯಿಂದ ಸಂಜೆಯ ತನಕ ತೋರಿಸಿದರು. ಬೆಳಗಾಗಿ ಟಿ.ವಿ., ಚಾನೆಲ್ ಅನ್ನು ಆನ್ ಮಾಡಿ ನೋಡಿದಾಗ ಯಾವ ಪ್ರಳಯವೂ ಆಗಿರಲಿಲ್ಲ. ಬೆಳಿಗ್ಗೆ ಹೊತ್ತು ಟಿ.ವಿ.ಚಾನೆಲ್‌ಗಳಲ್ಲಿ ಜ್ಯೋತಿಷಿಗಳು ಬಂದು ಕುಳಿತಿರುತ್ತಾರೆ. ಹೆಣ್ಣುಮಕ್ಕಳು ಕಷ್ಟಗಳನ್ನು ಹೇಳಿಕೊಂಡರೆ ನಿಮ್ಮ ಕಷ್ಟಕ್ಕೆ ಇದು ಪರಿಹಾರ, ಇಂತಹ ದೇವಸ್ಥಾನಕ್ಕೆ ಹೋಗಿ ಬನ್ನಿ ಎಂದು ಹೇಳುತ್ತಾರೆ. ಅಂತಹ ದೇವರಿಗೆ ಹರಕೆ ಕಟ್ಟಿಕೊಳ್ಳಿ, ನಿಮ್ಮ ಕಷ್ಟ ಪರಿಹಾರವಾಗುತ್ತದೆ ಎಂದು ಹೇಳುತ್ತಾರೆ. ಇಂತಹವರ ಕಾಲು ತೊಳೆದು ತೀರ್ಥವನ್ನು ಕುಡಿದು, ಅವರ ಕಾಲಿಗೆ ನಮಸ್ಕಾರ ಹಾಕಿದರೆ ಎಲ್ಲಾ ಕಷ್ಟಗಳೂ ಮಾಯವಾಗುತ್ತದೆಯೇ? ಇವರಿಗೆ ಕಡಿವಾಣ ಹಾಕುವವರು ಯಾರು? ಇಂದು ನಾವು ಎಲ್ಲಿಗೆ ಹೋಗಿ ಮುಟ್ಟುತ್ತಿದ್ದೇವೆ? ಕೊರೊನಾ ವೈರಸ್ ಬಂದಿದ್ದು, ಇದರ ಬಗ್ಗೆ ಟಿ.ವಿ.ಯಲ್ಲಿ ತೋರಿಸಿ ಎಂದರೆ ತೋರಿಸುವುದಿಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅದೇ ಭಾಷಣವನ್ನು ನಾನು ಮಾಡಿದರೆ ಅದರ ಸ್ವರೂಪವೇ ಬೇರೆಯಾಗುತ್ತದೆ.

**(ಈ ಹಂತದಲ್ಲಿ ಸದನವು ನಗೆಗಡಲಿನಲ್ಲಿ ತೇಲಿತು.)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮ ಸಂವಿಧಾನದಲ್ಲಿ ಕಾನೂನಿನ ಪ್ರಕಾರ ಇದನ್ನು ಪ್ರಶ್ನೆ ಮಾಡಲು ಆಗುವುದಿಲ್ಲವೇ? ಮಾಧ್ಯಮದವರು ದಯಮಾಡಿ ಒಳ್ಳೆಯ ವಿಷಯಗಳನ್ನು ತೋರಿಸಬೇಕು. ಅವರ ಚಾನೆಲ್ ಟಿ.ಆರ್.ಪಿ., ರೇಟ್ ಅನ್ನು ಹೆಚ್ಚಿಸಿಕೊಳ್ಳಲು ಇಂತಹುದನ್ನು ತೋರಿಸಲು ಹೋಗಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ:ವೈ.ಎ.ನಾರಾಯಣಸ್ವಾಮಿ:–** ಮಾನ್ಯ ನಾರಾಯಣಸ್ವಾಮಿಯವರೇ, ಮಾನ್ಯ ಶರವಣ ಅವರು ಯಾವಾಗಲೂ ಚಾನೆಲ್‌ನಲ್ಲಿ ಬರುತ್ತಿರುತ್ತಾರೆ. ದಿನಕ್ಕೆ ಹತ್ತು ಸಲ ಬಂಗಾರ ಕೊಂಡುಕೊಳ್ಳಿ ಎಂದು ಜಾಹೀರಾತು ಹಾಕಿಸುತ್ತಾರೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಡಾ:ವೈ.ಎ.ನಾರಾಯಣಸ್ವಾಮಿಯವರಿಗೆ ಏಕೆ ಅಷ್ಟು ಹೊಟ್ಟೆ ಉರಿ? ಅದು ನನ್ನ ಕುಲಕಸುಬು. ನಾನು ಹೇಳಿಕೊಳ್ಳುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಶರವಣ ಅವರು ಎದ್ದು ನಿಂತದ್ದಕ್ಕೆ ನನಗೆ ಒಂದು 'ಅಕ್ಷಯ ತೃತೀಯ' ವಿಷಯ ಜ್ಞಾಪಕ ಬಂದಿತು.

**(ಈ ಹಂತದಲ್ಲಿ ಸದನವು ಮತ್ತೊಮ್ಮೆ ನಗೆಗಡಲಿನಲ್ಲಿ ತೇಲಿತು.)**

ಎಷ್ಟು ದಿನಗಳಿಂದ ಜನರಿಗೆ ಅಕ್ಷಯ ತೃತೀಯ ಬಗ್ಗೆ ತಿಳಿದಿತ್ತು? ಅಕ್ಷಯ ತೃತೀಯ ಎಂದರೇನು ಎಂದು ಗೊತ್ತಿರಲಿಲ್ಲ. ಅಕ್ಷಯ ತೃತೀಯ ದಿನದಂದು ಒಂದು ಗುಲಗಂಜಿ ಗಾತ್ರದಷ್ಟು ಬಂಗಾರವನ್ನು ತೆಗೆದುಕೊಂಡರೂ ಬಹಳ ಒಳ್ಳೆಯದಾಗಿ ಮುಂದಿನ ದಿನಗಳಲ್ಲಿ ಕೆ.ಜಿ. ಬಂಗಾರ ಬರುತ್ತದೆ ಎಂದು ಎಲ್ಲಾ ಕಡೆ ಪ್ರಚಾರ ಮಾಡಿ ಅವರ ವ್ಯಾಪಾರ ಹೆಚ್ಚಾಗುವಂತೆ ಮಾಡಿದ್ದಾರೆ. ನಾನು ಇಲ್ಲಿ ಯಾರನ್ನೂ ದೂಷಿಸುತ್ತಿಲ್ಲ. ಮಾಧ್ಯಮಗಳು ಯಾವ ರೀತಿಯಾಗಿ ಜನರ ಮೇಲೆ ಪ್ರಭಾವವನ್ನು ಬೀರುತ್ತಿವೆ ಎಂದು ಹೇಳುತ್ತಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ನಾರಾಯಣಸ್ವಾಮಿಯವರೇ, ಚಿನ್ನದ ಮೇಲೆ ಹಣವನ್ನು ಹೂಡಿಕೆ ಮಾಡಿದರೆ ಸುರಕ್ಷಿತವಾಗಿರುತ್ತದೆ.

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ, ನೀವು ಪ್ರಾರಂಭ ಮಾಡಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾರೆಂದರೆ ಅವರಿಗೂ ಸುಮಾರು ಒಂದು ಗಂಟೆಗಳ ಕಾಲ ಬೇಕು. ಹಾಗಾದರೆ ನನಗೆ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲವೆ? ಅವರು ಮಾತನಾಡುವ ವೇಳೆಗೆ ಮಧ್ಯಾಹ್ನ ಮೂರು ಗಂಟೆಯಾಗುತ್ತದೆ.

**ಸಭಾಪತಿಯವರು:–** ಮಾನ್ಯ ಇಬ್ರಾಹಿಂ ಅವರೇ, ಅವರು ನಿಮಗಾಗಿ 15 ನಿಮಿಷಗಳ ಕಾಲಾವಕಾಶವನ್ನು ಬಿಡುತ್ತಾರೆಯೇ ನೋಡೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅವರು ಬಿಡುವುದು ಬೇರೆ ಪ್ರಶ್ನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದರೂ ಅರ್ಥ ಆಗಿಬಿಡುತ್ತದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ಸ್ಥಾನದಲ್ಲಿರುವುದಕ್ಕಾದರೂ ಅವರು ಒಂದು ಗಂಟೆ ಮಾತನಾಡಬೇಕು. ಹೌದಲ್ಲವೆ? ನಾವು ಈ ಸ್ಥಾನದಲ್ಲಿ ನಿಂತು ಹತ್ತು ನಿಮಿಷ ಮಾತನಾಡಿದರೂ ಪರವಾಗಿಲ್ಲ.

**ಸಭಾಪತಿಯವರು:-** ನಾವು ಈ ಚರ್ಚೆಯನ್ನು ಇಂದು ಮುಗಿಸಲೇಬೇಕು. ಊಟಕ್ಕೆ ಹೋಗುವುದರೊಳಗಾಗಿ ಮುಗಿಸಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಊಟಕ್ಕೆ ಹೋಗುವುದರೊಳಗಾಗಿ ಮುಗಿಸಲು ನನಗಂತೂ ಆಗುವುದಿಲ್ಲ.

**ಸಭಾಪತಿಯವರು:-** ಮುಗಿಸಲೇಬೇಕು. ಬೇರೆ ದಾರಿಯಿಲ್ಲ. ಇನ್ನೂ ಎಷ್ಟು ದಿವಸ ಅವಕಾಶ ಕೊಡುವುದಕ್ಕಾಗುತ್ತದೆ? ಆಗುವುದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಇನ್ನು ಐದು ನಿಮಿಷಗಳಲ್ಲಿ ಮುಗಿಸುತ್ತೇನೆ. ಸಂವಿಧಾನವನ್ನು ಎಷ್ಟು ಕಷ್ಟ ಪಟ್ಟು ರಚನೆ ಮಾಡಿದರು ಎಂದು ನಾವೆಲ್ಲರೂ ಮಾತನಾಡಿದ್ದೇವೆ. ಇಂದಿನ ರಾಜಕಾರಣಿಗಳು ನಾವು ಬಂದಿರುವುದೇ ಸಂವಿಧಾನವನ್ನು ಬದಲಾವಣೆ ಮಾಡುವುದಕ್ಕಾಗಿ ಎಂದು ಹೇಳುತ್ತಾರೆ. ಅವರ ಮೇಲೆ ಕ್ರಮವನ್ನು ಕೈಗೊಳ್ಳುವವರು ಯಾರು? ಅವರನ್ನು ಕೇಳುವವರು ಯಾರು?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಅವರ ಸ್ಥಾನದಲ್ಲಿ ಕುಳಿತುಕೊಂಡು):-** ಹೇಳಿದವರು ಯಾರು ಎಂಬುದನ್ನು ಹೇಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹೇಳಿದವರ ಹೆಸರನ್ನು ಈ ಸದನದಲ್ಲಿ ಹೇಳಬೇಕೆಂದರೆ ಹೇಳಿಬಿಡುತ್ತೇನೆ. ಮಾಜಿ ಕೇಂದ್ರ ಸಚಿವರು ಹಾಗೂ ಹಾಲಿ ಸಂಸದರಾದ ಶ್ರೀ ಅನಂತಕುಮಾರ ಹೆಗಡೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಸೋಮಣ್ಣ:-** ಮಾನ್ಯ ನಾರಾಯಣಸ್ವಾಮಿಯವರೇ, ಮಾನ್ಯ ಹೊರಟ್ಟಿಯವರು ಹೇಳುತ್ತಾರೆಂದು ಅವರ ಮಾತನ್ನು ನೀವು ಕೇಳಬೇಡಿ. ದಯವಿಟ್ಟು ನಿಮ್ಮ ಮಾತನ್ನು ನೀವು ಆಡಿ. ಅವರು ನಿಮ್ಮ ದಾರಿ ತಪ್ಪಿಸುತ್ತಾರೆ. ನೀವು ತಪ್ಪಬೇಡಿ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸೋಮಣ್ಣನವರೇ, ಬಿಜೆಪಿ ಪಕ್ಷದಲ್ಲಿ ಸಂವಿಧಾನವನ್ನು ಬದಲು ಮಾಡಬೇಕೆಂದು ಹೇಳಿದವರಿದ್ದಾರಲ್ಲವೆ? ಅವರ ಹೆಸರು ಹೇಳಿದ್ದರಲ್ಲಿ ತಪ್ಪೇನಿದೆ?

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಉಪಮುಖ್ಯಮಂತ್ರಿಯವರಾದ ಶ್ರೀ ಗೋವಿಂದ ಕಾರಜೋಳ ಅವರು ಏನನ್ನೋ ಹೇಳಲು ಹೊರಟಿದ್ದಾರೆ. ಮಾನ್ಯ ಕಾರಜೋಳ ಅವರೇ, ನೀವು ಏನೋ ಸ್ಪಷ್ಟೀಕರಣವನ್ನು ನೀಡಲು ಹೊರಟಿದ್ದೀರಿ. ದಯವಿಟ್ಟು ಹೇಳಿ. ಏಕೆಂದರೆ ನೀವು ದಲಿತರಿದ್ದೀರಿ. ನಿಮ್ಮ ಬಾಯಿಯಿಂದ ಬರಲಿ. We want to hear you.

**ಶ್ರೀ ಗೋವಿಂದ ಎಂ.ಕಾರಜೋಳ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ...

**ಸಭಾಪತಿಯವರು:-** ಮಾನ್ಯ ಉಪಮುಖ್ಯಮಂತ್ರಿಯವರೇ, ಏಳು ದಿನಗಳಿಂದ ಸಂವಿಧಾನದ ಕುರಿತು ಚರ್ಚೆ ಮಾಡಲಾಗುತ್ತಿದೆ. ಇನ್ನೂ ಎಂಟು, ಒಂಭತ್ತನೇ ದಿನ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅವರು ಯಾರು ಏನೇ ಹೇಳಿದರೂ ತಾವು ಸ್ವಲ್ಪ ಏಳುವುದು ಬೇಡ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷದಲ್ಲಿ ನಾನು ಹೇಳಿ ಮುಗಿಸುತ್ತೇನೆ. ಮಾನ್ಯ ನಾರಾಯಣಸ್ವಾಮಿಯವರೇ, ಒಂದು ನಿಮಿಷ yield ಆಗಿ. ಮಾನ್ಯ ಹೊರಟ್ಟಿಯವರು ಎದ್ದಿದ್ದಾರೆಂದರೆ ನಾನು ಹೇಳಲೇಬೇಕು.

ಮಾನ್ಯ ಸಭಾಪತಿಯವರೇ, ಈ ದೇಶಕ್ಕೆ ಸ್ವಾತಂತ್ರ್ಯ ಬಂದು 73 ವರ್ಷಗಳಾಯಿತು. 73 ವರ್ಷಗಳ ಆಡಳಿತದಲ್ಲಿ ಪಂಡಿತ್ ಜವಾಹರ್‌ಲಾಲ್ ನೆಹರು ಅವರನ್ನು ಹಿಡಿದು ಮಾನ್ಯ ನರೇಂದ್ರ ಮೋದಿಯವರವರೆಗೆ ಅನೇಕ ಜನರು ಪ್ರಧಾನಮಂತ್ರಿಗಳಾಗಿದ್ದಾರೆ. ಈ ದೇಶಕ್ಕೆ ಧರ್ಮಗ್ರಂಥ ಎಂದರೆ ಅದು ನಮ್ಮ ಸಂವಿಧಾನ ಎಂದು ಹೇಳಿದ ಏಕೈಕ ಪ್ರಧಾನಮಂತ್ರಿ ಎಂದರೆ ಅದು ಮಾನ್ಯ ನರೇಂದ್ರ ಮೋದಿಯವರು. ಬೇರೆ ಯಾರೂ ಹೇಳಿರಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು.)**

ಒಂದು ನಿಮಿಷ ದಯವಿಟ್ಟು ಕೇಳಿ. ನಾನು ಹೇಳಿದ ಮೇಲೆ ನೀವು ಮಾತನಾಡಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಪ್ಪು ಸಂದೇಶ ಹೋಗಬಾರದು. ಮೊದಲನೆಯ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರು ಇದು ಒಂದು ಗ್ರಂಥ ಎಂದು ಹೇಳಿ ಸ್ವೀಕಾರ ಮಾಡಿದ್ದಾರೆ.

**(ಗೊಂದಲ)**

**ಡಾ:ವೈ.ಎ.ನಾರಾಯಣಸ್ವಾಮಿ:–** ನವೆಂಬರ್ 25 ಅನ್ನು ಸಂವಿಧಾನ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ.

**(ಗೊಂದಲ)**

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ನಾರಾಯಣಸ್ವಾಮಿಯವರೇ, ದಯಮಾಡಿ ಕುಳಿತುಕೊಳ್ಳಿ, ನನ್ನ ಮಾತು ಮುಗಿದ ನಂತರ ಅವಕಾಶ ನಿಮ್ಮದೇ ಇದೆ. ಡಾ:ಬಾಬಾಸಾಹೇಬ್ ಅಂಬೇಡ್ಕರ್ ಅವರು ಬರೆದಂತಹ ಸಂವಿಧಾನ ಈ ದೇಶದ ಧರ್ಮಗ್ರಂಥ ಎಂದು ಹೇಳಿದ ಏಕೈಕ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು. ಅದರ ನಂತರ ಅವರು ಹೇಳಿದ್ದೇನೆಂದರೆ ಈ ದೇಶದ ಸಂವಿಧಾನದ ಆಶಯಗಳಿಗೆ ಅನುಗುಣವಾಗಿಯೇ ನಾನು ಪ್ರಧಾನಮಂತ್ರಿಯಾಗಿದ್ದೇನೆ. ಈ ದೇಶಕ್ಕೆ ಇಂತಹ ಸಂವಿಧಾನವನ್ನು ಕೊಟ್ಟಂತಹ ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಅಭಿನಂದಿಸುತ್ತೇನೆ ಎಂದು ಹೇಳಿದರು.

**(...ಮುಂದು)**

(521) 18–03–2020 (1–00) ಕೆಜಿ ಎಂಡಿ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ.ಕಾರಜೋಳ (ಮುಂದು):–**

ಇದು ಸಂಸತ್ತಿನಲ್ಲಿ ದಾಖಲೆಯಾಗಿದೆ. ನಾನು ಇದನ್ನು ಹಾಗೆಯೇ ಹೇಳುವುದಲ್ಲ. ನಮ್ಮ ಎಂ.ಪಿ.,ಯವರ ಬಗ್ಗೆ ಯಾರೋ ಒಬ್ಬರು ಮಾತನಾಡಿದ್ದಾರೆ. ಅವರು ಈ ಮನೆಯ ಸದಸ್ಯರು ಅಲ್ಲ. ಹಾಗಾಗಿ, ಅವರ ಹೆಸರನ್ನು ಇಲ್ಲಿ ತೆಗೆದುಕೊಳ್ಳುವುದು ಬೇಡ. ಅವರು ಹೇಳಿದ್ದನ್ನು ತಪ್ಪಾಗಿ ಅರ್ಥೈಸಿದ್ದಾರೆ. ನಾನು ಅವರ ಬಳಿ ಮಾತನಾಡಿದ್ದೇನೆ. ಅವರು ವಿದ್ಯಾರ್ಥಿಗಳ ಜೊತೆಗೆ ಸಂವಾದದಲ್ಲಿ ಇದ್ದಾಗ, ಅದರಲ್ಲಿ ಒಬ್ಬ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹುಡುಗಿ ಇವರಿಗೆ ಸರ್, ನೀವು ಎಲ್ಲಾ ಸೌಲಭ್ಯಗಳನ್ನು ಎಸ್.ಸಿ ಮತ್ತು ಎಸ್.ಟಿ ಯವರಿಗೆ ಕೊಡುತ್ತೀರಿ, ನಮಗೆ ಕೊಡುವುದಿಲ್ಲವೇ ಎಂದು ಕೇಳಿದ್ದಾರೆ. ಅದಕ್ಕೆ ಅವರು ಸಮರ್ಪಕವಾಗಿ ಆ ಶಬ್ಧವನ್ನು ಬಳಸಲಾರದ ತಪ್ಪಿನಿಂದ ಇಂತಹ ಒಂದು ಅಪರಾಧ ಅವರ ಮೇಲೆ ಬಂತು. ನಮ್ಮ ಸಂವಿಧಾನವನ್ನು ಯಾರೋ ಒಬ್ಬರು ಬದಲು ಮಾಡುವುದಕ್ಕೆ ಆಗುವುದಿಲ್ಲ. ಯಾರೋ ಒಬ್ಬರು ರಸ್ತೆಯ ಮೇಲೆ ಮಾತನಾಡಿದರೆ, ಸಂವಿಧಾನವನ್ನು ಬದಲು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಇದನ್ನು ತಪ್ಪಾಗಿ ಅರ್ಥೈಸುವುದು ಬೇಡ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅದರ ಬಗ್ಗೆ ಸ್ಪಷ್ಟೀಕರಣ ಕೊಟ್ಟಿಲ್ಲ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಪ್ಪಾಯಿತು ಎಂದು ಕ್ಷಮೆ ಕೇಳಬಹುದಾಗಿತ್ತು ಅಲ್ಲವೇ;

**(ಗೊಂದಲ)**

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ತಾವು ಒಪ್ಪಿದರೆ ಅದನ್ನು ಪೂರ್ಣ ಮಾಡುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಎಲ್ಲಾ ಸದಸ್ಯರು ಕುಳಿತುಕೊಳ್ಳಿ. ಎಂ.ನಾರಾಯಣಸ್ವಾಮಿಯವರೇ, ತಾವು ಮಾತನಾಡಿ. ಈ ಸದನದಲ್ಲಿ ಇಲ್ಲದವರ ಹೆಸರನ್ನು ಹೇಳುವುದು ಸೂಕ್ತವಲ್ಲ.

**ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಸಂವಿಧಾನವನ್ನು 130 ಕೋಟಿ ಜನರು ಒಪ್ಪಿಕೊಳ್ಳಬೇಕಾಗುತ್ತದೆ. Admitted fact need not proved. ನಮ್ಮ ಸಂವಿಧಾನವನ್ನು ಪ್ರತಿಯೊಬ್ಬರು ಒಪ್ಪಬೇಕು. ಇದರಲ್ಲಿ ದೊಡ್ಡಸ್ತಿಕೆ ಏನಿದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಮಾನ್ಯ ಸಚಿವರು ಅವರು ಬಾಯಿ ತಪ್ಪಿನಿಂದ ಹೇಳಿದ್ದಾರೆಂದು ಹೇಳಿದರು. ಅದಾದ ಮೇಲೆ ಈ ರಾಷ್ಟ್ರಕ್ಕೆ ಸ್ವಾತಂತ್ರ್ಯ ತಂದುಕೊಟ್ಟಂತಹ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಬಗ್ಗೆ ಮಾತನಾಡಿ, ಅವರು ಕಳಪೆ ಚಳುವಳಿಗಾರರು, ಸ್ವಾತಂತ್ರ್ಯ ಹೋರಾಟಗಾರರು ಅಲ್ಲವೆಂದು ಹೇಳಿದರು. ಆ ರೀತಿ ಮಾತನಾಡಿದ್ದಕ್ಕೆ ಅವರಿಗೆ ಅವರ ಪಕ್ಷ ನೋಟಿಸ್ ಕೊಟ್ಟಿದೆ. ಅವರು ಒಂದು ತಪ್ಪನ್ನು ಮಾಡಿದ್ದಾರೆಯೇ? ಎಷ್ಟು ತಪ್ಪುಗಳನ್ನು ಮಾಡಿದ್ದಾರೆಂದು ಅವರೇ ಹೇಳಿಲಿ.

ಮಾನ್ಯ ಸಭಾಪತಿಯವರೇ, ಡಾ॥ ವೈ.ಎ.ನಾರಾಯಣಸ್ವಾಮಿಯವರಿಗೆ ದಯವಿಟ್ಟು ಕುಳಿತುಕೊಳ್ಳುವಂತೆ ಹೇಳಿ. ನಾನು ಇರುವಂತಹ ಸತ್ಯವನ್ನು ಹೇಳುತ್ತಿದ್ದೇನೆ.

**(ಗೊಂದಲ)**

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಈ ಸದನದಲ್ಲಿ ಇಲ್ಲ. ಹಾಗಾಗಿ, ಇಲ್ಲಿ ಏನೇನೊ ಹೇಳುವುದು ಬೇಡ.

**(ಗೊಂದಲ)**

**ಸಭಾಪತಿಯವರು:-ಮಾನ್ಯ ಸದಸ್ಯರೇ, ಈಗ ಅವರು ಯಾರ ಹೆಸರನ್ನು ಹೇಳಿಲ್ಲ. ಹೆಸರನ್ನು ಹೇಳಿದರೆ ಅದು ದಾಖಲೆಗೆ ಹೋಗುವುದಿಲ್ಲ.**

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಸಂವಿಧಾನವನ್ನು ಗ್ರಂಥವೆಂದು ಹೇಳಿದ್ದಾರೆಂದು ಹೇಳಿದರು. ನಾನು ಆ ಗ್ರಂಥದಿಂದ ಪ್ರಧಾನ ಮಂತ್ರಿಯಾಗಿದ್ದೇನೆಂದು ಹೇಳಿದರು. ನಮಗೆ ಸಂತೋಷ. ನಾವು ಅದನ್ನು ಒಪ್ಪುತ್ತೇವೆ. ಆದರೆ, ಈ ರಾಷ್ಟ್ರದ ಮೊಟ್ಟ ಮೊದಲ ಪ್ರಧಾನ ಮಂತ್ರಿ ಶ್ರೀ ಪಂಡಿತ್ ಜವಹಾರ್‌ಲಾಲ್ ನೆಹರು ರವರು ಸಂವಿಧಾನವನ್ನು ಗ್ರಂಥವೆಂದು ಸ್ವೀಕರಿಸಿದರು. ಎಲ್ಲರೂ ಸಹ ಸಂವಿಧಾನದಡಿಯಲ್ಲಿಯೇ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಧಾನ ಮಂತ್ರಿಗಳಾಗಿದ್ದಾರೆ. ಸನ್ಮಾನ್ಯ ಶ್ರೀ ಪಂಡಿತ್ ಜವಹಾರ್‌ಲಾಲ್ ನೆಹರುರವರು ಬೆಂಗಳೂರು ನಗರಕ್ಕೆ ಒಂಭತ್ತು ನವರತ್ನಗಳನ್ನು ಕೊಡುಗೆಯಾಗಿ ಕೊಟ್ಟರು.

**ಸಭಾಪತಿಯವರು:–** ನಾರಾಯಣಸ್ವಾಮಿಯವರೇ, ಸಾಕು ಬಿಡಿ. ವಿರೋಧ ಪಕ್ಷದ ನಾಯಕರೇ ತಾವು ಮಾತನಾಡಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇನ್ನು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಸನ್ಮಾನ್ಯ ಶ್ರೀ ಪಂಡಿತ್ ಜವಹಾರ್‌ಲಾಲ್ ನೆಹರುರವರು HAL (*Hindustan Aeronautics Limited*), BEL (Bharat Electronics Limited), BEML (Bharat Earth Movers Limited), ITI (Indian Telephone Industries Limited), HMT (Hindustan Machine Tools *Limited) etc* ಇಂತಹ ಕಾರ್ಖಾನೆಗಳನ್ನು ಕೊಟ್ಟರು. ಈ ರಾಷ್ಟ್ರದಲ್ಲಿ ಕಾರ್ಖಾನೆ ಬಂದರೆ ಉದ್ಯೋಗವಕಾಶಗಳು ಸಿಗುತ್ತವೆ ಎಂದು ಹೇಳಿ ಕೊಟ್ಟರು. ಆದರೆ, ಈ profit making body ಆಗಿರುವಂತಹ ಈ ಕಾರ್ಖಾನೆಗಳನ್ನು privatize ಮಾಡುವುದಕ್ಕೆ ನೋಡುತ್ತಿದ್ದಾರೆ. ನಾವು ಇದಕ್ಕೆ ಧ್ವನಿ ಎತ್ತಬೇಕೆಲ್ಲವೇ; ಈ ದೇಶವನ್ನು ಉದ್ಧಾರ ಮಾಡಬೇಕೆಂದು ಅವತ್ತು ಸಾವಿರಾರು ಕಾರ್ಖಾನೆಗಳನ್ನು ಮಾಡಿ ಸಾವಿರಾರು ಜನರಿಗೆ ಉದ್ಯೋಗವನ್ನು ಕೊಟ್ಟರು. ಇವತ್ತು ಅಂತಹ ಕಾರ್ಖಾನೆಗಳನ್ನು ಮುಚ್ಚುವುದಕ್ಕೆ ಹೊರಟ್ಟಿದ್ದಾರೆ. 'Temples of India' ಎಂದು ಬೆಂಗಳೂರು ಮಹಾನಗರಕ್ಕೆ 9 ಕಾರ್ಖಾನೆಗಳನ್ನು ಕೊಟ್ಟರು. ಇವತ್ತು ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ. ಸಮಯದ ಅಭಾವ ಇರುವುದರಿಂದ, ನಾನು ಹೆಚ್ಚಿಗೆ ಮಾತನಾಡಲು ಹೋಗದೆ, ನನಗೆ ಸಂವಿಧಾನದ ಮೇಲೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಸಭಾಪತಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸಂವಿಧಾನ ಕುರಿತು ವಿಶೇಷ ಚರ್ಚೆ ಮಾಡಲಿಕ್ಕೆ ತಮ್ಮ ಪ್ರಸ್ತಾವಿಕ ಮಾತುಗಳಿಂದ ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರಿಗೆ 7 ದಿವಸಗಳ ಕಾಲ ಮಾತನಾಡುವಂತಹ ಅವಕಾಶ ಕಲ್ಪಿಸಿಕೊಟ್ಟಂತಹ ತಮಗೆ ನಾನು ವಿಶೇಷವಾದಂತಹ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ತಮಗೆ ಕೋಟಿ, ಕೋಟಿ ನಮನಗಳನ್ನು ಸಲ್ಲಿಸಿದರೂ ಸಹ ಕಡಿಮೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಶತಮಾನದ ಇತಿಹಾಸವನ್ನು ಹೊಂದಿದಂತಹ ಈ ಸದನ.,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಇವತ್ತು ವಿಶೇಷ ಕ್ಯಾಬಿನೇಟ್‌ನ್ನು ಕೊರೊನಾ ವೈರಸ್ ಸಲುವಾಗಿ ಮಧ್ಯಾಹ್ನ 1.30 ಕ್ಕೆ ಕರೆದಿದ್ದಾರೆ. ಹಾಗಾಗಿ, ನಾವು ಕ್ಯಾಬಿನೇಟ್‌ಗೆ ಹೋಗಬೇಕಾಗಿದೆ. ಅದಕ್ಕೆ 1.25ಕ್ಕೆ ನಮ್ಮನ್ನು ಬಿಡಬೇಕೆಂದು ಕೇಳಿಕೊಳ್ಳುತ್ತೇನೆ,

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ಪವಿತ್ರವಾದ ಸದನದಲ್ಲಿ ಬಹಳಷ್ಟು ಮಹತ್ವವಾದ ವಿಷಯಗಳು ಚರ್ಚೆಯಾಗಿವೆ. ನಮ್ಮ ನಾಡಿನ ನೆಲ, ಜಲ, ಸಂಸ್ಕೃತಿ, ನಮ್ಮ ನಾಡಿಗೆ ಸಮಸ್ಯೆ ಬಂದಂತಹ ಸಂದರ್ಭದಲ್ಲಿ ಅನೇಕ ಅತ್ಯಂತ ಮಹತ್ವದ ಪ್ರಾಮುಖ್ಯತೆ ಪಡೆದಂತಹ ವಿಷಯಗಳು ಈ ಪವಿತ್ರವಾದಂತಹ ಚಿಂತಕರ ಚಾವಡಿಯಲ್ಲಿ ಚರ್ಚೆಯಾಗಿದೆ. ಆದರೆ, ತಾವು ಮೇಲ್ಮನೆಯಲ್ಲಿ ಸಂವಿಧಾನದ ಬಗ್ಗೆ ವಿಶೇಷವಾಗಿ ಚರ್ಚೆ ಮಾಡಲು ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಅವಕಾಶ ಕಲ್ಪಿಸಿದ್ದೀರಿ. ಈ ಚರ್ಚೆ ಅತ್ಯಂತ ಬಲಪ್ರದವಾದಂತಹ ಚರ್ಚೆಯಾಗಿದೆ. ಈ ಚರ್ಚೆ ಅತ್ಯಂತ ಉತ್ಕೃಷ್ಟವಾದಂತಹ ಚರ್ಚೆಯಾಗಿದೆ. ಬಹುಶಃ ಈ ಹಿಂದೆ ನಡೆದಂತಹ ಎಲ್ಲಾ ಚರ್ಚೆಗಳಲ್ಲಿಯೂ ಇದು ಬಹಳ ಪ್ರಾಮುಖ್ಯತೆಯನ್ನು ಪಡೆದಂತಹ ಚರ್ಚೆಯಾಗಿದೆ ಎಂದು ನಾನು ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಸಂವಿಧಾನದ ಬಗ್ಗೆ ಚರ್ಚೆ ಮಾಡುವುದು ಬಹಳ ಮಹತ್ವದ್ದು. ಈ ಸದನದ ಸದಸ್ಯನಾಗಿ ನಾನು ಪ್ರತಿಜ್ಞಾವಿಧಿಯನ್ನು ಸ್ವೀಕಾರ ಮಾಡಿದ ನಂತರ ನಮಗೆ ಒಂದು suitcase ಕೊಟ್ಟರು. ಆ suitcase ನಲ್ಲಿ ಡಾ|| ಬಿ.ಆರ್.ಅಂಬೇಡ್ಕರ್‌ರವರು ಬರೆದಂತಹ ಸಂವಿಧಾನದ ಪುಸ್ತಕ ಇತ್ತು. ಅದರ ಜೊತೆಗೆ Rules of Procedure and Conduct of Business book ಇತ್ತು. ನನ್ನ ದೃಷ್ಟಿಯಲ್ಲಿ ಈ ಸದನ ಪ್ರವೇಶ ಮಾಡುವ ಪ್ರತಿಯೊಬ್ಬ ಸದಸ್ಸರು ಸಂವಿಧಾನವನ್ನು ಅರ್ಥಮಾಡಿಕೊಂಡೇ ಈ ಸದನವನ್ನು ಪ್ರವೇಶ ಮಾಡಬೇಕಾಗುತ್ತದೆ. ಏಕೆಂದರೆ, ಸಂವಿಧಾನದ ಶಕ್ತಿಯಲ್ಲಿಯೇ ನಾವು ಈ ಸದನದ ಸದಸ್ಯರಾಗಿದ್ದೇವೆ. Constitution is mother of all laws. ಸಂವಿಧಾನವನ್ನು ಅರ್ಥಮಾಡಿಕೊಂಡರೆ, ನಮ್ಮ ನಾಡು ಅಷ್ಟೇ ಅಲ್ಲ, ಇಡೀ ರಾಷ್ಟ್ರದ ಪ್ರಜಾಪ್ರಭುತ್ವದ ವ್ಯವಸ್ಥೆ, ಜಾತ್ಯತೀತ ವ್ಯವಸ್ಥೆ, ಸಮಾಜವಾದ ವ್ಯವಸ್ಥೆಯನ್ನು ಹಾಗೂ ಪ್ರತಿಯೊಂದನ್ನು ಅರ್ಥಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. It was the need of the hour. ತಾವು ಇವತ್ತು ಬಹಳ ಅವಶ್ಯಕತೆ ಇರುವಂತಹ ಬಹಳ ಮಹತ್ವವಾದಂತಹ ಚರ್ಚೆಗೆ ಅವಕಾಶವನ್ನು ಕಲ್ಪಿಸಿದ್ದೀರಿ. 100 ವರ್ಷಗಳ ಕಾಲ ಬಹಳಷ್ಟು ವಿಷಯಗಳ ಮೇಲೆ ಚರ್ಚೆಯಾಗಿರಬಹುದು, ಆದರೆ, ನಮ್ಮ ಸಂವಿಧಾನದ ಮೇಲಿನ ಚರ್ಚೆ ಏನಿದೆ, ಆ ಎಲ್ಲಾ ಚರ್ಚೆಗಳಿಗಿಂತ ಬಹಳ ಉತ್ಕೃಷ್ಟವಾದಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ ಪ್ರಾಮುಖ್ಯತೆ ಪಡೆದಂತಹ ಚರ್ಚೆ ಇದಾಗಿದೆ. ಇವತ್ತು ಈ ನಾಡಿಗೆ, ಈ ದೇಶಕ್ಕೆ ಅವಶ್ಯ ಇರುವಂತಹ ಚರ್ಚೆಗೆ, ತಾವು ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕೆ ತಮಗೆ ವಿಶೇಷವಾದಂತಹ ಕೃತಜ್ಞತೆ ಮತ್ತು ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಭಾರತ ರತ್ನ ಡಾ॥ ಬಿ.ಆರ್.ಅಂಬೇಡ್ಕರ್‌ರವರು ನಮಗೆ ನೀಡಿರುವಂತಹ ಸಂವಿಧಾನ ನನ್ನ ದೃಷ್ಟಿಯಲ್ಲಿ ಇದು ವಿಶ್ವದಲ್ಲಿಯೇ ಸರ್ವ ಶ್ರೇಷ್ಠವಾದಂತಹ ಲಿಖಿತ ಸಂವಿಧಾನವಾಗಿದೆ. ಈ ಸಂವಿಧಾನದ ಮೊದಲ ಕರಡನ್ನು ದಿನಾಂಕ 21.02.1948 ರಂದು ಭಾರತದ ಜನತೆಗೆ ನೀಡಿದರು. ಆಗ ಭಾರತ ದೇಶದ ಜನರಿಗೆ ಇದರಲ್ಲಿ ಏನಾದರು ತಿದ್ದುಪಡಿಗಳು ಇದ್ದರೆ, ಹೇಳಬೇಕು ಎಂದು ಹೇಳಿದಾಗ 7,635 ತಿದ್ದುಪಡಿಗಳನ್ನು ಈ ದೇಶದ ಅನೇಕ ಜನರು ಅದರಲ್ಲಿ ಭಾಗಿಯಾಗಿ ಅಷ್ಟು ತಿದ್ದುಪಡಿಗಳನ್ನು ಸೂಚಿಸಿದರು. ಅದರಲ್ಲಿ ಯಾವುದು ಸೂಕ್ತ ಇತ್ತು ಆ ತಿದ್ದುಪಡಿಗಳನ್ನು ಸಂವಿಧಾನದಲ್ಲಿ ಅಳವಡಿಸಿ ದಿನಾಂಕ 26-11-1949 ರಂದು ಕರಡು ಸಂವಿಧಾನವನ್ನು ಭಾರತ ರತ್ನ ಡಾ॥ ಬಿ.ಆರ್.ಅಂಬೇಡ್ಕರ್‌ರವರು ಈ ದೇಶಕ್ಕೆ ನೀಡಿದರು. ಅವತ್ತು ಆ ಸಂವಿಧಾನ ಅಂಗೀಕರಿಸ್ಪಟ್ಟಿತ್ತು. ನಾವು ಆ ದಿವಸವನ್ನು ಕಾನೂನು ದಿವಸ ಎಂದು ಹೇಳುತ್ತೇವೆ. 'National Law Day' ಎಂದು ಹೇಳುತ್ತಿದ್ದರು. ರಾಷ್ಟ್ರೀಯ ಕಾನೂನು ದಿನ ಎಂದು ಇಲ್ಲಿಯವರೆಗೆ ಹೇಳುತ್ತಾರೆ.

(ಮುಂದು.,)

(522)18-03-2020(1-10)ಎಂವಿ-ಎಂಡಿ

**(ಉಪ ಸಭಾಪತಿಯವರು)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು...):-**

ಈ ದೇಶದ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಅದಕ್ಕೆ 'ಸಂವಿಧಾನ ದಿನ' ಎಂದು ಪುನರುಚ್ಚಾರ ಮಾಡಿದರು. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು, 'ಅವರು ಒಬ್ಬರೆ, ಇದು ಈ ದೇಶದ ಗ್ರಂಥವೆಂದು ಹೇಳಿದರು' ಎಂದು ಹೇಳಿದ್ದಾರೆ. ಅವರು ಹೇಳಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಸಂವಿಧಾನ ಜನವರಿ 26, 1950ರಂದು ಜಾರಿಗೆ ಬಂತು. ಅಂದು ನಮ್ಮ ಭಾರತ ದೇಶ ಗಣರಾಜ್ಯವಾಗಿ ಪರಿವರ್ತನೆಯಾಗಿದ್ದು, ಅಲ್ಲಿಂದ ಇಲ್ಲಿಯವರೆಗೆ ಯಾರೂ ಇದನ್ನು ಒಂದು ಪವಿತ್ರವಾದಂತಹ ಗ್ರಂಥ ಮತ್ತು ಈ ದೇಶದ ಗ್ರಂಥ ಎಂದು ಹೇಳಿಲ್ಲ ಎನ್ನುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. With due respect to the Deputy Chief Minister of the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

State, ಇದರ ಬಗ್ಗೆ ಅನೇಕರು ವ್ಯಾಖ್ಯಾನ ಮಾಡಿದ್ದಾರೆ. ಈ ಸಂವಿಧಾನದ ಬಗ್ಗೆ ಭಾರತ ದೇಶದ ಎಲ್ಲಾ ಪ್ರಧಾನ ಮಂತ್ರಿಗಳುಸಹ ಇದು ಮಹತ್ವವಾದ ಗ್ರಂಥ, ನಾವು ಇದಕ್ಕೆ ಪ್ರಾಮುಖ್ಯತೆ ಕೊಡಬೇಕು ಎಂದಿದ್ದಾರೆ. ಹಿಂದೂಗಳಿಗೆ 'ಭಗವದ್ಗೀತೆ' ಹೇಗೆ ಧರ್ಮಗ್ರಂಥವೋ, ಕ್ರಿಶ್ಚಿಯನ್‌ರಿಗೆ 'ಬೈಬಲ್' ಹೇಗೆ ಧರ್ಮ ಗ್ರಂಥವೋ ಮತ್ತು ಮುಸ್ಲಿಂ ಬಂಧುಗಳಿಗೆ 'ಖುರಾನ್' ಹೇಗೆ ಧರ್ಮ ಗ್ರಂಥವೋ ಹಾಗೆ ನಮ್ಮ ದೇಶದ 'ಧರ್ಮ ಗ್ರಂಥ'ಇದು. ಇಡೀ ಭಾರತ ದೇಶದ ಧರ್ಮ ಗ್ರಂಥ ಯಾವುದು ಎಂದರೆ, ಅದು 'ಸಂವಿಧಾನ' ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಈ ಸಂವಿಧಾನದ ಬಗ್ಗೆ ನ್ಯಾಯಮೂರ್ತಿಗಳಾದ ಎಸ್.ಎಂ.ದೌಡ್ ರವರು ಒಂದು ಮಾತು ಹೇಳಿದ್ದಾರೆ; 'ಸಂವಿಧಾನ ಎಂಬುದು, ಅಂಕಿ ಸಂಖ್ಯೆಗಳ ಮಗ್ಗಿ ಪುಸ್ತಕವಲ್ಲ ಅಥವಾ ತರ್ಕದ ವಾದ ವಿವಾದದ ಕೃತಿಯಲ್ಲ. ಅದಕ್ಕೆ ಒಂದು ಮೆದುಳು ಇದೆ, ಹೃದಯ ಇದೆ, ಕೈಕಾಲುಗಳಿವೆ, ಇವುಗಳೆಲ್ಲದಕ್ಕಿಂತ ಮಿಗಿಲಾಗಿ, ಅದಕ್ಕೆ ಆತ್ಮ ಇದೆ' ಎಂಬ ಮಾತನ್ನು ವ್ಯಾಖ್ಯಾನ ಮಾಡಿದ್ದಾರೆ. ಅಷ್ಟು ಮಹತ್ವದ ಮಾತನ್ನು ಅವರು ಹೇಳಿದ್ದಾರೆ. Our Constitution is popularly known as living document. ಈ ಸಂವಿಧಾನ, 12ನೇ ಶತಮಾನದ ಬಸವಾದಿ ಶರಣರ ವಚನ ಸಾಹಿತ್ಯವನ್ನು ನಾನು ಎಲ್ಲವನ್ನು ತಿಳಿದುಕೊಂಡಿದ್ದೇನೆಂದು ಹೇಳುವುದಿಲ್ಲ. ಆದರೆ, ನಾನು ಸ್ವಲ್ಪಮಟ್ಟಿಗೆ ಅಧ್ಯಯನ ಮಾಡಿದ್ದೇನೆ. ಎಲ್ಲವನ್ನು ಅಧ್ಯಯನ ಮಾಡುವುದು ಸಾಮಾನ್ಯವಾದ ಕೆಲಸವಲ್ಲ. ಅಮೇಲೆ ನಮ್ಮ ಭಾರತ ದೇಶದ ಸಂವಿಧಾನ, ಅದರ ಜೊತೆಗೆ ಇನ್ನೊಂದು ಮಾತನ್ನು ಹೇಳುತ್ತೇನೆ; ನಮ್ಮ ಬಿ.ಜೆ.ಪಿ. ನಾಯಕರು ಏನು ಹೇಳುತ್ತಾರೋ ಗೊತ್ತಿಲ್ಲ. ನಮ್ಮ ಕಾಂಗ್ರೆಸ್ ಪಕ್ಷದ ಸಂವಿಧಾನ. ನಾವು ಮೂರು ಸಂವಿಧಾನಗಳನ್ನು ಅಕ್ಕಪಕ್ಕದಲ್ಲಿಟ್ಟು ಅಧ್ಯಯನ ಮಾಡಿದರೆ, ಬಹುತರವಾಗಿ 12ನೇ ಶತಮಾನದ ವಚನ ಸಾಹಿತ್ಯ, 19ನೇ ಶತಮಾನದ ಕಾಂಗ್ರೆಸ್ ಪಕ್ಷದ ಸಂವಿಧಾನ ಮತ್ತು 20ನೇ ಶತಮಾನದ ಭಾರತದ ಸಂವಿಧಾನ. ಈ ಮೂರರಲ್ಲಿ ಬಹಳಷ್ಟು ಸಾಮ್ಯತೆ ಇದೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಬೇಕಾದರೆ ಅಧ್ಯಯನ ಮಾಡಲಿ. ನನಗೆ ಅನಿಸಿದ ಮಟ್ಟಿಗೆ full stop, comma ದವರೆಗೂ ಅದು ಒಂದೇ ಸಾಮ್ಯತೆ ಇದೆ, similarityಇದೆ, resemblance ಇದೆ ಎಂಬುದನ್ನು ಇವತ್ತು ನಾವು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ, ಇದರಲ್ಲಿ ಬಹಳಷ್ಟು ಬದಲಾವಣೆಗಳಿಲ್ಲ. ಎಲ್ಲವೂ ಸಹ ಒಂದೇ ರೀತಿ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಈಗ ಭಾರತ ಸಂವಿಧಾನದ ರಚನೆಗಿಂತ ಸ್ವಲ್ಪ ಹಿಂದೆ ಹೋಗಿ ಮೆಲುಕು ಹಾಕಿ ನೋಡಿದರೆ, ಅದನ್ನು ಸ್ವಲ್ಪ ನೋಡುವಂತಹ ಅವಶ್ಯಕತೆ ಇದೆ. ಸಂವಿಧಾನ ರಚನೆಯ ನಂತರ ಬರುವುದಕ್ಕಿಂತ, ಆ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಚನೆಗಿಂತ ಪೂರ್ವದಲ್ಲಿ ಯಾರ್ಯಾರು ಈ ಸಂವಿಧಾನ ರಚನೆಗೆ ಪ್ರೇರಣೆ ಕೊಟ್ಟಿದ್ದಾರೆ, ಯಾರ್ಯಾರು ಒತ್ತಾಯ ಮಾಡಿದರು. ಯಾವ್ಯಾವ ಸಂಸ್ಥೆಗಳ ಹಿನ್ನೆಲೆ ಇದೆ ಎನ್ನುವುದನ್ನು ಸೂಕ್ಷ್ಮವಾಗಿ ಒಂದೆರಡು ಮಾತುಗಳಲ್ಲಿ ಹೇಳುವುದಕ್ಕೆ ಬಯಸುತ್ತೇನೆ. 1885ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸ್ಥಾಪನೆಯಾಯಿತು. ತದನಂತರ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಐತಿಹಾಸಿಕವಾದಂತಹ ಮತ್ತು ಚಾರಿತ್ರಿಕವಾದಂತಹ ಹೋರಾಟ ಈ ದೇಶದ ಸ್ವಾತಂತ್ರ್ಯಕ್ಕಾಗಿ ನಡೆಯಿತು. ಆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಸಾವು ನೋವುಗಳು ಸಂಭವಿಸಿದವು. ಬಹುತರವಾಗಿ ಆಗ ಆಳ್ವಿಕೆ ನಡೆಸಿದಂತಹ ಬ್ರಿಟಿಷರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾದಂತಹ ಸ್ವಾತಂತ್ರ್ಯ ಹೋರಾಟಗಾರರನ್ನು ಹತ್ತಿಕ್ಕುವುದಕ್ಕೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿದರು. ಎಲ್ಲಾ ದೌರ್ಜನ್ಯ ಮತ್ತು ದಬ್ಬಾಳಿಕೆಯನ್ನು ಮಾಡಿದರು. ನಮ್ಮ ಸ್ವಾತಂತ್ರ್ಯ ಹೋರಾಟಗಾರರಾದ ನಮ್ಮ ಪೂರ್ವಜರು ಅವರ ಲಾಟಿ ಮತ್ತು ಬೂಟಿನ ಏಟಿನ ರುಚಿ ಉಂಡರು. ಅಷ್ಟೇ ಅಲ್ಲದೇ ದೀರ್ಘಕಾಲ ಜೈಲು ವಾಸವನ್ನು ಕೂಡ ಅನುಭವಿಸಿದರು. ಬ್ರಿಟಿಷರು ಬಂದೂಕು ಹಿಡಿದುಕೊಂಡಾಗ ನಮ್ಮ ಸ್ವಾತಂತ್ರ್ಯ ಹೋರಾಟಗಾರರು ಏನು ಹೇಳುತ್ತಿದ್ದರೆಂದರೆ, 'ನೀವು ನಮ್ಮ ಎದೆಗೆ ಗುಂಡು ಹಾರಿಸುತ್ತೀರಾ, ಹಾರಿಸಿ' ಎಂದು ಹೇಳಿದ್ದರು. ಅಷ್ಟೇ ಅಲ್ಲದೇ, ಬೀದಿ ಬೀದಿಯಲ್ಲಿ ನೇಣು ಹಾಕಲು ನೇಣುಗಂಬಗಳನ್ನು ಏರ್ಪಡಿಸಿದ್ದಾಗ 'ಒಂದೇ ಮಾತರಂ' ಎಂದು ನೇಣುಗಂಬವನ್ನು ಏರಿದರು. ಆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಒಬ್ಬರು, ಇಬ್ಬರು, ಹತ್ತುಸಾವಿರ ಒಂದು ಲಕ್ಷ ಜನ ಹುತಾತ್ಮರಾಗಿಲ್ಲ. ಆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುಮಾರು ಆರೂವರೆ ಲಕ್ಷ ಜನ ಹುತಾತ್ಮರಾಗಿದ್ದಾರೆ. ಅವರು ಭಾರತ ದೇಶವನ್ನು ಗುಲಾಮಗಿರಿಯಿಂದ ಪಾರು ಮಾಡಿ ಎಂಬ ಉದ್ದೇಶ ಇಟ್ಟುಕೊಂಡಿದ್ದರು. ಸೂರ್ಯ ಮುಳುಗದ ಸಾಮ್ರಾಜ್ಯ ಎನ್ನುವಂತಹ ಬ್ರಿಟಿಷರನ್ನು ಈ ದೇಶದಿಂದ ಹೊರಹಾಕಿ, ಭಾರತ ಮಾತೆಯನ್ನು ದಾಸ್ಯ ಸಂಕೋಲೆಯಿಂದ ಬಿಡುಗಡೆ ಮಾಡಬೇಕು, ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಬೇಕು. ಈ ದೇಶವನ್ನು ಅಭಿವೃದ್ಧಿಪಡಿಸಬೇಕು ಎನ್ನತಕ್ಕಂಥ ಸದುದ್ದೇಶದಿಂದ ಅವತ್ತು ಸ್ವಾತಂತ್ರ್ಯ ಸಂಗ್ರಾಮ ನಡೆದಿತ್ತು ಎಂಬುದನ್ನು ನಾನು ನೆನಪಿಸುತ್ತಿದ್ದೇನೆ.

ಈ ಸಂವಿಧಾನವನ್ನು ರಚನೆ ಮಾಡುವಂತಹ ವಿಚಾರ 20ನೇ ಶತಮಾನದಲ್ಲೇ ಪ್ರಾರಂಭವಾಯಿತು. ಆಗ 1920ರಲ್ಲಿ ಶ್ರೀ ಮೋತಿ ಲಾಲ್ ನೆಹರುರವರು ಕೂಡ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅವರು ಕೂಡ ಜೈಲಿನಲ್ಲಿ ಇದ್ದವರು. ಶ್ರೀ ಮೋತಿ ಲಾಲ್ ನೆಹರುರವರು ಮತ್ತು ಮತ್ತಿತರ ಅನೇಕ ಮುಖಂಡರುಗಳು ಭಾರತ ದೇಶಕ್ಕೆ ಪ್ರತ್ಯೇಕ ಸಂವಿಧಾನ ಬೇಕು ಮತ್ತು ಆ ಸಂವಿಧಾನವನ್ನು ಭಾರತೀಯರೇ ರಚಿಸಬೇಕು. ಭಾರತದ ಸಂವಿಧಾನದ ರಚನೆಯಲ್ಲಿ ಬ್ರಿಟಿಷರ ಪಾತ್ರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನೂ ಇರಬಾರದು ಎನ್ನತಕಂಥ ಮಾತನ್ನು ಶ್ರೀ ಮೋತಿ ಲಾಲ್ ನೆಹರುರವರು ಹೇಳಿದರು. ಶ್ರೀ ಮೋತಿ ಲಾಲ್ ನೆಹರುರವರು ಮತ್ತು ಅನೇಕ ಮುಖಂಡರುಗಳ ನೇತೃತ್ವದಲ್ಲಿ 1928ರಲ್ಲಿ ಸಂವಿಧಾನ ರಚನೆಯ ಕಾರ್ಯವನ್ನು ಪ್ರಾರಂಭ ಮಾಡಿ, ಒಂದು ಸಂವಿಧಾನವನ್ನು ಸಿದ್ಧಪಡಿಸಿದ್ದರು. ಅದನ್ನು 'ನೆಹರು ವರದಿ' ಎಂದು ಕರೆದರು. ಶ್ರೀ ಮೋತಿ ಲಾಲ್ ನೆಹರುರವರು ರಚನೆ ಮಾಡಿದಂತಹ ಸಂವಿಧಾನ ಏನಿತ್ತು, ಅದರಲ್ಲೂ ಕೂಡ ಮೂಲಭೂತ ಹಕ್ಕುಗಳು ಇದ್ದವು, ಅದರಲ್ಲಿ ಸಂಸದೀಯ ವ್ಯವಸ್ಥೆ ಬಗ್ಗೆ ಚರ್ಚೆ ಮಾಡಲಾಗಿತ್ತು. ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕಿನ ಬಗ್ಗೆ ಕೂಡ ಚರ್ಚೆಯಾಗಿತ್ತು. ಭಾಷಾವಾರು ಪ್ರಾಂತ್ಯಗಳ ರಚನೆಯ ವಿಚಾರ ಕೂಡ ಅದರಲ್ಲಿ ಇತ್ತು. ಅಷ್ಟೆ ಅಲ್ಲ ಅವರು ಸ್ವತಂತ್ರ ನ್ಯಾಯಾಂಗ ರಚನೆಯ ಶಿಫಾರಸ್ಸನ್ನು ಕೂಡ ಮಾಡಿದ್ದರು. ಆದರೆ ಬ್ರಿಟಿಷರು ಇದನ್ನು ಒಪ್ಪಲಿಲ್ಲ. ಅದು ಪೇಪರ್‌ನಲ್ಲೇ ಉಳಿದು ಹೋಯಿತು. ಅಂದು ಅದು 'ನೆಹರು ವರದಿ' ಎಂದೇ ಖ್ಯಾತಿ ಪಡೆದಿತ್ತು. ತದನಂತರ ಸ್ವಾತಂತ್ರ್ಯ ಹೋರಾಟದಲ್ಲಿದ್ದಂಥ ನಾಯಕರುಗಳೇನು ಸುಮ್ಮನೆ ಕೂರಲಿಲ್ಲ. ಈ ದೇಶದ ಪ್ರಥಮ ಪ್ರಧಾನ ಮಂತ್ರಿಗಳಾದ ಪಂಡಿತ್ ಜವಾಹರ ಲಾಲ್ ನೆಹರುರವರು 1933ರಲ್ಲಿ, ಭಾರತಕ್ಕ ಒಂದು ಸಂವಿಧಾನ ರಚನೆ ಆಗಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟರು. ಅದನ್ನು ರಚಿಸುವುದಕ್ಕೆ ಭಾರತೀಯರೇ ಚುನಾಯಿಸಿದಂತಹ ಸದಸ್ಯರನ್ನು ಒಳಗೊಂಡಂತಹ ಒಂದು ಸಮಿತಿಯನ್ನು ರಚಿಸಬೇಕೆಂದು ಒತ್ತಾಯ ಮಾಡಿದರು. ಇದಕ್ಕೆ ಪೂರಕವಾಗಿ ಪಂಡಿತ್ ಜವಾಹರ ಲಾಲ್ ನೆಹರುರವರು ಏನು ಪ್ರತಿಪಾದನೆ ಮಾಡಿದರು, 1933ರಲ್ಲಿ ಇದಕ್ಕೆ ಪೂರಕವಾಗಿ, 1934ರಲ್ಲಿ ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿಣಿ ಸಮಿತಿಯವರು ಒಂದು ಗೊತ್ತುವಳಿ ರಚಿಸಿದರು, it is the highest body of the Congress Party. ಕಾಂಗ್ರೆಸ್ ಪಕ್ಷದ highest body ಎಂದರೆ, ಅದರಲ್ಲಿರುವಂತಹ Working Committee. ಆ ಕಾರ್ಯಕಾರಿಣಿ ಸಮಿತಿಯವರು ಒಂದು ಗೊತ್ತುವಳಿಯನ್ನು ಅಂಗೀಕರಿಸಿ, ಸಂವಿಧಾನ ಸಮಿತಿಯನ್ನು ಚುನಾಯಿಸುವಂತೆ ಒತ್ತಾಯ ಮಾಡಿದರು. ಆಗ ಈ ಬೇಡಿಕೆಯನ್ನು ಬ್ರಿಟಿಷರು ಅಕ್ಷರಶಃ ಮತ್ತು ತತ್ವಶಃ ಒಪ್ಪಿಕೊಂಡರು. ಆದರೆ, ದುರ್ದೈವದ ಸಂಗತಿ ಏನೆಂದರೆ, ಆಗ 2ನೇ ಮಹಾ ಯುದ್ಧ ನಡೆದಿತ್ತು. 2ನೇ ಮಹಾಯುದ್ಧವಾದ್ದರಿಂದ ಅದು ಸ್ವಲ್ಪ ನೆನಗುದಿಗೆ ಬಿದ್ದಿತು. 2ನೇ ಮಹಾ ಯುದ್ಧ ಮುಗಿದ ನಂತರ, 1945ರಲ್ಲಿ ಇಂಗ್ಲೆಂಡ್‌ನಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು ಅಲ್ಲಿ 'ಲೇಬರ್ ಪಕ್ಷ' ಅಧಿಕಾರಕ್ಕೆ ಬಂತು. Sri Clement Richard Attlee ಯವರು ಅಂದು ಬ್ರಿಟಷ್ ಪ್ರಧಾನ ಮಂತ್ರಿಗಳಾದರು. ಆಗ ಸಂವಿಧಾನ ರಚನಾ ಸಮಿತಿಯು ಇನ್ನು ಜೀವಂತವಾಗಿ ಇತ್ತು. ಅದಕ್ಕೆ ಬ್ರಿಟಿಷ್ ಪ್ರಧಾನ ಮಂತ್ರಿಗಳಾದ Sri Clement Richard Attlee ಯವರು 'ನಾವು ನಿಮಗೆ 1946ಕ್ಕೆ ಸ್ವಾತಂತ್ರ್ಯ ಕೊಡುತ್ತೇವೆ'

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂಬ ಒಂದು ಮಾತನ್ನು ಹೇಳಿದರು. ಅವರು ಅದು ಒಂದನ್ನೇ ಹೇಳಲಿಲ್ಲ, ಅವರು ಸಂವಿಧಾನ ಸಮಿತಿಯನ್ನು ರಚಿಸುವುದಕ್ಕೆ ಒಪ್ಪಿದರು. ಅಂದರೆ ಬ್ರಿಟಿಷ್ ಪ್ರಧಾನ ಮಂತ್ರಿಯವರು 1946ಕ್ಕೆ ನಿಮ್ಮ ದೇಶಕ್ಕೆ ಸ್ವಾತಂತ್ರ್ಯ ಕೊಡುತ್ತೇವೆ, ಅದರ ಜೊತೆಗೆ ನೀವೇ ಚುನಾಯಿಸಿದಂತಹ ಸಂವಿಧಾನ ಸಮಿತಿಯನ್ನು ರಚನೆ ಮಾಡುವುದಕ್ಕೆ ಒಪ್ಪಿಗೆ ಸೂಚಿಸಿದರು. ಅದರಂತೆ 1946ರಲ್ಲಿ ಚುನಾವಣೆ ಮೂಲಕ ಸಂವಿಧಾನ ಸಮಿತಿಯು ರಚಿಸಲ್ಪಟಿತು.

**(ಮುಂದು...)**

(523) 18.03.2020 01.20 LL-AK

**(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್. ಪಾಟೀಲ್:– ಮುಂದುವರೆದಿದ್ದು...**

ಆ ಸಂವಿಧಾನ ರಚಿಸಲಿಕ್ಕೆ ಒಂದು ಸಮಿತಿ ಆಯ್ಕೆ ಮಾಡಿದರು. ಆ ಸಮಿತಿಯಲ್ಲಿ ಯಾರ್‍ಯಾರು ಸದಸ್ಯರು ಇದ್ದರು ಎಂಬುದನ್ನು ತಮ್ಮ ಮುಖಾಂತರ ಸದನಕ್ಕೆ ಹೇಳಬಯಸುತ್ತೇನೆ. ಇದರಲ್ಲಿ ಪ್ರಮುಖ ರಾಜಕೀಯ ಮುಖಂಡರುಗಳು, ಕಾಂಗ್ರೆಸ್ ಪಕ್ಷದವರು, ಕಮ್ಯುನಿಸ್ಟ್ ಪಕ್ಷದವರು, ಸಮಾಜವಾದಿಗಳು, ಕೈಗಾರಿಕೋದ್ಯಮಿಗಳು, ಕಾರ್ಮಿಕ ಸಂಘದ ಪ್ರತಿನಿಧಿಗಳು, ವಿಭಿನ್ನ ಆರ್ಥಿಕ ಮತ್ತು ರಾಜಕೀಯ ಸಿದ್ಧಾಂತದವರು ಹಾಗೂ ಭಿನ್ನಪಂತಗಳಿಗೆ ಸೇರಿದವರು ಇದ್ದರು. ಇದರ ಜೊತೆಗೆ, ಹಿಂದೂಗಳು, ಮುಸಲ್ಮಾನರು ಹಾಗೂ ಕ್ರಿಶ್ಚಿಯನ್‌ರು, ಪಾರ್ಸಿಗಳು, ನಾಸ್ತಿಕರು ಮತ್ತಿ ವಿಭಿನ್ನ ಸಾಮಾಜಿಕ ವರ್ಗಗಳಿಗೆ ಸೇರಿದವರು ಸಹ ಇದ್ದರು. ಅಷ್ಟೇ ಅಲ್ಲದೇ, ಶ್ರೀಮಂತರು, ಮಧ್ಯಮ ವರ್ಗದವರು, ಹಿಂದುಳಿದ ವರ್ಗದವರು, ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರೆಲ್ಲರೂ ಕೂಡ ಆ ಸಮಿತಿಯಲ್ಲಿದ್ದರು. ಸಂವಿಧಾನ ಸಮಿತಿಯ ಸದಸ್ಯರಾದಂತಹ ಡಾ॥ ಬಾಬು ರಾಜೇಂದ್ರ ಪ್ರಸಾದ್‌ರವರನ್ನು ಸಮಿತಿ ಅಧ್ಯಕ್ಷರನ್ನಾಗಿ ಹಾಗೂ ಡಾ॥ ಬಿ.ಆರ್. ಅಂಬೇಡ್ಕರ್‌ರವರನ್ನು ಕರಡು ರಚನಾ ಸಮಿತಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸಂವಿಧಾನ ರಚನಾ ಸಮಿತಿಯಲ್ಲಿ ಎಲ್ಲರನ್ನೂ ಸೇರಿಸಲಾಗಿರುತ್ತದೆಯೇ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಬಿಜೆಪಿ ಪಕ್ಷದವರನ್ನು ಹೊರತುಪಡಿಸಿ, ಸಮಿತಿ ರಚನೆ ಮಾಡಲಾಗಿರುತ್ತದೆಯೇ? ಈ ಬಗ್ಗೆ ನಾನು ಓದಿ ಹೇಳಿದ್ದೇನೆ. ಅದನ್ನು ಪ್ರತ್ಯೇಕವಾಗಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹೇಳಬೇಕಾಗಿರುವುದಿಲ್ಲ. **(ಗೊಂದಲ)** ಅಲ್ಲದೇ, ಆ ಸಂದರ್ಭದಲ್ಲಿ ಅವರು existence ನಲ್ಲಿ ಇರುವುದಿಲ್ಲ. **(ಗೊಂದಲ)** ಈ ಬಗ್ಗೆ ನಾನು ದಾಖಲೆ ಇಟ್ಟುಕೊಂಡು ಮಾತನಾಡುತ್ತಿದ್ದೇನೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಶ್ರೀ ಶ್ಯಾಮ್ ಪ್ರಸಾದ್ ಮುಖರ್ಜಿಯವರೇ ಬಿಜೆಪಿ ಪಕ್ಷಕ್ಕೆ ಫೌಂಡೇಷನ್ ಹಾಕಿದವರು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಶ್ರೀ ಶ್ಯಾಮ್ ಪ್ರಸಾದ್ ಮುಖರ್ಜಿಯವರು ಮೊದಲು ನಮ್ಮ ಪಕ್ಷದಲ್ಲಿದ್ದರು. ನಮ್ಮದು 1885ರಲ್ಲಿ ನಮ್ಮ ಪಕ್ಷ ಸ್ಥಾಪನೆಯಾದರೆ, 1950ರಲ್ಲಿ ಭಾರತೀಯ ಜನ ಸಂಘ ಎಂಬ ಹೆಸರಿನಿಂದ ಈ ಪಕ್ಷ ಉದಯವಾಯಿತು.

**(ಈ ಹಂತದಲ್ಲಿ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, "ಯಾವ ಮೂಲ ಆಶಯಗಳನ್ನು ಇಟ್ಟುಕೊಂಡು ಕಾಂಗ್ರೆಸ್ ಅನ್ನುವಂತಹ ಪಕ್ಷ ಅಸ್ತಿತ್ವಕ್ಕೆ ಬಂತು. ಆ ಆಶಯಗಳು ಈಡೇರುತ್ತಿಲ್ಲ ಎಂಬ ಕಾರಣಕ್ಕೆ ನಾನು ಕಾಂಗ್ರೆಸ್ ಪಕ್ಷದಿಂದ ಹೊರಬಂದೆ" ಎಂದು ಮಾನ್ಯ ಶ್ಯಾಮ್ ಪ್ರಸಾದ್ ಮುಖರ್ಜಿಯವರು ಹೇಳುತ್ತಾರೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಸಂವಿಧಾನ ರಚನಾಕಾರರ ಮೇಲೆ ಪ್ರಭಾವ ಬೀರಿದಂತಹ ಪ್ರಮುಖ ಅಂಶಗಳೆಂದರೆ, 1976ರ ಅಮೇರಿಕಾ ಕ್ರಾಂತಿಯ ಘೋಷಣೆ. ಆ ಘೋಷಣೆಯಲ್ಲಿ "ಸೃಷ್ಟಿಯಲ್ಲಿ ಎಲ್ಲಾ ಮನುಷ್ಯರು ಸಮಾನರು" ಎಂದು ಹೇಳುತ್ತಾರೆ. 1789ರ ಫ್ರೆಂಚ್ ಕ್ರಾಂತಿಯ ಘೋಷಣೆಯಲ್ಲಿ, "ಸ್ವಾತಂತ್ರ್ಯ, ಸಮಾನತೆ, ಸೋದರತ್ವ". 1917ರ ರಷ್ಯಾ ಕ್ರಾಂತಿಯ ಘೋಷಣೆಯಲ್ಲಿ, "ಸಾಮರ್ಥ್ಯಕ್ಕೆ ಅನುಸಾರವಾಗಿ ದುಡಿಯಬೇಕು, ಅಗತ್ಯಕ್ಕೆ ಅನುಸಾರವಾಗಿ ಪಡೆಯಬೇಕು" ಎಂದು ಹೇಳುತ್ತಾರೆ. ಇದರ ಜೊತೆಗೆ, 1948ರಲ್ಲಿ ವಿಶ್ವಸಂಸ್ಥೆಯವರು ಮಾಡಿದಂತಹಘೋಷಣೆಯಲ್ಲಿ, "ಮಾನವ ಹಕ್ಕುಗಳು" ಸಂವಿಧಾನ ರಚನಾಕಾರರ ಮೇಲೆ ಪ್ರಭಾವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೀರಿದವು. ಈ ಎಲ್ಲಾ ವಿಷಯಗಳನ್ನು ಮುಂದಿಟ್ಟುಕೊಂಡು, ಸಂವಿಧಾನ ರಚನಾಕಾರರು ಸಂವಿಧಾನವನ್ನು ರಚನೆ ಮಾಡುವುದಕ್ಕೆ ಅನುಕೂಲವಾಯಿತು. ಆಗ ಸ್ವಾತಂತ್ರ್ಯ ಸಂಗ್ರಾಮದ...

**ಸಭಾಪತಿಯವರು:-** ಸದನವನ್ನು ಮಧ್ಯಾಹ್ನ 03.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಮುಂದುವರೆದಿದೆ...)

(524)/18.03.2020/3.10/ಎಸ್‌ಕೆ-ಆರ್‌ಎನ್

**(ಅಪರಾಹ್ನ 1 ಗಂಟೆ 24 ನಿಮಿಷಕ್ಕೆ ಭೋಜನಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ 3 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ಮಾತನಾಡಿ.

**ಶ್ರೀ ಎಸ್. ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಬೆಳಿಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಸಂವಿಧಾನ ರಚನಕಾರರ ಮೇಲೆ ಬೀರಿದ ಪ್ರಮುಖ ಅಂಶಗಳ ಬಗ್ಗೆ ಈಗಾಗಲೇ ಹೇಳಿದ್ದೇನೆ. ಅದರ ಜೊತೆಗೆ ಸ್ವಾತಂತ್ರ್ಯ ಹೋರಾಟಗಾರರ ಸಂದರ್ಭದಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸಿತು. ಸ್ವಾತಂತ್ರ್ಯ ಹೋರಾಟಗಾರ ಚಳುವಳಿಗಾರರಿಗೆ ಎದುರಿಗೆ ಬಂದಂತಹ ಅನೇಕ ಸಮಸ್ಯೆಗಳು ಮತ್ತು ಅನೇಕ ಪ್ರಶ್ನೆಗಳಿಗೆ ಉತ್ತರವನ್ನು ಈ ದೇಶದ ಜನರು ಕಂಡು ಹಿಡಿದಿದ್ದರು. ಆ ಉತ್ತರಗಳನ್ನೇ ಸಂವಿಧಾನ ರಚನೆಕಾರರು ಸಂವಿಧಾನದಲ್ಲಿ ಅಳವಡಿಸಿಕೊಳ್ಳುವಂತಹದ್ದರ ಬಗ್ಗೆ ವಿಚಾರ ಮಾಡಿದ್ದಾರೆ. ಅಂದರೆ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಬ್ರಿಟೀಷರು ನಮಗೆ ಸ್ವಾತಂತ್ರ್ಯ ಕೊಟ್ಟ ನಂತರ ಯಾವ ರೀತಿಯಾಗಿ ದೇಶದಲ್ಲಿ ರಾಜಕೀಯ ವ್ಯವಸ್ಥೆ ಇರಬೇಕು ಹಾಗೂ ಅನೇಕ ಜ್ವಲಂತ ಸಮಸ್ಯೆಗಳಿಗೆ ನಮ್ಮ ದೇಶದ ಜನರು ಉತ್ತರವನ್ನು ಕಂಡಿಹಿಡಿದರು. ಆ ಉತ್ತರಗಳೇನಿದ್ದವೋ, ಆ ಸ್ವಾತಂತ್ರ್ಯ ಚಳುವಳಿಗಾರರಿಗೆ ಗುರಿಗಳಾದವು. ಆ ಗುರಿಗಳನ್ನಿಟ್ಟುಕೊಂಡು ಈ ಒಂದು ಸಂವಿಧಾನ ರಚನೆ ಮಾಡಿದರು. ಜನರು ಇದನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಒಂದು ವಿಚಾರ ಮಾಡುತ್ತಾರೆ. ಅದರ ಜೊತೆಗೆ ಪ್ರಶ್ನೆಗಳು ಯಾವ ರೀತಿ ಉದ್ಭವಿಸಿದವು ಎಂದರೆ, ನಮಗೆ ಸ್ವಾತಂತ್ರ್ಯ ಬಂದ ನಂತರ ಬ್ರಿಟೀಷರನ್ನು ಈ ದೇಶದಿಂದ ಹೊರದೂಡಿದ ನಂತರ ರಾಜಕೀಯ ಅಧಿಕಾರ ಯಾರ ಕೈಗೆ ಹೋಗಬೇಕು? ಕೆಲವು ಜನರು ಶ್ರೀ ಮಹಾತ್ಮ ಗಾಂಧೀಜಿಯವರನ್ನು ಒಬ್ಬ ಸಾಮ್ರಾಟ್ ಅಥವಾ ಶ್ರೀ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜವಹಾರ್‌ಲಾಲ್ ನೆಹರುರವರನ್ನು ಚಕ್ರವರ್ತಿಯನ್ನಾಗಿ ಮಾಡಬೇಕೆಂದು ಈ ರೀತಿಯಾದಂತಹ ವಿಚಾರಗಳ ಬಗ್ಗೆ ಚರ್ಚೆ ಮಾಡಿದರು. ನಮ್ಮ ದೇಶದ ಜನರು ಉತ್ತರವನ್ನು ಏನು ಕೊಟ್ಟರು ಎಂದರೆ, ನಮಗೆ ಸಾಮ್ರಾಟ್ ಬೇಡ, ಚಕ್ರವರ್ತಿ ಬೇಡ, ಮಹಾರಾಜರು ಬೇಡ ಮತ್ತು ಪಾಳೆಗಾರರ ಪದ್ಧತಿಯನ್ನು ಕೂಡ ರದ್ದು ಮಾಡಬೇಕು. ಬ್ರಿಟೀಷರು ಈ ದೇಶವನ್ನು ಬಿಟ್ಟು ಹೋದ ನಂತರ ರಾಜಕೀಯ ಅಧಿಕಾರ ನೇರವಾಗಿ ಪ್ರಜೆಗಳಿಗೆ ಬರಬೇಕೆನ್ನುವಂತಹ ಒಂದು ವಿಚಾರವನ್ನು ಹೇಳುವುದರ ಜೊತೆಗೆ ಭಾರತವನ್ನು ಒಂದು ಪ್ರಜಾಸತ್ತಾತ್ಮಕ ರಾಷ್ಟ್ರವನ್ನಾಗಿ ಮಾಡಬೇಕೆಂದು ಹೇಳಿ

(ಮುಂದು...)

(525) 18.03.2020 3.20. ಟಿಸಿಹೆಚ್-ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್(ಮುಂದು)**

ರಾಷ್ಟ್ರೀಯ ಚಳವಳಿಗಾರರ ಗುರಿಯಾಗಿತ್ತು. ಅದನ್ನು ಅಳವಡಿಸಿಕೊಳ್ಳುವಂತಹ ವಿಚಾರ ಸಂವಿಧಾನದ ರಚನೆಕಾರರು ಆ ನಿರ್ಣಯಕ್ಕೆ ಬಂದರು. ಆಗ ಇನ್ನೊಂದು ಪ್ರಶ್ನೆ ಕೂಡ ಉದ್ಭವಿಸಿತು. ಬಹುಸಂಖ್ಯಾತ ಹಿಂದುಗಳಿರುವ ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಏಕೆ ಘೋಷಣೆ ಮಾಡಬಾರದು. ಮಾನ್ಯ ಸಭಾಪತಿಯವರೇ, ನಮ್ಮ ದೇಶದ ಜನ ಏನು ಹೇಳುತ್ತಾರೆಂದರೆ ಅಥವಾ ಚಳವಳಿಗಾರರಿಂದ ಏನು ವಿಚಾರ ಬರುತ್ತದೆಂದರೆ, ಸ್ವಾತಂತ್ರ್ಯ ತರಲು ಸೂರ್ಯ ಮುಳುಗದ ಸಾಮ್ರಾಜ್ಯ ಎನ್ನತಕ್ಕಂಥ ಬ್ರಿಟಿಷರ ವಿರುದ್ಧ ಹೋರಾಟ ಮಾಡುವಂತಹ ಸಂದರ್ಭದಲ್ಲಿ ಎಲ್ಲಾ ಜಾತಿಯವರು ಮತ್ತು ಎಲ್ಲಾ ಧರ್ಮದವರು ಹೆಗಲಿಗೆ ಹೆಗಲು ಕೊಟ್ಟು, ಕೈಜೋಡಿಸಿ, ಬ್ರಿಟಿಷರ ವಿರುದ್ಧ ಹೋರಾಟ ಮಾಡುತ್ತಾರೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಬೇಕೆಂದು ಕರೆ ಕೊಡುತ್ತಾರೆ. ಕರೆ ಕೊಟ್ಟಾಗ, ಎಲ್ಲಾ ಜಾತಿ, ಮತ, ಪಂತ, ಪಂಗಡದವರು ಮತ್ತು ಭಾಷಿಕರು, ಎಲ್ಲರೂ ದೇಶದ ಮುಖ್ಯವಾಹಿತಿಯಲ್ಲಿ ಬಂದು ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಅಣಿಯಾಗುತ್ತಾರೆ. ಅಷ್ಟೇ ಅಲ್ಲದೇ ಶತಶತಮಾನಗಳಿಂದ ಈ ದೇಶದಲ್ಲಿ ನಾವಲ್ಲಾ ಜಾತಿಯವರು, ಎಲ್ಲಾ ಧರ್ಮದವರು ಸಹೋದರತ್ವದಿಂದ ಬ್ರಾತೃತ್ವ ಪ್ರೇಮದಿಂದ ಬದುಕಿ ಬಾಳಬೇಕಾಗಿರುತ್ತದೆ. ಈ ಕಾರಣದಿಂದ ನಮಗೆ ಹಿಂದೂ ರಾಷ್ಟ್ರ ಬೇಡ, ಕ್ರೈಸ್ತ ರಾಷ್ಟ್ರ ಬೇಡ. ಇಸ್ಲಾಂ ರಾಷ್ಟ್ರ ಬೇಡ ಮತ್ತು ಸಿಖ್ ರಾಷ್ಟ್ರ ಕೂಡ ಬೇಡ, ಅದರ ಬದಲಿಗೆ ನಮಗೆ ಜಾತ್ಯಾತೀತ ಧರ್ಮ ನಿರಪೇಕ್ಷ ರಾಷ್ಟ್ರ ಬೇಕು. ಅದರಂತೆ ಧರ್ಮ ನಿರಪೇಕ್ಷಿತ ಮತ್ತು ಜಾತ್ಯಾತೀತ ರಾಷ್ಟ್ರದ ಧ್ಯೇಯ ನಮ್ಮ ಸ್ವಾತಂತ್ರ್ಯ ಚಳವಳಿಯ ಮಹತ್ತರವಾದಂತಹ ಗುರಿಯಾಗಿತ್ತು. ಇವೆಲ್ಲವನ್ನೂ ಸಂವಿಧಾನದ ರಚನಾಕಾರರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಳವಡಿಸಿಕೊಳ್ಳುವುದು ಕೂಡ ಅಷ್ಟೇ ಮಹತ್ವವಾಗಿತ್ತು. ತೋಳ್ಬಲ ಮತ್ತು ಪ್ರತಿಭೆಯ ಆಧಾರದ ಮೇಲೆ ಈ ದೇಶವನ್ನು ನಡೆಸಬೇಕೇ? ಇಲ್ಲಿ ಇರುವ ಪ್ರಶ್ನೆ ಏನೆಂದರೆ, ಈ ದೇಶದಲ್ಲಿ ಅನೇಕ ಜಾತಿಗಳಿವೆ. ಈ ಜಾತಿಗಳ ನಡುವೆ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಸಮಾನತೆಗಳು ಸಾಕಷ್ಟಿವೆ. ಅಂದರೆ ಈ ಅಸಮಾನತೆಗಳನ್ನು ಹೋಗಲಾಡಿಸಿ, ಸಮಾನತೆ ತರಬೇಕು ಎನ್ನುವುದು ಸ್ವಾತಂತ್ರ್ಯ ಚಳವಳಿಯ ಹೋರಾಟಗಾರರ ಬಯಕೆಯಾಗಿತ್ತು. ದೇಶ ಕಟ್ಟುವಂತಹ ಪ್ರಕ್ರಿಯೆಯಲ್ಲಿ ಎಲ್ಲಾ ಜಾತಿಯ ಸಾಮಂತ ಜನ ಭಾಗಿಯಾಗಬೇಕು ಎನ್ನುವುದು ಅವರ ಆಶಯವಾಗಿತ್ತು. ಹಾಗಾಗಿ, ಸಾಮಾಜಿಕ ನ್ಯಾಯ, ನಮ್ಮ ಸ್ವಾತಂತ್ರ್ಯ ಚಳವಳಿಯ ಗುರಿಯಾಗಿತ್ತು. ಅದಕ್ಕೂ ಕೂಡ ಅವರು ಲಕ್ಷ್ಯ ವಹಿಸಿದ್ದಾರೆ. ಅದೇರೀತಿ 12ನೇ ಶತಮಾನದಲ್ಲಿ ಬಸವಾದಿ ಶರಣರು ಅದರಲ್ಲೂ ವಿಶೇಷವಾಗಿ ವಿಶ್ವಗುರು ಬಸವಣ್ಣನವರು ವರ್ಗರಹಿತ ಮತ್ತು ಜಾತಿ ರಹಿತ ಸಮಾಜ ನಿರ್ಮಾಣ ಮಾಡಬೇಕೆಂದು ಬಹುದೊಡ್ಡ ಸಾಮಾಜಿಕ ಕ್ರಾಂತಿ ಮಾಡಿ ಸಮ ಸಮಾಜ ನಿರ್ಮಾಣ ಮಾಡಬೇಕು. 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎನ್ನುವಂತಹ ತತ್ವ ಸಿದ್ಧಾಂತವನ್ನು 900 ವರ್ಷಗಳ ಹಿಂದೆಯೇ ಬಸವಾದಿ ಶರಣರು ಅದನ್ನು ಪ್ರತಿಪಾದನೆ ಮಾಡಿದ್ದರು. ಅದರ ಜೊತೆಗೆ ನಾವು ಇವತ್ತಿನ ದಿವಸ ಸಾಮಾಜಿಕ ನ್ಯಾಯದ ಮಾತನ್ನು ಏನು ಆಡುತ್ತಿದ್ದೇವೆ ಅದು 12 ನೇ ಶತಮಾನದಲ್ಲಿ 900 ವರ್ಷಗಳ ಹಿಂದೆಯೇ ಬಸವಾದಿ ಶರಣರು ಸಮಾಜಿಕ ನ್ಯಾಯದ ಬಗ್ಗೆ ಎತ್ತಿದ್ದರು ಎನ್ನುವುದನ್ನು ನೆನಪಿಸಿಕೊಳ್ಳಬೇಕು. ಪ್ರಾರಂಭದಲ್ಲಿ ನಾನು ಒಂದು ಮಾತನ್ನು ಏನು ಹೇಳಿದೆನೆಂದರೆ, ಭಾರತದ ಸಂವಿಧಾನಕ್ಕೂ, 12ನೇ ಶತಮಾನದ ಬಸವಾದಿ ಶರಣರು, ವಚನಕಾರರು ರಚಿಸಿದಂತಹ ವಚನ ಸಾಹಿತ್ಯಕ್ಕೂ ಬಹಳಷ್ಟು ಸಾಮ್ಯತೆ ಇದೆ ಎನ್ನುವಂಥದ್ದು ಮೂಡುತ್ತದೆ. ಇನ್ನೊಂದು ವಿಚಾರ ಹೇಳುವುದಾದರೆ, ಭಾರತದ ರಾಜಧಾನಿಯಾದಂತಹ ದೆಹಲಿಯಲ್ಲಿ ಒಂದು ಬಲಾಢ್ಯ ಕೇಂದ್ರ ಸರ್ಕಾರ ರಚಿಸಿ, ಇಡೀ ದೇಶದ ಆಡಳಿತ ನಡೆಸಿದರೆ ಚೆನ್ನಾಗಿರುತ್ತದೆ ಎನ್ನತಕ್ಕಂಥ ಪ್ರಶ್ನೆ ಕೂಡ ಬಂತು. ಆಗ ಬಹಳಷ್ಟು ಜನ ಒಂದೊಂದು ಭಾಗದಲ್ಲಿ ಒಂದೊಂದು ಭಾಷೆಯಲ್ಲಿ ಮಾತನಾಡತಕ್ಕಂಥ ಜನರು ಇದ್ದಾರೆ. ಒಂದೊಂದು ಸಂಸ್ಕೃತಿಯನ್ನು ಆಚರಿಸತಕ್ಕಂಥ ಜನ ಇದ್ದಾರೆ. ಉಪ ಸಂಸ್ಕೃತಿ ಆಚರಿಸತಕ್ಕಂಥ ಜನ ಇದ್ದಾರೆ. ಅದಕ್ಕಾಗಿ ಸ್ವಾತಂತ್ರ್ಯ ಚಳವಳಿಗಾರರು ನಮಗೆ ಬಲಿಷ್ಠವಾದಂತಹ ಕೇಂದ್ರ ಸರ್ಕಾರ ಮತ್ತು ಭಾಷಾವಾರು ರಾಜ್ಯಗಳನ್ನು ರಚನೆ ಮಾಡಬೇಕು ಎನ್ನುವಂತಹ ಒಮ್ಮತಕ್ಕೆ ಬರುತ್ತಾರೆ. ಅದೇ ರೀತಿ federal structure ಅಂದರೆ, ಒಕ್ಕೂಟ ವ್ಯವಸ್ಥೆ ರಾಷ್ಟ್ರೀಯ ಚಳವಳಿಯ ಗುರಿಯಾಗಿತ್ತು. ಅಂದರೆ, ಬಲಿಷ್ಠವಾದಂತಹ ಕೇಂದ್ರ ಸರ್ಕಾರ ರಚಿಸಿ, ಆಯಾ ಭಾಷೆಗಳನ್ನಾಡುವಂತಹ ಜನರಿಗೆ ಅನುಗುಣವಾಗಿ ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡಿ, ಒಂದು federal structure ಒಕ್ಕೂಟದ ವ್ಯವಸ್ಥೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ ಎನ್ನತಕ್ಕಂಥ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರ ಸ್ವಾತಂತ್ರ್ಯ ಚಳವಳಿಗಾರರ ಗುರಿಯಾಗಿತ್ತು. ಏನು ಸ್ವಾತಂತ್ರ್ಯ ಚಳವಳಿಗಾರರ ಗುರಿ ಇತ್ತು, ಆ ಗುರಿಯನ್ನೇ ಸಂವಿಧಾನದಲ್ಲಿ ಅಳವಡಿಸಿಕೊಳ್ಳುವಂತಹ ವಿಚಾರಕ್ಕೆ ಬರಲಾಗಿದೆ. ಈಗಾಗಲೇ ಹೇಳಿದಂತೆ, 1946 ಜುಲೈ ತಿಂಗಳಿನಲ್ಲಿ ನಡೆದಂತಹ ಚುನಾವಣೆಯಲ್ಲಿ ಸಂವಿಧಾನಕ್ಕೆ 296 ಜನ ಸದಸ್ಯರಾಗಿ ಆಯ್ಕೆಯಾಗುತ್ತಾರೆ. ಅದರಲ್ಲಿ ಕೆಲವು ಕಾರಣಗಳಿಂದ ಕೆಲವು ಸದಸ್ಯರು ಹಿಂದೆ ಸರಿಯುತ್ತಾರೆ. ಉಳಿದಂತಹ 272 ಸದಸ್ಯರು 1946 ಡಿಸೆಂಬರ್ 6 ರಂದು ಮೊದಲನೆಯ ಸಂವಿಧಾನದ ಸಭೆ ಸೇರಿ ಕೆಲಸ ಪ್ರಾರಂಭ ಮಾಡುತ್ತಾರೆ. ಒಂದು ವರ್ಷ ಎರಡು ತಿಂಗಳ ಅವಧಿಯಲ್ಲಿ ರೂಪಗೊಂಡಂತಹ ಸಂವಿಧಾನದ ಮೊದಲನೆಯ ಕರಡು ಸಂವಿಧಾನವನ್ನು 1948 ಫೆಬ್ರವರಿ 21ರಂದು ಜನತೆಯ ಮುಂದಿಡುತ್ತಾರೆ. ಅದಕ್ಕೆ 7635 ತಿದ್ದುಪಡಿಗಳನ್ನು ಮಾಡುತ್ತಾರೆ. ಈ ತಿದ್ದುಪಡಿಗಳನ್ನು ಪರಿಶೀಲಿಸುತ್ತಾರೆ. ಅದನ್ನು ಸೂಕ್ತವಾಗಿ ಒಪ್ಪಿ 1949 ನವೆಂಬರ್ 26 ರಂದು ಅಂತಿಮ ಕರಡು ವರದಿಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಯಿತು. ಇದೇ ಐತಿಹಾಸಿಕ ದಿನದ ನೆನಪಿನ ಸಲುವಾಗಿ ಪ್ರತಿವರ್ಷ ನವೆಂಬರ್ 26ನೇ ತಾರೀಖಿನಂದು ರಾಷ್ಟ್ರೀಯ ಕಾನೂನು ದಿನವೆಂದು ಆಚರಿಸುವಂತಹ ಪರಂಪರೆ ಜಾರಿಗೆ ಬರುತ್ತದೆ. ಕಳೆದ 5 ವರ್ಷಗಳಿಂದ ಈ ದೇಶದ ಪ್ರಧಾನ ಮಂತ್ರಿಗಳಾದಂತಹ ಸನ್ಮಾನ್ಯ ನರೇಂದ್ರ ಮೋದಿಯವರು ನಾವೇನು ಕಾನೂನು ದಿನವೆಂದು ಆಚರಿಸುತ್ತಿದ್ದೇವೆ, ಅದನ್ನು ಸಂವಿಧಾನದ ದಿನವಾಗಿ ಆಚರಿಸಬೇಕೆಂದು ಕರೆಕೊಟ್ಟಿದ್ದರಿಂದ, ಕಾನೂನು ದಿನವೆಂದು ಇದ್ದುದನ್ನು ಸಂವಿಧಾನದ ದಿನವೆಂದು ನಾವು ಆಚರಿಸುತ್ತಿದ್ದೇವೆ. ಕಾನೂನು ದಿನವೆಂದು ಏಕೆ ಹೇಳುತ್ತಿದ್ದೇವೆಂದರೆ, National Law Day ಎಂದರೆ, ಇಡೀ ದೇಶದಲ್ಲಿಯೇ ರಾಜ್ಯ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ ಯಾವುದೇ ಒಂದು ಕಾನೂನು ಮಾಡಿದರೆ, ಆ ಕಾನೂನು ಸಂವಿಧಾನಕ್ಕೆ ವ್ಯತಿರಿಕ್ತವಾಗಿ ಕಾನೂನು ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ, provisions of the new enactment should be in conformity with the provisions of Constitution. If it is not in conformity with the provisions of Constitution, it can be challenged either before the High Court or before the Supreme court and High Court or Supreme Court is going to set-aside saying that it is an unconstitutional enactment. ಆ ದೃಷ್ಟಿಯಿಂದ ಈಗ ಆ ಸಂವಿಧಾನ. . .

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಂವಿಧಾನಕ್ಕೆ ತಿದ್ದುಪಡಿ ತರಬೇಕಾದರೆ, Keshavananda Bharati's case is very particular about

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

the amendment. ಇದೇ ನಮಗೆ ಮೂಲ. Larger Bench of Supreme Court, hold ಮಾಡಿರುತ್ತದೆ. ಸಂವಿಧಾನದ ಮೂಲ 1973 ಸುಪ್ರೀಂ ಕೋರ್ಟ್ ಏನಾಗುತ್ತದೆಂದರೆ, ಮೂಲ ಆಶಯಗಳಿಗೆ ಅಂದರೆ particularly Part-II & IIIಗೆ ಯಾವುದೇ ರೀತಿಯಲ್ಲಿ there should not be any touch. ಯಾವುದೇ ರೂಪದಲ್ಲಿ ಒತ್ತಡ ಇರಬಾರದು ಅಥವಾ ಬದಲಾವಣೆ ತರತಕ್ಕಂಥ ಅವಕಾಶವನ್ನು ಅಲ್ಲಿ ಕೊಟ್ಟಿಲ್ಲ. Golaknath ಪ್ರಕರಣದಲ್ಲಿ 'prior to 1973ರಲ್ಲಿ Keshavananda Bharthi's case is the landmark judgment of the Supreme Court. Based on that only the amendment has been taken place. Otherwise there should not be any amendment to touching the Part-II and III' ಎಂದು ಹೇಳಲಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶರಣಪ್ಪ ಮಟ್ಟೂರ ರವರು enlighten ಮಾಡಿದರು. ಅದಕ್ಕಾಗಿ ನಮ್ಮ ಸಂವಿಧಾನ ನಮ್ಮ ದೇಶದ ಸರ್ವೋಚ್ಛ ಗ್ರಂಥವಾಗಿರುವುದರಿಂದ ಅದನ್ನು ಕಾನೂನು ದಿನವೆಂದು ಆಚರಿಸುತ್ತಿದ್ದನ್ನು ಈಗ ನಾವು ಸಂವಿಧಾನದ ದಿನವೆಂದು ಆಚರಿಸುತ್ತಿದ್ದೇವೆ. ಸಂವಿಧಾನ ರಚನಾ ಸಭೆಯಲ್ಲಿ 272 ಸದಸ್ಯರು ಇದ್ದರೂ ಕೂಡ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬಹಳಷ್ಟು ಕೆಲಸಗಳನ್ನು ಮಾಡಿದ್ದರು. ಸಂವಿಧಾನದ ಕರಡು ರಚನಾ ಸಮಿತಿಯಲ್ಲಿದ್ದಂತಹ ಸದಸ್ಯರು ಕೆಲವು ಕಾರಣಕ್ಕಾಗಿ ಅದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳದೇ ಇದ್ದರೂ ಕೂಡ ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು ದಿವಸಕ್ಕೆ 18 ಗಂಟೆಗಳ ಕಾಲ ಕೆಲಸ ಮಾಡಿ, 2 ವರ್ಷ 11 ತಿಂಗಳು 18 ದಿವಸದಲ್ಲಿ ಈ ಕರಡು ಸಂವಿಧಾನವನ್ನು ರಚಿಸಿದ್ದರು. ಇದು ಜಗತ್ತಿನ ಅತಿದೊಡ್ಡ ಲಿಖಿತ ಸಂವಿಧಾನವಾಗಿ ರಚನೆಯಾಗಿರುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತ ಮಾಡುವುದಕ್ಕೆ ಬಯಸುತ್ತಿದ್ದೇನೆ. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ದಿನಕ್ಕೆ 18 ಗಂಟೆಗಳ ಕಾಲ ಕೆಲಸ ಮಾಡಿದ್ದಕ್ಕಾಗಿ ಅವರಿಗೆ ಬಹಳಷ್ಟು appreciations ಬರುತ್ತವೆ.

**(526)18.3.2020/3.30/ಎಂ.ಎಂ-ವಿ.ಕೆ** (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್. ಪಾಟೀಲ್ (ಮುಂದು):-**

ಸಂವಿಧಾನ ಸಭೆಯ ಅಧ್ಯಕ್ಷರು ಅಂದರೆ ಭಾರತದ ಪ್ರಥಮ ರಾಷ್ಟ್ರಪತಿಯವರು, 'ಡಾ: ಬಿ.ಆರ್. ಅಂಬೇಡ್ಕರ್‌ರವರು ಇಷ್ಟು ಶ್ರದ್ಧೆ ಮತ್ತು ಉತ್ಸುಕತೆಯಿಂದ ಈ ಕಾರ್ಯವನ್ನು ನಡೆಸಿದ್ದಕ್ಕೆ ಎಲ್ಲರಿಗಿಂತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್ಚು ಇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ' ಎಂದು ಹೇಳುತ್ತಾರೆ. ಡಾ: ಬಿ.ಆರ್. ಅಂಬೇಡ್ಕರ್‌ರವರನ್ನು ಕರಡು ರಚನಾ ಸಮಿತಿಗೆ ಸೇರಿಸಿದ್ದು ಮತ್ತು ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದು ತಾವು ಮಾಡಿದ ಅತ್ಯುತ್ತಮವಾದ ಕೆಲಸ ಎಂಬ ಮಾತನ್ನು ಡಾ: ಬಾಬು ರಾಜೇಂದ್ರ ಪ್ರಸಾದ್‌ರವರು ಹೇಳುತ್ತಾರೆ. ಸಂವಿಧಾನ ಸಭೆಯ ಉಪಾಧ್ಯಕ್ಷರು ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ಕೂಡ ಅಂಬೇಡ್ಕರ್‌ರವರ ಬಗ್ಗೆ ಒಳ್ಳೆಯ ಅಭಿಮಾನದ ಮಾತುಗಳನ್ನು ಹೇಳಿದ್ದಾರೆ. ಸಂವಿಧಾನ ರಚನೆ ಮಾಡುವಂತಹ ಕಾರ್ಯವನ್ನು ಒಂಟಿಯಾಗಿ ನಿಭಾಯಿಸಿದ ರೀತಿ ಅತ್ಯಂತ ಶ್ಲಾಘನೀಯ ಮತ್ತು ನಾವೆಲ್ಲರೂ ಯಾವುದೇ ಅನುಮಾನಗಳಿಲ್ಲದೇ ಅವರಿಗೆ ಚಿರಋಣಿಯಾಗಿರಬೇಕೆಂಬ ಮಾತನ್ನು ಕೂಡ ಹೇಳಿದ್ದಾರೆ. ನಂತರ 1947 ಆಗಸ್ಟ್ 15ರಂದು ಬ್ರಿಟಿಷರಿಂದ ನಮ್ಮ ದೇಶಕ್ಕೆ ಸ್ವಾತಂತ್ರ್ಯವಾಯಿತು. 1950ರ ಜನವರಿ 26ರಂದು ಜಗತ್ತಿನ ಅತಿ ದೊಡ್ಡ ಲಿಖಿತ ಸಂವಿಧಾನವನ್ನು ಜಾರಿಗೆ ತರುವ ಮುಖಾಂತರ ಭಾರತ ಗಣರಾಜ್ಯವಾದುದು ಇತಿಹಾಸ. ಸಂವಿಧಾನದಲ್ಲಿ ಏನಿದೆ ಎಂಬ ಬಗ್ಗೆ ಬಹಳಷ್ಟು ಸದಸ್ಯರು ಹೇಳಿದ್ದಾರೆ. ನಾನು ಅದನ್ನು ವಿಸ್ತೃತವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ.

ನಮ್ಮ ಸಂವಿಧಾನದಲ್ಲಿ 22 ಭಾಗ, 448 ಅನುಚ್ಛೇದಗಳು, 12 ಅನುಸೂಚಿಗಳು ಇವೆ. ಭಾರತ ಒಂದು ಸ್ವತಂತ್ರವಾದ ಸಾರ್ವಭೌಮ ರಾಷ್ಟ್ರ. ಅದೊಂದು ಸಮಾಜವಾದಿ, ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕವಾದಂತಹ ಗಣರಾಜ್ಯವಾಗಿದೆ. ಎಲ್ಲಾ ಪ್ರಜೆಗಳಿಗೂ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ ದೊರಕಿಸಿಕೊಡುವುದೇ ನಮ್ಮ ಗುರಿ ಎನ್ನುವಂತಹ ವಿಚಾರ ಇಲ್ಲಿ ಬರುತ್ತದೆ. ಅದರ ಜೊತೆಗೆ ಭಾರತದಲ್ಲಿ ಸಂವಿಧಾನವೇ ಸರ್ವೋಚ್ಚವಾದುದು. ನಮ್ಮ ಸಂವಿಧಾನ ಮೂಲಭೂತ ಹಕ್ಕುಗಳನ್ನು, ಸಂವಿಧಾನದ ಮೂಲಭೂತ ತತ್ವಗಳು ಆಶಯಗಳು, ಸಿದ್ಧಾಂತಗಳ ಸಾರಾಂಶವನ್ನು ಹೇಳುವಂತಹ ಪೀಠಿಕೆ, ಅಂದರೆ 'Preamble' ಎಂದು ಕರೆಯುತ್ತಾರೆ. ಸಂವಿಧಾನದ Fundamental Principles ಆಗಲೀ, ಸಂವಿಧಾನದ ಆಶಯಗಳಾಗಲೀ, ಸಿದ್ಧಾಂತಗಳಾಗಲೀ ಅವನ್ನೆಲ್ಲಾ ಕ್ರೋಢೀಕರಣ ಮಾಡಿ ಸಂವಿಧಾನದ ಪೀಠಿಕೆಯಲ್ಲಿ ಅಳವಡಿಸಿದ್ದಾರೆ. ಪೀಠಿಕೆಯಲ್ಲಿ, "ಭಾರತದ ಜನತೆಯಾದ ನಾವು ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸಬೇಕಾಗಿ ಭಾರತದ ಎಲ್ಲಾ ನಾಗರೀಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯವನ್ನು ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವ ಮತ್ತು ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ ಸಹೋದರ ಭಾವನೆಯನ್ನು ಮೂಡಿಸುವುದಕ್ಕೆ ದೃಢ ಸಂಕಲ್ಪ ಮಾಡಿ ನಮ್ಮ ಸಂವಿಧಾನ ಸಭೆಯಲ್ಲಿ 1949ನೇ ಇಸವಿ ನವೆಂಬರ್ ತಿಂಗಳ 26ರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನದಂದು ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು ಅಂಗೀಕರಿಸಿ ಶಾಸನವನ್ನಾಗಿ ರೂಪಿಸಿಕೊಂಡಿದ್ದೇವೆ" ಎಂದು ಇದೆ. ಅಂದರೆ ಇಲ್ಲಿ ಜನರೇ ಅಧಿಕಾರದ ಮೂಲ, ಭಾರತವು ಒಂದು ಸ್ವತಂತ್ರವಾದ, ಸಾರ್ವಭೌಮ, ಪ್ರಜಾಸತ್ತಾತ್ಮಕ ರಾಷ್ಟ್ರ; ಅದೊಂದು ಸಮಾಜವಾದಿ, ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕವಾದ ಗಣರಾಜ್ಯವಾಗಿದೆ. ಎಲ್ಲಾ ಪ್ರಜೆಗಳಿಗೂ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ದೊರಕಿಸಿಕೊಡುವುದೇ ನಮ್ಮ ಗುರಿ. ವಿಚಾರ, ಅಭಿವ್ಯಕ್ತಿ, ನಂಬಿಕೆ, ಭಕ್ತಿ ಅಥವಾ ಶ್ರದ್ಧೆ ಹಾಗೂ ಉಪಾಸನಾ ಸ್ವಾತಂತ್ರ್ಯವನ್ನು ನೀಡುವುದು ಎಲ್ಲರಿಗೂ ಸಮಾನ ಅವಕಾಶಗಳನ್ನು, ಸ್ಥಾನಮಾನಗಳನ್ನು ಕಲ್ಪಿಸುವುದು, ವ್ಯಕ್ತಿಗೌರವ ಮತ್ತು ಸಹೋದರತೆಯನ್ನು ಬೆಳೆಸುವುದರ ಜೊತೆಗೆ ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯ ಎನ್ನುವಂತಹ ವಿಚಾರದಲ್ಲಿ ಬರುತ್ತದೆ.

ನಮ್ಮ ಸಂವಿಧಾನವು ಸಂಸದೀಯ ಮಾದರಿಯ ಸರ್ಕಾರ ಒದಗಿಸುವುದಕ್ಕೆ ಅವಕಾಶ ನೀಡಿದೆ Parliamentary type of democracy.ಅಮೇರಿಕಾದಲ್ಲಿ Presidential type of democracy. ನಮ್ಮದು Parliamentary type of democracy ಇದೆ. ಲೋಕಸಭೆ ಮತ್ತು ರಾಜ್ಯಸಭೆಗಳಿಂದ ಕೂಡಿರುವಂತಹ 'ಸಂಸತ್ತು' ಪರಮೋಚ್ಚ ಅಧಿಕಾರ ಹೊಂದಿದೆ. ಚುನಾವಣೆಯಲ್ಲಿ ಬಹುಮತ ಗಳಿಸಿದಂತಹ ಪಕ್ಷ ಸಂಪುಟವನ್ನು ರಚನೆ ಮಾಡುತ್ತದೆ, ಅದರ ಮುಖ್ಯಸ್ಥರೇ ಪ್ರಧಾನಮಂತ್ರಿಯಾಗಿರುತ್ತಾರೆ. ಪ್ರಧಾನ ಮಂತ್ರಿ ಸಂಸತ್ತಿಗೆ ಬಾಧ್ಯಸ್ಥರಾಗಿರುತ್ತಾರೆ, ಅದೇ ರೀತಿ ನಮ್ಮ ವಿಧಾನ ಮಂಡಲ ಇದ್ದು, ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಕಾರ್ಯವೈಖರಿ ನಡೆಯುತ್ತವೆ. ಭಾರತದ ನ್ಯಾಯಾಂಗವು ಅತ್ಯುನ್ನತ ಸ್ಥಾನದಲ್ಲಿದೆ, ಸರ್ವೋಚ್ಚ ನ್ಯಾಯಾಲಯ, the Apex Court in the Land. ರಾಜ್ಯಗಳಲ್ಲಿ ಉಚ್ಚ ನ್ಯಾಯಾಲಯ, ಜಿಲ್ಲೆಗಳಲ್ಲಿ ಜಿಲ್ಲಾ ನ್ಯಾಯಾಲಯ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ. ನಮ್ಮ ನ್ಯಾಯಾಂಗ ವ್ಯವಸ್ಥೆ ಸ್ವತಂತ್ರವಾಗಿದೆ. ಶಾಸಕಾಂಗ ಕಾರ್ಯಾಂಗದಿಂದ ಇದನ್ನು ಬೇರ್ಪಡಿಸಿ ಸ್ವತಂತ್ರವಾಗಿ ನಿರ್ವಹಿಸುವಂತಹ ಅವಕಾಶ ಕಲ್ಪಿಸಿದೆ. ಹಾಗೂ ಜನರ ಸ್ವಾತಂತ್ರ್ಯವನ್ನು ರಕ್ಷಿಸುವಂತಹ ಮಹತ್ತರವಾದ ಹೊಣೆಗಾರಿಕೆ ಇವತ್ತು ನ್ಯಾಯಾಲಯಗಳ ಮೇಲಿದೆ. ಸಂವಿಧಾನದತ್ತವಾದಂತಹ ಪ್ರಜೆಗಳ ಮೂಲಭೂತ ಹಕ್ಕುಗಳಿಗೆ ಚ್ಯುತಿಯಾದಾಗ ಅದನ್ನು ದೊರಕಿಸಿಕೊಡುವಂತಹ ಜವಾಬ್ದಾರಿ ಕೂಡ ಇದೆ. ಅದರ ಜೊತೆಗೆ ನಾವೇನಿಲ್ಲಿ Legislations ಮಾಡುತ್ತೇವೋ; ಶಾಸಕಾಂಗವು ಈಗಾಗಲೇ ನಾನು ಹೇಳಿದಂತೆ ಸಂವಿಧಾನಕ್ಕೆ ವ್ಯತಿರಿಕ್ತವಾಗಿದ್ದರೆ ಅದನ್ನು ಅಸಿಂಧುಗೊಳಿಸುವಂತಹ ವಿಚಾರ ಮತ್ತು Executive ಏನಿದೆ, ಕಾರ್ಯಾಂಗವು ಅವರೇನಾದರೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾನೂನುಬಾಹಿರ ಕೆಲಸ ಮಾಡಿದರೆ ಅಥವಾ ಅವರು ಹೊರಡಿಸಿದಂತಹ ಆದೇಶ ಕಾನೂನುಬಾಹಿರವಾಗಿದ್ದರೆ, ಪಕ್ಷಪಾತ ಧೋರಣೆಯನ್ನು ಅನುಸರಿಸಿದರೆ ಅಂತಹವುಗಳನ್ನು ನ್ಯಾಯಾಲಯ ರದ್ದುಪಡಿಸಿ ಸೂಕ್ತ ಆದೇಶವನ್ನು ನೀಡುವ ಮೂಲಕ ಕಾನೂನು ವ್ಯವಸ್ಥೆ ಅಂದರೆ Rule of Law ಅನ್ನು ಎತ್ತಿ ಹಿಡಿಯುವಂತಹ ಕೆಲಸ ಆಗುತ್ತದೆ. ನಮ್ಮದು ಧರ್ಮನಿರಪೇಕ್ಷ, ಜಾತ್ಯಾತೀತ ರಾಷ್ಟ್ರವೆಂದು ಸಂವಿಧಾನದಲ್ಲಿ ತಿಳಿಯಪಡಿಸಿದೆ. ಅಂದರೆ ಧರ್ಮನಿರಪೇಕ್ಷ ಮತ್ತು ಜಾತ್ಯಾತೀತ ಎಂಧರೆ ಧರ್ಮದ ವಿರೋಧಿಯಲ್ಲ, ಧರ್ಮವನ್ನು ರಾಜಕಾರಣದಿಂದ ಬೇರ್ಪಡಿಸುವಂತಹದ್ದು. ಸರ್ಕಾರ ಯಾವುದೇ ಧರ್ಮದ ತುತ್ತೂರಿಯಾಗಬಾರದು. ಎಲ್ಲ ಧರ್ಮಗಳನ್ನು ಸಮಾನವಾಗಿ ನೋಡಬೇಕು ಅಥವಾ ಒಂದು ಧರ್ಮದ ವಿಚಾರಗಳನ್ನೇ ಒಂದೊಂದು ಧರ್ಮದವರು 'ಫರ್ಮಾನು' ಎಂದು ಏನು ಅಂಟಿಸುತ್ತಾರೆ, ಅದೇ ಸರ್ಕಾರದ ಕಾರ್ಯಕ್ರಮಗಳಾಗಬಾರದು. ಅಂದರೆ ಒಂದು ಧರ್ಮಕ್ಕೆ ಒಳಪಟ್ಟು, ಧರ್ಮದ ಆದೇಶಗಳನ್ನೇ ಮುಂದು ಮಾಡಿಕೊಂಡು ಆಡಳಿತ ನಡೆಸಬಾರದು ಎನ್ನುವ ವಿಚಾರದಿಂದ ನಮ್ಮ ಸಂವಿಧಾನ ಧರ್ಮನಿರಪೇಕ್ಷ, ಜಾತ್ಯಾತೀತ ಎನ್ನುವಂತಹ ವ್ಯವಸ್ಥೆಯಾಗಿದೆ.

ನಮ್ಮ ಸಂವಿಧಾನವು ಭಾರತವನ್ನು ಕಲ್ಯಾಣ ರಾಜ್ಯವನ್ನಾಗಿ ಮಾಡುವ ಮೂಲ ಉದ್ದೇಶ ಹಾಗೂ ಗುರಿಯನ್ನು ಹೊಂದಿದೆ. ಕಲ್ಯಾಣ ರಾಜ್ಯವನ್ನು ಮಾಡಬೇಕಾದರೆ, ಅಲ್ಲಿನ ನಾಗರೀಕರ ಆರ್ಥಿಕ, ಸಾಮಾಜಿಕ, ಭೌತಿಕ, ಸಾಂಸ್ಕೃತಿಕ ಜೀವನ ಸುಧಾರಿಸುವುದಕ್ಕೆ *Directive Principles of State Policy* ಇದ್ದು, ಇದರಲ್ಲಿ 12 ಅಂಶಗಳಿವೆ. ಅವುಗಳನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಅದೇ ರೀತಿ 12 *Directive Principles of State Policy* ಏನಿವೆ ಅವುಗಳನ್ನು ಅವಶ್ಯಕತೆಗನುಗುಣವಾಗಿ ಅನುಷ್ಠಾನ ಮಾಡುವಂತಹ ಕೆಲಸ ನಮ್ಮ ಸಂವಿಧಾನ ಮಾಡಬೇಕು. ಮೂಲಭೂತ ಹಕ್ಕುಗಳು ಕೂಡ ಮಹತ್ವದ್ದಾಗಿವೆ. Chapter 3 of the Constitution, ಮೂಲಭೂತ ಹಕ್ಕುಗಳನ್ನು ಕೂಡ ನೀಡಿದೆ. ಮೂಲಭೂತ ಹಕ್ಕುಗಳ ಹೆಸರನ್ನಷ್ಟೇ ಹೇಳುತ್ತೇನೆ, ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು ಮತ್ತು ಸಂವಿಧಾನಾತ್ಮಕ ಪರಿಹಾರದ ಹಕ್ಕು ಈ ಎಲ್ಲ ಹಕ್ಕುಗಳಿದ್ದು, ಈ ಮೂಲಭೂತ ಹಕ್ಕಿಗೆ ಚ್ಯುತಿ ಬಂದರೆ ಉಚ್ಛ ನ್ಯಾಯಾಲಯವಾಗಲೀ, ಸರ್ವೋಚ್ಛ ನ್ಯಾಯಾಲಯವಾಗಲೀ ಚ್ಯುತಿಯಾದುದನ್ನು ಸರಿ ಮಾಡುವಂತಹ ಮೂಲಭೂತ ಹಕ್ಕನ್ನು ರಕ್ಷಣೆ ಮಾಡುವಂತಹ ಜವಾಬ್ದಾರಿ ಕೂಡ ನ್ಯಾಯಾಂಗದ್ದಾಗಿದೆ. ಅದರ ಜೊತೆಗೆ 1976ರಲ್ಲಿ ಸಂವಿಧಾನಕ್ಕೆ 42ನೇ ತಿದ್ದುಪಡಿ ತರುವುದರ ಮೂಲಕ ಮೂಲಭೂತ ಕರ್ತವ್ಯಗಳನ್ನು ಪಟ್ಟಿಗೆ ಸೇರಿಸಲಾಗಿದೆ. We are only talking

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

about the rights. But we are not talking about the duties. ಆದರೆ ಸಂವಿಧಾನದ 47ನೇ ತಿದ್ದುಪಡಿಯಲ್ಲಿ 1976ರಲ್ಲಿ ನಮ್ಮ ಕರ್ತವ್ಯಗಳೇನು ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಕರ್ತವ್ಯಗಳು ಪ್ರತಿಯೊಬ್ಬ ಪ್ರಜೆಗೂ ಅನ್ವಯಿಸುತ್ತವೆ. ಕೇವಲ ಚುನಾಯಿತ ಪ್ರತಿನಿಧಿಗಳಿಗೆ ಮಾತ್ರವಲ್ಲ, ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಅನ್ವಯಿಸುವಂತಹ 11 ಕರ್ತವ್ಯಗಳ ಪಟ್ಟಿ ಕೂಡ ಸಂವಿಧಾನದ ಒಂದು ಭಾಗವಾಗಿದೆ. ಇಂದು ಬೆಳಗ್ಗೆ ನಡೆದ ಚರ್ಚೆಯಲ್ಲಿ ಲಿಂಗ ಸಮಾನತೆ ಬಗ್ಗೆ ಪ್ರಸ್ತಾಪಿಸಲಾಯಿತು. ನಮ್ಮ ಸಂವಿಧಾನದಲ್ಲಿ ಲಿಂಗ ಭೇದ ನಿವಾರಣೆ ಮಾಡಿ, ಮಹಿಳೆಯರ ಸ್ಥಿತಿಗತಿಗಳ ಅಭಿವೃದ್ಧಿಗೆ ಬಹಳಷ್ಟು ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ. ಮಹಿಳೆಯರನ್ನು 2ನೇ ದರ್ಜೆಯ ಪ್ರಜೆಗಳನ್ನಾಗಿ ನೋಡಕೂಡದು; ಆದರೆ ನನಗೆ ಬಹಳ ಸಂತೋಷದ ಸಂಗತಿಯೆಂದರೆ, ಈಗಾಗಲೇ ನಾನು ಹೇಳಿದ ಹಾಗೆ 12ನೇ ಶತಮಾನದಲ್ಲಿ ಬಸವಾದಿ ಶರಣರು ಹೆಣ್ಣು ಹಾಗೂ ಗಂಡಿಗೆ ಸಮಾನ ಅವಕಾಶವನ್ನು ಕಲ್ಪಿಸಿದ್ದರು. ಮಹಿಳೆಯು ಪುರುಷನ ಶ್ರಮದ ಒಂದು ಭಾಗವೆಂದು ಹೇಳಿದರು. ಮಹಿಳೆಯರು ಕೂಡ ಪುರುಷರಿಗೆ ಎಷ್ಟು ಹಕ್ಕುಗಳಿವೆ, ಲಿಂಗ ಭೇದ ಏನಿತ್ತು; ಮಹಿಳೆಯರನ್ನು ಕೀಳಾಗಿ ಕಾಣುವ ವ್ಯವಸ್ಥೆಯನ್ನು 900 ವರ್ಷಗಳ ಹಿಂದೆ ಅಂದಿನ ಬಸವಾದಿ ಶರಣರು ಅದಕ್ಕೆ ಕೊನೆ ಹಾಡಿದರು. ಅದೇ ಮುಂದುವರಿದು 12ನೇ ಶತಮಾನದಲ್ಲಿ ಏನು ಮಾಡಿದರು, ಅದನ್ನು ನಾವು ಇವತ್ತು ಸಂವಿಧಾನದಲ್ಲಿ ಕೂಡ ಕಾನೂನುಬದ್ಧವಾಗಿ ಅಳವಡಿಸಿದ್ದೇವೆ. ಆಗ ಜನರಿಗೆ ಜಾಗೃತಿ ಮೂಡಿಸಿ, ಲಿಂಗಭೇದವನ್ನು ಅಳಿಸಿ ಹಾಕುವುದಕ್ಕೆ ಬಸವಾದಿ ಶರಣರು ಬಹುದೊಡ್ಡ ಸಾಮಾಜಿಕ ಕ್ರಾಂತಿ ಮಾಡಿದರು. ಅದನ್ನು ಇವತ್ತು ಡಾ:ಬಾಬಾ ಸಾಹೇಬ್ ಅಂಬೇಡ್ಕರ್‌ರವರು, ಸಂವಿಧಾನ ರಚನಾ ಸಮಿತಿಯವರು ಇದಕ್ಕೆ ಒತ್ತು ಕೊಟ್ಟು ಸ್ತ್ರೀ ಪುರುಷರು ಸಮಾನರು ಎನ್ನುವಂತಹ concept ಒದಗಿಸಿದ್ದಷ್ಟೇ ಅಲ್ಲ, ಸ್ತ್ರೀಯರಿಗೆ ವಿಶೇಷ, Article 14 of the Constitution of India declares that *"the state shall not deny to any person equality before the law or the equal protection of the laws..."* ಅಂದಿದೆ, *"...However, this Article does not prevent the State from making any special provisions for women or children..."* ಎಂದು ಇದೆ.

ಮುಂದು . . .

.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(527) 18-03-2020/ 03-40/ ಕೆಹೆಚ್-ವಿಕೆ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಮಾನ್ಯ ಸಭಾಪತಿಯವರೇ, ಸಮಾನತೆ ಎಂದರೆ ನಮ್ಮಗಿಂತ ಹೆಚ್ಚಾಗಿ ಮಹಿಳೆಯರಿಗೆ ಪ್ರಾಧಾನ್ಯತೆಯನ್ನು ಕೊಡುವಂತಹ ಪ್ರಾವಿಷನ್ ಅನುಚ್ಛೇದ-14 ರಲ್ಲಿ ಬರುತ್ತದೆ. ಏಕೆಂದರೆ, ಮಹಿಳೆಯರೆಲ್ಲಾ ಬಹಳ ಮುಂದುವರೆದು ಬಿಟ್ಟಿದ್ದಾರಲ್ಲವೇ, ಮಹಿಳೆಯರನ್ನು ಇನ್ನೂ ಎತ್ತರಕ್ಕೆ ತರಬೇಕಾದರೆ, a special provision can be made. It is an exception for Article-14 of the Constitution of India. ತದನಂತರ ದುಡಿಯುವ ವರ್ಗದಲ್ಲಿ ಹಕ್ಕುಗಳನ್ನು ರಕ್ಷಣೆ ಮಾಡುವಂತಹ ಕೆಲಸವನ್ನು ಸಂವಿಧಾನದಲ್ಲಿ ಮಾಡಿದ್ದಾರೆ. 12ನೇ ಶತಮಾನದಲ್ಲಿ ಬಸವಾದಿ ಶರಣರು 'ಕಾಯಕವೇ ಕೈಲಾಸ' work is worship ಎಂದು ಹೇಳುತ್ತಿದ್ದರು. ಆ ಕಾಯಕ ಮಾಡುವ ಕಾಯಕ ಜೀವಿಗಳ ಹಕ್ಕುಗಳನ್ನು ರಕ್ಷಣೆ ಮಾಡುವಂತಹ ಕೆಲಸ ಸಂವಿಧಾನದಲ್ಲಿ ಇವತ್ತಿನ ದಿವಸ ಆಗಿದೆ. ಕಾಯಕವೇ ಕೈಲಾಸ ಎಂದರೆ ಕಾಯಕ ಮಾಡುವವರಿಗೂ ಕೂಡ ಅವರಿಗೆ ಕೆಲವು ಹಕ್ಕುಗಳನ್ನು ಸಂವಿಧಾನದಲ್ಲಿ ನೀಡಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದರ ಜೊತೆಗೆ ಅತ್ಯಂತ ಮಹತ್ವವಾದ ವಿಷಯವೇನೆಂದರೆ, ಸಂವಿಧಾನದಲ್ಲಿ ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ವಿಶೇಷವಾದ ಒತ್ತನ್ನು ಕೊಟ್ಟಿದ್ದಾರೆ. ಅಸ್ಪೃಶ್ಯತೆಯ ನಿರ್ಮೂಲನೆ ಮತ್ತು ಅಸ್ಪೃಶ್ಯತೆಯ ವಿಮೋಚನೆಗೆ ಹಲವು ವಿಚಾರಗಳನ್ನು ಸಂವಿಧಾನದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಅನುಚ್ಛೇದ 15, 16, 17, 21, 23, 43, 45, 46, 243, 330, 332, 335, 338, 340, 341 ಮತ್ತು 342 ರಲ್ಲಿ ಇಷ್ಟು ಅನುಚ್ಛೇದಗಳಲ್ಲಿ ಅಸ್ಪೃಶ್ಯತೆಯ ಬಗ್ಗೆ ಚರ್ಚೆಯಾಗಿದೆ. ಅಸ್ಪೃಶ್ಯತೆ ಆಚರಣೆಯೂ ವಿಸ್ತಾರವಾದಂತಹ ಅದೊಂದು ಅಪರಾಧ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಇಷ್ಟೆಲ್ಲಾ ಅನುಚ್ಛೇದಗಳಲ್ಲಿ ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ ಸಂವಿಧಾನದ ರಚನಾ ಸಮಿತಿಯಲ್ಲಿ ಅದರಲ್ಲಿಯೂ ವಿಶೇಷವಾಗಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ತಮ್ಮ ಬದುಕಿನಲ್ಲಿ ನೋವು ಮತ್ತು ಅವಮಾನಗಳನ್ನು ಅನುಭವಿಸಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಸಂವಿಧಾನದ ಮುಖಾಂತರ ಈ ಅಸ್ಪೃಶ್ಯತೆಯನ್ನು ಮೂಲೋತ್ಪಾಟನೆ ಮಾಡುವುದಕ್ಕೆ ಮತ್ತುಬೇರು ಸಹಿತ ಕಿತ್ತು ತೆಗೆದು ಹಾಕುವುದಕ್ಕೆ ಸಂವಿಧಾನದಲ್ಲಿ ಅವಕಾಶ ಮಾಡಿದ್ದಾರೆ. ಏಕೆಂದರೆ, ಇಲ್ಲಿಯೂ ಸಹ ಒಂದು ಪ್ರಶ್ನೆ ಬರುತ್ತದೆ, ಅದೇನೆಂದರೆ, 12ನೇ ಶತಮಾನದಲ್ಲಿ ಬಸವಾದಿ ಶರಣರು ಈ ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ಒಂದು ದೊಡ್ಡ ಯುದ್ಧವನ್ನೇ ಮಾಡಿದ್ದಾರೆ. ಬಸವಣ್ಣನವರನ್ನು ನೀನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾರು ಎಂದು ಕೇಳುತ್ತಾರೆ. 'ಮಾದರ ಚೆನ್ನಯ್ಯನ ದಾಸಿಯ ಮಗ, ಡೋರ ಕಕ್ಕಯ್ಯನ ದಾಸಿಯ ಮಗಳು, ಬೆರಣಿಗೆ ಹೋದಾಗ ಅವರ ಸಹಯೋಗದಿಂದ ನಾನು ಹುಟ್ಟಿದ್ದೇನೆ". ಎಂದು ಬಸವಣ್ಣನವರು ಹೇಳುತ್ತಾರೆ. ಇದು ಎಂತಹ ಮಾತು. He himself telling that he is an illegitimate child. 'ಮಾದರ ಚೆನ್ನಯ್ಯನ ದಾಸಿಯ ಮಗ, ಡೋರ ಕಕ್ಕಯ್ಯನ ದಾಸಿಯ ಮಗಳು,ಬೆರಣಿಗೆ ಹೋದಾಗ ಎಂದರೆ ನಮ್ಮ ಕಡೆ ಕುಳು ಹಿಡಿಯುವುದು, ಕಟ್ಟಿಗೆ ಮಾಡುವುದು ಎಂದು ಹೇಳುತ್ತಾರೆ. ಅವರ ಸಹಯೋಗದಿಂದ ನಾನು ಹುಟ್ಟಿದ್ದೇನೆ ಎಂದು ಬಹಳ ದೊಡ್ಡ ಮಾತುಗಳನ್ನು ಹೇಳಿದ್ದಾರೆ. ಇವತ್ತಿನ ದಿವಸ ಭಾರತ ದೇಶದ ಸ್ವಾತಂತ್ರ್ಯ ಹೋರಾಟ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಮಹಾತ್ಮ ಗಾಂಧಿಯವರ ಕಾಲದಲ್ಲಿ ಬಹು ದೊಡ್ಡ ಚಾರಿತ್ರಿಕವಾದಂತಹ ಮತ್ತು ಐತಿಹಾಸಿಕವಾದಂತಹ ಒಂದು ಸಂಗ್ರಾಮ ನಡೆದಿತ್ತು. ಆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಲಕ್ಷಾಂತರ ಜನರ ತ್ಯಾಗ ಬಲಿದಾನ ನಡೆಯಿತು. ಅದರಲ್ಲಿ ಬಹಳಷ್ಟು ಜನರು ಜೀವವನ್ನು ಕಳೆದುಕೊಂಡರು. ಆದರೆ, ಬಸವಾದಿ ಶರಣರು ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ 12ನೇ ಶತಮಾನದಲ್ಲಿ ಅವರು ಅಂತರ್ ಜಾತಿಯ ವಿವಾಹಕ್ಕೆ propose ಮಾಡುತ್ತಾರೆ. ಅಂದರೆ ದಲಿತರು ಮತ್ತು ಸವರ್ಣೀಯರ ಮಧ್ಯೆ ಅಂತರ್ ಜಾತಿಯ ವಿವಾಹ 900 ವರ್ಷಗಳ ಹಿಂದೆ ನಡೆಯತ್ತದೆ. ಇವತ್ತು ಅಂತರ್ ಜಾತಿಯ ವಿವಾಹವಾದರೆ ಯಾವ ರೀತಿಯ ಪರಿಸ್ಥಿತಿ ಇದೆ ಎನ್ನುವ ಬಗ್ಗೆ ಪ್ರತಿದಿನ ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ನೋಡುತ್ತೇವೆ. ಅಂತರ್ ಜಾತಿಗಳಾದ ಪರಿಶಿಷ್ಟ ಜಾತಿ ಮತ್ತು ಸವರ್ಣೀಯರ ಮಧ್ಯದಲ್ಲಿ ಏನಾದರೂ love marriage ಅಥವಾ ಏನಾದರೂ ಒಂದು ರಕ್ತ ಸಂಬಂಧವನ್ನು ಬೆಳೆಸುವಂತಹ ಒಂದು ಮದುವೆಯಂತಹ ಕಾರ್ಯಕ್ರಮಗಳು ಇದ್ದರೆ, ಇವತ್ತಿನ ಜನರು ಮತ್ತು ಸಮಾಜ ಈ ವಿವಾಹವನ್ನು ಒಪ್ಪಿಕೊಳ್ಳುವುದಿಲ್ಲ. 900 ವರ್ಷಗಳ ಹಿಂದೆ ಬಸವಣ್ಣನವರಿಗೆ ಒಬ್ಬರು ಕೇಳುತ್ತಾರೆ. ನೋಡಿ, ಬಸವಣ್ಣ ಈ ಅಂತರ್ ಜಾತಿಯ ವಿವಾಹ ಏಕಾಗಿದ್ದೀಯಪ್ಪಾ, ನೀನು. ಇದಕ್ಕೆ ಬಹಳ ದೊಡ್ಡ ಬೆಲೆ ತೆರಬೇಕಾಗುತ್ತದೆ ಎಂದು ಬಸವಣ್ಣನವರಿಗೆ ಹೇಳುತ್ತಾರೆ. ದಲಿತರು ಮತ್ತು ಸವರ್ಣೀಯರ ಮಧ್ಯೆ ರಕ್ತ ಸಂಬಂಧವನ್ನು ಬೆಳೆಸುವಂತಹ ಸಣ್ಣ ಕೆಲಸ ಅಲ್ಲ ಎಂದು ಹೇಳುತ್ತಾರೆ. ಆಗ ಬಸವಣ್ಣನವರು ಬಹಳ ಸುಂದರವಾದ ಮಾತನ್ನು ಹೇಳುತ್ತಾರೆ. ಶರಣರು ಏನು ಹೇಳುತ್ತಾರೆ ಎಂದರೆ, ಒಂದು ಒಳ್ಳೆಯ ಕೆಲಸಕ್ಕೆ ಅವರು ನಮ್ಮನ್ನೆಲ್ಲಾ ಕೊಚ್ಚಿ ಕೊಲ್ಲುತ್ತಾರೆ ಎಂದು ಹೇಳುತ್ತಾರೆ. ಈ ಕೆಲಸಕ್ಕಾಗಿ ನಮ್ಮನ್ನೆಲ್ಲಾ ಕೊಚ್ಚಿ ಕೊಂದರೂ ಚಿಂತೆ ಇಲ್ಲ. We will solemnize that marriage, ಎನ್ನುವಂತಹ ಒಂದು ದಿಟ್ಟವಾದ ನಿಲುವನ್ನು ತೆಗೆದುಕೊಳ್ಳುತ್ತಾರೆ. ಆಗ ಪರಿಸ್ಥಿತಿ ಹೇಗಿತ್ತು ಎಂದರೆ, ಜಾತಿ ವ್ಯವಸ್ಥೆ ಎಷ್ಟಿತ್ತು ಎಂದರೆ, ದಲಿತನಾದವನು ಗ್ರಾಮಕ್ಕೆ ಬರಬೇಕಾದರೆ ಮಧ್ಯಾಹ್ನ 12 ಗಂಟೆಗೆ ಬರಬೇಕಾಗಿತ್ತು. ಏಕೆಂದರೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಧ್ಯಾಹ್ನ 12 ಗಂಟೆಯ ನಂತರ ಆದರೆ ಅವರ ನೆರಳು ಬೀಳುತ್ತದೆ. ಮಧ್ಯಾಹ್ನ 12 ಗಂಟೆಗೆ ಸೂರ್ಯ ನೆತ್ತಿಯ ಮೇಲೆ ಇರುತ್ತಾನೆ, ಅವರ ನೆರಳು ಬೀಳಬಾರದು. ನೋಡಿ, ಇದು ಎಂತಹ ಸಮಾಜ. ನಂತರ ಅವರ ಹೆಜ್ಜೆಯ ಗುರುತುಗಳನ್ನು ಸಹ ನೋಡುವ ಆಗಿಲ್ಲ. ಪೊರಕೆ ಕಟ್ಟಿಕೊಂಡು ಬರಬೇಕು. ಉಗುಳು ಬಂದರೆ ಉಗುಳುವ ಆಗಿಲ್ಲ. ಕೊರಳಿನಲ್ಲಿ ಮಡಿಕೆ ಕಟ್ಟಿಕೊಂಡು ಬರಬೇಕು. ಅಷ್ಟು ಕ್ರೂರತರವಾದಂತಹ ಜಾತಿ ವ್ಯವಸ್ಥೆ ಇದ್ದಂತಹ ಸಂದರ್ಭದಲ್ಲಿ ಬಸವಾದಿ ಶರಣರು ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ ಕಾಂತ್ರಿಕಾರಿಯಾದಂತಹ ಅಂದಿನ ಕಾಲದಲ್ಲಿಯೇ ಅಂತರ್ ಜಾತಿಯ ವಿವಾಹ, ದಲಿತರು ಮತ್ತು ಸವರ್ಣೀಯರ ಮಧ್ಯದಲ್ಲಿ ಮಾಡಿದರು. ಮುಂದೆ ಇದರ ಪರಿಣಾಮ ಏನಾಯಿತು ಎಂದರೆ, ಇದರ ಬಗ್ಗೆ ನಮಗೆಲ್ಲಾ ಗೊತ್ತಿದೆ. ಕಲ್ಯಾಣ ಕ್ರಾಂತಿಯಾಯಿತು. ನಮ್ಮ ಬಸವಾದಿ ಶರಣರನ್ನು ಮದುವೆಯಾದ ಗಂಡ–ಹೆಂಡತಿಯರನ್ನು, ಅವರ ತಂದೆ–ತಾಯಿಯನ್ನು ಆನೆ ಕಾಲಿಗೆ ಕಟ್ಟಿ ತುಳಿಸುತ್ತಾರೆ. ಈಗಲೂ ಸಹ ಅಂತರ್ ಜಾತಿಯ ವಿವಾಹವನ್ನು ರದ್ದು ಮಾಡಿಕೊಳ್ಳಿ ಎಂದು ಹೇಳುತ್ತಾರೆ. No, ನಮ್ಮ ಮದುವೆಯನ್ನು ರದ್ದು ಮಾಡಿಕೊಳ್ಳುವುದಿಲ್ಲವೆಂದು ಹೇಳುತ್ತಾರೆ. ಇದನ್ನು ಹೀಗೆ ಬಿಟ್ಟರೆ ಬಸವಣ್ಣ ನಮ್ಮನ್ನೆಲ್ಲಾ ಮುಗಿಸಿಯೇ ಬಿಡುತ್ತಾರೆ ಎನ್ನುವಂತಹ ವಿಚಾರವನ್ನು ಇಟ್ಟುಕೊಂಡು ಕಲ್ಯಾಣ ಕ್ರಾಂತಿಯಾದಾಗ ಎಲ್ಲೆಲ್ಲಿ ಶರಣರು ಸಿಗುತ್ತಾರೋ, ಅಲ್ಲಲ್ಲಿ ಅವರನ್ನು ಕೊಚ್ಚಿ ಕೊಲ್ಲುವಂತಹ ಒಂದು ಕೆಲಸ ನಡೆಯುತ್ತದೆ. ಆದರೆ, ಈ ಎಲ್ಲರೂ ದಿಕ್ಕಾಪಾಲಾಗಿ ಶರಣರು ವಚನ ಸಾಹಿತ್ಯವನ್ನು ತಮ್ಮ ಕೈಗೆ ಬಂದಷ್ಟು ತೆಗೆದುಕೊಂಡು ಇಡೀ ರಾಜ್ಯದ ಉದ್ದಗಲ್ಲಕ್ಕೂ ಅವರು ತಮ್ಮ ಜೀವವನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಓಡುವಂತಹ ಒಂದು ಪರಿಸ್ಥಿತಿ ಬಂದಿತು. ಆದರೂ ಅನೇಕ ವಚನಕಾರರನ್ನು ಕೊಲ್ಲುತ್ತಾರೆ. ನನಗೆ ಅನಿಸುವುದೇನೆಂದರೆ, ಆವತ್ತು ಈ ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ 12ನೇ ಶತಮಾನದಲ್ಲಿ ಬಸವಾದಿ ಶರಣರು ಒಂದು ಕಾರ್ಯ ಮಾಡಿದ್ದರು. ಅವರು ತಮ್ಮ ಜೀವದ ಹಂಗನ್ನು ತೊರೆದು, ಮುಂದೆ ಈ ರೀತಿಯಾಗುತ್ತದೆ ಎಂದು ಗೊತ್ತಿದ್ದರೂ ಸಹ ನಮ್ಮನ್ನು ಕೊಚ್ಚಿ ಕೊಲ್ಲುತ್ತಾರೆ ಎಂಬ ವಿಚಾರ ಗೊತ್ತಿದ್ದರೂ, ಅದಕ್ಕೆ ಅಸಂಖ್ಯಾತ ಶರಣರು ಅಹುತಿಯಾದರು. ಯಾವ ರೀತಿ ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದಂತಹ ಸ್ವಾತಂತ್ರ್ಯ ಯೋಧರ ಸರಿಸಮಾನ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಆಗಿನ ಕಾಲದಲ್ಲಿ ಒಂದು ದಿಟ್ಟವಾದ ನಿರ್ಣಯವನ್ನು ಕೈಗೊಂಡಿದ್ದಾರೆ ಎಂದರೆ ಇದನ್ನು ನಾವು ಪ್ರಶಂಶಿಸಬೇಕು. ಸ್ವಾತಂತ್ರ್ಯ ಹೋರಾಟದಲ್ಲಿ ಯಾವ ರೀತಿ ತ್ಯಾಗ ಬಲಿದಾನ ಆಗಿದೆ, ಅದೇ ರೀತಿ ತ್ಯಾಗ ಬಲಿದಾನ ಆವತ್ತಿನ ಕಾಲಕ್ಕೆ ಆಗಿದೆ. ಅವರು ಮಾಡಿರುವಂತಹ ಕೆಲಸವನ್ನು ಅತ್ಯಂತ ಶ್ಲಾಘನೀಯ ಕಾರ್ಯ, ಸಮರ್ಥನೀಯ ಕಾರ್ಯ ಎಂದು ಹೇಳಬಹುದು. ಈ ಅಸ್ಪೃಶ್ಯತೆಯನ್ನು ಬೇರು ಸಹಿತ ಕಿತ್ತು ಒಗೆಯುವುದಕ್ಕೆ ಅಂದಿನ ಕಾಲದ ಇತಿ–ಮಿತಿಯಲ್ಲಿ ಪ್ರಯತ್ನ ಮಾಡಿರುವುದನ್ನು ನಾನು ಇಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಇಂತಹ ವಿಚಾರದಲ್ಲಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಅವಮಾನ, ನೋವನ್ನು ಅನುಭವಿಸಿದರು. ಕ್ರೌರ್ಯ, ದೌರ್ಜನ್ಯ, ಮತ್ತು ದಬ್ಬಾಳಿಕೆಯನ್ನು ಅನುಸರಿಸಿ ಈ ಸಂವಿಧಾನದಲ್ಲಿ ಅನೇಕ ಪರಿಚಯದಲ್ಲಿ ಇದು ಶಿಕ್ಷರಾರ್ಹ ಅಪರಾಧ ಎನ್ನುವ ಮಟ್ಟಿಗೆ ಸಂವಿಧಾನದಲ್ಲಿ ಪ್ರಸ್ತಾಪ ಮಾಡಿದರು. ಸಂವಿಧಾನದ ಬಗ್ಗೆ ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಸಂವಿಧಾನದ ಮೂಲ ತತ್ವಗಳು, Fundamental Principles. ನಮ್ಮ ಸಂವಿಧಾನ ಹಲವು ಮೂಲ ತತ್ವಗಳ ಅಡಿಪಾಯಗಳ ಮೇಲೆ ರೂಪಿಸಲಾಗಿದೆ. A Constitution is built on the Fundamental Principles. ಈ ಮೂಲ ತತ್ವಗಳನ್ನು ಬದಲಾಯಿಸುವುದಕ್ಕೆ ಮತ್ತು ತಿದ್ದುಪಡಿ ಮಾಡುವುದಕ್ಕೆ ಆಗುವುದಿಲ್ಲ. ಮೂಲ ತತ್ವಗಳು ಯಾವಾಗಲೂ ಶಾಶ್ವತವಾಗಿವೆ. ನಮ್ಮ ಸಂವಿಧಾನದಲ್ಲಿ ಹಲವು ಮೂಲತತ್ವಗಳು ಇವೆ. ಆದರೆ, ಮೂಲತತ್ವಗಳನ್ನು ಆರ್ಟಿಕಲ್‌ನಲ್ಲಿ ಎಳೆಯಿರಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಮೂಲ ತತ್ವಗಳು ನಮ್ಮ ಹೆಸರಿನಲ್ಲಿ ಪ್ರತ್ಯೇಕವಾಗಿ ಸಂವಿಧಾನದಲ್ಲಿ ಅಂತರ್‌ಗತ ಮಾಡಲಾಗಿದೆ. ಎಲ್ಲಾ ರೀತಿಯಲ್ಲಿಯೂ ಅರ್ಥಗಳು ಬರುವ ಹಾಗೆ ಅನೇಕ ಪರಿಚ್ಛೇದಗಳಲ್ಲಿ ಇದನ್ನು ಅಳವಡಿಸಿದ್ದಾರೆ. ಉದಾಹರಣೆಗಾಗಿ ಸಂವಿಧಾನ ಅನುಚ್ಛೇದ 368 ರಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡುವಂತಹ ಅಧಿಕಾರ ಸಂಸತ್ತಿಗೆ ನೀಡುತ್ತದೆ. ಸಂಸತ್ತಿಗೆ ಅಧಿಕಾರ ಇದೆ ಎಂದು ಈ ಸಂವಿಧಾನವನ್ನು ರದ್ದು ಮಾಡಿ ಮತ್ತೊಂದು ಸಂವಿಧಾನವನ್ನು ರೂಪುಗೊಳಿಸುವುದಕ್ಕೆ ಬರುವುದಿಲ್ಲ. ಸಂವಿಧಾನ ಅನುಚ್ಛೇದ 368 ರಲ್ಲಿ ಸಂಸತ್ತಿಗೆ ಸಂವಿಧಾನದಲ್ಲಿ ತಿದ್ದುಪಡಿ ಮಾಡುವಂತಹ ಅಧಿಕಾರವನ್ನು ಕೊಟ್ಟಿದ್ದಾರೆ. ಅದು ಅನಿರ್ಬಂಧಿತವಾದಂತಹ ಅಧಿಕಾರ ಅಲ್ಲ. ಏಕೆಂದರೆ, ಸರ್ವೋಚ್ಚ ನ್ಯಾಯಾಲಯದ ಕೇಶವಾನಂದ ಭಾರತಿ ಪ್ರಕರಣದಲ್ಲಿ ಇದನ್ನು ಪರಾಮರ್ಶಿಸಲಾಗಿದೆ. ಹಾಗೆ ಮಾಡುವಾಗ ಸರ್ವೋಚ್ಚ ನ್ಯಾಯಾಲಯ ಕೆಲವೊಂದು ಪ್ರಶ್ನೆಗಳನ್ನು ಕೇಳಿಕೊಂಡಿದೆ.

(ಮುಂದು)

**(528) 18/03/2020/3:50/ಎಸ್‌ಪಿಆರ್/ಬಿಎನ್‌ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಸಂವಿಧಾನದ ಅನುಚ್ಛೇದ 368 ಕ್ಕೆ ತಿದ್ದುಪಡಿಯನ್ನು ಮಾಡಿದಾಗ, ಸಂವಿಧಾನದ ಮೂಲ ಆಶಯ ಮತ್ತು ತತ್ವಗಳನ್ನು ಬದಲಾವಣೆ ಮಾಡದಂತೆ ಸರ್ವೋಚ್ಚ ನ್ಯಾಯಾಲಯವು ಕೆಲವು ಪ್ರಶ್ನೆಗಳನ್ನು ಕೇಳಿದೆ. ಈ ದೇಶದ ಪ್ರಭುತ್ವವನ್ನು ನಾಶ ಮಾಡಿ ಇನ್ನೊಂದು ದೇಶಕ್ಕೆ ಅಧೀನವಾಗಿ ತಿದ್ದುಪಡಿ ಮಾಡಬಹುದೆ ಎನ್ನುವ ಪ್ರಶ್ನೆಯನ್ನು ನ್ಯಾಯಾಲಯವು ಕೇಳಿದೆ. ಅದರರ್ಥ ಈ ದೇಶದಲ್ಲಿರುವ ಪ್ರಜಾಪ್ರಭುತ್ವವನ್ನೆಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಶ ಮಾಡಿ ನಮ್ಮ ಭಾರತ ದೇಶವು ಮತ್ತೊಂದು ದೇಶಕ್ಕೆ ಆಧೀನವಾಗುವ ರೀತಿಯಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡಬಹುದೇ ಎಂದು ಕೇಳಿದ್ದಾರೆ. No, it is impossible. ಈಗಿರುವ ಪ್ರಜಾಪ್ರಭುತ್ವ ಸರ್ಕಾರಕ್ಕೆ ಬದಲಾಗಿ ನಿರಂಕುಶ ಪ್ರಭುತ್ವ ಅಂದರೆ ಹಿಟ್ಲರ್ ಶಾಹಿ ಸರ್ಕಾರವನ್ನಾಗಿ ಮಾಡಬಹುದೇ? ಒಂದು ವೇಳೆ ಸಂವಿಧಾನಕ್ಕೆ ತಿದ್ದುಪಡಿ ಮಾಡಿದರೆ ಮಾಡಬಹುದು. ಆದರೆ ಇದು ಸಂವಿಧಾನದ ತತ್ವಗಳಿಗೆ, ಆಶಯಗಳಿಗೆ ವಿರುದ್ಧವಾಗಿದೆ ಎನ್ನುವ ದೃಷ್ಟಿಯಿಂದ ಮಾಡುವುದಕ್ಕೆ ಬರುವುದಿಲ್ಲ. ಈ ದೇಶದ ಒಕ್ಕೂಟ ವ್ಯವಸ್ಥೆ ಅಂದರೆ Federal structure ನ್ನು ಬದಲಾಯಿಸಿ ಅಂದರೆ ನಮ್ಮ ಕರ್ನಾಟಕ ರಾಜ್ಯವನ್ನು ಕರ್ನಾಟಕ ದೇಶವನ್ನಾಗಿ ಅದೇ ರೀತಿ ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳನ್ನು ದೇಶಗಳಾಗಿ ಮಾರ್ಪಡಿಸಿ ಅಂದರೆ ದೇಶದ ರಾಜ್ಯಗಳನ್ನು ಸ್ವತಂತ್ರ ಮಾಡುವುದಕ್ಕೆ ಅವಕಾಶವಿಲ್ಲ. ಅಂದರೆ ಸಂವಿಧಾನದ ಅನುಚ್ಛೇದ 368 ಕ್ಕೆ ತಿದ್ದುಪಡಿ ಮಾಡಿ ದೇಶದಲ್ಲಿರುವ ಒಂದೊಂದು ರಾಜ್ಯಗಳನ್ನು ಪ್ರತ್ಯೇಕವಾಗಿ ಒಂದೊಂದು ದೇಶಗಳನ್ನಾಗಿ ಮಾರ್ಪಡಿಸಲು ಅವಕಾಶವಿಲ್ಲ. No, it cannot be done. ಈ ದೇಶದ ಧರ್ಮ ನಿರಪೇಕ್ಷ ಸ್ವರೂಪವನ್ನು ಬದಲಿಸಿ ಧರ್ಮಾಧಾರಿತ ಸ್ವರೂಪದ ಸರ್ಕಾರವನ್ನು ಸ್ಥಾಪಿಸಬಹುದೇ? ಅಂದರೆ ನಮಗೆ ಧರ್ಮ ನಿರಪೇಕ್ಷಿತ ದೇಶವನ್ನು ತಿರಸ್ಕರಿಸಿ, ಇಂತಹುದೇ ನಿರ್ದಿಷ್ಟ ಧರ್ಮಾಧಾರಿತ ಸರ್ಕಾರ ಸ್ಥಾಪಿಸಬಹುದೇ ಎಂದು ನ್ಯಾಯಾಲಯವು ಪ್ರಶ್ನಿಸಿದೆ. Nothing, it cannot be done. ದೇಶದ ಪ್ರಜೆಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ನೀಡಲಾಗಿರುವ ಹಕ್ಕನ್ನು ರದ್ದುಗೊಳಿಸಬಹುದೇ? ಇದು ಸಂವಿಧಾನದ ಆಶಯ ಮತ್ತು ಮೂಲಭೂತ ತತ್ವಗಳಡಿ ಬರುತ್ತದೆ. ಹೀಗಾಗಿ ಈ ರೀತಿಯ ಬದಲಾವಣೆ ಮಾಡುವುದಕ್ಕೆ ಅವಕಾಶವಿಲ್ಲ. ಈ ದೇಶವನ್ನು ಒಂದು ಕಲ್ಯಾಣ ರಾಷ್ಟ್ರವನ್ನಾಗಿ ನಿರ್ಮಾಣ ಮಾಡಬೇಕೆನ್ನಲು ಇರುವ ಜನಾದೇಶವನ್ನು ರದ್ದು ಮಾಡುಬಹುದೇ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ಈ ರೀತಿಯಾಗಿ ರದ್ದು ಮಾಡುವುದಕ್ಕೆ ಅವಕಾಶವಿಲ್ಲ. ಸಂಸತ್ತಿನ ಎರಡೂ ಮನೆಗಳು ಅಂದರೆ ಲೋಕಸಭೆ ಮತ್ತು ರಾಜ್ಯಸಭೆಗಳಿಗಿರುವ ಅನುಕ್ರಮವಾಗಿ ಐದು ಮತ್ತು ಆರು ವರ್ಷಗಳ ಅವಧಿಯನ್ನು indefinitely ಅಧಿಕಾರದಲ್ಲಿ ಮುಂದುವರೆಸುವಂತಹ ತಿದ್ದುಪಡಿಯನ್ನು ಮಾಡಬಹುದಲ್ಲವೇ? ಅಂದರೆ ದೇಶದಲ್ಲಿ ಲೋಕಸಭೆಯ ಚುನಾವಣೆಯನ್ನು ಮಾಡುವುದೇ ಬೇಡ. ಈ ವಿಷಯದಲ್ಲಿ ತಿದ್ದುಪಡಿ ಮಾಡಿ indefinite ಅವಧಿಯವರೆಗೆ ಮುಂದುವರೆಸಬಹುದೇ ಎಂಬ ಪ್ರಶ್ನೆಗೆ ಆ ರೀತಿಯಾಗಿ ಮಾಡುವುದಕ್ಕೆ ಅವಕಾಶವಿಲ್ಲ. ಸಂವಿಧಾನಕ್ಕೆ ಯಾವುದೇ ರೀತಿಯಾದ ತಿದ್ದುಪಡಿಗಳನ್ನು ಮಾಡದಂತೆ ಸಂವಿಧಾನವನ್ನು ನಿರ್ಬಂಧಿಸಲು ಸಾಧ್ಯವಿಲ್ಲ. ಸಂವಿಧಾನದ ಅನುಚ್ಛೇದ 368 ರಲ್ಲಿ ನೀಡಿದ ಅಧಿಕಾರದಲ್ಲಿ ಮೇಲೆ ಹೇಳಿದ ಯಾವುದೇ ರೀತಿಯ ಸನ್ನಿವೇಶಗಳಲ್ಲಿ ಸಂವಿಧಾನದ ತಿದ್ದುಪಡಿ ಮಾಡಲು ಸಂಸತ್ತಿಗೆ ಅಧಿಕಾರವಿಲ್ಲ. ದೇಶದ ಸರ್ವೋಚ್ಛ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನ್ಯಾಯಾಲಯವು ಸಂವಿಧಾನದ ಮೂಲ ತತ್ವಗಳನ್ನು ಹೆಕ್ಕಿ, ಪಟ್ಟಿ ಮಾಡಿ ಪ್ರಸ್ತುತ ಪಡಿಸಿದೆ. ಈ ಮೂಲ ತತ್ವಗಳನ್ನು expressly declare ಮಾಡಿಲ್ಲ. ಆದರೆ ಯಾವ ಮೂಲ ತತ್ವಗಳು ಸಂವಿಧಾನದಲ್ಲಿವೆ ಎನ್ನುವುದನ್ನು ನ್ಯಾಯಾಲಯವು ನಮಗೆ ತಿಳಿಸಿದೆ. ಸಂವಿಧಾನದ ಮೂಲ ತತ್ವ ಹಾಗೂ ಆಶಯಗಳನ್ನು ನಾನು ಇಲ್ಲಿ ಹೇಳಲಿಚ್ಛಿಸುತ್ತೇನೆ. ಇಂತಹ ಮೂಲಭೂತ ತತ್ವಗಳನ್ನು ಬದಲಾವಣೆ ಅಥವಾ ತಿದ್ದುಪಡಿ ಮಾಡುವುದಕ್ಕೆ ಅವಕಾಶವಿಲ್ಲ.

(1) ಸಂವಿಧಾನದ ಪರಮಾಧಿಕಾರ

(2) ಭಾರತದ ಸಾರ್ವಭೌಮತ್ವ ಅಂದರೆ Sovereign Country

(3) ಸಂಸದೀಯ ಪ್ರಜಾಪ್ರಭುತ್ವ

(4) ಕಲ್ಯಾಣ ರಾಷ್ಟ್ರದ ಪರಿಕಲ್ಪನೆ

(5) ಧರ್ಮನಿರಪೇಕ್ಷತೆ ಮತ್ತು ಜಾತ್ಯಾತೀತತೆ

(6) ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಅಧಿಕಾರ ಪ್ರತ್ಯೇಕಿಕರಣ ಮಾಡುವುದು

(7) ದೇಶದ ಒಕ್ಕೂಟ ಸ್ವರೂಪ ಅಂದರೆ Federal Structure ನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ.

(8) ದೇಶದ ಐಕ್ಯತೆ ಮತ್ತು ಸಮಗ್ರತೆ.

ಇವುಗಳು ಸಂವಿಧಾನದ ಮೂಲ ತತ್ವ, ಆಶಯ ಮತ್ತು ಸಿದ್ಧಾಂತಗಳಾಗಿವೆ. Judicial Review ಕೂಡ ಬರುವುದಿಲ್ಲ.

(9) ವೈಯಕ್ತಿಕ ಘನತೆ ಮತ್ತು ಸ್ವಾತಂತ್ರ್ಯ ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸಲು ಇರುವ ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ.

(10) ಸಾಮಾಜಿಕ ಮತ್ತು ಸ್ವಾಭಾವಿಕ ನ್ಯಾಯ ಮತ್ತು ಮೂಲಭೂತ ಹಕ್ಕುಗಳು.

ಇವುಗಳೆಲ್ಲವೂ ಸಂವಿಧಾನದ ಮೂಲಭೂತ ತತ್ವ ಮತ್ತು ಆಶಯಗಳಾಗಿದ್ದು, ಇವುಗಳಿಗೆ ಯಾವುದೇ ರೀತಿಯ ಬದಲಾವಣೆ ಹಾಗೂ ತಿದ್ದುಪಡಿಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ.We cannot touch all these things.

ನಮ್ಮ ದೇಶವು 1950 ನೇ ಜನವರಿ 26 ರಂದು ಗಣರಾಜ್ಯವಾಯಿತು. ಅಲ್ಲಿಂದ ನಂತರ ಯಾವುದೇ ಸಾಧನೆಗಳಾಗಿಲ್ಲವೇ? ಗಣರಾಜ್ಯದ ನಂತರ ಸಾಧಿಸಿದ ಸಾಧನೆಗಳನ್ನು ನಾವು ಮೆಲುಕು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಬೇಕು. ಸಂವಿಧಾನವು ಜಾರಿಗೆ ಬಂದ ನಂತರ ದೇಶದಲ್ಲಿ ಸಾಕಷ್ಟು ಅಭಿವೃದ್ಧಿಗಳಾಗಿವೆ. ಆದರೆ ನಾವು ಇತಿಹಾಸದ ಪುಟಗಳನ್ನು ತಿರುಗಿಸಿ ನೋಡಿದಾಗ ನಮಗೆ ಗುಪ್ತರ, ಮೌರ್ಯರ, ಹರ್ಷವರ್ಧನ, ಕಾನಿಷ್ಕರ, ಮೊಘಲರ, ಫ್ರೆಂಚ್‌ರ ಮತ್ತು ಕೊನೆಗೆ ಬ್ರಿಟೀಷರ ಕಾಲದ ಭಾರತ ದೇಶ ಅಂದರೆ ಹರಿದು ಹಂಚಿ ಹೋಗಿದ್ದ ಭಾರತ ದೇಶವನ್ನು ನಾವು ಕಾಣುತ್ತೇವೆ. ಆದರೆ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿವರೆಗಿನ ಇಡೀ ಭೂಪ್ರದೇಶವು ಈ ಹಿಂದೆ ಎಂದೆಂದೂ ಒಂದೇ ರಾಜಕೀಯ ಆಡಳಿತಕ್ಕೆ ಒಳಪಟ್ಟಿರಲಿಲ್ಲ. Right from Kashmir to Kanyakumari. ಇಡೀ ದೇಶದ ಸಂಪೂರ್ಣ ಭೂಪ್ರದೇಶವನ್ನು ಒಂದೇ ರಾಜಕೀಯ ವ್ಯವಸ್ಥೆಗೆ ಅಳವಡಿಸಿರುವುದು ನಮ್ಮ ಸಂವಿಧಾನದ ಸಾಧನೆಯಾಗಿದೆ. 1947 ನೇ ಇಸವಿಯಲ್ಲಿ ಸ್ವಾತಂತ್ರ್ಯ ಬಂದ ನಂತರ ಭಾರತ ದೇಶದಲ್ಲಿದ್ದ ಸುಮಾರು 660 ಅರಸೊತ್ತಿಗೆಗಳನ್ನು ರದ್ದು ಮಾಡಲಾಯಿತು. ಅವುಗಳೆಲ್ಲವೂ ಭಾರತದ Union of Government ನಲ್ಲಿ ವಿಲೀನವಾದವು. ಇಡೀ ಭಾರತ ದೇಶವನ್ನು ಅಂದರೆ, ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿವರೆಗಿನ ಪ್ರದೇಶವನ್ನು ಒಂದೇ ರಾಜಕೀಯ ಆಡಳಿತಕ್ಕೆ ಒಳಪಡಿಸಲಾಯಿತು. ಇಡೀ ದೇಶಕ್ಕೆ ಒಂದೇ ರೀತಿಯಾದ ಸಂವಿಧಾನ, ಗಡಿ, ರಾಷ್ಟ್ರಗೀತೆ, ರಾಷ್ಟ್ರಧ್ವಜ, ರಾಷ್ಟ್ರ ಚಿನ್ಹೆಗಳನ್ನು ನಿಗದಿಪಡಿಸಲಾಯಿತು. ಇದೇ ನಿಜವಾದ ಭಾರತದ ನಿರ್ಮಾಣವೆಂದು ಹೇಳಬಹುದು.

ದೇಶಕ್ಕೆ ಸ್ವಾತಂತ್ರ್ಯ ಬಂದ ಕೂಡಲೇ ಅಂದರೆ ಬ್ರಿಟೀಷರು ಭಾರತ ದೇಶವನ್ನು ಬಿಟ್ಟು ಹೋದ ಕೂಡಲೇ ಕಾಂಗ್ರೆಸ್ ಪಕ್ಷವು ಆಡಳಿತಕ್ಕೆ ಬಂದಿತು ಮತ್ತು ಅವರು ಅಧಿಕಾರಕ್ಕೆ ಬಂದ ಮೇಲೆ ಯಾವುದೇ ಕಾರ್ಯಗಳನ್ನು ಮಾಡಿಲ್ಲವೆಂದು ನಮ್ಮ ಬಹಳಷ್ಟು ಸ್ನೇಹಿತರು ಹೇಳುತ್ತಾರೆ. ಬ್ರಿಟೀಷರು ನಮ್ಮ ದೇಶವನ್ನು ಬಿಟ್ಟು ಹೋದಾಗ ದೇಶದ ಪರಿಸ್ಥಿತಿ, ಇಲ್ಲಿನ ಮಿಲಿಟರಿ ವ್ಯವಸ್ಥೆ ಹೇಗಿತ್ತು? ನಾನು ಮಿಲಿಟರಿಯ ಮೂರು ವಿಭಾಗಗಳ ಬಗ್ಗೆ ಹೇಳುತ್ತೇನೆ. ನಮ್ಮ ದೇಶದ ಗಡಿ ಕಾಯಲು ಸೈನಿಕರು ಇರಲಿಲ್ಲ. ಆಗಿನ ಸಂದರ್ಭದಲ್ಲಿ ಕಡಿಮೆ ಸಂಖ್ಯೆಯಲ್ಲಿ ಯುದ್ಧ ವಿಮಾನಗಳಿದ್ದವು. ಆ ಪೈಕಿ ಕೆಲವು ವಿಮಾನಗಳು ಆಕಾಶದಲ್ಲಿ ಹಾರಾಡುವ ಸ್ಥಿತಿಯಲ್ಲಿರಲಿಲ್ಲ. ಯುದ್ಧದ ಟ್ಯಾಂಕರ್‌ಗಳು ಸುಸ್ಥಿತಿಯಲ್ಲಿರಲಿಲ್ಲ. ಮಾನ್ಯ ಗೋವಿಂದ ಎಂ. ಕಾರಜೋಳ ರವರಿಗೆ ತಿಳಿದಿರುವಂತೆ 1962 ನೇ ಇಸವಿಯಲ್ಲಿ ಇಂಡೋ–ಚೈನಾ ಯುದ್ಧ ನಡೆಯಿತು. ಆ ಸಂದರ್ಭದಲ್ಲಿ ನಮ್ಮ ಸೈನಿಕರು ಬಹಳಷ್ಟು ಹಿಂಸೆಯನ್ನು ಅನುಭವಿಸಿದರು. ಏಕೆಂದರೆ ನಮ್ಮ ದೇಶದಲ್ಲಿ ಸಶಕ್ತವಾದ ಮಿಲಿಟರಿ ಶಕ್ತಿ ಇರಲಿಲ್ಲ. 1962 ನೇ ಇಸವಿಯ ಯುದ್ಧದ ಸಂದರ್ಭದಲ್ಲಿ ನಾನು ನಮ್ಮ ಜಿಲ್ಲೆಯವರನ್ನು ನೆನಪಿಸಿಕೊಳ್ಳಬೇಕು. ಆಗ ಅಖಂಡ ವಿಜಯಪುರ ಜಿಲ್ಲೆಯಾಗಿತ್ತು. ಆ ಯುದ್ಧದ ಸಂದರ್ಭದಲ್ಲಿ ದೇಶದ ಬೊಕ್ಕಸದಲ್ಲಿ ಹಣವಿರಲಿಲ್ಲ ಹಾಗೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ಸೈನಿಕರು ಬಹಳ ತೊಂದರೆ ಅನುಭವಿಸುವಂತಾಯಿತು. ಆಗ ರಾಷ್ಟ್ರೀಯ ರಕ್ಷಣಾ ನಿಧಿಗೆ ಹಣದ ಸಂಗ್ರಹಣೆ ಮಾಡುತ್ತಿದ್ದರು. ಆಗ ಅಖಂಡ ವಿಜಯಪುರ ಜಿಲ್ಲೆ ಇತ್ತು. ಈಗ ಅದು ವಿಜಯಪುರ ಮತ್ತು ಬಾಗಲಕೋಟೆ ಎಂಬ ಎರಡು ಜಿಲ್ಲೆಗಳಾಗಿ ವಿಭಜನೆಯಾಗಿದೆ. ನಮ್ಮ ಅಖಂಡ ಜಿಲ್ಲೆಯ ಹೆಣ್ಣುಮಕ್ಕಳು ತಮ್ಮ ಕೊರಳಿನಲ್ಲಿದ್ದ ಬಂಗಾರದ ಸರ, ಕೈಯ್ಯಲ್ಲಿದ್ದ ಪಾಟಲಿ, ಗಿಲವಾರ ಇತ್ಯಾದಿ ಚಿನ್ನಾಭರಣಗಳನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ನೀಡಿದರು. ವಿಶ್ವದ ಉಕ್ಕಿನ ಮಹಿಳೆ ಎಂದು ಕರೆಯಲ್ಪಡುವ ದೇಶದ ಮಾಜಿ ಹಾಗೂ ನಮ್ಮ ನೆಚ್ಚಿನ ಶ್ರೀಮತಿ ಇಂದಿರಾ ಗಾಂಧಿ ಮತ್ತು ರಾಜ್ಯದ ಯಜಮಾನ ಎಂದು ಕರೆಯಲ್ಪಡುವ ಶ್ರೀ ನಿಜಲಿಂಗಪ್ಪ ರವರಗಳ ತೂಕದಷ್ಟು ಬಂಗಾರವನ್ನು ತೂಗಿ ನಮ್ಮ ಜಿಲ್ಲೆಯವರು ಅಂದು ನೀಡಿದ್ದರು. ಅಂದಿನ ರಾಷ್ಟ್ರದ ಸಂಕಷ್ಟ ಪರಿಸ್ಥಿತಿಗೆ ನಮ್ಮ ಜನರು ಸ್ಪಂದಿಸಿದ್ದರು. ಇದೇ ರೀತಿಯಾಗಿ ದೇಶದ ಬಹಳಷ್ಟು ಜಿಲ್ಲೆಗಳು ರಾಷ್ಟ್ರದ ಸಂಕಷ್ಟ ಪರಿಸ್ಥಿತಿಗೆ ಸ್ಪಂದಿಸಿದ್ದವು. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ನಮ್ಮ ಭಾಗದವರಾಗಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಕೇವಲ ವಿರೋಧ ಪಕ್ಷದ ನಾಯಕರ ಜಿಲ್ಲೆಯವರಿಗೆ ಮಾತ್ರವೇ ಅವರು ಸೀಮಿತವಾದರೆ, ಬೇರೆಯವರು ದೇಶಕ್ಕೆ ಏನೂ ಕೊಟ್ಟಿಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-**ಮಾನ್ಯ ಸಭಾಪತಿಯವರೇ, ಇಷ್ಟು ದೊಡ್ಡ ಪ್ರಮಾಣದಲ್ಲಿ ಯಾರೂ ಸಹ ನೀಡಿಲ್ಲ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ನಮ್ಮ ಜಿಲ್ಲೆಯವರಲ್ಲ. ಮಾನ್ಯ ಸದಸ್ಯರು ತಾಯಿಯ ತವರು ಮನೆ ನಮ್ಮ ಜಿಲ್ಲೆಯಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ನಾವು ನಮ್ಮ ಸರ್ಕಾರಿ ಭರವಸೆಗಳ ಸಮಿತಿಯ ವತಿಯಿಂದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಊರಿಗೆ ಹೋಗಿದ್ದೆವು. ಮಾನ್ಯ ಸದಸ್ಯರು ಒಂದು ಸರ್ಕಾರಿ ಶಾಲೆಯನ್ನು ಬಹಳ ಅದ್ಭುತವಾಗಿ ಅವರ ತಂದೆ-ತಾಯಿಯವರ ಹೆಸರಿನಲ್ಲಿ ನಿರ್ಮಿಸಿದ್ದಾರೆ. ಅವರಿಗೆ ನನ್ನ ನಮಸ್ಕಾರಗಳು. ಅಲ್ಲಿನ ಗ್ರಂಥಾಲಯವನ್ನು ಬಹಳ ಅದ್ಭುತವಾಗಿ ಮಾಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, ಈ ಕಾರ್ಯಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಮಾನ್ಯ ಸದಸ್ಯರು ನಮ್ಮ ಊರಿಗೆ ಪ್ರೌಢ ಶಾಲೆಯನ್ನು ನೀಡಿದ್ದಾರೆ. ಅವರ ತಾಯಿಯವರ ಹೆಸರಿನಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಯು ಮಾನ್ಯ ಗೋವಿಂದ ಎಂ.ಕಾರಜೋಳ ರವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಮಾನ್ಯ ಸದಸ್ಯರು ಬಹಳ ಒಳ್ಳೆಯ ಕೆಲಸಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆ. ಆ ಶಾಲೆಗೆ ನಾನು ಹಣವನ್ನು ನೀಡಿದ್ದೇನೆ. **'ಕೆರೆಯ ನೀರನು ಕೆರೆಗೆ ಚೆಲ್ಲಿ'** ಎನ್ನುವಂತೆ ಅದು ನನ್ನ ಸ್ವಂತ ಹಣವಾಗಿರದೇ, ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಅನುದಾನವನ್ನು ನೀಡಿದ್ದೇನೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಮಾಡಿರುವ ಕೆಲಸಗಳನ್ನು ನಾನು ಮೆಚ್ಚಿಕೊಳ್ಳುತ್ತೇನೆ. ದೇಶ ಕಷ್ಟ ಮತ್ತು ಶೋಚನೀಯ ಸ್ಥಿತಿಯಲ್ಲಿರುವಾಗ ನಮ್ಮ ಜಿಲ್ಲೆಯ ಜನ ಹೃದಯ ಶ್ರೀಮಂತಿಕೆಯನ್ನು ತೋರಿಸಿದ್ದರು. ಹೆಣ್ಣುಮಕ್ಕಳು ಬಂಗಾರವನ್ನು ಪ್ರೀತಿಸುವಷ್ಟು ಯಾರನ್ನೂ, ಯಾವುದನ್ನೂ ಪ್ರೀತಿಸುವುದಿಲ್ಲ. Invariably, ಕೇಳಿದ ತಕ್ಷಣವೇ ಎಲ್ಲಾ ಹೆಣ್ಣುಮಕ್ಕಳು ಬಂಗಾರ ನೀಡಿದ್ದಾರೆ. ಆ ಪೈಕಿ ಕೆಲವರು 101 ತೊಲ ಬಂಗಾರವನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ನೀಡಿದ್ದರು. ಅಂದಿನ ಪರಿಸ್ಥಿತಿಯಲ್ಲಿ ದೇಶದ ಮಿಲಿಟರಿ ವ್ಯವಸ್ಥೆಯು ಬಹಳ ದುರ್ಬಲವಾಗಿತ್ತು.

**(ಮುಂದು)**

(529)/18-3-2020/4-00/ಎಲ್ಎಂ/ಬಿಎನ್ಎಸ್

**ಶ್ರೀ ಎಸ್.ಆರ್.ಪಾಟೀಲ್**(ಮುಂದು):-

ಇವತ್ತು ಇಡೀ ಪ್ರಪಂಚದಲ್ಲಿ ನಮ್ಮ ದೇಶ 5ನೇ ಶಕ್ತಿಶಾಲಿ ಮಿಲಿಟರಿ ವ್ಯವಸ್ಥೆಯನ್ನು ಹೊಂದಿದೆ. I say it very proudly. ಇಷ್ಟು ಅಭಿವೃದ್ಧಿ ಹೇಗೆ ಆಯಿತು? ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಾಗ ದೇಶದಲ್ಲಿ 100ಕ್ಕೆ 85ರಷ್ಟು ಜನರು ನಿರಕ್ಷರಕುಕ್ಷಿಗಳಾಗಿದ್ದರು. 15% ರಷ್ಟು ಜನರು ಮಾತ್ರ literate ಆಗಿದ್ದರು. ಸಂವಿಧಾನದ ಸಾಧನೆ ಬಗ್ಗೆ ಹೇಳುತ್ತಿರುವಾಗ ಈ ವಿಚಾರವನ್ನು ಹೇಳಬೇಕಾಗುತ್ತದೆ. ಈಗ 100ಕ್ಕೆ 85ರಷ್ಟು ಜನರು literate ಆಗಿದ್ದಾರೆ. ಈ ಸಾಧನೆಗೆ ಕಾರಣರಾದವರ ಹೆಸರನ್ನು ಹೇಳಲು ನನಗೇನು ಅಭ್ಯಂತರವಿಲ್ಲ. ಈ ದೇಶದ ಪ್ರಥಮ ಪ್ರಧಾನ ಮಂತ್ರಿಗಳಾದ ದಿ: ನೆಹರು, ಗಾಂಧಿಯವರನ್ನು, ಈಗಿನ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರನ್ನು, ಹಿಂದಿನ ಪ್ರಧಾನ ಮಂತ್ರಿಗಳಾಗಿದ್ದ ದಿ: ಅಟಲ್ ಬಿಹಾರಿ ವಾಜಪೇಯಿಯವರನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಇನ್ನು ಅನೇಕ ಜನರು ಈ ದೇಶವನ್ನು ಆಳಿದ್ದಾರೆ. ಆಳಿದ್ದಾರೆ ಅನ್ನಬಾರದು ಸೇವೆ ಮಾಡಿದ್ದಾರೆ ಎಂದು ಹೇಳಬೇಕು. ಆಗ 100 ಕ್ಕೆ 75ರಷ್ಟು ಜನರು ಒಂದು ಹೊತ್ತಿನ ಊಟ ಮಾಡುತ್ತಿದ್ದರು. ಆಗ ದಿ: ಲಾಲ್ ಬಹದ್ದೂರ್ ಶಾಸ್ತ್ರಿಯವರು ಜನರಲ್ಲಿ ಸೋಮವಾರ ರಾತ್ರಿ ಊಟ ಮಾಡಬೇಡಿ ಎಂದು ಮನವಿ ಮಾಡಿಕೊಂಡಿದ್ದರು. ಏಕೆಂದರೆ ಈ ದೇಶದಲ್ಲಿರುವ ಎಷ್ಟೋ ಜನರಿಗೆ ತಿನ್ನಲು ಅನ್ನ ಇಲ್ಲ. ಅನ್ನವಿರುವವರು ಒಂದು ಹೊತ್ತಿನ ಊಟ ಬಿಡಿ ಎಂದು ಮನವಿ ಮಾಡಿಕೊಂಡಿದ್ದರು. ನೋಡಿ ಆಗ ನಮ್ಮ ಸ್ಥಿತಿ ಹೇಗೆ ಇತ್ತು.

**ಶ್ರೀ ಎನ್.ರವಿಕುಮಾರ್**:- 'ಶಾಸ್ತ್ರಿ ಸೋಮವಾರ' ಎಂದು ಕರೆಯಲಾಗುತ್ತಿತ್ತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ದೇಶದಲ್ಲಿ ಅಷ್ಟೊಂದು ಅನ್ನದ ಸಮಸ್ಯೆ ಇತ್ತು. ಆಗ 50 ದಶಲಕ್ಷ ಟನ್ ವಾರ್ಷಿಕ ಕೃಷಿ ಉತ್ಪನ್ನ ಇತ್ತು. ಇವತ್ತು 280 ದಶಲಕ್ಷ ಟನ್‌ಗೆ ಏರಿದೆ. ಅದರ ಜೊತೆಗೆ ಯು.ಪಿ.ಎ. ಸರ್ಕಾರವಿದ್ದಾಗ ಜಗತ್ ವಿಖ್ಯಾತರಾದ ಆರ್ಥಿಕ ತಜ್ಞರಾದ ಡಾ:ಮನಮೋಹನ್ ಸಿಂಗ್‌ರವರು ಭಾರತ ದೇಶದ ಜನ ಹಸಿವಿನಿಂದ ಬಳಲಬಾರದು ಎಂದು National Food Security Act ಅನ್ನು ಜಾರಿಗೆ ತಂದರು. ಆಹಾರ ಭದ್ರತೆಯ ಕ್ರಾಂತಿಕಾರಿ ಕಾನೂನು ತಂದರು. ಅದೇ ರೀತಿ ನಮ್ಮ ರಾಜ್ಯದಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರವಿದ್ದಾಗ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಕರ್ನಾಟಕ ರಾಜ್ಯದಲ್ಲಿ ಜನರು ಹಸಿವಿನಿಂದ ಬಳಲಬಾರದು, ಕರ್ನಾಟಕವನ್ನು ಹಸಿವು ಮುಕ್ತ ರಾಜ್ಯವನ್ನಾಗಿ ಮಾಡಬೇಕೆಂದು ಅವರು ಒಂದು ಕುಟುಂಬಕ್ಕೆ 30 ರಿಂದ 35 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ಕೊಡುವಂತಹ ವ್ಯವಸ್ಥೆಯನ್ನು ಜಾರಿಗೆ ತಂದರು. ಆದರೆ ಇಂದು ಸೋಜಿಗದ ಸಂಗತಿ ಎಂದರೆ, ಈ ಆಹಾರ ಪದ್ಧತಿಯನ್ನು ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಈಗ ಜಾರಿಯಲ್ಲಿ ತಂದಿರಬಹುದು. ಆದರೆ 900 ವರ್ಷಗಳ ಹಿಂದೆ ಬಸವಾದಿ ಶರಣರು 'ಅನ್ನದಾಸೋಹ' ವನ್ನು ಪ್ರಾರಂಭ ಮಾಡಿದರು. ಅವರ contribution ಎಷ್ಟು ಇದೆ ಎನ್ನುವುದನ್ನು ಯೋಚನೆ ಮಾಡಬೇಕು. ಅನ್ನದಾಸೋಹದ ಮುಂದುವರೆದ ಭಾಗವೆ ಈ ಹಸಿವು ಮುಕ್ತ ಸಮಾಜ ನಿರ್ಮಾಣ ಕಾರ್ಯ. 100ಕ್ಕೆ 65% ರಷ್ಟು ಜನರಿಗೆ ತಲೆ ಮೇಲೆ ಸೂರು ಇರಲಿಲ್ಲ. ಭೂಮಿಯೇ ಹಾಸಿಗೆ, ಆಕಾಶವೇ ಹೊದಿಕೆಯಾಗಿತ್ತು. ಇವತ್ತು ಗುಡಿಸಲು ಮುಕ್ತ ರಾಷ್ಟ್ರವನ್ನು ನಿರ್ಮಾಣ ಮಾಡುತ್ತೇವೆ ಎಂದು 100% ಆಗಿದೆ ಎಂದು ಹೇಳುವುದಿಲ್ಲ, ಆದರೆ, majority of people are having shelter now. ಬಹಳಷ್ಟು ಜನರಿಗೆ ತಲೆ ಮೇಲೆ ಸೂರು ಬರುವಂತಹ ಕೆಲಸವನ್ನು ಮಾಡಿದ್ದಾರೆ. ನಮ್ಮ ಸಂವಿಧಾನ ಕೊಡಮಾಡಿರುವ ಈ ಎಲ್ಲ ಕಾನೂನುಗಳನ್ನು ಬಳಸಿಕೊಂಡು ಜಾರಿಗೆ ತಂದಿರುವ ಅನೇಕ ಕಾರ್ಯಕ್ರಮಗಳ, ಯೋಜನೆಗಳ ಪರಿಣಾಮವಾಗಿ ಮಹಿಳೆಯರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿಯವರು, ಪರಿಶಿಷ್ಟ ಪಂಗಡದವರ ಆರ್ಥಿಕ ಸ್ಥಿತಿ ಅಭಿವೃದ್ಧಿಯನ್ನು ಕಾಣುತ್ತಿದೆ. ಇದು ಸಂವಿಧಾನದ ಸಾಧನೆ ಎಂದು ನಾನು ಹೇಳುತ್ತೇನೆ. ಎಲ್ಲಾ ವರ್ಗದ ಜನರು ಶಾಸಕಾಂಗದಲ್ಲಿ, ಕಾರ್ಯಾಂಗದಲ್ಲಿ ಮತ್ತು ನ್ಯಾಯಾಂಗದಲ್ಲಿ ಭಾಗಿಗಳಾಗುವಂತಹ ಹಕ್ಕನ್ನು ಸಂವಿಧಾನ ಕೊಟ್ಟಿದೆ. ಅವರು ಸಹ ತಮ್ಮ ಕೊಡುಗೆಗಳನ್ನು ಕೊಡುತ್ತಿದ್ದಾರೆ. ಇಷ್ಟೆಲಾ ಆದಾಗ್ಯೂ ನಾವು ಸಂಪೂರ್ಣವಾಗಿ ಎಲ್ಲ ಮೂಲಭೂತ ಸೌಲಭ್ಯಗಳನ್ನು ಪಡೆದುಕೊಂಡಿದ್ದೇವೆಯೇ? 130 ಕೋಟಿ ಜನರು ಎಲ್ಲರೂ ಸಂತೃಪ್ತರಾಗಿದ್ದಾರೆ? ಇಲ್ಲ ಇನ್ನು ಸಾಧನೆ ಮಾಡುವುದು ಇದೆ. ಆದ್ದರಿಂದ ನಾವೆಲ್ಲರೂ ಒಂದಾಗಿ, ಐಕ್ಯತೆಯಿಂದ ಈ ದೇಶದ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭವಿಷ್ಯವನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ವಿಜ್ಞಾನದ ಕೊಡುಗೆಗಳನ್ನು ಬಳಕೆ ಮಾಡಿಕೊಂಡು ನಾವು ಕ್ರಿಯಾಶೀಲರಾಗಿ, ಬದ್ಧತೆಯಿಂದ, ನಿಷ್ಠೆಯಿಂದ, ಎಲ್ಲ ಜಾತಿ, ಮತ, ಪಂಗಡದವರೆಲ್ಲರೂ ಸೇರಿ ಸಮಾಜ ಕಟ್ಟುವಂತಹ, ರಾಷ್ಟ್ರ ಕಟ್ಟುವಂತಹ ಕೆಲಸ ಮಾಡಿದರೆ ಕೆಲವೆ ವರ್ಷಗಳಲ್ಲಿ ಭಾರತ ದೇಶ super power, ರಾಷ್ಟ್ರವಾಗಿ ಹೊರಹೊಮ್ಮಲು ಎಲ್ಲ ರೀತಿಯಲ್ಲಿ ಸಾಧ್ಯತೆ ಇದೆ. India will emerge as a super power if all put together. ನಮ್ಮ-ನಮ್ಮಲ್ಲಿ ಭಿನ್ನಾಭಿಪ್ರಾಯಗಳನ್ನು ಬಿಟ್ಟು ಆ ಜಾತಿ ಈ ಜಾತಿ, ಆ ಧರ್ಮ, ಈ ಧರ್ಮ ಎನ್ನುವುದನ್ನು ಬಿಟ್ಟು ನಾವೆಲ್ಲರೂ ಒಂದೇ ತಾಯಿ ಮಕ್ಕಳು, ಒಂದೇ ರಕ್ತವನ್ನು ಹಂಚಿಕೊಂಡು ಹುಟ್ಟಿದವರು, ನಾವೆಲ್ಲರೂ ಎನ್ನುವ ಸಹೋದರ-ಸಹೋದರಿಯರು ಎನ್ನುವ ಭಾವನೆಯಿಂದ, ಭಾತೃತ್ವ ಪ್ರೇಮದಿಂದ ಸಂವಿಧಾನದಲ್ಲಿ ಏನು ಹೇಳಿದ್ದಾರೆ ಆ ರೀತಿ ನಡೆದುಕೊಂಡರೆ, India will definitely emerge as a super power and it will overtake America. ನಾನು ಒಂದು ಸಾರಿ ಬಾಗಲಕೋಟೆಯಲ್ಲಿ ವಿಶ್ರಾಂತ ಕುಲಪತಿಗಳ ಜೊತೆಯಲ್ಲಿ ವೇದಿಕೆ ಹಂಚಿಕೊಂಡಿದ್ದೆ. ಆಗ ಆ ವಿಶ್ರಾಂತ ಕುಲಪತಿಗಳು, 'America is very much afraid of India' ಎಂದು ಹೇಳಿದರು. ಇದೇನು ಅಮೆರಿಕಾ ಹಿರಿಯ ಅಣ್ಣ, ದೊಡ್ಡ ರಾಷ್ಟ್ರ, ಇಡೀ ಪ್ರಪಂಚವನ್ನೆ ಏಳು ಸಾರಿ ಸುಡುವಷ್ಟು ಅಣ್ವಸ್ತ್ರ ಅವರ ಹತ್ತಿರ ಇದೆ. ಇವರೇನು ಹೀಗೆ ಹೇಳುತ್ತಾರೆ ಎಂದು ನನಗೆ ಆಶ್ಚರ್ಯವಾಯಿತು. ಚೈನಾದ ನಂತರ ಮಾನವ ಸಂಪನ್ಮೂಲದಲ್ಲಿ ನಮ್ಮ ದೇಶವೇ ದೊಡ್ಡದು. ಈ ದೇಶದ 130 ಕೋಟಿ ಜನರು ಸಮಾಜ ಕಟ್ಟುವಂತಹ ಕೆಲಸದಲ್ಲಿ ಭಾಗಿಯಾದರೆ ನಿಶ್ಚಿತವಾಗಿ India will overtake America. ಇಷ್ಟೊಂದು ಅಗಾಧವಾದ, ವಿಫುಲವಾದ ಮಾನವ ಸಂಪನ್ಮೂಲವಿದೆ. ಎಲ್ಲರೂ ದುಡಿಮೆ ಮಾಡಬೇಕು, ಊಟ ಮಾಡಿ ಡುಶ್ ಎಂದು ಮಲಗುವುದಲ್ಲ. ಅದರಲ್ಲಿಯೂ India is called as young India. ಇಡೀ ಪ್ರಪಂಚದ ಎಲ್ಲಾ ರಾಷ್ಟ್ರಗಳಿಗಿಂತ ಯುವಕರ ಸಂಖ್ಯೆ ನಮ್ಮಲ್ಲಿ ಹೆಚ್ಚಿದೆ. ಈ ದೇಶದಲ್ಲಿ 45 ವಯಸ್ಸಿನ ಒಳಗಿನವರು, ಯುವಕರು 65% ನಷ್ಟು ಇದ್ದಾರೆ. ಅದಕ್ಕಾಗಿಯೇ, India is called as young India. ಯುವಶಕ್ತಿ ಇದೆ. ಸ್ವಾಮಿ ವಿವೇಕಾನಂದರು 100 ಜನ ಯುವಕರನ್ನು ನನ್ನ ಕೈಗೆ ಕೊಡಿ ನಾವು ದೇಶವನ್ನೇ ಕಟ್ಟುತ್ತೇವೆ ಎಂದು ಹೇಳಿದರು. ಇವತ್ತು ನಮ್ಮ ದೇಶದಲ್ಲಿರುವಷ್ಟು ಯುವಕರ ಸಂಖ್ಯೆ ಬೇರೆ ಯಾವ ದೇಶದಲ್ಲಿಯು ಇಲ್ಲ. ಈ ದೇಶದ ಯುವಕರು ಮನಸ್ಸು ಮಾಡಿದರೆ ಅಮೆರಿಕಾ ದೇಶವಲ್ಲ ಇನ್ನೊಂದು ಯಾವುದಾದರೂ ಗ್ರಹದಲ್ಲಿ ಮನುಷ್ಯರಿದ್ದರೆ ಅದಕ್ಕಿಂತ ಮುಂದೆ ಹೋಗಬಹುದು. ಡಾ: ಬಿ.ಆರ್.ಅಂಬೇಡ್ಕರ್‌ರವರು ನಮ್ಮ ಮುಂದೆ ಇರುವ ಸವಾಲುಗಳ ಬಗ್ಗೆಯು ಹೇಳಿದ್ದಾರೆ. ಇಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊತ್ತು ಎಲ್ಲವನ್ನು ಹೇಳಲಾಯಿತು. ಆದರೆ ನಮ್ಮ ಮುಂದೆ ಇರುವ ಸಮಸ್ಯೆಗಳ ಬಗ್ಗೆಯು ಹೇಳಬೇಕಾಗುತ್ತದೆ. ಸಂವಿಧಾನ ಅನೇಕ ಸವಾಲುಗಳನ್ನು ಎದುರಿಸಿದೆ. ಆ ಸವಾಲುಗಳನ್ನು ನಾವು ಹಿಮ್ಮೆಟ್ಟಿಸಿದರೆ ನಮ್ಮ ಸಂವಿಧಾನವನ್ನು, ನಮಗೆ ನೀಡಿರುವ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಗಳನ್ನು ಉಳಿಸಿಕೊಳ್ಳಬಹುದು. ಆ ಸವಾಲುಗಳನ್ನು ನಾವು ಹಿಮ್ಮೆಟಿಸದಿದ್ದರೆ ಸಂವಿಧಾನವನ್ನು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿ ಇವತ್ತು ಉದ್ಭವವಾಗಿದೆ. ಸಂವಿಧಾನ ಉಳಿಯದಿದ್ದರೆ ಪ್ರಜಾಪ್ರಭುತ್ವ ಹೋಗಿ ಅರಾಜಕತೆ ಬರುತ್ತದೆ. ಸಂವಿಧಾನ ಮತ್ತು ಈ ದೇಶದ ಮುಂದೆ ಇರುವ ಸವಾಲುಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಮೊದಲನೆಯದು, ನಮ್ಮ ಪ್ರಜಾಪ್ರಭುತ್ವ ಗಟ್ಟಿಯಾಗಿದೆ, ಸದೃಡವಾಗಿದೆ, ಶಕ್ತಿಶಾಲಿಯಾಗಿದೆ. ಆದರೆ ನಾನು ಹೇಳುತ್ತೇನೆ, ನಮ್ಮ ಪ್ರಜಾಪ್ರಭುತ್ವ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ ಎನ್ನುವ ಭಾವನೆ ಬರುತ್ತಿದೆ. ಈ ಭಾವನೆ ಏಕೆ ಬರುತ್ತಿದೆ ಎನ್ನುವುದನ್ನು ಹೇಳುತ್ತೇನೆ, 1952ರಲ್ಲಿ ಲೋಕಸಭೆಗೆ ಮೊದಲನೆಯ ಮಹಾಚುನಾವಣೆ ನಡೆಯಿತು. ಒಂದು ಪಂಚಾಯಿತಿ ಚುನಾವಣೆಯಿಂದ ಹಿಡಿದು ಲೋಕಸಭೆಗೆ ನಡೆಯುವ ಚುನಾವಣೆಗಳು ಯಾವುದರ ಮೇಲೆ ನಡೆಯುತ್ತವೆ ಎನ್ನುವುದಕ್ಕೆ ನನ್ನ ಕೆಲವು ಸ್ನೇಹಿತರು ಧರ್ಮದ ಮೇಲೆ, ಜಾತಿ ಮೇಲೆ ಮುಖ್ಯವಾಗಿ ಹಣದ ಮೇಲೆ, ತೋಳ್ಬಲದ ಮೇಲೆ ನಿಂತಿದೆ ಎಂದು ಹೇಳಿದರು. ಇದೆಲ್ಲಕ್ಕಿಂತ ಹೆಚ್ಚಾಗಿ criminal background ಇರುವವರು ಇಂದು ರಾಜಕಾರಣಕ್ಕೆ ಬರುತ್ತಿದ್ದಾರೆ, ಇದು ಅಪಾಯಕಾರಿ ಬೆಳವಣಿಗೆಯಲ್ಲವೇ? ಅಂದಿನ ಮತದಾರರು ಹೇಗೆ ಇದ್ದರು, ಇವತ್ತಿನ ಮತದಾರ ಹೇಗೆ ಇದ್ದಾರೆ ಎನ್ನುವುದನ್ನು ತುಲನೆ ಮಾಡಿ ನೋಡಬೇಕಾಗುತ್ತದೆ.

(ಮುಂದು)

(530)18-03-2020(04-10)bsd-gr

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ನಮಗೆ ಹಿರಿಯರೊಬ್ಬರು ಹೇಳಿದಂತೆ ಹಿಂದೆ ಎಲ್ಲಾ ಗ್ರಾಮಗಳಿಗೆ Polling Booth ಇರುತ್ತಿರಲಿಲ್ಲ. ಯಾವುದೋ ಒಂದು ದೊಡ್ಡ ಊರಿನಲ್ಲಿ Polling Booth ಇರುತ್ತಿತ್ತು. ಪಕ್ಕದ ಊರುಗಳ ಜನರು ಮತ ಹಾಕಲು ಆ ದೊಡ್ಡ ಊರಿಗೆ ಬರುತ್ತಿದ್ದರು. ಗ್ರಾಮೀಣ ಭಾಗವಾದ್ದರಿಂದ ಎತ್ತುಗಳಿಗೆ ಸಿಂಗಾರ ಮಾಡಿ, ಚಕ್ಕಡಿಗೆ ಸವಾರಿ ಕಟ್ಟಿಕೊಂಡು ಎಂದು ನಮ್ಮ ಕಡೆ ಹೇಳುತ್ತಾರೆ. ಅಂದರೆ ಎತ್ತುಗಳಿಗೆ ಸಿಂಗಾರ ಮಾಡಿಕೊಂಡು ಚಕ್ಕಡಿ ಸವಾರಿ ಕಟ್ಟಿಕೊಂಡು, ಜೋಲ ಹಾಕಿ, varnish ಅನ್ನು ಕೋಡಿಗೆ ಹಚ್ಚಿಕೊಂಡು ಕೊಂಬಣಸು ಹಾಕಿ, ವಾದ್ಯಮೇಳಗಳೊಂದಿಗೆ ಬರುತ್ತಿದ್ದರು. ಆಮೇಲೆ ಬಂದು Booth

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂಜೆ ಮಾಡುತ್ತಿದ್ದರು. ಜೋಡೆತ್ತಿನ ಗುರುತು ಇರುತ್ತಿತ್ತು. ಒಂದೊಂದು ಪಕ್ಷಕ್ಕೆ ಒಂದೊಂದು ಪ್ರತ್ಯೇಕ ಮತ ಪೆಟ್ಟಿಗೆ ಇರುತ್ತಿತ್ತು. ಇನ್ನೊಂದು ಪಕ್ಷಕ್ಕೆ ಇನ್ನೊಂದು Box ಇರುತ್ತಿತ್ತು. ಜೋಡೆತ್ತು ಗುರುತಿನ Box ಗೆ ಮೊದಲು ಪೂಜೆ ಮಾಡುತ್ತಿದ್ದರು. ನಂತರ ಮತದಾರರು ಜೋಡೆತ್ತು ಗುರುತಿನ ಮತ ಪೆಟ್ಟಿಗೆ ಉದ್ದಕ್ಕೆ ಸಾಷ್ಟಾಂಗ ನಮಸ್ಕಾರ ಹಾಕಿ, ಮತ ಚಲಾಯಿಸಿ, ಪುಣ್ಯ ಕಟ್ಟಿಕೊಂಡೆವು ಎಂದು ತೆರಳುತ್ತಿದ್ದರು. ಒಂದೈದು ನಿಮಿಷಗಳಲ್ಲಿ Box ತುಂಬಿಬಿಡುತ್ತಿತ್ತು. ನಂತರ ಮತ್ತೊಂದು ಡಬ್ಬಿ ತರುತ್ತಿದ್ದರು. ಇನ್ನೊಂದು Box ಏನಿತ್ತು, ಅದು ಹಾಗೆ ಖಾಲಿ ಇರುತ್ತಿತ್ತು. ಅದು ಒಂದೇ Box ಆಗುತ್ತಿತ್ತು. ಅಂದರೆ ಜನ ಮತ ಹಾಕುವುದಕ್ಕೆ ಆ ರೀತಿ ಬರುತ್ತಿದ್ದರು. ಈಗ ಮತದಾರರು ಹೇಗೆ ಇದ್ದಾರೆ?

**ಶ್ರೀ ಎಸ್. ಸುರೇಶ್‌ಕುಮಾರ್‌ಃ–** ಮಾನ್ಯ ಸಭಾಪತಿಯವರೇ, ಮರ ಮುಂಚೆ ಬಂತೋ, ಬೀಜ ಮುಂಚೆ ಬಂತೋ ಎನ್ನುವಂತೆ who corrupted whom?

**ಶ್ರೀ ಹೆಚ್.ಎಂ. ರೇವಣ್ಣಃ–** ಇದು ಕೋಳಿ ಮೊದಲೋ, ಮೊಟ್ಟೆ ಮೊದಲೋ ಎನ್ನುವಂತೆ ಆಯಿತು.

**ಶ್ರೀ ಎಸ್.ಆರ್. ಪಾಟೀಲ್‌ಃ–** ಮಾನ್ಯ ಸಚಿವರೇ, ಇದು ಮದುವೆ ಆಗುವತನಕ ಹುಚ್ಚು ಬಿಡಲ್ಲ, ಹುಚ್ಚು ಬಿಡೋವರೆಗೂ ಮದುವೆ ಆಗಲ್ಲ ಎನ್ನುವಂತೆ ಆಗಿದೆ.

**Sri S.SURESH KUMAR:-** Whether we as a political class corrupted the voters or voters themselves became corrupt?

**ಶ್ರೀ ಎಸ್.ಆರ್. ಪಾಟೀಲ್‌ಃ–** ನಾನು ಮಾನ್ಯ ಸಚಿವರು ಹೇಳುತ್ತಿರುವ ವಿಷಯಕ್ಕೆ ಬರುತ್ತೇನೆ. ನಾನು ಈಗಾಗಲೇ ಹೇಳಿದ್ದೆನು. ಅಂದಿನ ರಾಜಕಾರಣಿಗಳು ಹೇಗಿದ್ದರು ಮತ್ತು ಇಂದಿನ ರಾಜಕಾರಣಿಗಳು ಹೇಗಿದ್ದಾರೆ? ಅಂದಿನ ರಾಜಕಾರಣ ಹೇಗಿತ್ತು ಮತ್ತು ಇಂದಿನ ರಾಜಕಾರಣ ಹೇಗಿದೆ? ಅಂದಿನ ಅಧಿಕಾರಿಗಳು ಹೇಗಿದ್ದರು ಮತ್ತು ಇಂದಿನ ಅಧಿಕಾರಿಗಳು ಹೇಗಿದ್ದಾರೆ? ಅಂದಿನ Judicial Officers ಹೇಗಿದ್ದರು ಮತ್ತು ಈಗ ಹೇಗಿದ್ದಾರೆ? ಯಾವುದೇ ಕ್ಷೇತ್ರವನ್ನು ತೆಗೆದುಕೊಳ್ಳಲಿ. ನಾನು ಬಹಳ ದುಃಖದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮತದಾರರ trend change ಆಗಿದೆ, ನಮ್ಮ trend change ಆಗಿದೆ. ಮಾನ್ಯ ಶಿಕ್ಷಣ ಸಚಿವರು ಯಾವುದಾದರೊಂದು ಊರಿಗೆ ಹೋಗಿ ಪ್ರಾಥಮಿಕ ಶಾಲೆಯ ಮಗುವನ್ನು ಕೇಳಲಿ, ರಾಜಕಾರಣಿಗಳ ಬಗ್ಗೆ ಆ ಮಗು ಬಹಳ ಕೆಟ್ಟವರು ಎಂದು ಹೇಳುತ್ತದೆ. ನಮ್ಮ ಸ್ಥಿತಿ ಎಲ್ಲಿಗೆ ಬಂತು? ಈ ರೀತಿಯಾದರೆ ಇದರಲ್ಲಿ ಮುಂದುವರೆಯುವುದೋ ಬೇಡವೋ ಎನ್ನುವಂತೆ ಆಗಿದೆ. ನನ್ನ ವಿಷಯದಲ್ಲಿ ಮುಂದುವರೆಯದಿದ್ದರೂ ಏನೂ ತೊಂದರೆ ಇಲ್ಲ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಿಡಿ. ಈಗ younger generation ಯುವಕರು ಇದ್ದಾರೆ. ನನಗೆ ಮಾನ್ಯ ಹೊರಟ್ಟಿಯವರು ಯುವಕರೇ ಆಗಿದ್ದಾರೆ. ಅವರು youngest ಆಗಿದ್ದು, ನೋಡುವುದಕ್ಕೂ ಹಾಗೆ ಇದ್ದಾರೆ.

**ಶ್ರೀ ಎನ್. ರವಿಕುಮಾರ್:-** ಕೆಲವರು ಹೆಂಗೋ, ಕೆಲವರಿಗೆ ಹೆಂಗೇಂಗೋ ಆಗಿದೆ.

**ಶ್ರೀ ಎಸ್.ಆರ್. ಪಾಟೀಲ್:-** ನಾನೇನೂ ಹೇಳುವುದಿಲ್ಲ, ಮಾನ್ಯ ರವಿಕುಮಾರ್‌ರವರು ಏನು ಹೇಳಿದರೂ ನಡೆಯುತ್ತದೆ. ನಿನ್ನೆ ಮಾನ್ಯ ರವಿಕುಮಾರ್‌ರವರು ಬಹಳ ಚೆನ್ನಾಗಿ ಮಾತನಾಡಿದರು ಎಂದು ಕೇಳಿದೆ. ಮಾನ್ಯ ಸಭಾನಾಯಕರು ಬಹಳ appreciate ಮಾಡಿದರು. ಈಗ ಎಷ್ಟು ಅಗಾಧವಾದ ಬದಲಾವಣೆ ಆಗಿದೆ. ಮಾನ್ಯ ಹೊರಟ್ಟಿಯವರು 7 ಚುನಾವಣೆಗಳಲ್ಲಿ ಗೆದ್ದಿದ್ದು, ಮೊದಲನೆಯ ಚುನಾವಣೆಯಲ್ಲಿ ಮತದಾರರು ಹೇಗಿದ್ದರು ಮತ್ತು ಈಗ ಹೇಗಿದ್ದಾರೆ ಎಂಬುದನ್ನು ಹೇಳಬೇಕು. ಈಗ stake ಹೆಚ್ಚಾಗಿದೆ. Local bodies ಮಂಗಳೂರಿನ ಕಡೆಗಳಲ್ಲಿ ಇದ್ದರೂ ಕಡಿಮೆ ಇವೆ. ಉಳಿದ ಕಡೆಗಳಲ್ಲಿನ ಪರಿಸ್ಥಿತಿ ಹೇಗಿದೆ? ಪ್ರಾಮಾಣಿಕರು ರಾಜಕಾರಣದಲ್ಲಿ ಬರುವುದಕ್ಕೆ ಸಾಧ್ಯವಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಪಾಟೀಲರಿಗೆ ಅನುಭವವಾಗಿದೆಯೇ?

**ಶ್ರೀ ಎಸ್.ಆರ್. ಪಾಟೀಲ್:-** ಅನುಭವ ಅಲ್ಲ, ಈ ಮಾತುಗಳು ನನ್ನಿಂದ ಏಕೆ ಬರುತ್ತಿವೆ? ಪ್ರತಿ ಶಬ್ಧ ನನ್ನ ನಾಲಿಗೆ ತುದಿಯಿಂದ ಬರುವುದಿಲ್ಲ, ಹೃದಯದ ಅಂತರಾಳದಿಂದ ಬರುವ ಶಬ್ಧಗಳನ್ನು ಬಳಕೆ ಮಾಡುತ್ತಿದ್ದೇನೆ. ಇದು ಎಲ್ಲಿಗೆ ಹೋಗಿ ಮುಟ್ಟುತ್ತದೆ? ಮಾನ್ಯ ಸಭಾಪತಿಯವರೇ, criminal background ಇದ್ದವರು, muscle power ಇದ್ದವರು, ಬಹುದೊಡ್ಡ ಜಾತಿಯವರೆಲ್ಲರೂ ಹಣದ ಹೊಳೆ ಹರಿಸಿ ಆರಿಸಿ ಬರುತ್ತಾರೆ. ನಿಷ್ಠಾವಂತರು, ಪ್ರಾಮಾಣಿಕರು, ಒಳ್ಳೆಯ ಜನಸೇವಕರಾಗಲು ಅರ್ಹತೆ ಇರುವವರು ಠೇವಣಿ ಕಳೆದುಕೊಳ್ಳುತ್ತಿದ್ದಾರೆ. They are losing the deposit. Their deposit will be confiscated. ಉಳಿದವರು ಅತ್ಯಧಿಕ ಮತಗಳ ಅಂತರದಿಂದ ಆರಿಸಿ ಬರುತ್ತಾರೆ. ಮಾನ್ಯ ಸಭಾಪತಿಯವರೇ, ನಾನೊಂದು ಉದಾಹರಣೆಯನ್ನು ಹೇಳುತ್ತೇನೆ, 14, 15 ಮತ್ತು 16 ನೇ ಲೋಕಸಭೆ ಚುನಾವಣೆಗಳು ನಡೆದವು. 14 ನೇ ಲೋಕಸಭೆಯಲ್ಲಿ criminal case ಹೊಂದಿದವರು 24 per cent ಇದ್ದರು. ಕೋಟ್ಯಾಧಿಪತಿಗಳು 30 per cent ಇದ್ದರು. 15ನೇ ಲೋಕಸಭಾ ಚುನಾವಣೆಯಲ್ಲಿ criminal case ಹೊಂದಿದವರು ಮೊದಲಿನ 24 per cent ಗಿಂತ 30 per cent ಗೆ ಹೆಚ್ಚಾದರು. ಕೋಟ್ಯಾಧಿಪತಿಗಳು 58 per cent ಆದರು. 16 ನೇ ಲೋಕಸಭೆ ಅಂದರೆ 2014ರಲ್ಲಿ ನಡೆದ ಚುನಾವಣೆಯಲ್ಲಿ criminal case ಹೊಂದಿದವರು 34 per cent ಮತ್ತು ಕೋಟ್ಯಾಧಿಪತಿಗಳು 82 per cent ಆದರು. ಇನ್ನು ಮುಂದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಟ್ಯಾಧಿಪತಿಗಳಷ್ಟೇ ಆರಿಸಿ ಬರುವುದು. ಅದು ಕೆಳಮನೆ ಇರಬಹುದು ಅಥವಾ ಮೇಲ್ಮನೆ ಇರಬಹುದು. ಈ ಮಾತನ್ನು ಬೆಳಗ್ಗೆ ಮಾನ್ಯ ಸದಸ್ಯರೊಬ್ಬರು ಹೇಳಿದರು. 2019 ರ ಇಲ್ಲ ನಮ್ಮ ಕಡೆ ದಾಖಲೆ, ಅದನ್ನು search ಮಾಡುತ್ತಿದ್ದೇನೆ. ಅಂದರೆ ಇಲ್ಲಿಗೆ ಬಂದವರನ್ನು ಕೋಟ್ಯಾಧಿಪತಿಗಳು ಎನ್ನಬೇಕು. ಕೆಳಮನೆ ಶಾಸಕರು, ಮೇಲ್ಮನೆ ಶಾಸಕರು, ಸಂಸತ್ತಿನಿಂದ ಹಿಡಿದು ಎಲ್ಲ ಕಡೆ ಇದೇ ವ್ಯವಸ್ಥೆ ಇದೆ. ಪಂಚಾಯಿತಿಯಲ್ಲಿಯೂ ಈ ವ್ಯವಸ್ಥೆ ಇದ್ದು, ಸ್ವಲ್ಪ percentage ಹೆಚ್ಚು ಕಡಿಮೆ ಇರಬಹುದು. ವಿದ್ಯಾವಂತರ್ಯಾರೂ ರಾಜಕಾರಣದಲ್ಲಿ ಉಳಿಯುವುದಕ್ಕೆ ಸಾಧ್ಯವಿಲ್ಲ. ಭ್ರಷ್ಟರು, criminal case ಹಾಕಿಸಿಕೊಂಡವರು, ರಾಜಕಾರಣಿಗಳ ಮಕ್ಕಳು, ರಾಜಕಾರಣಿಗಳ ಬಂಧುಗಳು, ದೊಡ್ಡ ದೊಡ್ಡ ಉದ್ಯಮಿಗಳು, real estate ನಡೆಸುವವರು ಹಾಗೂ ವ್ಯಾಪಾರಿಗಳು ಚುನಾವಣೆ ಕಣಕ್ಕೆ ಇಳಿಯುವುದಕ್ಕೆ ಹತ್ತಿದ್ದಾರೆ. ಹೀಗಾದರೆ ಉಳಿದವರ ಗತಿ ಏನು? ಇನ್ನು ತೋಂದರೆಯೇ ಆಗುತ್ತದೆ. ಈ ವ್ಯವಸ್ಥೆ ಈ ಮಟ್ಟಕ್ಕೆ ಬಂದರೆ ಹೇಗೆ? ಮತಕ್ಷೇತ್ರಗಳ ಮತ್ತು ಜನರ ಸಮಸ್ಯೆಗಳೇ ಗೊತ್ತಿರುವುದಿಲ್ಲ. ಇವತ್ತು ದುಡ್ಡಿದ್ದರೆ ಯಾವುದೇ ಮತಕ್ಷೇತ್ರಕ್ಕೆ ಹೋಗಿ M.L.A., ಆಗಬಹುದು. ದುಡ್ಡಿದ್ದರೆ M.L.C., ನೂ ಆಗಬಹುದು. Because, there is no restriction of Constituency. ಈ ಜಿಲ್ಲೆಯಲ್ಲಿ No, nothing doing. I have got some power.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ದೇಶದ ಚಿತ್ರಣದಲ್ಲಿ ರಾಜಕಾರಣ ಮತ್ತು ವ್ಯವಸ್ಥೆ ಯಾವ ರೀತಿ ಹದೆಗೆಟ್ಟಿದೆ ಎಂದು ಅರ್ಥಗರ್ಭಿತವಾಗಿ ಹೇಳುತ್ತಿದ್ದಾರೆ. What is the remedy for this, ಈ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಅದಕ್ಕೆ ಮಾನ್ಯ ಸಚಿವರೇ ಹೇಳಬೇಕು. ಅದನ್ನು ಹೇಳುವ ಶಕ್ತಿ ಅವರಿಗೆ ಇದೆ.

**ಶ್ರೀ ವಿ. ಸೋಮಣ್ಣ:–** ಏಕೆಂದರೆ ಎಲ್ಲರೂ ಮಾತನಾಡುತ್ತಿದ್ದು, ಎಲ್ಲರೂ ಅದೇ ಕೆಲಸವನ್ನು ಮಾಡುತ್ತಿದ್ದಾರೆ. ಹಾಗಾಗಿ ಅದಕ್ಕೆ ಪರಿಹಾರ ಬೇಕು.

**ಶ್ರೀ ಸಿ.ಎಂ ಇಬ್ರಾಹಿಂ:–** ಇದಕ್ಕೆ ಇರುವುದು ಒಂದೇ remedy. 'ನನಗೆ ಏನೂ ಬೇಡ' ಎಂಬ ಭಾವನೆ ರಾಜಕಾರಣದಲ್ಲಿ ಎಂದು ಬರುತ್ತದೋ, ಆಗ ಸಮಸ್ಯೆ ಹೋಗುತ್ತದೆ. ಅದು ಬರುವಂತಿಲ್ಲ, ಇದು ಆಗುವಂತಿಲ್ಲ. ನನಗೆ ಬೇಡವೇ ಬೇಡ, ನನಗೆ ಸೀಟು ಬೇಡ, ಏನೂ ಬೇಡ. ಹಿಂದೆ ಭಾಷಣ ಮಾಡಿದಾಗ ಜನರು ಬರುತ್ತಿದ್ದರು. ಈಗ ಜನರನ್ನು ತರಬೇಕಾಗಿದೆ. ಈ ಪರಿಸ್ಥಿತಿ ಏಕೆ ಬಂತು? ಅದಕ್ಕೆ ನಾವು ಕಾರಣ. ಮಾನ್ಯ ಸುರೇಶ್ ಕುಮಾರ್‌ರವರು ಬಹಳ ಚೆನ್ನಾಗಿ ಹೇಳಿದರು. ಮಾನ್ಯ ಭಾವನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇಶಪಾಂಡೆಯವರಿಗೆ ತಿರುಗಾಡುವುದಕ್ಕೆ ಚಪ್ಪಲಿ ಇರಲಿಲ್ಲ, ಮಾನ್ಯ ಜಗನಾಥ್‌ರಾವ್ ಜೋಷಿಯವರನ್ನು ನಾನು ಪೂನಾದಲ್ಲಿ ನೋಡಿದಾಗ ಆಸ್ಪತ್ರೆಯಲ್ಲಿ ಔಷಧಿಗೆ ಕೊಡಲು ದುಡ್ಡು ಇರಲಿಲ್ಲ. ಮಾನ್ಯ ನಿಜಲಿಂಗಪ್ಪನವರಿಗೆ ಕಾರು ಇರಲಿಲ್ಲ. Even we are the culprits. ಇದಕ್ಕೆ ನಾವೇ ಹೊಣೆ, ಇನ್ಯಾರೂ ಹೊಣೆಯಲ್ಲ. ಇದಕ್ಕೆ remedy ಇದೆ. ಈ ರಾಜಕಾರಣ ಬೇಡ ಎಂದು ನಾವು ಮನೆಗೆ ಹೋದರೆ remedy ತನ್ನಷ್ಟಕ್ಕೆ ತಾನೇ ಬರುತ್ತದೆ.

**ಶ್ರೀ ಎಸ್. ಸುರೇಶ್ ಕುಮಾರ್:-** ಆಗ ಅದು ರಾಜಕಾರಣ ಆಗುವುದಿಲ್ಲ, ರಾಮಕೃಷ್ಣ ಆಶ್ರಮ ಆಗುತ್ತದೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ನಾನು ಹೇಳಿದ ವ್ಯವಸ್ಥೆ ಬರದಿದ್ದರೆ ದೇಶ ಇನ್ನೂ ಹಾಳಾಗುತ್ತದೆ. ಇದು virus pirus ಅಲ್ಲ, ಈ ರಾಜಕಾರಣಕ್ಕೆ ಹಿಡಿದಿರುವ virus ಹೋಗಬೇಕು. ಒಬ್ಬ ಬಡವನ ಮಗ, ಮರ್ಯಾದಸ್ಥ ಇಲ್ಲಿಗೆ ಬರುವುದಕ್ಕೆ ಸಾಧ್ಯವೇ ಇಲ್ಲ. ಇದು ಪೂರಾ ಹೀಗೆ ಆಗಿದೆ. ರಾಜಕಾರಣ ಕೆಟ್ಟಿರುವ double ನಷ್ಟು ಅಧಿಕಾರಿಗಳು ಕೆಟ್ಟಿದ್ದಾರೆ. ಕಾರಣ ಅದನ್ನು ಕಲಿಸಿದ್ದು ನಾವು.

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಪಾಟೀಲರು ವಿಶೇಷವಾಗಿ ಸಂವಿಧಾನಕ್ಕೆ ತಿದ್ದುಪಡಿಗಳನ್ನು ಮಾಡುವ provision ಇದ್ದರೂ ಮೂಲ ಆಶಯಗಳಾದ ಭಾರತ ದೇಶದ ಪರಮಾಧಿಕಾರ, ಸಾರ್ವಭೌಮತೆ, ಅಖಂಡತೆ ಇಂತಹ ವಿಚಾರಗಳನ್ನು ತಿದುಪಡಿ ಮಾಡುವ ಯಾವುದೇ ಅವಕಾಶಗಳಿಲ್ಲ ಎಂದು ಬಹಳ ಚೆನ್ನಾಗಿ ಹೇಳಿದರು.

(ಮುಂದು)

(531)/18.03.2020/4.20/ಹೆಚ್‌ವಿ-ಜಿಆರ್

(ಸಭಾಪತಿಯವರ ಉಪಸ್ಥಿತಿ)

**ಡಾ||ತೇಜಸ್ವಿನಿ ಗೌಡ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ವಿದ್ವತ್‌ಪೂರ್ಣ ಚರ್ಚೆ ನಡೆಸುವುದಾದರೆ, emergency provision ಗಳಾದ ಸಂವಿಧಾನದ ಅನುಚ್ಛೇದ 352 ಯಿಂದ 360ವರೆಗೆ ಎಂತಹ ಸಂದರ್ಭದಲ್ಲಿ ತುರ್ತು ಪರಿಸ್ಥಿತಿಯನ್ನು ಜಾರಿಗೊಳಿಸಬಹುದು ಮತ್ತು ಆ ಅವಕಾಶವನ್ನು ನಮ್ಮ ಸಂವಿಧಾನದ ಪಿತಾಮಹರು ಏತಕ್ಕೋಸ್ಕರ ಕೊಟ್ಟಿದ್ದಾರೆಂದರೆ, ದೇಶದ ಏಕತೆಗೆ ಮತ್ತು ಸ್ವಾತಂತ್ರ್ಯಕ್ಕೆ ಭಂಗ ಬಂದಾಗ, ದೇಶದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭದ್ರತೆಯುಂಟಾದಾಗ ಇಂತಹದೊಂದು ಅವಕಾಶ ಇರಬೇಕೆನ್ನುವ ಸದುದ್ದೇಶದಿಂದ ಇದನ್ನು ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿ ತುರ್ತು ಪರಿಸ್ಥಿತಿ ಒಂದೇ ಒಂದು ಬಾರಿ ಜಾರಿಗೊಳಿಸಲಾಗಿದೆ. ಅದು ತಪ್ಪು ನಿರ್ಣಯ ಎನ್ನುವುದು ಎಲ್ಲರ ಅಭಿಪ್ರಾಯವಾಗಿದೆ. ಯಾವಾಗ internal democracy ಎನ್ನುವುದು ಪಕ್ಷಗಳಲ್ಲಿ ಇರುವುದಿಲ್ಲ ಅಥವಾ ಒಬ್ಬ ನಾಯಕರು ಪ್ರಬಲರಾದಾಗ ಅವರನ್ನೇ ಗುರಿ ಮಾಡುವುದು ಸರಿಯಲ್ಲ. ರಾಷ್ಟ್ರಪತಿ, ಪ್ರಧಾನ ಮಂತ್ರಿ ಮತ್ತು ಸಚಿವ ಸಂಪುಟಗಳನ್ನು ಏತಕ್ಕೋಸ್ಕರ ರಚನೆ ಮಾಡಲಾಗಿದೆಯೆಂದರೆ, ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ನಮ್ಮ ಪಕ್ಷವನ್ನು, ನಮ್ಮ ನಾಯಕರನ್ನು ಮತ್ತು ನಮ್ಮ ಸರ್ಕಾರಕ್ಕೆ ಸರಿಯಾದ ಭಾವನೆಗಳನ್ನು ಹೇಳುವಂತಹ ಕರ್ತವ್ಯವನ್ನು ನಾವು ಮರೆದಾಗ, ಇಂತಹ ತಪ್ಪು ಕ್ರಮಗಳನ್ನು ನಾವು ತಪ್ಪಿಸಬಹುದಾಗಿದೆ. ಅನುಚ್ಛೇದ 19ರಲ್ಲಿ ಸ್ವಾತಂತ್ರ್ಯದ ಹಕ್ಕನ್ನು ನೀಡಲಾಗಿದೆ. ತುರ್ತು ಪರಿಸ್ಥಿತಿಯನ್ನು ಹಾಕುವುದಕ್ಕೆ ಅವಕಾಶವಿರಬೇಕು ಆದರೆ, ಯಾವ ಸಂದರ್ಭದಲ್ಲಿ ಹಾಕಬೇಕೆನ್ನುವುದು ಉತ್ತಮವಾದ ಸಂಸದೀಯ ಪಟುಗಳು ಅಧಿಕಾರಕ್ಕೆ ಬಂದಾಗ ಮಾತ್ರ ಇದು ಸಾಧ್ಯವಾಗುತ್ತದೆ. ತಪ್ಪು ಯಾರೇ ಮಾಡಿದ್ದರೂ ತಪ್ಪೇ. ಮಾನ್ಯ ರಾಜೀವ್‌ಗಾಂಧಿಯವರನ್ನು ನಾವು ಕಳೆದುಕೊಂಡೆವು. ಸಂವಿಧಾನದ ಅನುಚ್ಛೇದ 355 – 'Duty of the Union to protect States against external aggression and internal disturbances' ಎಂದು ಹೇಳುತ್ತದೆ. ಪಕ್ಕದ ಶ್ರೀಲಂಕಾದಲ್ಲಿ ಅಸ್ಥಿರತೆವುಂಟಾದಾಗ ಅದಕ್ಕೆ ಸಹಾಯ ಮಾಡುವುದಕ್ಕೆ ಭಾರತ ಸರ್ಕಾರ ಹೋದ ಕಾರಣದಿಂದಾಗಿಯೇ ನಾವು ಮಾನ್ಯ ರಾಜೀವ್‌ಗಾಂಧಿಯವರನ್ನು ಕಳೆದುಕೊಳ್ಳಬೇಕಾಯಿತು, to protect the democracy in another country. ಅದೇ ಸಮಯದಲ್ಲಿ ನಮ್ಮ ದೇಶದ ಭಾಗವಾದ ತಮಿಳುನಾಡಿನಲ್ಲಿ ಉಂಟಾದ ಎಲ್.ಟಿ.ಟಿ.ಇ., ಯವರ ಉಪಟಳವನ್ನು ತಪ್ಪಿಸುವುದಕ್ಕಾಗಿ ಪ್ರಯತ್ನವನ್ನು ಮಾಡಲಾಯಿತು. ಸಂವಿಧಾನದ ಅನುಚ್ಛೇದ 355ರಲ್ಲಿ ಆಂತರಿಕ ಭಿನ್ನಮತವನ್ನು ಹತ್ತಿಕ್ಕುವುದು ಒಕ್ಕೂಟದ ಜವಾಬ್ದಾರಿ ಎಂದು ಹೇಳುತ್ತದೆ. ಅದರ ಉದ್ದೇಶ ಸರಿಯಿದೆ. ಆದರೆ, ಅದನ್ನು ಅನುಷ್ಠಾಗೊಳಿಸುವುದರಲ್ಲಿ ತಪ್ಪಿದ್ದಾಗ, it is a lesson for all of us to learn ಎನ್ನುವುದನ್ನು ಪೀಠದ ಮೂಲಕ ಸಭೆಯ ಗಮನಕ್ಕೆ ತರಲು ಬಯಸುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಅವರ ಅಭಿಪ್ರಾಯವನ್ನು ನಾನು ಗೌರವಿಸುತ್ತೇನೆ. ಮಾನ್ಯ ರಾಜೀವ್‌ಗಾಂಧಿಯವರು ನಮ್ಮ ಪಕ್ಕದ ರಾಷ್ಟ್ರವಾದ ಸಿಲೋನ್‌ನಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡು Indian Peace Keeping Force (IPKF) ಅನ್ನು ಅಲ್ಲಿ ನಿಯೋಜನೆ ಮಾಡಿದಕ್ಕಾಗಿ ಎಲ್.ಟಿ.ಟಿ.ಇ., ಯವರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಣ್ಣು ಕೆಂಪಗಾಯಿತು. ಅವರು ತಮ್ಮ ಪ್ರಾಣವನ್ನೇ ತೆರಬೇಕಾಯಿತು. ಈ ದೇಶ ಐಕ್ಯತೆ, ಭದ್ರತೆ, ಸಮಗ್ರತೆ ಮತ್ತು ಸಾರ್ವಭೌಮತ್ವತೆಯನ್ನು ಕಾಪಾಡುವ ನಿಟ್ಟಿನಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಸಹ ತಮ್ಮ ಜೀವವನ್ನು ಕಳೆದುಕೊಂಡರು. ಪಂಜಾಬ್ ರಾಜ್ಯವು 'ಖಾಲಿಸ್ಥಾನ್' ಎಂದು ಹೊಸ ರಾಜ್ಯವಾಗಬೇಕೆನ್ನುವ ಬೇಡಿಕೆಯನ್ನಿಟ್ಟಿದ್ದರು. Smt.Indiraji chopped off one wing of Pakistan. She liberated Bangladesh. ಪೂರ್ವ ಪಾಕಿಸ್ತಾನವಾಗಿದ್ದ ಬಾಂಗ್ಲಾ ದೇಶವನ್ನು ಸ್ವಾತಂತ್ರ್ಯ ರಾಷ್ಟ್ರವನ್ನಾಗಿ ನಿರ್ಮಾಣ ಮಾಡಿದರು. ಪಾಕಿಸ್ತಾನದವರು ಆ ಸಿಟ್ಟಿನಿಂದ 'ಪಂಜಾಬ್' ಅನ್ನು ನಾವು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡುತ್ತೇವೆಂದು 'ಖಾಲಿಸ್ಥಾನ್ ಚಳುವಳಿ' ಪ್ರಾರಂಭಿಸಿದರು. ನಂತರ ಇಂದಿರಾಗಾಂಧಿಯವರು 'ಆಪರೇಶನ್ ಬ್ಲ್ಯೂಸ್ಟಾರ್' ಕಾರ್ಯಾಚರಣೆ ಮೂಲಕ ಆ ಉಗ್ರಗಾಮಿಗಳನ್ನು ಸದೆಬಡಿದರು. Now, Punjab is an integral part of India. ಇಂದು ಭಾರತ ದೇಶದ ಅವಿಭಾಜ್ಯ ಅಂಗವಾಗಿ ಪಂಜಾಬ್ ಉಳಿದಿದೆ. ಪೂರ್ವ ಪಾಕಿಸ್ಥಾನವನ್ನು ಸ್ವತಂತ್ರ ಅಂಗವನ್ನಾಗಿ ಮಾಡಿದ್ದಕ್ಕೆ ನಮ್ಮ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ಪಾಕಿಸ್ತಾನ ಪಂಜಾಬ್‌ನ ಸಿಖ್‌ರನ್ನು ಭಾರತ ದೇಶದಿಂದ ಬೇರ್ಪಡಿಸಿ ಒಂದು ಬೇರೆ ರಾಷ್ಟ್ರವನ್ನಾಗಿ ನಿರ್ಮಾಣ ಮಾಡುವ ಪ್ರಯತ್ನ ನಡೆದಂತಹ ಸಂದರ್ಭದಲ್ಲಿ ವಿಶ್ವದ ಉಕ್ಕಿನ ಮಹಿಳೆ ಇಂದಿರಾಗಾಂಧಿಯವರು 'ಆಪರೇಶನ್ ಬ್ಲ್ಯೂಸ್ಟಾರ್' ಕಾರ್ಯಾಚರಣೆ ಮೂಲಕ ಆ ಉಗ್ರಗಾಮಿಗಳನ್ನು ಸದೆಬಡಿದರು. ಇವತ್ತಿಗೂ ಕೂಡ ಪ್ರತ್ಯೇಕತೆಯ ಬಗ್ಗೆ ಒಂದು ಧ್ವನಿಯೂ ಇಲ್ಲ. ಪೂರ್ವ ಪಾಕಿಸ್ತಾನವಾಗಿದ್ದ ಬಾಂಗ್ಲಾ ದೇಶವನ್ನು ಸ್ವಾತಂತ್ರ್ಯ ರಾಷ್ಟ್ರವನ್ನಾಗಿ ಘೋಷಣೆ ಮಾಡಿ, ಲೋಕಸಭೆಯನ್ನು ಪ್ರವೇಶ ಮಾಡುವ ಸಂದರ್ಭದಲ್ಲಿ ಅವರು ನೀಲಿ ಸೀರೆಯನ್ನು ಉಟ್ಟಿರುತ್ತಾರೆ. ಆಗ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ವಿರೋಧ ಪಕ್ಷದ ನಾಯಕರಾಗಿದ್ದರು. ಶ್ರೀಮತಿ ಇಂದಿರಾಗಾಂಧಿಯವರನ್ನು ನೋಡಿದ ಅಟಲ್‌ಜಿಯವರು ಟೇಬಲ್ ಅನ್ನು ಜೋರಾಗಿ ಬಡಿದು, 'ನೀನು ಸಾಕ್ಷಾತ್ ದುರ್ಗಾ ಮಾತೆ' ಎನ್ನುವ ಮಾತನ್ನು ಹೇಳುತ್ತಾರೆ. ಆದರೆ, 'ಆಪರೇಶನ್ ಬ್ಲ್ಯೂಸ್ಟಾರ್' ನಿಂದ ನೊಂದವರು ಏನು ಮಾಡಿದರೆಂದರೆ, she lost the life. ಈ ದೇಶ ಐಕ್ಯತೆ, ಭದ್ರತೆ, ಸಮಗ್ರತೆ ಮತ್ತು ಸಾರ್ವಭೌಮತ್ವದ ಸಲುವಾಗಿ ಆಕೆ ತಮ್ಮ ಜೀವವನ್ನೇ ತೆತ್ತರು. ಈಗ ನಾನು ವಿಷಯಕ್ಕೆ ಬರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)**:- ಸನ್ಮಾನ್ಯ ಸಭಾಪತಿಯವರೇ, ಅವರ 'ವಿಷಯಕ್ಕೆ ಬರುತ್ತಿದ್ದೇನೆ' ಎನ್ನುವ ಮಾತುಗಳನ್ನು ಕೇಳಿ ಈ ಸದನದಲ್ಲಿರುವ ಎಲ್ಲರಿಗೂ ಖುಷಿ ಮತ್ತು ಸಮಾಧಾನವಾಗುತ್ತಿದೆ. ಅವರ ಬಗ್ಗೆ ಯಾವುದೇ ಆಕ್ಷೇಪಣೆಗಳು ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನನಗೂ ಮಾನ್ಯ ಸಭಾ ನಾಯಕರ ಬಗ್ಗೆ ಯಾವುದೇ ಆಕ್ಷೇಪಣೆಗಳು ಇಲ್ಲ. ನನ್ನ ಸಹೋದರಿ ತೇಜಸ್ವಿನಿಗೌಡರವರು ಪ್ರಸ್ತಾಪ ಮಾಡಿದ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದೆರಡು ಮಾತುಗಳನ್ನು ಹೇಳಿದೆ ಅಷ್ಟೆ. ಪ್ರಜಾಪ್ರಭುತ್ವ ಯಾವ ರೀತಿಯಲ್ಲಿ ಕ್ಷೀಣಿಸುತ್ತಿದೆ ಎನ್ನುವ ವಿಚಾರದ ಬಗ್ಗೆ ಮಾತನಾಡುತ್ತಿದ್ದೆ.

ಸನ್ಮಾನ್ಯ ಸಭಾಪತಿಯವರೇ, ಇಂದಿನ ಚುನಾವಣೆಗಳು ಯಾವ ರೀತಿಯಾಗುತ್ತಿವೆ ಎಂದರೆ, ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿರುವ ಕೆಲವು ಅಭ್ಯರ್ಥಿಗಳಿಗೆ ಆ ಮತ ಕ್ಷೇತ್ರ ಮತ್ತು ಮತ ಕ್ಷೇತ್ರದ ಜನರ ಪರಿಚಯವಿರುವುದಿಲ್ಲ ಮತ್ತು ಆ ಕ್ಷೇತ್ರದಲ್ಲಿರುವ ಸಮಸ್ಯೆಗಳ ಬಗೆಯೂ ಅರಿವಿರುವುದಿಲ್ಲ. ದುಡ್ಡು ಹಂಚಿ ಆರಿಸಿ ಬರುತ್ತಾರೆ. ಮುಂದೆ ಆ ಮತಕ್ಷೇತ್ರದ ಜನರ ಗತಿಯೇನು; ನಮ್ಮ ಭಾಗದಲ್ಲಿ 'ಗತಿ ಗಂಗವ್ವನೇ' ಎನ್ನುತ್ತಾರೆ. ಇದರ ಅರ್ಥ 'ಗಂಗೆಯ ಪಾಲು' ಎಂದು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಸಂಜೆ 4.30ರ ಹೊತ್ತಿಗೆ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, impossible. ವಿಷಯವನ್ನು ನಾನು ಇನ್ನೂ ಪ್ರಾರಂಭವೇ ಮಾಡಿಲ್ಲ. ಈಗ ವಿಷಯಕ್ಕೆ ಬರುತ್ತಿದ್ದೇನೆ. ಪ್ರಜಾಪ್ರಭುತ್ವ ಕ್ಷೀಣಿಸುತ್ತಿದೆ ಎನ್ನುವ ವಿಚಾರದ ಮೇಲೆ ಮಾತನಾಡಬೇಕಾಗಿದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿದ ನಂತರ ನನಗೆ ಮಾತನಾಡಲು ಅವಕಾಶವನ್ನು ನೀಡುವುದಾಗಿ ತಾವು ಹೇಳಿದ್ದೀರಿ. ಆದರೆ, ಮಾನ್ಯ ಸಭಾ ನಾಯಕರು 4.30 ಗಂಟೆಗೆ ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಸಚಿವರಾದ ಮಾನ್ಯ ಸೋಮಣ್ಣನವರು ಪ್ರಶ್ನೋತ್ತರ ತೆಗೆದುಕೊಳ್ಳುವುದರ ಬಗ್ಗೆ ತಮ್ಮ ಆತುರತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಅವರು ಮೇಲ್ಮನೆಯಲ್ಲಿ ಹೆಚ್ಚು ಸಮಯ ಕುಳಿತುಕೊಂಡರೆ, ಅವರ ಬುದ್ಧಿ ತೀಕ್ಷ್ಣಗೊಳ್ಳುತ್ತದೆ.

**ಶ್ರೀ ವಿ.ಸೋಮಣ್ಣ(ವಸತಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ದಯಮಾಡಿ 4.30 ಗಂಟೆಗೆ ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ. ಪ್ರಶ್ನೋತ್ತರ ಮುಗಿದ ನಂತರ ಪುನಃ ಅವರು ತಮ್ಮ ಮಾತುಗಳನ್ನು ಮುಂದುವರಿಸಿದರೆ ನಮ್ಮದೇನೂ ತಕರಾರಿಲ್ಲ. ಪ್ರಶ್ನೋತ್ತರ ಅವಧಿ ಮಾತ್ರವಲ್ಲ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಒಂದು ವಿಧೇಯಕವನ್ನು ಸದನದ ಮುಂದೆ ಮಂಡಿಸುವವರಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ದಯಮಾಡಿ ವಿಧೇಯಕವನ್ನು ನಾಳೆ ಸದನದ ಮುಂದೆ ಮಂಡಿಸಲಿ, ಇವತ್ತು ಬೇಡ. Nothing will happen.

**ಶ್ರೀ ಎಸ್.ಸುರೇಶ್‌ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಈ ಸದನದ ಅನೇಕ ಸದಸ್ಯರ ಜೊತೆಗೆ ಚರ್ಚೆ ಮಾಡಿ ಈ ವಿಧೇಯಕವನ್ನು ತಂದಿದ್ದೇವೆ. ಈ ವಿಧೇಯಕವನ್ನು ತರುವುದಕ್ಕೆ ಯಾಕೆ ಇಷ್ಟು ಆತುರ ಅವಸರವೆಂದರೆ, ಏಪ್ರಿಲ್-ಮೇ ತಿಂಗಳಿನಲ್ಲಿ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ಮುಗಿಸಿ ಬಿಡಬೇಕಾಗಿದೆ. ಈ ವಿಧೇಯಕ ಎರಡು ಮನೆಗಳಿಂದ ಅಂಗೀಕರಿಸಲ್ಪಟ್ಟು ಘನತೆವೆತ್ತ ರಾಜ್ಯಪಾಲರ ಒಪ್ಪಿಗೆಗಾಗಿ ಕಳುಹಿಸಿಕೊಡಬೇಕಾಗಿದೆ. It has its own process. ಆದ್ದರಿಂದ ನಾನು ಮನವಿ ಮಾಡುತ್ತಿದ್ದೇನೆ ದಯವಿಟ್ಟು ವಿಧೇಯಕವನ್ನು ಚರ್ಚೆಗೆ ತೆಗೆದುಕೊಂಡು ಅದಕ್ಕೆ ಅನುಮೋದನೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮೊನ್ನೆ ವಿಧಾನಸಭೆಯಲ್ಲಿ ಇದೇ ರೀತಿ ನಾನು ಮನವಿ ಮಾಡಿಕೊಂಡಾಗ ರಾತ್ರಿ 8 ಗಂಟೆಯಲ್ಲಿ ವಿಧೇಯಕವನ್ನು ಚರ್ಚೆಗೆ ತೆಗೆದುಕೊಂಡು ಅದಕ್ಕೆ ಅನುಮೋದನೆಯನ್ನು ಕೊಟ್ಟಿದ್ದಾರೆ. ದಯವಿಟ್ಟು ಈ ವಿಧೇಯಕವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ನೀಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಾಳೆ ಬೆಳಿಗ್ಗೆ ಮೊದಲು ಅದನ್ನೇ ತೆಗೆದುಕೊಳ್ಳೋಣ. I have no objection. I request you. ವಿರೋಧ ಪಕ್ಷದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಯಕನಾಗಿ ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇವತ್ತೊಂದು ರಾತ್ರಿ ಮಾತ್ರ, ನಾಳೆ ಬೆಳಿಗ್ಗೆ ನಾವು ಆ ವಿಧೇಯಕಕ್ಕೆ ಅನುಮೋದನೆಯನ್ನು ನೀಡುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿः–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತುಗಳನ್ನು ಮುಗಿಸಿದ ಕೂಡಲೇ ಆ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳಿ ಎನ್ನುವುದು ನನ್ನ ಸಲಹೆಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿः–** ಸನ್ಮಾನ್ಯ ಸಭಾಪತಿಯವೇ, ನಾಳೆ ಬೆಳಿಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಫ್ರೆಶ್ ಆಗಿ ಮಾತನಾಡಲಿ.

**ಶ್ರೀ ಎಸ್.ಆರ್.ಪಾಟೀಲ್ः–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರಿಗೆ ನನ್ನ ಮೇಲೆ ಯಾಕಿಷ್ಟು ಪ್ರೀತಿಯೆನ್ನುವುದು ನನಗೆ ಗೊತ್ತಾಗುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿः–** ಸನ್ಮಾನ್ಯ ಸಭಾಪತಿಯವರೇ, ಮೊದಲಿನಿಂದಲೂ ಅವರ ಮೇಲೆ ನನಗೆ ಪ್ರೀತಿ ಇತ್ತು. ಅದು ಅವರಿಗೆ ಗೊತ್ತಿರಲಿಲ್ಲ.

**ಸಭಾಪತಿಯವರುः–** ನೀವು ಎಷ್ಟು ಹೊತ್ತಿಗೆ ನಿಮ್ಮ ಮಾತುಗಳನ್ನು ಮುಗಿಸುತ್ತೀರಿ ಎನ್ನುವುದನ್ನು ಹೇಳಿ.

**ಶ್ರೀ ಎಸ್.ಆರ್.ಪಾಟೀಲ್ः–** ಸನ್ಮಾನ್ಯ ಸಭಾಪತಿಯವರೇ, ಇಷ್ಟು ಹೊತ್ತಿಗೆ ಮುಗಿಸುತ್ತೇನೆಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಇವತ್ತು ನನ್ನ ಮಾತನ್ನು ಅರ್ಧಕ್ಕೆ ನಿಲ್ಲಿಸುವುದು ಬೇಡ. ನಾನು ಮುಗಿಸಿಬಿಡುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಸಂವಿಧಾನದಿಂದಾಗಿರುವ ಸಾಧನೆಗಳ ಹಾಗೂ ಪ್ರಗತಿಗಳ ಬಗ್ಗೆ ನಾನು ಹೇಳಿದ್ದೇನೆ, ಈಗ ನಾನು ಸಂವಿಧಾನ ಎದುರಿಸುತ್ತಿರುವ ಸವಾಲು ಮತ್ತು ಸಮಸ್ಯೆಗಳ ಬಗ್ಗೆ ಚರ್ಚೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದೇನೆ. This is very very important. ನಾನು ಒಂದೆರಡು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

(ಮುಂದುವರಿದಿದೆ)

(532) 18.3.2020 4.30 ಪಿಕೆ:ಎಂಡಿ

(ಸಭಾಪತಿಗಳ ಉಪಸ್ಥಿತಿ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಪ್ರಶ್ನೋತ್ತರವನ್ನು ಸಂಜೆ ತೆಗೆದುಕೊಳ್ಳುತ್ತಿದ್ದೀರಿ. ವಿಧಾನಸಭೆಯಲ್ಲಿ ಬೆಳಿಗ್ಗೆ ತೆಗೆದುಕೊಳ್ಳುತ್ತಿದ್ದಾರೆ. ಪತ್ರಿಕೆಗಳವರು ಅಲ್ಲಿ ನಡೆಯುವ ಪ್ರಶ್ನೋತ್ತರದ ವಿಷಯಗಳನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿ, ಆ ಮೂಲಕ ಸಾರ್ವಜನಿಕರು ತಿಳಿದುಕೊಳ್ಳುವಂತಾಗುತ್ತಿದೆ. ಇಲ್ಲಿ ಪ್ರಶ್ನೋತ್ತರಗಳನ್ನು ಸಂಜೆ 4 ಗಂಟೆಯ ಮೇಲೆ ತೆಗೆದುಕೊಂಡರೆ ಅದು ಪತ್ರಿಕೆಗಳಲ್ಲಿ ಬರುವುದಿಲ್ಲ. ಈಗಂತೂ ಸಂಜೆ 4 ಗಂಟೆಯನ್ನೂ ಮೀರಿ ತಡವಾಗಿ ತೆಗೆದುಕೊಳ್ಳುತ್ತಿರುವ ಪರಿಸ್ಥಿತಿ ಬಂದಿದೆ.

(ಗೊಂದಲ)

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾಳೆಯಿಂದ ಬೆಳಿಗ್ಗೆಯೇ ಪ್ರಶ್ನೋತ್ತರಗಳನ್ನು ಇಟ್ಟುಕೊಂಡರೆ ಒಳ್ಳೆಯದು ಎಂದು ಹೇಳಬಯಸುತ್ತೇನೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ಕ್ಷೀಣಿಸುತ್ತಿದೆ ಎನ್ನುವ ವಿಚಾರದ ಮೇಲೆ ನಾನು ಮಾತನಾಡಿದ ಮೇಲೆ ಬೇಕಾದರೆ ಬೇರೆ ವಿಷಯಗಳನ್ನು ತೆಗೆದುಕೊಳ್ಳಿ. ಮಾನ್ಯ ಸಭಾಪತಿಯವರೇ, ಅದು ನಿಮ್ಮ ವಿವೇಚನೆಗೆ ಬಿಡುತ್ತೇನೆ.

**ಸಭಾಪತಿಯವರು:-** ನೀವು complete ಮಾಡಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣರವರು, ಮಾನ್ಯ ಶ್ರೀಕಂಠೇಗೌಡರವರು ಹೇಳಿದ ಹಾಗೆ, ವಿಧಾನಸಭೆಯಲ್ಲೂ ಪ್ರಶ್ನೋತ್ತರವನ್ನು ಬೆಳಿಗ್ಗೆ ಇಟ್ಟುಕೊಳ್ಳುತ್ತಾರೆ. ಬಹಳಷ್ಟು ಸದಸ್ಯರು ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಅದು ಮಾಧ್ಯಮದಲ್ಲಿ ಹೈಲೈಟ್ ಆಗುತ್ತದೆ. ಯಾವ ಯಾವ ಸದಸ್ಯರು ತಮ್ಮ ಕ್ಷೇತ್ರದ ಬಗ್ಗೆ ಮಾತನಾಡಿದ್ದಾರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವುದನ್ನು ಜನ ನೋಡುತ್ತಾರೆ. ಗೆಲ್ಲಿಸಿದ ಮತದಾರರಿಗೆ ವಿಷಯಗಳು ತಲುಪುವುದು ಮುಖ್ಯವಾಗುತ್ತದೆ. ಬೆಳಿಗ್ಗೆ ಪ್ರಶ್ನೋತ್ತರಗಳನ್ನು ತೆಗೆದುಕೊಂಡರೆ ಸರ್ಕಾರ ಅದಕ್ಕೆ ಉತ್ತರ ಕೊಡಲು ತಯಾರಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:–** ಬಿಎಸಿಯಲ್ಲಿ ಏನು ತೀರ್ಮಾನವಾಯಿತೋ ಆ ರೀತಿ ಮಾಡುತ್ತಿದ್ದೇವೆ. ಅಲ್ಲವೇ ಹೊರಟ್ಟಿಯವರೇ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರಗಳನ್ನು ಬೆಳಿಗ್ಗೆ ತೆಗೆದುಕೊಳ್ಳಿ ಎಂದು ನಾವು ನಿಮ್ಮ ಹತ್ತಿರ ಅನೇಕ ಸಲ ಕೇಳಿಕೊಂಡಿದ್ದೇವೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು complete ಮಾಡಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ನನಗೆ ಅವಕಾಶ ಕೊಡುತ್ತೀರಾ ಅಥವಾ ನಾಳೆ ಮಾತನಾಡಲು ಅವಕಾಶ ಕೊಡುತ್ತೀರೋ?

**ಸಭಾಪತಿಯವರು:–** ನಾಳೆ ಅವಕಾಶ ಕೊಡುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಇಬ್ರಾಹಿಂರವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಒಂದು point complete ಮಾಡಿ ಮುಗಿಸಿ ಮತ್ತೆ ನಾಳೆಗೆ ಮುಂದುವರೆಸುತ್ತಾರೆ.

**ಸಭಾಪತಿಯವರು:–** ಮಾನ್ಯ ಇಬ್ರಾಹಿಂರವರು, ನನಗೆ ಮಾತನಾಡಲು ಯಾವಾಗ ಅವಕಾಶ ಕೊಡುತ್ತೀರಿ ಎಂದು ಕೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಅದರ ಬಗ್ಗೆ ತಾವು ನಿರ್ಧಾರ ಕೈಗೊಳ್ಳಿ.

**ಸಭಾಪತಿಯವರು:–** ನೀವು ನಿಮ್ಮ ಭಾಷಣವನ್ನು ಮುಗಿಸದೇ ಅವರಿಗೆ ಏನೆಂದು ಹೇಳಲಿ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಮುಗಿಸಿದ ಮೇಲೆ ಮತ್ತೆ ಇವರಿಬ್ಬರು ಭಾಷಣ ಶುರು ಮಾಡಲಿ.

**ಶ್ರೀ ಎಸ್.ಆರ್.ಪಾಟೀಲ್:–** ಬೇಡ, I don't agree. ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಮುಗಿಸಿಬಿಡುತ್ತಿದ್ದೆ. ಪ್ರಜಾಪ್ರಭುತ್ವ ವ್ಯವಸ್ಥೆ weak ಆಗಿದೆ ಎಂದು ಏಕೆ ಹೇಳುತ್ತಿದ್ದೇನೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಯವಿಟ್ಟು ಕೇಳಿ. ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಗಳನ್ನು ಹೊರಡಿಸುತ್ತವೆ. ಎಲ್ಲಾ ಪ್ರಣಾಳಿಕೆಗಳಲ್ಲಿ, ನಾವು ಬಡವರ ಪರ, ಯುವಕರ ಪರ, ರೈತರ ಪರ ಎಂದು ಸುಂದರವಾಗಿ, ಕಲಾತ್ಮಕವಾದ ಶಬ್ದಗಳಲ್ಲಿ ಹಾಕುತ್ತಾರೆ. ಅದನ್ನು ನೋಡಿದರೆ ಸ್ವರ್ಗವನ್ನೇ ಧರೆಗಿಳಿಸುತ್ತಾರೆ ಎಂದು ಭಾಸವಾಗುತ್ತದೆ. ಈ ರೀತಿ ಒಂದೇ ಪಕ್ಷದವರಲ್ಲ, ಎಲ್ಲಾ ಪಕ್ಷದವರು ಮಾಡುತ್ತಾರೆ. ಅವೆಲ್ಲವೂ ಈಡೇರಿಸದೇ ಇರಬಹುದಾದ ಅಂಶಗಳಾಗಿರುತ್ತವೆ. ಜನರಿಗೆ ಪ್ರಣಾಳಿಕೆಗಳ ಮೇಲೆ ನಂಬಿಕೆ ಹೋಗಿದೆ. ಆದ್ದರಿಂದ ನಾನು ಪ್ರಜಾಪ್ರಭುತ್ವ ಕ್ಷೀಣಿಸುವುದಕ್ಕೆ ಪ್ರಾರಂಭವಾಗಿದೆ ಎಂದು ಹೇಳುತ್ತಿದ್ದೇನೆ. ಪ್ರಣಾಳಿಕೆಯಲ್ಲಿ, ವರ್ಷಕ್ಕೆ ಇಷ್ಟು ಕೋಟಿ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತೇವೆ ಎಂದು ಹೇಳುತ್ತಾರೆ. ಚುನಾವಣೆ ಮುಗಿದ ಮರುದಿನವೇ ನಿಮ್ಮ ಜೇಬಿಗೆ ಲಕ್ಷ-ಲಕ್ಷ ರೂಪಾಯಿಗಳನ್ನು ತಂದು ಹಾಕುತ್ತೇವೆ ಎಂದು ಹೇಳುತ್ತಾರೆ. ಬಡವರ ಪರ, ಹಿಂದುಳಿದವರ ಪರ, ಶೋಷಿತರ ಪರ, ಅಲ್ಪಸಂಖ್ಯಾತರ ಪರ, ವಿದ್ಯಾರ್ಥಿಗಳ ಪರ, ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆ ಎಂದು ಸುಂದರವಾಗಿ ಪ್ರಣಾಳಿಕೆಗಳಲ್ಲಿ ಹೇಳಿರುತ್ತಾರೆ, ಆದರೆ ಅದರಂತೆ ನಡೆಯುವುದಿಲ್ಲ. ಇದು ಪ್ರಜಾಪ್ರಭುತ್ವದ ಮೇಲೆ ನೇರವಾದ ಪರಿಣಾಮ ಬೀರುತ್ತದೆ. ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಪಕ್ಷದಿಂದ ಗೆದ್ದ ಮೇಲೆ ಮತ್ತೊಂದು ಪಕ್ಷಕ್ಕೆ ಬದಲಾಗುತ್ತಾರೆ. ಆಯಾ ರಾಮ್, ಗಯಾ ರಾಮ್. ಇದು ಬೇಡ-ಇದು ಬೇಡ. ಅಲ್ಲಿ ಬೇಡ ಎಂದರೆ ಇಲ್ಲಿ, ಇಲ್ಲಿ ಬೇಡ ಎಂದರೆ ಅಲ್ಲಿ. ಮಾನ್ಯ ಸಭಾಪತಿಯವರೇ, ಗೋಸುಂಬೆ ನಿಮಿಷಕ್ಕೆ 7 ಸಲ ಬಣ್ಣ ಬದಲಾಯಿಸುತ್ತದೆ. ಪಕ್ಷಾಂತರ ಮಾಡಿ ಮಾತೃ ಪಕ್ಷವನ್ನು ಬಿಟ್ಟು ಇನ್ನೊಂದು ಪಕ್ಷಕ್ಕೆ ಹೋಗುವುದು, ಆಸೆ-ಅಮಿಷಗಳಿಗೆ ಒಳಗಾಗುವುದು, ದುಡ್ಡಿಗೆ, ಅಧಿಕಾರಕ್ಕೆ ಪಕ್ಷ ಬದಲಾವಣೆ ಮಾಡಿದರೆ ಮತ ಹಾಕಿದ ಮತದಾರರಿಗೆ ಒಳ್ಳೆಯದಾಗುತ್ತದೆಯೇ? ಪ್ರಜಾಪ್ರಭುತ್ವಕ್ಕೆ ಒಳ್ಳೆಯದಾಗುತ್ತದೆಯೇ? ಯಾರಿಗೆ ಪ್ರಯೋಜನವಾಗುತ್ತದೆ? ಮತ ಕ್ಷೇತ್ರಕ್ಕೆ ಪ್ರಯೋಜನ ಆಗುತ್ತದೆಯೇ? ಏನೇನೂ ಆಗುವುದಿಲ್ಲ. ಈ ರೀತಿ ಪಕ್ಷ ಬದಲಾವಣೆ ಮಾಡುವುದರ ಮೂಲಕ ದೇಶದ ಜನ ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಕಳೆದುಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಈ ರೀತಿ ವೈಫಲ್ಯಗಳು ಏಕಾದವು ಎಂದು ಆತ್ಮ ಶೋಧನೆ ಮಾಡಿಕೊಳ್ಳಬೇಕಾಗಿದೆ. ಡಾ: ಬಾಬು ಸಾಹೇಬ್ ಅಂಬೇಡ್ಕರ್‌ರವರು ಒಂದು ಮಾತನ್ನು ಹೇಳುತ್ತಾರೆ. ಸಂವಿಧಾನ ಎಷ್ಟೇ ಉತ್ತಮವಾಗಿದ್ದರೂ ಅದನ್ನು ನಿರ್ವಹಿಸುವವರು ಕೆಟ್ಟವರಾಗಿದ್ದರೆ ಅದು ಕೆಟ್ಟದ್ದಾಗಿ ಬಿಡುವುದು ಖಂಡಿತಾ ಎನ್ನುವ ಮಾತನ್ನು ಹೇಳಿದ್ದಾರೆ. ಮಧ್ಯಪ್ರದೇಶದಲ್ಲಿನ ರಾಜಕೀಕಯ ಬೆಳವಣಿಗೆಗಳಿಂದಾಗಿ ಅಲ್ಲಿನ ಕೆಲವು ಶಾಸಕರು ಬೆಂಗಳೂರಿಗೆ ಬಂದಿದ್ದಾರೆ ಎನ್ನುವುದು ನ್ಯೂಸ್ ಮೂಲಕ ಗೊತ್ತಾಯಿತು. ನಮ್ಮವರು ಸಹ ಇದೇ ವಿಚಾರದಲ್ಲಿ ಈ ಹಿಂದೆ ಮುಂಬೈಗೆ ಹೋಗಿದ್ದರು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ನಿಮ್ಮ ಪಕ್ಷದವರೇ ಬೆಂಗಳೂರಿಗೆ ಬಂದಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ನಮ್ಮ ಪಕ್ಷದವರೇ ಬಂದಿದ್ದಾರೆ ಎಂದು ಹೇಳುತ್ತಿದ್ದೇನೆ. ಬಾಂಬೆಗೆ ಹೋದವರೂ ಕೂಡ ನಮ್ಮ ಪಕ್ಷದವರು ಮತ್ತು ಅದರಲ್ಲಿ ನಿಮ್ಮ ಪಕ್ಷದವರೂ ಕೂಡ ಇದ್ದರು. ಇಂಥವರು ಅಧಿಕಾರದ ಆಸೆ–ಆಮಿಷಗಳಿಗೆ ಒಳಗಾಗುತ್ತಾರೆ. ಈಗೇನೋ standard rate ಆಗಿದೆಯಂತೆ. ಇದೇರೀತಿ ನಾನು ಕೇಳ್ಪಟ್ಟಿದ್ದೇನೆ. ಇಲ್ಲಿ ಹೇಳಬೇಕೋ ಹೇಳಬಾರದೋ ಗೊತ್ತಿಲ್ಲ. standard rate 25 ಆಗಿದೆಯಂತೆ. ಮಾನ್ಯ ದಿಗ್ವಿಜಯಸಿಂಗ್‌ರವರು, ನಮ್ಮ ಅಭ್ಯರ್ಥಿಗಳನ್ನು ಭೇಟಿ ಮಾಡಿಸುವ ವ್ಯವಸ್ಥೆ ಮಾಡಿಸಿ ಎಂದು ಕೇಳಿಕೊಂಡಾಗ, ನಾವೆಲ್ಲಿ ಭೇಟಿ ಮಾಡಿಸುವುದಕ್ಕಾಗುತ್ತದೆ ಎಂದು ಹೇಳಿದೆವು.

(ಗೊಂದಲ)

**ಶ್ರೀ ಲಹರ್‌ಸಿಂಗ್ ಸಿರೋಯಾ:–** ಮಾನ್ಯ ಪಾಟೀಲ್ ಸಾಹೇಬರೇ ನಿಮ್ಮ ಪರವಾಗಿ ಎರಡು ಮಾತುಗಳನ್ನು ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ನನ್ನ ಪರ ಮಾತನಾಡುವುದಿದ್ದರೆ ಈ ಕಡೆ ಬಂದುಬಿಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಿರೋಯಾರವರೇ, ಆ ಎಂಎಲ್‌ಎಗಳ ಜೊತೆ ದಿಗ್ವಿಜಯ್‌ಸಿಂಗ್ ಅವರನ್ನು ಮಾತನಾಡುವುದಕ್ಕೆ ಬಿಡಿ ಸಾಕು. ಅವರನ್ನೇಕೆ ಕೂಡಿ ಹಾಕಿದ್ದೀರಿ?

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇಡೀ ಪ್ರಪಂಚದಲ್ಲಿ ದೊಡ್ಡದಾದ ಪ್ರಜಾಸತ್ತಾತ್ಮಕ ರಾಷ್ಟ್ರ ಭಾರತ ಎಂದು ನಾವು ಹೆಮ್ಮೆಯಿಂದ ಎದೆ ತಟ್ಟಿಕೊಂಡು ಹೇಳುತ್ತೇವೆ. ಹೀಗಾದರೆ ಪ್ರಜಾಪ್ರಭುತ್ವ ದೇಶದಲ್ಲಿ ಉಳಿಯುತ್ತದೆಯೇ? ಅದು ನಶಿಸಿ ಹೋಗುತ್ತದೆ. ಪ್ರಜಾಪ್ರಭುತ್ವ ನಶಿಸಿದರೆ ಮುಂದಿನ ಪರಿಸ್ಥಿತಿ ಏನು? ಸಂವಿಧಾನದ ಆಶಯಗಳು, ಮೂಲ ತತ್ವಗಳು, ಸಿದ್ಧಾಂತಗಳು ಏನಾಗುತ್ತವೆ? ಭಾರತ ದೊಡ್ಡ ಪ್ರಜಾಸತ್ತಾತ್ಮಕ ರಾಷ್ಟ್ರ ಎಂದು ಹೇಳುತ್ತೇವೆ. ಜನ ಪ್ರತಿನಿಧಿಗಳು ತಮ್ಮನ್ನು ಹಣಕ್ಕೆ ಮಾರಾಟ ಮಾಡಿಕೊಳ್ಳುತ್ತಿದ್ದಾರೆ ಎಂದರೆ ಇದು ಎಲ್ಲಿಗೆ ಹೋಗುತ್ತದೆ? ಒಂದು ಪಕ್ಷದ ಟಿಕೆಟ್ ಮೇಲೆ ಆಯ್ಕೆಯಾಗುವುದು, ಜನ ಇವರಿಗೆ ಆಶೀರ್ವಾದ ಮಾಡುವುದು, ಜನ ಪ್ರತಿನಿಧಿಗಳನ್ನಾಗಿ ಮಾಡುವುದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಂಥದ್ದಕ್ಕೆ ಅರ್ಥವಿಲ್ಲದಂತಾಗಿದೆ. ನಾನು ಕಾಂಗ್ರೆಸ್ ಪಕ್ಷದ ಸಿದ್ಧಾಂತಗಳನ್ನು ನಂಬಿ ಇಲ್ಲಿದ್ದೇನೆ. ನನಗೆ ಮತ್ತೊಂದು ಪಕ್ಷಕ್ಕೆ ಹೋಗಿ ಎಂದರೆ, ಆ ಪಕ್ಷದ ಸಿದ್ಧಾಂತಗಳು ನನಗೆ ಇಷ್ಟವಾಗುತ್ತದೆಯೇ?

(ಮುಂದು . . .)

(533) 18-03-2020 4.40 ಡಿಎಸ್-ಎಂಡಿ

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಈ ಸಿದ್ಧಾಂತಗಳಿಗೆ ವ್ಯತಿರಿಕ್ತವಾದಂತಹ ಪಕ್ಷಕ್ಕೆ ನನ್ನನ್ನು ಆಮಂತ್ರಣ ಮಾಡಿ ಇವತ್ತು ಈ ದೇಶದ ಪ್ರಧಾನ ಮಂತ್ರಿ ಮಾಡುತ್ತೇವೆಂದು ಹೇಳಿದರೂ ಕೂಡ ನಾನು ಮತ್ತೊಂದು ಪಕ್ಷಕ್ಕೆ ಕಾಲಿಡುವುದಿಲ್ಲ. I have liked the principles of congress party. So, I have remained in congress party. ಯಾವುದೇ ಆಸೆ, ಆಮಿಷಕ್ಕೆ ನಾನು ಬಲಿಯಾಗುವುದಿಲ್ಲ. ಅಲ್ಲಿ ಬೇಕಾದ್ದು ಇರಲಿ. ಇವರು ಹೇಗೆ ಬಲಿಯಾಗುತ್ತಾರೆ? ಜನಪ್ರತಿನಿಧಿಗಳು ಹಣಕ್ಕೆ ಬಲಿಯಾಗುತ್ತಿದ್ದಾರೆ, ಅಧಿಕಾರಕ್ಕೆ ಬಲಿಯಾಗುತ್ತಿದ್ದಾರೆ. ಈ ದೇಶದ ದೊಡ್ಡದಾದಂತಹ ಪ್ರಜಾಸತ್ತಾತ್ಮಕ ರಾಷ್ಟ್ರ ಎಂದು ಹೇಳುವುದಕ್ಕೆ ನನಗಂತೂ ನಾಚಿಕೆಯಾಗುತ್ತದೆ. ಇಂತಹ ಒಂದು ವ್ಯವಸ್ಥೆ ಮುಂದುವರೆದರೆ, ಈ ಪ್ರಜಾಪ್ರಭುತ್ವ ನಶಿಸಿ ಹೋದರೆ ಈ ದೇಶದ ಗತಿ ಏನಾಗುತ್ತದೆ? ಅದಕ್ಕೆ ಯಾರೇ ಪಕ್ಷದವರು ಇರಲಿ, ನಮ್ಮವರು ಇರಲಿ, ನಿಮ್ಮವರು ಇರಲಿ, ಸಿದ್ಧಾಂತ, ತತ್ವಗಳನ್ನು, ನಿಷ್ಠೆಗಳನ್ನಿಟ್ಟುಕೊಂಡು ನಾವು ಇವತ್ತು ಬದುಕಬೇಕು. ತತ್ವ, ಸಿದ್ಧಾಂತ ಇಲ್ಲದಿರುವುದನ್ನು ಬದುಕು ಎಂದು ಹೇಳುತ್ತಾರೆಯೇ? ಅವರು ತಿಪ್ಪೆಯಲ್ಲಿ ಬದುಕುವವರಾಗಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪಕ್ಷಾಂತರ ನಿಷೇಧ ಕಾಯ್ದೆಯನ್ನು ಜಾರಿಗೆ ತಂದರು. ಯಾವುದೇ ಪಕ್ಷದಿಂದ ಗೆದ್ದ ಒಬ್ಬ ವ್ಯಕ್ತಿ ಮತ್ತೊಂದು ಪಕ್ಷಕ್ಕೆ ಹೋಗುವುದಕ್ಕಿಂತ ಮುಂಚೆ ತನ್ನ ಮೂಲ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕು ಎಂದು ಪಕ್ಷಾಂತರ ನಿಷೇಧ ಕಾಯ್ದೆಯಲ್ಲಿ ತಂದರು. ಮಾನ್ಯ ಸಿದ್ದರಾಮಯ್ಯನವರಂತಹ ಹಿರಿಯರು ಜೆಡಿಎಸ್ ಅನ್ನು ಬಿಟ್ಟು ಕಾಂಗ್ರೆಸ್‌ಗೆ ಹೋಗುವುದಕ್ಕೆ ಮುಂಚೆ ತಾನು ಆಯ್ಕೆಯಾಗಿರುವಂತಹ ಮೂಲ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟರು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರನ್ನು ಪಕ್ಷದಿಂದ ಹೊರಗೆ ಹಾಕಿದರು. ಅವರು ಆ ಪಕ್ಷಕ್ಕೆ ರಾಜೀನಾಮೆ ಕೊಟ್ಟರು.

**ಸಭಾಪತಿಯವರು:-** ಆ ವಿಷಯ ಈಗ ಚರ್ಚೆ ಬೇಡ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಮಧ್ಯಾಹ್ನ ಸದನವನ್ನು ಮುಂದೂಡಿದ ಮೇಲೆ ನಾನು ಪಾರ್ಟಿ ಆಫೀಸ್‌ಗೆ ಹೋದೆ. ಅಲ್ಲಿ ಮಾತುಗಳನ್ನು ಕೇಳಿದೆ, ಪಕ್ಷಾಂತರಿಗಳ ವಿಚಾರವಾಗಿ, ಹಣದ ವಹಿವಾಟಿನ ವಿಚಾರವಾಗಿ, ಅಧಿಕಾರದ ವಿಚಾರವಾಗಿ ನಾನು ಕೇಳಿದೆ, ನನ್ನ ಜಂಗಬಲವೇ ಹುದುಗಿ ಹೋಯಿತು. I was really shocked to hear so many things and I can't express all those things in this August House. ಈ ಪವಿತ್ರವಾದ ಸದನದಲ್ಲಿ ನಾನು ಹೇಳಿದರೆ ಕೆಟ್ಟದಾಗುತ್ತದೆ. ಈ ಸದನದಲ್ಲಿ ಅಂತಹ ಶಬ್ಧಗಳನ್ನು ಬಳಕೆ ಮಾಡಬಾರದು. ಯಾವ ರೀತಿಯಾಗಿ ಪ್ರಜಾಪ್ರಭುತ್ವ ನಶಿಸಿ ಹೋಗುವುದಕ್ಕೆ ಅಧಿಕಾರದ ಸೂತ್ರಗಳನ್ನು ಕೈಯಲ್ಲಿ ಹಿಡಿದವರು ರೊಕ್ಕದ ಕೈಲಿಗಳು ಸಾವಿರಾರು ಕೋಟಿ ಹಣವನ್ನು ಇಟ್ಟುಕೊಂಡು lawfully established Government overthrow ಇವತ್ತು ಮತ್ತೊಂದು ಸರ್ಕಾರ ರಚನೆ ಮಾಡುತ್ತಾರೆಂದರೆ ಇದಕ್ಕಿಂತ ನಾಚಿಕೆಯಾಗುವಂತಹದ್ದು ಬೇರೆ ಇಲ್ಲ. ಭಾರತದ ಪ್ರಜಾಪ್ರಭುತ್ವದಲ್ಲೇ ಇದೊಂದು ಕಪ್ಪು ಚುಕ್ಕೆ ಎನ್ನುವ ಮಾತನ್ನು ಹೇಳಿ, ನಾನು ಮತ್ತೆ ನಾಳೆ ಪ್ರಾರಂಭ ಮಾಡುತ್ತೇನೆ. ಇನ್ನು ಬಹಳಷ್ಟು ವಿಚಾರಗಳನ್ನು ಹೇಳಬೇಕಾಗಿದೆ.

**6. <u>ವರದಿಯನ್ನೊಪ್ಪಿಸುವುದು</u>**

**ಶ್ರೀ ಸಿ.ಎಂ.ಲಿಂಗಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, 2018-19ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 35ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**7. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, 2007 ರಲ್ಲಿ ಒಂದು ವಿಧೇಯಕ ಕಾಯ್ದೆಯಾಗಿ ಬಂದಿತ್ತು. ಅದಾದ ಮೇಲೆ ಸುಮಾರು ಮೂರು ಸಲ ಅದರ ತಿದ್ದುಪಡಿ ಆಯಿತು. ವಿಶೇಷವಾಗಿ ಈ ವಿಧೇಯಕವನ್ನು ತರುತ್ತಿರುವ ಕಾರಣವೇನೆಂದರೆ, ನಮ್ಮ ರಾಜ್ಯದಲ್ಲಿ ಕಡ್ಡಾಯ ವರ್ಗಾವಣೆ ಎಂದು ತಿದ್ದುಪಡಿಯಾಗಿ ಕಾಯ್ದೆ ಆಯಿತು. ಅದರಲ್ಲೂ ನಾನು ಈ ಜವಾಬ್ದಾರಿ ತೆಗೆದುಕೊಂಡ ಹೊಸದರಲ್ಲಿ ಆ ಶಿಕ್ಷಕಿಯರ, ಶಿಕ್ಷಕರ ಗೋಳನ್ನು ನಾನು ಕಣ್ಣಾರೆ ನೋಡಿದೆ. ಆ ಬುದ್ಧಿಮಾಂದ್ಯ ಮಕ್ಕಳನ್ನು ಇಟ್ಟುಕೊಂಡು ಆ ಕಡ್ಡಾಯ ವರ್ಗಾವಣೆಗೆ ಸಿಲುಕಿ ಅವರು ಯಾವ ರೀತಿ ಪರದಾಡಿದರು ಎಂದು ನಾನು ಕಣ್ಣಾರೆ ನೋಡಿದೆ. ವಿಚಿತ್ರವೇನೆಂದರೆ, ಯಾವುದೇ ಇಲಾಖೆಯಲ್ಲಿಕಡ್ಡಾಯ ನಿವೃತ್ತಿ ಎಂದರೆ, it's a punishment, ಕಡ್ಡಾಯ ರಜೆ ಹೋಗು ಎಂದರೆ it's a punishment ಈ ಕಡ್ಡಾಯ ವರ್ಗಾವಣೆ ಏನು ಎಂದು ನನಗೆ ಅರ್ಥವಾಗಲಿಲ್ಲ. ಬೇರೆ ಯಾವುದೇ ಇಲಾಖೆಯಲ್ಲಿರುವ ಕಡ್ಡಾಯ ವರ್ಗಾವಣೆ, ಈ ಶಿಕ್ಷಣ ಕ್ಷೇತ್ರದಲ್ಲಿ ಏಕೆ ಎನ್ನುವುದು ಸಮಸ್ಯೆ ಬಂದಿತ್ತು. ಇವತ್ತು ರಾಜ್ಯದಲ್ಲಿ ಎಲ್ಲಾ ಶಾಲೆಗಳಿಗೆ, ನಮ್ಮ ಮಕ್ಕಳಿಗೆ ಶಿಕ್ಷಕರುಗಳು ಬೇಕು. ಅದನ್ನು ಮಾಡುವಾಗ ನಾವು ಯೋಚನೆ ಮಾಡಿ ವರ್ಗಾವಣೆ ಮಾಡಬೇಕು. ನಾನು ಸಚಿವನಾದ ಮೇಲೆ ಒಂದು ಮಾತನ್ನು ಕೊಟ್ಟಿದೆ. ರಾಜ್ಯದ ಎಲ್ಲಾ ಶಿಕ್ಷಕರಿಗೆ ನಮ್ಮ ಶಿಕ್ಷಣ ಕ್ಷೇತ್ರದಿಂದ ಬಂದಿರುವ ಮಾನ್ಯ ಸದಸ್ಯರುಗಳಿಗೆ ಬಹಳ ಬೇಗ ಶಿಕ್ಷಕ ಸ್ನೇಹಿ, ಜೊತೆಗೆ ಶಿಕ್ಷಣಕ್ಕೆ ಪೂರಕ ಮತ್ತು ಮಕ್ಕಳ ಹಿತ ಚಿಂತನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಒಂದು ವಿಧೇಯಕವನ್ನು ತರುತ್ತೇನೆಂದು ನಾನು ಹೇಳಿದ್ದೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತು ಆ ವಿಧೇಯಕವನ್ನು ವಿಧಾನಸಭೆಯಲ್ಲಿ ಮಂಡಿಸಿ ಅಲ್ಲಿ ಸರ್ವಾನುಮತದಿಂದ ಅನುಮೋದನೆ ಪಡೆದು ಈ ಸದನಕ್ಕೆ ತಂದಿದ್ದೇನೆ. ಈಗಾಗಲೇ ಈ ವಿಧೇಯಕದ ಎಲ್ಲಾ ಅಂಶಗಳನ್ನು ನಾನು ಈ ಸದನದ ಗೌರವಾನ್ವಿತ ಸದಸ್ಯರುಗಳ ಜೊತೆ ಚರ್ಚೆ ಮಾಡಿದ್ದೇನೆ. ನಾನು ಅವರ ಸಲಹೆಗಳನ್ನು ಕೂಡ ಪಡೆದಿದ್ದೇನೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ತಾವೆಲ್ಲರೂ ಈ ವಿಧೇಯಕಕ್ಕೆ ಬೆಂಬಲ ಸೂಚಿಸಿ ಅನುಮೋದನೆ ಮಾಡಿದಾಗ ಬೇಗ ಹೋಗಿ ರಾಜ್ಯಪಾಲರ ಅನುಮೋದನೆಯನ್ನು ಪಡೆದು ಈ ಜೂನ್ ಆದಮೇಲೆ ವರ್ಗಾವಣೆಯಾಗಬಾರದು. ಏಪ್ರಿಲ್, ಮೇ ನಲ್ಲೇ ಎಲ್ಲಾ ವರ್ಗಾವಣೆ ಮುಗಿಯಬೇಕು. ಜೂನ್ ನಂತರ ಆಯಾ ಶಿಕ್ಷಕರು ಆಯಾಯ ಶಾಲೆಗಳಲ್ಲಿ ಪಾಠ ಮಾಡುವುದಕ್ಕೋಸ್ಕರ ಅವರ ಸಮಯ ವಿನಿಯೋಗಿಸಬೇಕು. ನಾನು ಎಂಥೆಂಥ ಪ್ರಸಂಗ ನೋಡಿದೆ ಎಂದರೆ, ಈ ಕಡ್ಡಾಯ ವರ್ಗಾವಣೆ ಆಯಿತು, ಅನೇಕ ಶಿಕ್ಷಕರು, ಶಿಕ್ಷಕಿಯರು ಬಂದರು. ನನ್ನ ಜೊತೆ ಮಾತನಾಡುವುದಕ್ಕೆ ಬಂದಾಗ ಒಬ್ಬರು ಮಹಿಳೆ ತನ್ನ ಮುಂದೆ ಟೇಬಲ್ ಮೇಲೆ ಮಗುವನ್ನು ಮಲಗಿಸಿಕೊಂಡಿದ್ದಾರೆ. ನಾನು ಆ ಮಗುವಿಗೆ ಮೂರ್‍ನಾಲ್ಕು ತಿಂಗಳು ಆಗಿರಬಹುದು ಎಂದುಕೊಂಡಿದ್ದೆ. ನಾನು ಸಹಜವಾಗಿ ಕೇಳಿದೆ, ಆ ಮಗುವಿಗೆ ಎಷ್ಟು ವಯಸ್ಸು ಎಂದು ಕೇಳಿದೆ, ನಾಲ್ಕು ವರ್ಷ ಎಂದು ಹೇಳಿದರು. ಆ ಮಗುವಿಗೆ ಬುದ್ಧಿಮಾಂದ್ಯತೆಯಿಂದ ದೇಹವೇ ಬೆಳೆದಿಲ್ಲ. ನನಗೆ ಕಡ್ಡಾಯ ವರ್ಗಾವಣೆ ಮಾಡಿದ್ದಾರೆಂದು ಆ ಮಗುವನ್ನು ಎತ್ತಿಕೊಂಡು ಎಲ್ಲಾ ಕಡೆ ಓಡಾಡುತ್ತಿದ್ದಾರೆ. ಇದೇ ರೀತಿಯ ಪ್ರಸಂಗ ನನಗೆ ರಾಯಚೂರಿನಿಂದ ವರದಿಯಾಯಿತು. ಶ್ರೀಮತಿ ಶಾಂತಲಕ್ಷ್ಮಿ ಎನ್ನುವ ಶಿಕ್ಷಕಿ, ಆಕೆಗೆ 22 ವರ್ಷ ಬೆಳೆದ ಬುದ್ಧಿಮಾಂದ್ಯ ಮಗಳು ಇದ್ದಾಳೆ. ಆಕೆಗೆ ಕಡ್ಡಾಯ ವರ್ಗಾವಣೆ ಮಾಡಿಬಿಟ್ಟಿದ್ದಾರೆ. ಆಕೆ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಅಲೆದಾಡುತ್ತಿದ್ದಾಳೆ, ಯಾರ್‍ಯಾರದೋ ಕಾಲು ಹಿಡಿಯುತ್ತಿದ್ದಾಳೆ. ನನಗೆ ಇದು ಸೋಷಿಯಲ್ ಮೀಡಿಯಾ ಮುಖಾಂತರ ಗೊತ್ತಾಯಿತು. ಹೇಗೋ ಆಕೆಯ ನಂಬರ್ ಸಂಪಾದಿಸಿ ಆಕೆಯ ಜೊತೆ ಮಾತನಾಡಿ ಆಕೆಯ ಅಳಲನ್ನು ಕೇಳಿ, ಕೂಡಲೇ ಆ ವರ್ಗಾವಣೆಯನ್ನು ರದ್ದುಪಡಿಸಿದೆ, ಅದೊಂದು ನನಗೆ ಸಮಾಧಾನ.

(ಮುಂದು)

**(534) 18.03.2020 04.50 ಎಸ್‌ವಿ-ಎಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಸುರೇಶ್ ಕುಮಾರ್ (ಮುಂದು):-**

ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಕ್ಯಾನ್ಸರ್‌ನ ಟರ್ಮಿನಲ್ ಸ್ಥಿತಿಯಲ್ಲಿರುವ ಒಬ್ಬ ರೋಗಿಗೆ ಕಡ್ಡಾಯ ವರ್ಗಾವಣೆಯನ್ನು ಮಾಡಿಬಿಟ್ಟಿದ್ದರು. ಆ ವಿಷಯ ನನಗೆ ತಿಳಿದ ನಂತರ ಆ ಕಡ್ಡಾಯ

ವರ್ಗಾವಣೆಯನ್ನು ನಾನು ರದ್ದು ಮಾಡಿಸಿದೆ. ದುಃಖದ ವಿಷಯವೆಂದರೆ ಮೂರು ತಿಂಗಳೊಳಗೆ ಅವರು ಮೃತರಾದರು. ನಾನು ಅವರ ಮನೆಗೆ ಹೋಗಿ ವರ್ಗಾವಣೆಯನ್ನು ರದ್ದುಗೊಳಿಸಿದ ನಂತರ ಈ ರೀತಿಯಾದುದಕ್ಕೆ ವಿಷಾದವನ್ನು ವ್ಯಕ್ತಪಡಿಸಿ ಗೌರವ ಸಲ್ಲಿಸಿ ಬಂದೆನು. ಸಮಗ್ರ ಶಿಕ್ಷಕರ ಹಿತವನ್ನು ಗಮನದಲ್ಲಿಟ್ಟುಕೊಂಡು ಈ ಕಾಯಿದೆಯನ್ನು ರೂಪಿಸಲಾಗಿದೆ. ಈ ಬಾರಿ ಎ, ಬಿ, ಸಿ ವಲಯಗಳಲ್ಲಿ 'ಸಿ' ವಲಯ ಎಂದರೆ ಗ್ರಾಮೀಣ ಪ್ರದೇಶವಾಗಿದ್ದು, ಯಾರೂ ಹೆಚ್ಚಾಗಿ ಹೋಗುವುದಿಲ್ಲ. ಅನೇಕ ಗ್ರಾಮಗಳಿಗೆ ನಾನು ಹೋಗಿದ್ದೇನೆ. ರಸ್ತೆಯೇ ಇರುವುದಿಲ್ಲ. ರಸ್ತೆಯೇ ಇಲ್ಲದ ಗ್ರಾಮದಲ್ಲಿ ಒಂದು ಶಾಲೆ. ನಾನು ಉತ್ತರ ಕನ್ನಡ ಜಿಲ್ಲೆಯಲ್ಲಿ 'ಮಹಿಮೆ' ಎನ್ನುವ ಊರಿಗೆ ಹೋಗಿದ್ದೆನು. ಊರ ಹೆಸರು 'ಮಹಿಮೆ'. ಅಲ್ಲಿ ರಸ್ತೆಯೇ ಇರಲಿಲ್ಲ. ಅದೇ ತರಹ ಅನೇಕ ಕಡೆಗಳಿಗೆ ನಾನು ಹೋಗಿದ್ದೇನೆ. ಅನೇಕ ಮಕ್ಕಳು ಓದುತ್ತಿದ್ದು, ಅವರಿಗೆ ಶಿಕ್ಷಣವನ್ನು ಕೊಡಬೇಕು. ಆದುದರಿಂದ ಇನ್ನು ಮೇಲೆ ಮೊದಲನೆಯ ನೇಮಕಾತಿ ಆಗಿ ಹೊಸದಾಗಿ ನೇಮಕಗೊಂಡ ಶಿಕ್ಷಕರಿಗೆ 'ಸಿ' ವಲಯದಲ್ಲಿಯೇ ಕೆಲಸ ಮಾಡಬೇಕೆಂದು ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಯಾರು 10 ವರ್ಷ ಸಿ ವಲಯದಲ್ಲಿ ಯಾರು ಕೆಲಸ ಮಾಡುತ್ತಾರೆಯೋ ಅವರಿಗೆ ಬಿ ಮತ್ತು ಎ ವಲಯಗಳಿಗೆ ವರ್ಗಾವಣೆಗೊಳ್ಳಲು ಅವಕಾಶವನ್ನು ಕೊಡಲಾಗಿದೆ.

ಹಾಗೆಯೇ ಒಂದಷ್ಟು ವಿನಾಯಿತಿಗಳನ್ನು ನೀಡಲಾಗಿದೆ. ಹಿಂದೆ ಇಲ್ಲದಂತಹ ವಿನಾಯಿತಿಗಳನ್ನು ಇದರಲ್ಲಿ ನೀಡಲಾಗಿದೆ. ಬುದ್ಧಿಮಾಂದ್ಯ ಮಕ್ಕಳಿದ್ದರೆ, Cerebral palsy ಎನ್ನುವ ಕಾಯಿಲೆಯಿಂದ ಬಳಲುವ ಮಕ್ಕಳಿದ್ದರೆ, ಯಾರಾದರೂ ಕೂಡ ಭಾರತೀಯ ಸೈನ್ಯದಲ್ಲಿ ಹೋರಾಡುತ್ತಿರುವ ಸೈನಿಕರಿದ್ದರೆ, ಮಾಜಿ ಸೈನಿಕರಿದ್ದರೆ, ಮೃತಪಟ್ಟ ಸೈನಿಕರ ಕುಟುಂಬದವರಿದ್ದರೆ ಅವರ ಪತ್ನಿಗೆ ಆದ್ಯತೆ ಮತ್ತು ವಿನಾಯಿತಿ ಎರಡೂ ಕೂಡ ಇಲ್ಲಿ ಕೊಟ್ಟಿದ್ದೇವೆ. ಜೊತೆಗೆ ಒಂದು ವರ್ಷದ ಮಗುವಿನ ಬಾಣಂತಿ ಇದ್ದರೆ, ಆಕೆಯ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ವಿನಾಯಿತಿ ಮತ್ತು ಆದ್ಯತೆಯನ್ನು ಕೊಡಲಾಗಿದೆ. ಹೀಗೆ ಹಿಂದೆ ಇರದಿದ್ದಂತಹ ಅನೇಕ ರೀತಿಯ ವಿನಾಯಿತಿಗಳನ್ನು ನಾವು ಈಗ ಕೊಟ್ಟಿದ್ದೇವೆ. ನನ್ನದೊಂದು ನಂಬಿಕೆಯಿದೆ. ಶಿಕ್ಷಕರು ಇಷ್ಟ ಪಟ್ಟು ಶಾಲೆಗೆ ಹೋದರೆ ಚೆನ್ನಾಗಿ ಪಾಠ ಮಾಡುತ್ತಾರೆ. ಶಿಕ್ಷಕರನ್ನು ಕಷ್ಟ ಪಟ್ಟು ಕಳುಹಿಸಿದರೆ ಅವರು ಪಾಠ ಮಾಡುವುದಕ್ಕೆ ಆಗುವುದಿಲ್ಲ. ಇರುವ ಒಂದು ಬಸ್ ಅನ್ನು ಹಿಡಿದು ಶಿಕ್ಷಕರು ಬೆಳಗ್ಗೆ 11.30 ಗಂಟೆಯ ವೇಳೆಗೆ ಬರುತ್ತಾರೆ. ಅದೇ ಬಸ್ ಪುನಃ ಮಧ್ಯಾಹ್ನ 03.00 ಗಂಟೆಯ ವೇಳೆಗೆ ವಾಪಸ್ ಹೋಗುವಾಗ ಅದೇ ಬಸ್ಸಿನಲ್ಲಿ ವಾಪಸ್ ಹೋಗಬೇಕು. ಪಾಠ ಮಾಡಲಿಕ್ಕೆ ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಎಲ್ಲಾ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಈ ವಿಧೇಯಕದಲ್ಲಿ ಅನೇಕ ಮಾರ್ಪಾಡುಗಳನ್ನು ನಾವು ಮಾಡಿದ್ದೇವೆ. ಜೊತೆಗೆ rationalization ಮಾಡಿದ್ದೇವೆ. ಎಲ್ಲಿ ಹೆಚ್ಚುವರಿ ಶಿಕ್ಷಕರು ಇದ್ದಾರೆ ಅವರನ್ನು ನಾವು ಯಾವ ರೀತಿ ಬೇರೆ ಕಡೆಗೆ ಕಳುಹಿಸುವುದು ಎನ್ನುವುದಕ್ಕೆ ಮೊದಲು ತಾಲ್ಲೂಕು ನಂತರ ಜಿಲ್ಲೆ ಎಂದು ಆದ್ಯತೆಯ ಮೇರೆಗೆ ಕಳುಹಿಸುತ್ತಿದ್ದೆವು. ಒಂದು ವರ್ಷ ವರ್ಗಾವಣೆ rationalization, ಹೆಚ್ಚುವರಿ ಶಿಕ್ಷಕರ ವರ್ಗಾವಣೆ, ಇನ್ನೊಂದು ವರ್ಷದಲ್ಲಿ ವಲಯವಾರು ವರ್ಗಾವಣೆಯನ್ನು ಮಾಡುವುದಕ್ಕೆ ನಾವು ವಿಧೇಯಕದಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಕರ್ನಾಟಕದಲ್ಲಿ ಅನೇಕ ತಾಲ್ಲೂಕುಗಳಿವೆ. ಆ ತಾಲ್ಲೂಕುಗಳಲ್ಲಿ ಶೇ.20ಕ್ಕೂ ಹೆಚ್ಚು vacancy ಗಳಿವೆ. ಅಲ್ಲಿ ಶಿಕ್ಷಕರೇ ಇಲ್ಲ. As on today, ಸುಮಾರು 30 ಸಾವಿರ ಶಿಕ್ಷಕರ ಕೊರತೆ ಇದೆ. ಮುಂಬರುವ ಮೂರು ವರ್ಷಗಳಲ್ಲಿ ಇನ್ನೂ 24 ಸಾವಿರ ಶಿಕ್ಷಕರು ನಿವೃತ್ತರಾಗುತ್ತಿದ್ದಾರೆ. ಈ ಹುದ್ದೆಗಳನ್ನೆಲ್ಲಾ ನಾವು ಭರ್ತಿ ಮಾಡಬೇಕು. ಜೊತೆಗೆ ತಾಲ್ಲೂಕುಗಳಲ್ಲಿರುವ ಶೇ.20 vacancy ಗಳನ್ನು ಗಮನಿಸಬೇಕು. ಅದಕ್ಕಾಗಿ ಮೊದಲನೆಯ ಬಾರಿ ನೇಮಕವಾಗುವವರನ್ನು ಶೇ.20ರ vacancy ಇರುವ ತಾಲ್ಲೂಕುಗಳಿಗೆ ಆದ್ಯತೆಯ ಮೇರೆಗೆ ಕಳುಹಿಸುವ ಮೂಲಕ ಅಲ್ಲಿಗೆ ಶಿಕ್ಷಕರನ್ನು ಕೊಡಬೇಕೆನ್ನುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಯಾವುದೇ ಒಂದು ಕಡೆಗೆ ವರ್ಗಾವಣೆ ಬೇಕೆಂದು ಶಿಕ್ಷಕರು ಬಯಸಿದರೆ, ಅದು counselling ಮುಖಾಂತರವೇ ಆಗುತ್ತದೆ. Human intervention ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಮಾಡಲಾಗಿದೆ. ಒಂದು ಶಾಲೆಯಿಂದ ಇನ್ನೊಂದು ಶಾಲೆಗೆ ವರ್ಗಾವಣೆಯನ್ನು ಬಯಸುವ ಶಿಕ್ಷಕ ಅಥವಾ ಶಿಕ್ಷಕಿ ಕನಿಷ್ಠ ಮೂರು ವರ್ಷ ಆ ಶಾಲೆಯಲ್ಲಿ ಸೇವೆಯನ್ನು ಸಲ್ಲಿಸಿರಬೇಕು. ಆಗ ಮಾತ್ರ ವರ್ಗಾವಣೆಗೆ ಅರ್ಹತೆ ಬರುತ್ತದೆ.

ನಿನ್ನೆ ಯಾರೋ ಹೇಳುತ್ತಿದ್ದರು. ನೀವೇನೋ ಒಳ್ಳೆಯ ಉದ್ದೇಶದಿಂದ ಈ ಕಾಯ್ದೆಯನ್ನು ತರುತ್ತೀರಿ. ಆದರೆ ಇಲಾಖೆಯಲ್ಲಿ ರಂಗೋಲಿ ಕೆಳಗೆ ನುಸುಳುವವರು ಬಹಳಷ್ಟು ಜನ ಇದ್ದಾರೆ. ಅವರು ಈ counselling ಸಮಯದಲ್ಲಿ ಅವರಿಗೆ ಬೇಕಾದುದನ್ನು ಮಾತ್ರ ಕಾಣುವಂತೆ ಮಾಡಿ, ಬೇಡವಾದುದನ್ನು block ಮಾಡುತ್ತಾರೆ. ಅದಕ್ಕಾಗಿ ಮೊಟ್ಟ ಮೊದಲನೆಯ ಬಾರಿಗೆ ಶಿಕ್ಷಕರ ವರ್ಗಾವಣೆಯ redressal ಗಾಗಿ, ಅವರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕಾಗಿ ಒಬ್ಬ ಅಧಿಕಾರಿಯನ್ನು ಜಿಲ್ಲಾ ಮಟ್ಟದಲ್ಲಿ ನೇಮಕ ಮಾಡುತ್ತಿದ್ದೇವೆ. ಜಿಲ್ಲಾ ಮಟ್ಟದಲ್ಲಿ ಅವರು ತಮ್ಮ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆಗಳನ್ನು ಹೇಳಿಕೊಳ್ಳಬಹುದು. ಅಕಸ್ಮಾತ್ ಅಲ್ಲಿಯೂ ಆಗದಿದ್ದರೆ Appellate Authority ಆಗಿ, ಇಲ್ಲಿನ ಆಯುಕ್ತರು, ಕಲಬುರಗಿಯ ಆಯುಕ್ತರು ಹಾಗೂ ಧಾರವಾಡದ ಆಯುಕ್ತರು ಇವರನ್ನು ನೇಮಕ ಮಾಡಿ ಒಂದು ಹೊಸ ವ್ಯವಸ್ಥೆಯನ್ನು ಮಾಡಲಾಗಿದೆ.

ಒಟ್ಟಾರೆ ವರ್ಗಾವಣೆ ಎನ್ನುವುದು ಹಿಂಸೆಯಾಗಬಾರದು; ವರ್ಗಾವಣೆ ಎನ್ನುವುದು ನೆವ ಆಗಬಾರದು; ವರ್ಗಾವಣೆ ಎನ್ನುವುದು ಮಕ್ಕಳಿಗೆ ತೊಂದರೆಯಾಗಬಾರದು; ವರ್ಗಾವಣೆ ಎನ್ನುವುದು ಶಿಕ್ಷೆಯೂ ಆಗಬಾರದು. ಈ ಹಿನ್ನೆಲೆಯಲ್ಲಿ ಎಲ್ಲರ ಜೊತೆಯಲ್ಲಿ ಚರ್ಚೆ ಮಾಡಿ, ಶಿಕ್ಷಕ ಸಂಘಟನೆಗಳ ಜೊತೆ, ಶಿಕ್ಷಕರ ಜೊತೆ ಹಾಗೂ ಗೌರವಾನ್ವಿತ ಸದಸ್ಯರ ಜೊತೆ ಸುಮಾರು 15-20 ಸುತ್ತು ಸಮಾಲೋಚನೆ ಮಾಡಿ ಎಲ್ಲರ ಅಭಿಪ್ರಾಯಗಳನ್ನು ಪಡೆದು ಈ ವಿಧೇಯಕವನ್ನು ನಾವು ತಂದಿದ್ದೇವೆ. ಇದು ವಿಧಾನಸಭೆಯಲ್ಲಿ ಅಂಗೀಕಾರವಾಗಿದೆ. ಮಕ್ಕಳ ದೃಷ್ಟಿಯಿಂದ, ಶಿಕ್ಷಕರ ದೃಷ್ಟಿಯಿಂದ ಒಟ್ಟಾರೆ ಶಿಕ್ಷಣ ಕ್ಷೇತ್ರದ ದೃಷ್ಟಿಯಿಂದ ಈ ವಿಧೇಯಕಕ್ಕೆ ಬೆಂಬಲವನ್ನು ನೀಡಿ, ಸಂಪೂರ್ಣ ಅನುಮೋದನೆಯನ್ನು ನೀಡಬೇಕೆಂದು ಎಲ್ಲಾ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಈಗ ಮಾನ್ಯ ಮಾನ್ಯ ಶರಣಪ್ಪ ಮಟ್ಟೂರರವರು ಮಾತನಾಡುವುದು.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸಚಿವರು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2020 ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ಈ ರಾಜ್ಯದಲ್ಲಿ ಅಷ್ಟೇ ಅಲ್ಲ, ಈ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಸೆಪ್ಟೆಂಬರ್ 2007ರಲ್ಲಿ ಅಂದಿನ ಶಿಕ್ಷಣ ಸಚಿವರಾಗಿದ್ದಂತಹ ಶ್ರೀ ಬಸವರಾಜ ಹೊರಟ್ಟಿಯವರು counselling ಪದ್ಧತಿಯನ್ನು ರಾಜ್ಯದಲ್ಲಿ ತಂದಿರುವುದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಕಾರಣ ಈ ವರ್ಗಾವಣೆಯಲ್ಲಿ ಒಂದು ದೊಡ್ಡ ದಂಧೆಯೇ ನಡೆಯುತ್ತಿತ್ತು ಎನ್ನುವ ಮಾತನ್ನು ಅವರು ಹೇಳುತ್ತಾರೆ. ಆಗ ನನಗೆ ಅಷ್ಟು ಅನುಭವ ಇರಲಿಲ್ಲ. ಆದರೆ ಮಾನ್ಯ ಹೊರಟ್ಟಿಯವರು ಹೇಳಿದ ಮೇಲೆ ಅವರ ಜೊತೆಯಲ್ಲಿ ಚರ್ಚೆ ಮಾಡಿದ ಸಂದರ್ಭದಲ್ಲಿ "ಶಿಕ್ಷಕರ ವರ್ಗಾವಣೆಯಲ್ಲಿ ತೊಂದರೆಯಾಗಬಾರದು, ಶಿಕ್ಷಕರು ವಿಧಾನಸೌಧ, ಶಾಸಕರ ಭವನ ಮತ್ತು ಶಾಸಕರ ಮನೆಗಳಿಗೆ ತಿರುಗಿ ಹಣ ಕೊಟ್ಟು ವರ್ಗಾವಣೆಯನ್ನು ಪಡೆಯಬಾರದು. ನಾನು ಸಚಿವನಾಗಿ ಅನುಭವಿಸಿದ್ದೇನೆ. ಹಾಗಾಗಿ ಅದನ್ನು ನಿರ್ಮೂಲನೆ ಮಾಡುವುದಕ್ಕಾಗಿ counselling ಪದ್ಧತಿಯನ್ನು ರಾಜ್ಯದಲ್ಲಿ ತರುತ್ತಿದ್ದೇನೆ" ಎಂದು ಹೇಳಿದರು. ಇದಕ್ಕಾಗಿ ನಾನು ಮಾನ್ಯ ಹೊರಟ್ಟಿಯವರಿಗೆ ಅಭಿನಂದನೆಗಳನ್ನು ಈ ಸಂದರ್ಭದಲ್ಲಿ ಹೇಳಲೇಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗ ಮಾನ್ಯ ಸಚಿವರು ಸಾಕಷ್ಟು ಗೊಂದಲಗಳ ವಿಚಾರಗಳನ್ನು ವಿವರಿಸಿದ್ದಾರೆ. ಈ ಗೊಂದಲಗಳಿಂದಾಗಿ ಮೂರ್ನಾಲ್ಕು ವರ್ಷಗಳಿಂದ ಶಿಕ್ಷಕರ ವರ್ಗಾವಣೆಯನ್ನು ನಿಲ್ಲಿಸಿದ್ದುದರಿಂದ ಬಹಳ ತೊಂದರೆಯಾಗಿದೆ. ನಾವು ಎಲ್ಲಿಗೇ ಭೇಟಿಯನ್ನು ನೀಡಲು ಹೋದಾಗ ಮೂರು ವರ್ಷದಿಂದ ವರ್ಗಾವಣೆ ಪ್ರಕ್ರಿಯೆ ನಡೆದಿಲ್ಲ ಎಂದು ಹೇಳುತ್ತಿದ್ದರು. ಹಿಂದಿನ ಬಾರಿ ಇದೇ ವಿಧೇಯಕವನ್ನು ಈ ಸದನದಲ್ಲಿ ಮಾಡಿದಾಗ ಅದು ಕೇವಲ ಪತಿ ಪತ್ನಿ ಪ್ರಕರಣಕ್ಕಷ್ಟೇ ಸೀಮಿತವಾಯಿತು ಎಂದು ಪ್ರತಿಯೊಬ್ಬ ಶಿಕ್ಷಕರೂ ತಮ್ಮ ಅಳಲನ್ನು ನಮ್ಮ ಮುಂದೆ ತೋಡಿಕೊಂಡರು. ಆದರೆ ಈ ಸಲ ತಂದಿರುವ ಬಿಲ್ ಚೆನ್ನಾಗಿದೆ. ನಾನು ಕೂಡ ಇದನ್ನು ಸ್ವಾಗತ ಮಾಡುತ್ತೇನೆ but subject to certain conditions. ಇದರಲ್ಲಿ ಸ್ವಲ್ಪ ಬದಲಾವಣೆಯನ್ನು ತರಬೇಕೇನೋ ಎಂದು ನನ್ನ ಭಾವನೆಯನ್ನು ವ್ಯಕ್ತ ಪಡಿಸಲಿಕ್ಕೆ ಬಯಸುತ್ತೇನೆ. ಹೆಚ್ಚುವರಿ ಶಿಕ್ಷಕರ ಕುರಿತು ಪುಟ 3, ಕ್ರಮಾಂಕ 2ರಲ್ಲಿ ಹೇಳಿದ್ದಾರೆ. ಅದು ಸರಿಯಾಗಿ ಮಾಡುತ್ತಿಲ್ಲವೇನೋ ಎಂಬ ಭಾವನೆ ನನಗಿದೆ. ಕಾರಣವೇನೆಂದರೆ ನಾವು ಮೊದಲೆಲ್ಲಾ ಕೆಲವು ಮಾನದಂಡಗಳಲ್ಲಿ ನಾವು ಹೆಚ್ಚುವರಿಯಾಗಿ ಗುರುತಿಸುತ್ತಿದ್ದೆವು.

**(...ಮುಂದು)**

(535) 18-03-2020 (5-00) ಕೆಜಿ ಎಕೆ

**ಶ್ರೀ ಶರಣಪ್ಪ ಮಟ್ಟೂರ (ಮುಂದು):-**

ಆದರೆ, SATS (Student Achievement Tracking System) and TDS (Teachers Data Software) ಬಂದ ಮೇಲೆ ಅವರನ್ನು ಗುರುತಿಸುವುದಕ್ಕೆ ಬಹಳ ಸುಲಭವಾಗಿದೆ. ವೈಜ್ಞಾನಿಕವಾಗಿ ಅದೊಂದು ಮಾಡಿ ಮಾಹಿತಿಯನ್ನು ತರಿಸಿಕೊಂಡು ಸರಿಯಾದ ರೀತಿಯಲ್ಲಿ ಹೆಚ್ಚುವರಿ ಮಾಡಬೇಕೆಂಬ ಒಂದು ಸಲಹೆಯನ್ನು ಕೊಡುತ್ತೇನೆ.

ಎರಡನೆಯದಾಗಿ, ತಾವು ಈ ಬಾರಿ 'compulsory transfer is nothing but punishment' ಎನ್ನುವ ರೀತಿಯಲ್ಲಿ ವಿವರಿಸಿದ್ದಾರೆ. The hon. Minister has given a good explanation about the same before this House. I too welcome it. ನಮ್ಮ ಉದ್ದೇಶವೇನೆಂದರೆ, ಪುಟ ಸಂಖ್ಯೆ-3 ರಲ್ಲಿ Rule 6 ಅನ್ನು refer ಮಾಡಿದ್ದಾರೆ. ಅದು;

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ಒಂದು ಶಾಲೆಯಲ್ಲಿ ಕನಿಷ್ಠ ಸೇವಾ ಅವಧಿಯನ್ನು ಸಲ್ಲಿಸಿರುವ ಶಿಕ್ಷಕನಿಗೆ ಖಾಲಿ ಹುದ್ದೆಗಳ ಲಭ್ಯತೆಗೆ ಮತ್ತು ನೇಮಿಸಬಹುದಾದ ಅಂಥ ಇತರ ಷರತ್ತುಗಳಿಗೆ ಒಳಪಟ್ಟು ವರ್ಗಾವಣೆಯನ್ನು ಕೋರುವ ಆಯ್ಕೆಯನ್ನು ನೀಡತಕ್ಕದ್ದು;

ಪರಂತು ಸಮರ್ಪಕ ಮರುಹಂಚಿಕೆ ಅಥವಾ ವಲಯವಾರು ವರ್ಗಾವಣೆಯ ಪರಿಣಾಮವಾಗಿ ಒಂದು ಶಾಲೆಯಿಂದ ಮತ್ತೊಂದಕ್ಕೆ ಶಿಕ್ಷಕನ ವರ್ಗಾವಣೆಯಾದ ಪ್ರಕರಣದಲ್ಲಿ ಒಂದು ಶಾಲೆಯಲ್ಲಿ ಕನಿಷ್ಠ ಸೇವೆಯನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ಹಿಂದಿನ ಶಾಲೆಯಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸದಕ್ಕದ್ದು; ಎನ್ನುವಂತಹ ಒಂದು ಹೊಸದನ್ನು ಸೇರಿದ್ದೀರಿ. ಇದಕ್ಕೆ ಬಹಳ ಸಂತೋಷವನ್ನು ವ್ಯಕ್ತಪಡಿಸುತ್ತೇನೆ.

ಆದರೆ, ಮತ್ತು ಪರಂತು, ಕಲ್ಯಾಣ ಕರ್ನಾಟಕ ಪ್ರದೇಶದ ಯಾವುದೇ ಆರು ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು ಕಲ್ಯಾಣ ಕರ್ನಾಟಕದ ಪ್ರದೇಶದ ಹೊರಗೆ ವರ್ಗಾವಣೆಯನ್ನು ಕೋರುವುದಕ್ಕಾಗಿ, ಎಲ್ಲಾ ಇತರ ಅರ್ಹತಾ ಷರತ್ತುಗಳ ಜೊತೆಗೆ ಆ ಪ್ರದೇಶದಲ್ಲಿ ಕನಿಷ್ಠ ಹತ್ತು ವರ್ಷಗಳ ಸೇವೆಯನ್ನೂ ಕೊಡ ಪೂರೈಸಿರತಕ್ಕದ್ದು ಎನ್ನುವಂತಹ ಷರತ್ತನ್ನು ಹಾಕಿದ್ದಾರೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಂದು ಕಡೆ ಉದ್ದೇಶಗಳನ್ನು ಹೇಳುವಾಗ ಶಿಕ್ಷಕರು ಬಹಳ ಸಂತೋಷದಿಂದ ಇರಬೇಕು. ಅವರು ನೆಮ್ಮದಿಯಿಂದ ಪಾಠ ಮಾಡಬೇಕು, ಅವರಿಗೆ ಯಾವುದೇ ರೀತಿಯ ಒತ್ತಡ ಇರಬಾರದೆಂದು ಹೇಳಿದ್ದಾರೆ. ಅದನ್ನು ನಾನು ಸಹ ಕೇಳಿಸಿಕೊಂಡಿದ್ದೇನೆ. ಆದರೆ, ಈ ಷರತ್ತು ಸಮಂಜಸವಲ್ಲ. ಕೆಲವು ಭಾಗದಿಂದ, ಕಲ್ಯಾಣ ಕರ್ನಾಟಕದಿಂದ ಹೊರಗಡೆ ಇರುವಂತಹ ಜಿಲ್ಲೆಗಳಿಂದ ಬಂದಿರುವಂತಹವರು ಸುಮಾರು 15 ರಿಂದ 18 ವರ್ಷಗಳವರೆಗೆ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ, ಈಗ ನಮ್ಮಲ್ಲಿ 371 (ಜೆ) ತಿದ್ದುಪಡಿ ಆದ ಮೇಲೆ Draft Rules dated 01/01/2013 came into force. ಆ ಷರತ್ತಿಗಿಂತ ಮುಂಚೆ ನೇಮಕಾತಿ ಆಗಿರುವಂತಹ ಶಿಕ್ಷಕರಿಗೆ 10 ವರ್ಷಗಳ ಷರತ್ತನ್ನು retrospective ಮಾಡುತ್ತೀರೋ ಅಥವಾ prospective ಮಾಡಿತ್ತೀರೋ, Prospective ಆಗಬೇಕು ಅಲ್ಲವೇ, ಯಾರು ದಿನಾಂಕ 01.01.2003 ರ ನಂತರ ನೇಮಕಾತಿ ಹೊಂದಿದ್ದಾರೆ, ಅಂತಹವರಿಗೆ this condition is applicable. But this condition is not applicable to those who are appointed prior to 01/01/2013. ಹೌದು ಅಲ್ಲವೇ; ಅದೇ ಕಾರಣಕ್ಕಾಗಿ ಕಳೆದ ಬಾರಿಯೂ ಸಹ ತೊಂದರೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದರಲ್ಲಿ ಸ್ವಲ್ಪ ತಿದ್ದುಪಡಿ ಮಾಡಿಕೊಳ್ಳಬೇಕೆಂಬ ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಈ ವಿಚಾರ ಬಹಳ serious ಆಗಿದೆ. ದಯಮಾಡಿ ಇದನ್ನು ಮಾಡಲೇಬೇಕೆಂಬ ಒತ್ತಡವನ್ನು ಮಾನ್ಯ ಸಚಿವರ ಮೇಲೆ ಹಾಕುವುದಕ್ಕೆ ಬಯಸುತ್ತೇನೆ. ಅದೇರೀತಿ, 20% vacancy ಇರುವಂತಹ ತಾಲ್ಲೂಕುಗಳಲ್ಲಿ ಏನಾಗಿದೆ ಎಂದರೆ, ಈಗ 20% ಇರುವಂತಹವರು ಪಕ್ಕದ ಜಿಲ್ಲೆಯವರು ಇರಬಹುದು, ಪಕ್ಕದ ತಾಲ್ಲೂಕಿನವರು ಇರಬಹುದು, ಇದು ಯಾರ ತಪ್ಪು, It doesn't mean that I am not arguing on behalf of the teachers. It's my bounden duty to protect the interests of the students also. Is it not? ಇಲ್ಲಿ 20% ಕಡಿಮೆ ಇರುವಂತಹ ತಾಲ್ಲೂಕುಗಳಿಗೆ ಯಾವುದೇ ರೀತಿಯ ವರ್ಗಾವಣೆಯ ಅವಕಾಶದಿಂದ ಅವರನ್ನು ವಂಚಿತರನ್ನಾಗಿ ಮಾಡಿದ್ದಾರೆ. ದಯಮಾಡಿ ಆ ಷರತ್ತನ್ನು ಸಹ relax ಮಾಡಬೇಕು. ಅವರಿಗೂ ಸಹ ಹೊರಗಡೆ ಹೋಗುವುದಕ್ಕೆ ಅವಕಾಶ ಕೊಡಬೇಕು. ಅದೇರೀತಿ ಹೊರಗಡೆ ಇರುವಂಥವರನ್ನು ಸಹ ಕಲ್ಯಾಣ ಕರ್ನಾಟಕದವರು ಬೇರೆ ಜಿಲ್ಲೆಗಳಲ್ಲಿ ಇದ್ದರೆ, ಅವರನ್ನು ವಾಪಸ್ಸು ತೆಗೆದುಕೊಳ್ಳಬಹುದು. ಅದಕ್ಕಾಗಿ ಈ ಷರತ್ತಿಗೂ ಸಹ relaxation ಕೊಡಬೇಕೆಂಬ ಸಲಹೆಯನ್ನು ಕೊಡುವುದಕ್ಕೆ ನಾನು ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಮೂರನೆಯದಾಗಿ, in Clause 7, counselling ಮೂಲಕ ವರ್ಗಾವಣೆ ಎಂದು ಹೇಳಿದ್ದಾರೆ. ಪುಟ ಸಂಖ್ಯೆ-3 ರ ಪ್ಯಾರ ನಂ-7 ರಲ್ಲಿ ಪರಂತು ಏಪ್ರಿಲ್ ಮತ್ತು ಮೇ ತಿಂಗಳಿನ ತರುವಾಯವೂ ವಿಶೇಷ ಸನ್ನಿವೇಶಗಳಲ್ಲಿ ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ರಾಜ್ಯ ಸರ್ಕಾರದ ನಿರ್ದೇಶನದ ಮೇಲೆ ವರ್ಗಾವಣೆಯನ್ನು ಮಾಡಬಹುದು ಎಂದು ಹೇಳಿದೆ. ಇದು ಏನೆಂದು ನನಗೆ ಅರ್ಥವಾಗಿಲ್ಲ. ಸರ್ಕಾರದಲ್ಲಿಯಾಗಲಿ ಅಥವಾ ಮಾನ್ಯ ಸಚಿವರಿಗೆ ಆಗಲಿ discretionary power ಇರಬಾರದು. I want a clarification with regard to this point. Now if you want, I would like to once again draw your attention to Clause 7(1) in page 4. It reads, *"Provided that, the transfer may be made even after the month of April and May in special circumstances for the reasons to be recorded in writing on direction of the State Government."*ಯಾವ ಕಾರಣಕ್ಕಾಗಿ, ಯಾವ ಸಂದರ್ಭದಲ್ಲಿ ಅವರಿಗೆ ಕೊಡಬಹುದು. ಇಷ್ಟು ಮುಕ್ತ ಮನಸ್ಸಿನಿಂದ ವಿಧೇಯಕವನ್ನು ತಂದ ಮೇಲೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರಕ್ಕೆ ಮತ್ತೆ discretionary power ಕೊಡುವುದಕ್ಕೆ ವರ್ಗಾವಣೆಯಲ್ಲಿ ಏನಿದೆ, ಮತ್ತೆ ವರ್ಗಾವಣೆಯಲ್ಲಿ ವ್ಯವಹಾರ ನಡೆಯುತ್ತದೆಯೋ ಏನೂ ಎನ್ನುವಂತಹ ಭಾವನೆ ನನ್ನಲ್ಲಿ ಉದ್ಭವವಾಗಿದೆ.

ಮಾನ್ಯ ಸಭಾಪತಿಯವರೇ, ಪುಟ ಸಂಖ್ಯೆ 4 ರ Clause 7(2) ರಲ್ಲಿ mutual transfers ಬಗ್ಗೆ ಹೇಳಿದ್ದಾರೆ. ಇಲ್ಲಿ out of the division transfer ಕೊಡಬೇಕಾದರೆ, I want a little clarification with regard to this point. ಅಲ್ಲಿ ಅದೇ ವಿಷಯ. ಇಲ್ಲಿಯೂ ಅದೇ ವಿಷಯ. Subject to fulfilling the conditions enumerated under the transfer policy which the hon. Minister placed before this House now, ಇವರಿಗೆ ಬರುವುದಕ್ಕೆ ಏನು ತೊಂದರೆಯಾಗುತ್ತದೆ ಎನ್ನುವಂತಹ ಒಂದು ಪ್ರಶ್ನೆಯನ್ನು ತಮ್ಮ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಮಾನ್ಯ ಸಚಿವರು ಕಮಿಟಿಯಲ್ಲಿ ಇದ್ದಾಗ ಇದರಲ್ಲಿ ವ್ಯವಹಾರ ಆಗಬಾರದು ಎಂದು ಹೇಳಿದ್ದಾರೆ. ಅದು ನನ್ನ ಗಮನಕ್ಕೆ ಇದೆ. I don't deny it. But the hon. Minister should have some concern about the development of education system in the State; I would really appreciate it. But the thing is ಆ ಒಂದು ವ್ಯವಹಾರ ನಡೆಯುತ್ತದೆ ಎನ್ನುವುದಾದರೆ, ಒಂದಿದ್ದನ್ನು ಎರಡು ಸಲ ಕೊಟ್ಟು ಅಲ್ಲಿನ reasons ನೋಡುವುದಕ್ಕೆ ಆಗುತ್ತದೆ. ಈಗ ಕೆಲವು health ground ಮೇಲೆ ಹೇಳಿದ್ದಾರೆ. ಆ ರೀತಿ ಆದಾಗ ಎರಡು ಸಲ ಮಾತ್ರ ಕೊಟ್ಟರೆ ಏನು ತೊಂದರೆಯಾಗುವುದಿಲ್ಲವೇ ಎನ್ನುವಂತಹ ಭಾವನೆಯನ್ನು ನಾನು ವ್ಯಕ್ತ ಪಡಿಸುವುದಕ್ಕೆ ಬಯಸುತ್ತೇನೆ. ಈ ಷರತ್ತು mutual transfer ಬರುವಂತಹವರಿಗೆ. ಬೆಂಗಳೂರಿನಲ್ಲಿ ಇರುವವರು ಗುಲ್ಬಾರ್ಗಕ್ಕೆ ಬರಬಹುದು. ಗುಲ್ಬಾರ್ಗದಲ್ಲಿ ಇರುವವರು ಬೆಂಗಳೂರಿಗೆ ಬರಬಹುದು, ಒಂದೆರಡು ಸಲ, ಪುನಃ ಅದೇ ವ್ಯವಹಾರವಾದರೆ Definitely ಆಗುತ್ತದೆ ಎನ್ನುವಂತಹದ್ದನ್ನು ನಾನು ಸಹ ತಮ್ಮ ಜೊತೆಯಲ್ಲಿ ಒಪ್ಪಲಿಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಇನ್ನೊಂದು ವಿಷಯ ಏನೆಂದರೆ, ಮೊನ್ನೆ ಹೈದರಾಬಾದ್ ಕರ್ನಾಟಕದಲ್ಲಿ counselling ನಲ್ಲಿ ಶಿಕ್ಷಕರಿಗೆ ಹುದ್ದೆಗಳನ್ನು ಖಾಲಿ ತೋರಿಸಿದ್ದೀರಿ. ಅವರು ಅದನ್ನು ತೆಗೆದುಕೊಂಡು ಅಲ್ಲಿ ಕೆಲಸ ಮಾಡುವುದಕ್ಕೆ ಹೋಗಿದ್ದಾರೆ. ಅವರಿಗೆ 8 ತಿಂಗಳಿನಿಂದ ವೇತನ ಇಲ್ಲ. ಅದಕ್ಕೆ ಒಂದು sanctioned ಹುದ್ದೆಗಳನ್ನು counselling ನಲ್ಲಿ ಪಟ್ಟಿ ಮಾಡಿ ತೋರಿಸಿದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತ್ರ ಅದು ಅನುಕೂಲವಾಗುತ್ತದೆ. Otherwise, it would be very difficult for teachers to get the salary. ನಾನು ಸಹ ತಮ್ಮ ಗಮನಕ್ಕೆ ತಂದಿದ್ದೇನೆ. ನಾನು ಇಲಾಖೆಯ ಅಧಿಕಾರಿಗಳ ಜೊತೆಗೆ ಮಾತನಾಡಿದ್ದೇನೆ. ದಯಮಾಡಿ ಅವರಿಗೆ ವೇತನ ಆಗುವಂತಹ ವ್ಯವಸ್ಥೆ ಆಗಬೇಕು. ಆಮೇಲೆ ಕೆಲವರಿಗೆ exemption ಕೊಟ್ಟಿದ್ದಾರೆ. ಪುಟ ಸಂಖ್ಯೆ 5 ರಲ್ಲಿಯ Clause 10(1)(v) ಮೊರಾರ್ಜಿ ಶಾಲೆಗಳ ಶಿಕ್ಷಕರನ್ನು ಏಕೆ ಇದರಲ್ಲಿ ಹೊರಗಡೆ ಇಟ್ಟಿದ್ದೀರಿ ಎಂಬುದರ ಬಗ್ಗೆ ಸಲಹೆ ಕೇಳುವುದಕ್ಕೆ ಬಯಸುತ್ತೇನೆ. ಮೊರಾರ್ಜಿ ಶಾಲೆಗಳಲ್ಲಿ ಗಂಡ ಅಥವಾ ಹೆಂಡತಿ ಶಿಕ್ಷಕರಾಗಿದ್ದರೆ ಅಥವಾ ಸರ್ಕಾರಿ ಶಾಲೆಗಳಲ್ಲಿ ಗಂಡ ಅಥವಾ ಹೆಂಡತಿ ಶಿಕ್ಷಕರಾಗಿದ್ದರೆ ಅಂಥವರಿಗೆ ಈ ವರ್ಗಾವಣೆಯಲ್ಲಿ ಏಕೆ ಸೇರಿಸಿಲ್ಲ. ಇವರನ್ನು ಈ ವರ್ಗಾವಣೆಯಲ್ಲಿ ಸೇರಿಸುವುದಕ್ಕೆ ಏನು ತೊಂದರೆ ಇದೆ. ಅವರು ಸಹ ಸರ್ಕಾರಿ ನೌಕರರು ಅಲ್ಲವೇ, ದಯಮಾಡಿ I once again appeal to you, through our hon. Chairman, to please consider the teachers working in Morarji Desai schools in the exemption case.

ಮಾನ್ಯ ಸಭಾಪತಿಯವರೇ, ಪುಟ ಸಂಖ್ಯೆ 4 ರಲ್ಲಿನ Clause 7(2) ರಲ್ಲಿ mutual transfer ಬಗ್ಗೆ ಈ ರೀತಿ ವಿವರಿಸಲಾಗಿದೆ. ಜೇಷ್ಠತಾ ಘಟಕದ ಹೊರಗಿನ ಸ್ಥಳಕ್ಕೆ ಪರಸ್ಪರ ವರ್ಗಾವಣೆಯನ್ನು ಆ ವಲಯಕ್ಕೆ ವರ್ಗಾಯಿಸಬೇಕಾದ ಅರ್ಹವಾಗಿರುವ ಮತ್ತು ಐದು ವರ್ಷಗಳ ಬಾಕಿ ಉಳಿದ ಸೇವೆಯನ್ನು ಹೊಂದಿರುವ ಅನ್ಯಥಾ ಇಬ್ಬರು ಶಿಕ್ಷಕರು ಏಳು ವರ್ಷಗಳ ಕನಿಷ್ಠ ಸೇವೆಯನ್ನು ಪೂರೈಸಿರುವ ಷರತ್ತಿಗೆ ಒಳಪಟ್ಟು ಸೇವೆಯಲ್ಲಿ ಒಂದು ಸಲಕ್ಕಿಂತ ಹೆಚ್ಚೆಲ್ಲದಂತೆ ಅನುಮತಿಸತಕ್ಕದ್ದು ಆತನು ಜೇಷ್ಠತೆಯನ್ನು ರಕ್ಷಿಸಿಕೊಳ್ಳಲು ಅರ್ಹನಾಗಿರತಕ್ಕದಲ್ಲ ಮತ್ತು ನಿಯಮಿಸಬಹುದಾದ ಅಂಥ ಇತರ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು ಎಂದು ಹೇಳಿದೆ. ದಯಮಾಡಿ ಈ ಎರಡು point ನ್ನು ನಾನು mutual transfer ಬಗ್ಗೆ ಹೇಳಿದ್ದೇನೆ. ಮಾನ್ಯ ಸಚಿವರೇ ಇದು ಬಹಳ ಒಳ್ಳೆಯ point ಇವೆ. ದಯಮಾಡಿ ನಾನು ಕೊಟ್ಟಿರುವಂತಹ ಸಲಹೆಗಳನ್ನು consider ಮಾಡಬೇಕೆಂದು ಹೇಳಿ ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. I welcome this bill subject to consideration of the points which I have submitted before this House.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-**ಮಾನ್ಯಸಭಾಪತಿಯವರೇ,2007ರ ಕರ್ನಾಟಕ ಶಿಕ್ಷಕರ ವರ್ಗಾವಣೆ ನಿಯಂತ್ರಣ ವಿಧೇಯಕಕ್ಕೆ ನಮ್ಮ ಸಚಿವರು ತಂದಿರುವಂತಹ ಶಿಕ್ಷಕರ ಸ್ನೇಹಿ ವರ್ಗಾವಣೆ ಕಾಯಿದೆ ತಿದ್ದುಪಡಿಯನ್ನು ನಾನು ಹೃದಯವಂತಿಕೆಯಿಂದ ಸ್ವಾಗತ ಮಾಡುತ್ತೇನೆ. ಮಾನ್ಯ ಬಸವರಾಜ ಹೊರಟ್ಟಿಯವರು 2007 ರಲ್ಲಿ ಬಹಳ ಒಳ್ಳೆಯ ಕೆಲಸವನ್ನು ಮಾಡಿದರು. ಈ ಕಾಯಿದೆ ಇಡೀ ದೇಶಕ್ಕೆ ಮಾದರಿ ಆಯಿತು. Counselling ಮುಖಾಂತರ ಅವರ ಆಯ್ಕೆಗೆ ಬಿಟ್ಟು ವರ್ಗಾವಣೆ ಮಾಡುವಂತಹ ಈ ಪದ್ಧತಿಯನ್ನು ಬೇರೆ ರಾಜ್ಯಗಳು ಸಹ ಅನುಕರಣೆ ಮಾಡಿದವು. ಇವತ್ತಿನ ಸಚಿವರ ಬಗ್ಗೆಯೂ ಸಹ ನಮಗೆ ವಿಶೇಷವಾದಂತಹ ಗೌರವ ಇದೆ. ಏಕೆಂದರೆ, ಬಹಳ ಜನ ಮುಖ್ಯಮಂತ್ರಿಗಳು ಹಾಗೂ ಸಚಿವರು ಗ್ರಾಮ ವಾಸ್ತವ್ಯ ಮಾಡಿದ್ದನ್ನು ನಾವು ಕೇಳಿದ್ದೇವು. ಆದರೆ, ಶಿಕ್ಷಣ ಸಚಿವರೊಬ್ಬರು ಶಾಲಾ ವಾಸ್ತವ್ಯ ಮಾಡಿದ್ದು ಇದೇ ಮೊದಲು.

**(ಮುಂದು...)**

(536)18-03-2020(5-10)ಎಂವಿ-ಆರ್ಎನ್ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು...):-**

ಬಹುಶಃ ಅದರ ಪರಿಣಾಮದ ಹಿನ್ನೆಲೆಯಲ್ಲಿ ಈ ಶಿಕ್ಷಕ ಸ್ನೇಹಿ ತಿದ್ದುಪಡಿ ಬಂದಿದೆ ಎಂದು ಭಾವಿಸಿಕೊಳ್ಳುತ್ತೇನೆ. ಅದಕ್ಕಾಗಿ ನಾನು ಪ್ರೀತಿಯಿಂದ ಈ ಕಾಯಿದೆಯನ್ನು ಸ್ವಾಗತ ಮಾಡುತ್ತೇನೆ. ಆದರೆ, ಕೆಲವು ಅಗತ್ಯವಾದ ಸಲಹೆ ಮತ್ತು ಸೂಚನೆಗಳನ್ನು ಈ ಸಂದರ್ಭದಲ್ಲಿ ಕೊಡಲೇಬೇಕಾಗಿದೆ. ಈಗಾಗಲೇ ಹೆಚ್ಚುವರಿ ಎಂದು ಹೇಳಿ, ತಾಲ್ಲೂಕು ಮಟ್ಟಕ್ಕೆ ಆದ್ಯತೆಯನ್ನು ಕೊಟ್ಟಿದ್ದರು. ಆದರೆ, ಅಲ್ಲಿ ಹುದ್ದೆಗಳು ಖಾಲಿ ಇರಲಿಲ್ಲ. ಜಿಲ್ಲಾ ಮಟ್ಟಕ್ಕೆ ಕೊಟ್ಟಿದ್ದರು, ಅಲ್ಲಿ ಹುದ್ದೆಗಳು ಖಾಲಿ ಇರಲಿಲ್ಲ. ಡಿವಿಜನ್ ಹಂತಕ್ಕೆ ಹೋಯಿತು, ಡಿವಿಜನ್ ಹಂತದಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ಕಡೆಯ ಭಾಗದವರು ಮಡಿಕೇರಿಗೆ ಉಡುಪಿಗೆ ಮತ್ತು ಮಂಗಳೂರಿಗೆ ಹೋಗಿದ್ದಾರೆ. ವಿಭಾಗಗಳಿಂದ ಮಂಡ್ಯದವರು ಅಥವಾ ಮೈಸೂರಿನವರು ಬೀದರ್ ಮತ್ತು ಗುಲ್ಬರ್ಗಕ್ಕೆ ಹೋಗಿದ್ದಾರೆ. ನೀವು ಮೊದಲು ಈ ಹೆಚ್ಚುವರಿಯನ್ನು ಗುರುತಿಸುವಂತಹ ಸಮಯದಲ್ಲಿ, ಯಾರೆಲ್ಲಾ ಅನಿವಾರ್ಯವಾಗಿ ಹುದ್ದೆಗಳು ಖಾಲಿ ಇಲ್ಲದ ಕಾರಣಕ್ಕೆ ಬೇರೆ ವಿಭಾಗಗಳಿಗೆ ಮತ್ತು ಹೊರ ಜಿಲ್ಲೆಗಳಿಗೆ ಹೋಗಿದ್ದಾರೋ, ದಯಮಾಡಿ ಅವರಿಗೆ re-setright ಅವಕಾಶವನ್ನು ಕೊಡಬೇಕು. ಅವರು ಹೆಚ್ಚುವರಿ ಶಿಕ್ಷಕರು ದೂರ ಹೋಗಿರುವರು ಮತ್ತು ಇಲ್ಲಿ ನೂರಾರು ಹುದ್ದೆಗಳು ಖಾಲಿ ಉಳಿದಿದ್ದರೆ ಆಗ ಅವರು ವಾಪಸ್ಸು ಬರುವುದಕ್ಕೆ ಅವಕಾಶವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಲ್ಪಿಸಿಕೊಡಬೇಕು. ಅದು ಅತ್ಯಂತ ನ್ಯಾಯೋಚಿತವಾದ ಮತ್ತು ಸಮಯೋಚಿತವಾದ ಕೆಲಸ. ಮಾನ್ಯ ಸಚಿವರು ಸಹ ಸಭೆಗಳಲ್ಲಿ ಈ ವಿಚಾರಗಳನ್ನು ಒಪ್ಪಿದ್ದಾರೆ. ಆದರೆ, ಈ ಹೆಚ್ಚುವರಿ ಗುರುತಿಸುವಂತಹ ಸಮಯದಲ್ಲಿ ಆ ಕೆಲಸವಾಗಬೇಕು. ಆಗಲೂ ಉಳಿದುಕೊಂಡಂತಹವುಗಳಿಗೆ ಆಮೇಲೆ ಯಾರು ಬರುತ್ತಾರೋ ಅವರು ಹೋಗಲಿ. ನಿರಂತರವಾಗಿ ಪ್ರತಿವರ್ಷ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಮಾಡುತ್ತೇವೆಂದು ಹೇಳುತ್ತಾರೆ, ಅದನ್ನು ಮಾಡಲಿ. ಒಂದು ವೇಳೆ ಒಂದು ವರ್ಷ ಎರಡು ವರ್ಷ ಅದು ಆಗಲಿಲ್ಲವೆಂದರೆ, ಆಗ ಏನು ಮಾಡುತ್ತಾರೆ. ಆಮೇಲೆ ಮೂರನೇ ವರ್ಷಕ್ಕೆ ಮಾಡುತ್ತಾರೆ. ಆಗ ಅದೇ ಪರ್ಸೆಂಟೇಜ್ ಅನ್ನೇ ಹೇಳುತ್ತಾರೆ. ಈಗ ಬಿಟ್ಟು ಹೋದ ಎರಡು ವರ್ಷದ ಕೋಟಾಗಳನ್ನು ಸೇರಿಸಬೇಕಲ್ಲವೆ? ಪ್ರತಿವರ್ಷ ಮಾಡಿದರೆ ಏನು ತೊಂದರೆಯಿಲ್ಲ ಅದಕ್ಕೆ ನಮ್ಮ ಅಡ್ಡಿ ಇಲ್ಲ, ಅದನ್ನು ಮಾಡಲಿ. ಆದರೆ ಅದು ಆಗಿಲ್ಲ. ಆ ಕೊರತೆ ಬೀಳುವಂತಹ ಪರ್ಸೆಂಟೇಜ್ ಅನ್ನು ದಯಮಾಡಿ ಆ ಪ್ರಮಾಣದಲ್ಲಿ carry ಮಾಡಬೇಕು. ಏಕೆಂದರೆ, ಅವರಿಗೆ ಸಿಗುವಂತಹ ಕೋಟಾ ಅನ್ಯಾಯವಾಗಬಾರದು. ಇನ್ನು ಮೂರನೆಯದು ಏನಾಗಿದೆ ಎಂದರೆ, ಸರ್ಕಾರದ ಮಾನ್ಯತೆ ಪಡೆದ ಸಂಘಟನೆಗಳು ಮತ್ತು ಸರ್ಕಾರಿ ನೌಕರರು ಸೇರಿದಂತೆ. ಅವರಿಗೆ ರಿಯಾಯಿತಿಯನ್ನು ಇಲಾಖೆಗಳಿಗೆ ಕೊಡುವಂತಹ ಪದ್ಧತಿ ಮತ್ತು ಪರಂಪರೆಯನ್ನು ನಿರಂತರವಾಗಿ ಇಟ್ಟುಕೊಂಡು ಬಂದಿದ್ದೇವೆ. ಆದರೆ, ಈಗ ಅದನ್ನು ಕೈಬಿಟ್ಟಿದ್ದಾರೆ. ಸರ್ಕಾರದ ಮಾನ್ಯತೆ ಪಡೆದ ಸಂಘಟನೆಗಳ ಅದರ ಪದಾಧಿಕಾರಿಗಳು ಅದಕ್ಕೆ ರಿಯಾಯಿತಿಯನ್ನು ಕೊಡಲೇಬೇಕಾಗುತ್ತದೆ. ಅದು ನಿಯಮ ಕೂಡ. ಇಲ್ಲವಾದರೆ ಅವರು ಮತ್ತೆ ಕೋರ್ಟ್‌ಗೆ ಹೋಗುತ್ತಾರೆ, ಇದರಿಂದ ಸಮಸ್ಯೆಗಳಾಗುತ್ತವೆ. ದಯವಿಟ್ಟು ಮಾನ್ಯ ಸಚಿವರು ಇದನ್ನು ಪರಿಗಣಿಸಬೇಕು. ಇನ್ನು ಕಡೆಯದಾಗಿ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2020ರ ಪುಟ ಸಂಖ್ಯೆ-7ರಲ್ಲಿ, ಕಾಲಂ-20ರಲ್ಲಿ ಈ ರೀತಿ ಇದೆ;

> **"20. ನಿರಸನ ಮತ್ತು ಉಳಿಸುವಿಕೆಗಳು:-** ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು ಅಥವಾ ಪ್ರಾಂಶುಪಾಲರಿಗೆ ಸಂಬಂಧಿಸಿದ ಉಪಬಂಧಗಳನ್ನು ಹೊರತುಪಡಿಸಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ನ್ನು (2007ರ ಕರ್ನಾಟಕ ಅಧಿನಿಯಮ 29) ಈ ಮೂಲಕ ನಿರಸನಗೊಳಿಸಲಾಗಿದೆ"

ಎಂದು ಇದೆ. ಇದನ್ನು ಸ್ಪಷ್ಟೀಕರಣ ಮಾಡಬೇಕು. ಈಗ ದುರಂತ ಅಂದರೆ, ಪಿ.ಯು. ಶಿಕ್ಷಣದ ವರ್ಗಾವಣೆಯ ಸಿಸ್ಟಮ್ ಪರಿಸ್ಥಿತಿಯೇ ಬೇರೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವರ್ಗಾವಣೆಯೇ ಬೇರೆ. ಇಲ್ಲಿ 'ಸಿ' ವಲಯದಿಂದ 'ಎ' ವಲಯಕ್ಕೆ ಬರುವುದಕ್ಕೆ ನೂಕುನುಗ್ಗಲು ಇರುತ್ತದೆ. ಆದರೆ, ಪಿ.ಯು. ಶಿಕ್ಷಣದಲ್ಲಿ 'ಸಿ' ವಲಯದಿಂದ 'ಎ' ವಲಯಕ್ಕೆ ಬರುವುದಕ್ಕೆ ಹಿಂದುಮುಂದು ನೋಡುತ್ತಾರೆ. ಈ ಹಿಂದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಮತಿ ಶಿಖಾ ರವರು ಇದ್ದಾಗ ಏನು ಮಾಡಿದರು ಎಂದರೆ, ಮೊದಲಿಗೆ 'ಎ' ವಲಯದಿಂದ ಎಲ್ಲರನ್ನು ತೆಗೆದು 'ಸಿ' ವಲಯಕ್ಕೆ ಹಾಕಿದರು. ಅವರು 'ಸಿ' ವಲಯಕ್ಕೆ ಖುಷಿ ಖುಷಿಯಿಂದ ಹೊರಟು ಹೋದರು. ಆದರೆ, 'ಎ' ವಲಯಕ್ಕೆ ಬನ್ನಿ ಎಂದರೆ, ಒಬ್ಬರೂ ಸಹ ಬರಲಿಲ್ಲ. ಏಕೆಂದರೆ, ಒಂದೊಂದು ಕಾಲೇಜುಗಳಲ್ಲಿ ಒಂದು, ಎರಡು, ಮೂರು ಮತ್ತು ನಾಲ್ಕು ಸಾವಿರ ವಿದ್ಯಾರ್ಥಿಗಳಿರುತ್ತಾರೆ. ಅಷ್ಟೂ ಜನಕ್ಕೆ ಪಾಠ ಮಾಡಿ, ಪರೀಕ್ಷೆ ಮಾಡಿ, ಮೌಲ್ಯಮಾಪನ ಮಾಡಬೇಕು. ಅದಕ್ಕೆ ಅವರು ಕೆಲಸ ಜಾಸ್ತಿ ಎಂದು ತಪ್ಪಿಸಿಕೊಳ್ಳುತ್ತಾರೆ. ಈ ವಿಜ್ಞಾನ ವಿಷಯಗಳಿಗೆ ಬಹಳ ಬೇಡಿಕೆ ಇದೆ. ಈಗ reputed lecturers ಗಳು ನಗರಗಳಲ್ಲಿ ಇದ್ದರೆ ಮಾತ್ರ ಅಲ್ಲಿಗೆ ಮಕ್ಕಳು ಹೋಗುತ್ತಾರೆ. ಇಲ್ಲವಾದರೆ ಮಕ್ಕಳು ಖಾಸಗಿ ಕಾಲೇಜುಗಳಿಗೆ ಹೋಗುತ್ತಾರೆ. ಹಾಗಾಗಿ ಅವರು ಆ ವರ್ಗಾವಣೆಯನ್ನೇ ಕೈಬಿಡುವುದಕ್ಕೆ ಹೋದರು. ಅಂದರೆ ಅಲ್ಲಿಯವರೆಗೆ ಹೊರಟು ಹೋದರು. ಹಾಗಾಗಿ ಇಲ್ಲಿಯ ಪರಸ್ಥಿತಿಯೇ ಬೇರೆ, ಅಲ್ಲಿಯ ಪರಿಸ್ಥಿತಿಯೇ ಬೇರೆ. ತಾವು ಪಿ.ಯು. ಶಿಕ್ಷಣದ ವರ್ಗಾವಣೆಗೆ ಒಂದು ಪ್ರತ್ಯೇಕವಾದ rules frame ಮಾಡಬೇಕು. ಹಾಗೂ ಸ್ವಲ್ಪ ವಾಸ್ತವಿಕ ನೆಲೆಗಟ್ಟಿನಲ್ಲಿ ಬದಲಾಯಿಸಿಕೊಳ್ಳಬೇಕಾಗುತ್ತದೆ ಎಂದು ಹೇಳುತ್ತೇನೆ. ಮತ್ತೇ ಇಲ್ಲಿ ಏನು ಮಾಡಿದ್ದಾರೆಂದರೆ? ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಿವೆಯಲ್ಲಾ ಅದಕ್ಕೆ ಸಂಬಂಧಪಟ್ಟ ಹಾಗೆ ಘಟಕಗಳನ್ನು ಮಾಡಿರಲ್ಲಿಲ್ಲ. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2020ರ ಪುಟ-2ರಲ್ಲಿ ಈ ರೀತಿ ಇದೆ;

> "(ಕೆ) "ಜ್ಯೇಷ್ಠತೆಯ ಘಟಕ" ಎಂದರೆ, ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಜ್ಯೇಷ್ಠತೆಯ ಘಟಕವು ಶೈಕ್ಷಣಿಕ ಜಿಲ್ಲೆಯಾಗಿರುತ್ತದೆ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಜ್ಯೇಷ್ಠತೆಯ ಘಟಕವು ಕಂದಾಯ ವಿಭಾಗವಾಗಿರುತ್ತದೆ"

ಆದರೆ, ಇಲ್ಲಿ ಪಿ.ಯು. ಶಿಕ್ಷಣದವರಿಗೆ ಏನೂ ಹೇಳಿಲ್ಲ. ಅದಕ್ಕೆ ಏನು ಘಟಕ ಮತ್ತು ಮಾನದಂಡ, ಅದಕ್ಕೆ ಕಾಯ್ದೆ ಇದೆ ಸರಿ. ಹಾಗಾಗಿ ಪಿ.ಯು. ಶಿಕ್ಷಣದ ಗೊಂದಲವನ್ನು ನಿವಾರಣೆ ಮಾಡಬೇಕು ಮತ್ತು ಪಿ.ಯು. ಶಿಕ್ಷಣದ ಪರಿಸ್ಥಿತಿಯೇ ಬೇರೆ ಎಂಬುದನ್ನು ಅರ್ಥ ಮಾಡಿಕೊಂಡು, ಅದಕ್ಕೆ ಪ್ರತ್ಯೇಕವಾದಂತಹ rules ಗಳನ್ನು frame ಮಾಡುವುದಾದರೆ, ಬಹುಶಃ ಸಮಸ್ಯೆ ಪರಿಹಾರವಾಗುತ್ತದೆ ಎಂದು ಹೇಳುತ್ತಾ, ಒಟ್ಟಾರೆ ಈ ವಿಧೇಯಕವನ್ನು ನಾನು ಪ್ರೀತಿಯಿಂದ ಸ್ವಾಗತಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಗೊಳಿಸುತ್ತೇನೆ. ನಮಸ್ಕಾರ.

**ಡಾ||ತೇಜಸ್ವಿನಿ ಗೌಡ(ವಿಧಾನಸಭೆಯಿಂದ ಚುನಾಯಿತರಾದವರು):**-ಮಾನ್ಯ ಸಭಾಪತಿಯವರೇ, ಸಂವಿಧಾನದ ಆರ್ಟಿಕಲ್ 21(ಎ) ಪ್ರಕಾರ ಸುಮಾರು 14 ವರ್ಷ ವಯಸ್ಸಿನ ಮಕ್ಕಳಿಗೆ ಕಡ್ಡಾಯ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಚಿತ ಶಿಕ್ಷಣವನ್ನು ನಮಗೆ ಮೂಲಭೂತ ಹಕ್ಕಾಗಿ ಕೊಟ್ಟಿದೆ. ಈ ಕ್ಷೇತ್ರದಲ್ಲಿ ಬಹುಶಃ ಪುಟ್ಟ ಮಕ್ಕಳ ಶಿಕ್ಷಣದಲ್ಲಿ ನಮ್ಮ ರಾಜ್ಯದಲ್ಲಿ ಶೇಕಡಾ 60 ಭಾಗ ಶಿಕ್ಷಕಿಯರು ಇಂತಹ ಒಂದು Right to Education ಅನ್ನು ಕೊಡಬೇಕಾದರೆ, ಪುಟ್ಟ ಮಕ್ಕಳ ಮೇಲೆ ಶಿಕ್ಷಕಿಯರ ಪ್ರಭಾವ ಮತ್ತು ಮಮಕಾರ ತುಂಬಾ ಅತಿ ಹೆಚ್ಚು ಪ್ರಭಾವಕ್ಕೆ ಒಳಗಾಗುವುದು ಶಿಕ್ಷಕಿಯರ ಮೂಲಕ, ಅನೇಕ ಮಂದಿ ನಮ್ಮ ಸಹೋದರರು ಈ ಕ್ಷೇತ್ರದಿಂದ ಗೆದ್ದು ಬಂದಿದ್ದಾರೆ, ಅವರು ಮಾತನಾಡುವುದಕ್ಕೆ ಅವರಿಗೆ ಹೆಚ್ಚು ಸಮಯವನ್ನು ಕೊಡುತ್ತೇನೆ. ಅದಕ್ಕೆ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಇದು ಬಹಳ ಮಾನವೀಯವಾದಂತಹ ಮತ್ತು ಅತ್ಯಂತ ತುರ್ತಾಗಿ ಆಗಬೇಕಾಗಿದ್ದಂತಹ ಮತ್ತು ಬಹಳ ಅಂತಃಕರಣದಿಂದ ಕೂಡಿದಂತಹ, ಅತ್ಯಂತ ಸವಾಲಿನ ಸನ್ನಿವೇಶವನ್ನು ನಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದಂತಹ ಮಾನ್ಯ ಸುರೇಶ್ ಕುಮಾರ್ ರವರು ಅತೀ ಶೀಘ್ರ ಅವಧಿಯಲ್ಲಿ ತಂದಿರತಕ್ಕಂಥದ್ದಕ್ಕೆ ಈ ಸದನದ ಮೂಲಕ ಅವರನ್ನು ಅಭಿನಂದಿಸುತ್ತೇನೆ ಮತ್ತು ವೈಯಕ್ತಿಕವಾಗಿ ಎಲ್ಲಾ ಮಾಧ್ಯಮಗಳ ಮೂಲಕ, ಶಿಕ್ಷಕರ ಕಷ್ಟ ಸುಖಗಳನ್ನು ಅರಿತುಕೊಂಡು ಬಹಳ ಬದ್ಧತೆಯಿಂದ ಇದನ್ನು ಮಾಡಿದ್ದಾರೆ. ಅದಕ್ಕಾಗಿ ಇದನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ ಮತ್ತು ಬೆಂಬಲಿಸುತ್ತೇನೆ. ಇದರಲ್ಲಿ ವಿಶೇಷವಾಗಿ 'ಸಿ' ವಲಯ ಸೇವಾವಧಿಯಲ್ಲಿ ತಾರುಣ್ಯದಿಂದ ಕೂಡಿರತಕ್ಕಂಥ ಶಿಕ್ಷಕ ಅಥವಾ ಶಿಕ್ಷಕಿಯರು ಅವರ ದೇಹದ ಶಕ್ತಿ ಸದೃಢ ಆರೋಗ್ಯ ಇರುತ್ತದೆ ಹಾಗಾಗಿ ಗ್ರಾಮೀಣ ಪ್ರದೇಶದಲ್ಲಿ ಮತ್ತು ಮಲೇನಾಡಿನಂತಹ ಅತಿ ದೂರದ ಪ್ರದೇಶಗಳಲ್ಲಿ, ಸಕಲೇಶಪುರದಲ್ಲಿ ಅನೇಕ ಸಂದರ್ಭದಲ್ಲಿ ನಾನು ನೋಡಿದ್ದೇನೆ. ಮಾನ್ಯ ಸಚಿವರು ಹೇಳಿದ ಹಾಗೆ ಆನೆಗಳ ಕಾಟ. ಅನೇಕ ಬೇರೆ ನೈಸರ್ಗಿಕ ತೊಂದರೆಗಳ ನಡುವೆ ಕೂಡ isolated place ನಲ್ಲಿ ಇರುವಂತಹ ಶಾಲೆಗಳಲ್ಲಿ ಶಿಕ್ಷಣವನ್ನು ಬೋಧನೆ ಮಾಡಬೇಕಾಗಿರುತ್ತದೆ. ಅಂತಹವುದರಲ್ಲೂ ಕೂಡ ಶಿಕ್ಷಕರು ಹೋಗಿ ತಮ್ಮ ಕರ್ತವ್ಯವನ್ನು ಮೆರೆಯುತ್ತಿದ್ದಾರೆ. ಅವರು ಏನು ಕೆಲವು ವಿನಾಯಿತಿಗಳನ್ನು ಕೊಟ್ಟಿದ್ದಾರೆ, ಅದು ಬಹಳ ಅವಶ್ಯಕವಾಗಿತ್ತು. ಇನ್ನೂ ಸ್ವಲ್ಪ ಮೂಲಭೂತ ಸೌಕರ್ಯಗಳನ್ನು ಜಾಸ್ತಿ ಕೊಡಬೇಕು. ಅಲ್ಲಿಗೆ ಉತ್ತಮವಾದ ರಸ್ತೆ ಮತ್ತು ವಾಹನಗಳನ್ನು ಕೊಡಬೇಕಾಗುತ್ತದೆ. ಮೃತ ಕುಟುಂಬದ ಯೋಧರ ಪತ್ನಿಗೆ ಕೊಟ್ಟಿರುವಂಥದ್ದು ಸರಿಯಾಗಿದೆ. 'ಸಿ' ವಲಯದ ವರ್ಗಾವಣೆಯನ್ನು ಕಡ್ಡಾಯಗೊಳಿಸಿ, 'ಬಿ' ಮತ್ತು 'ಎ' ಬಂದಿರತಕ್ಕಂಥದ್ದು ಅಂದರೆ ವಿರುದ್ಧ ದಿಕ್ಕಿನಿಂದ ಬಂದಿರತಕ್ಕಂಥದ್ದು ಬಹಳ ಒಳ್ಳೆಯ ಒಂದು ಬುದ್ಧಿವಂತಿಕೆಯ ನಿರ್ಧಾರವಾಗಿದೆ. ಹಾಗಾಗಿ ಇಂತಹ ಒಂದು ಶಿಕ್ಷಕರ ವರ್ಗಾವಣೆ ನಿಯಂತ್ರಣ ವಿಧೇಯಕ ಏನಿದೆ, ಇದು ದುರುಪಯೋಗವಾಗಬಾರದು. ನಾವೆಲ್ಲರೂ ಮಾಡಬೇಕಾಗಿರುವಂಥದ್ದು, ಇವತ್ತಿಗೂ ಕೂಡ ಅಪ್ಲಿಕೇಶನ್‌ನಲ್ಲಿ ಅನೇಕ ಬುದ್ಧಿಮಾಂಧ್ಯ ಮಕ್ಕಳ ಪೋಷಕರಿಗೂ ಕೂಡ ರಿಯಾಯಿತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿದ್ದಾರೆ, ಇದರ ದುರುಪಯೋಗವಾಗದ ರೀತಿಯಲ್ಲಿ ವರ್ಗಾವಣೆ ನೀತಿಯಲ್ಲಿ ನೋಡಿಕೊಳ್ಳುವುದು ಒಂದು ನಾಗರಿಕ ಸಮಾಜದ ಜವಾಬ್ದಾರಿಯಾಗಿದೆ. ಖಂಡಿತವಾಗಿ ಮಾನ್ಯ ಸಚಿವರು ಮತ್ತು ಅಧಿಕಾರಿಗಳು ಅದನ್ನು ಗಮನಿಸುತ್ತಾರೆ. ನಾನು ಈ ವಿಧೇಯಕವನ್ನು ತುಂಬು ಹೃದಯದಿಂದ ಬೆಂಬಲಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು):-**ಮಾನ್ಯ ಸಭಾಪತಿಯವರೇ, ಶಿಕ್ಷಕರ ವರ್ಗಾವಣೆ ನಿಯಂತ್ರಣ ವಿಧೇಯಕ, 2020ನ್ನು ನಾನು ಸ್ವಾಗತಿಸುತ್ತೇನೆ. ನಾನು ಒಂದು ವಿಚಾರವನ್ನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಶಿಕ್ಷಣಕ್ಕೆ ಸಂಬಂಧಪಟ್ಟಂತಹ ವಿಧೇಯಕಗಳನ್ನು ಮೊದಲು ಈ ಸದನದಲ್ಲಿಯೇ ಮಂಡಿಸಿದರೆ, ಬಹುಶಃ ಅದು ಹೆಚ್ಚು ಪ್ರಯೋಜನಕಾರಿಯಾಗಬಹುದು ಎಂಬುದು ನನ್ನ ಅನಿಸಿಕೆ. ಇಲ್ಲಿ ಹೆಚ್ಚು ಶಿಕ್ಷಣದ ಪ್ರತಿನಿಧಿಗಳು ಇರುವಂತಹ ಮತ್ತು ಹೆಚ್ಚು ಚರ್ಚೆ ಆಗುವಂತಹ ಸದನ. ಹಾಗಾಗಿ presentation ಇದೇ ಸದನದಲ್ಲಿಯಾದರೆ, ಇಲ್ಲಿ ಕೊಟ್ಟಿರತಕ್ಕಂಥ ಸಲಹೆ ಸೂಚನೆಗಳನ್ನು ತೆಗೆದುಕೊಂಡು, ಕೆಳಮನೆಗೆ ಹೋಗುವುದಕ್ಕೆ ಸುಲಭವಾಗುತ್ತದೆ. ಎರಡನೆಯದಾಗಿ, ಕಡ್ಡಾಯ ಶಿಕ್ಷಕರ ವರ್ಗಾವಣೆಯಿಂದ ನಮ್ಮ ಜಿಲ್ಲೆಯಲ್ಲಿ ತುಂಬಾ ತೊಂದರೆಯಾಗುತ್ತಿತ್ತು. ಅದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಿಗೆ ಗೊತ್ತಿರಬಹುದು. ನಮ್ಮ ಸರ್ಕಾರ ಇದ್ದಾಗಲೂ ಸಹ ಈ ಸಮಸ್ಯೆ ಇತ್ತು. ಹಾಗಾಗಿ ಇದನ್ನು ನಿವಾರಣೆ ಮಾಡುವುದಕ್ಕೆ ಮಾನ್ಯ ಸಚಿವರು ತೆಗೆದುಕೊಂಡಂತಹ ತೀರ್ಮಾನ ಉತ್ತಮವಾಗಿರತಕ್ಕಂಥದ್ದು. ಮತ್ತೊಂದು ಏನೆಂದರೆ, ಇದರಲ್ಲಿ ಹೆಚ್ಚುವರಿ ಶಿಕ್ಷಕರ ಬಗ್ಗೆ ಹೆಚ್ಚು ಗಮನವನ್ನು ನೀಡಿಲ್ಲ. ಪ್ರತಿಯೊಂದು ಶಾಲೆಗಳಲ್ಲೂ ಕೂಡ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾದಾಗ, ಅಲ್ಲಿನ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರು ಎಂದು ವರ್ಗಾವಣೆ ಮಾಡುತ್ತಾರೆ. ಅದರ ಬಗ್ಗೆ ಒಂದು ಸ್ಪಷ್ಟೀಕರಣ ಬೇಕು. ಇದರಲ್ಲಿ ಅಂಗವೈಕಲ್ಯಗಳುಳ್ಳ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016ರ (2016ರ ಕೇಂದ್ರ ಅಧಿನಿಯಮ 49) 2ನೇ ಪ್ರಕರಣದ (ಆರ್) ಖಂಡದಲ್ಲಿ ಪರಿಭಾಷಿಸಿದಂತೆ ಗುರುತಿಸಿದ ಮಟ್ಟದ ಅಂಗವೈಕಲ್ಯದ ಶಿಕ್ಷಕ ಅಥವಾ ಆತನ ಪತ್ನಿ ಅಥವಾ ಆಕೆಯ ಪತಿ ಅಥವಾ ಮಕ್ಕಳು ಎಂದು ಹೇಳಿದ್ದಾರೆ. ಅಂಗವೈಕಲ್ಯ ಇರುವವರಿಗೆ ಹೇಗೆ ಕೊಡಬೇಕು ಎಂದು ನಿಯಮ ಇದೆ. ಮಾನ್ಯ ಸಚಿವರು ಈಗ ಮಾತನಾಡುವಾಗ ಹೇಳಿದರು, ಬುದ್ಧಿಮಾಂಧ್ಯ ಮಕ್ಕಳು ಇರತಕ್ಕಂಥ ಶಿಕ್ಷಕರಿಗೆ ಏನು ಮಾಡುತ್ತಾರೆ. ಅದು ಮಕ್ಕಳು ಇರುವವರಿಗೂ ಅಥವಾ ಶಿಕ್ಷಕರಿಗೋ?

**ಶ್ರೀ ಎಸ್.ಸುರೇಶ್ ಕುಮಾರ್:-**ಮಾನ್ಯ ಸಭಾಪತಿಯವರೇ, ಅದು ಎರಡಕ್ಕೂ ಸೇರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಐವನ್ ಡಿ'ಸೋಜಾ:-**ಮಾನ್ಯ ಸಭಾಪತಿಯವರೇ, ಇದರಲ್ಲಿ clarity ಕಾಣುತ್ತಿಲ್ಲ. ಅದಕ್ಕೆ ಮಾನ್ಯ ಸಚಿವರನ್ನು ಕೇಳಿದೆ. ವರ್ಗಾವಣೆ ಸಮಯದಲ್ಲಿ ಕುಂದುಕೊರತೆ ನಿವಾರಣೆಗಾಗಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡುತ್ತೇವೆಂದು ಹೇಳಿದ್ದಾರೆ. ಅವರ ತೀರ್ಮಾನಗಳು ಸರಿಯಾಗದಿದ್ದರೆ, within seven days he has to file an appeal ಎಂದು ಇದರಲ್ಲಿ ಕೊಟ್ಟಿದೆ. ಆ ಅಧಿಕಾರಿಗಳು ಯಾವ ರೀತಿ ಇರಬೇಕು ಎನ್ನುವಂಥದ್ದು, ಅವರು ಯಾವ ಹುದ್ದೆಯಲ್ಲಿ ಇರಬೇಕೆಂದು ಹೇಳಿದ್ದಾರೆ.

**(ಮುಂದು...)**

(537) 18.03.2020 05.20 LL-RN **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಐವನ್ ಡಿ'ಸೋಜಾ:- ಮುಂದುವರೆದಿದ್ದು...**

ಇನ್ನೊಂದು ವಿಚಾರವನ್ನು ನಾನು ಸದನದ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ, ಈ ಗ್ರಾಮೀಣ ಮಟ್ಟದಲ್ಲಿ ಕೆಲವು ಶಿಕ್ಷಕರು ತಾವು ಯಾವುದೇ ಶಾಲೆಗೆ ವರ್ಗಾವಣೆ ಮಾಡಿದರೂ ನಾನು ಹೋಗುತ್ತೇನೆಂದು ಹೇಳುತ್ತಾರೆ. But they are not physically going. They are appointing somewhere else in their place. ಯಾರಾದರೂ ಒಬ್ಬ ಶಿಕ್ಷಕರನ್ನು ಇಟ್ಟು, ಆತ ತನ್ನ ಊರಿನಲ್ಲಿ ತನ್ನ ವ್ಯವಹಾರ ಮಾಡಿಕೊಂಡು ಇರತಕ್ಕಂಥದ್ದು ಬಹಳ ಇದೆ. ಇದು ತಮ್ಮ ಗಮನಕ್ಕೆ ಇರಲಿ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಹಾಗೂ ಅಂತಹವರ ಬಗ್ಗೆಯೂ ಸಹ ಗಮನವಿರಲಿ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಶಿಕ್ಷಣ ಮಂತ್ರಿಗಳು ನಿಜವಾಗಿಯೂ ಸಹ ಶಿಕ್ಷಣ ಪ್ರೇಮಿಗಳು. ಅದರಲ್ಲೂ ಬಹಳ ಮುಖ್ಯವಾಗಿ ಅವರು ಶಿಕ್ಷಕರ ಮಗ. ಹಾಗಾಗಿ, ಶಿಕ್ಷಕರ ಎಲ್ಲಾ ಸಮಸ್ಯೆಗಳನ್ನು ಸಂಪೂರ್ಣವಾಗಿ ಅರಿತು, ಶಿಕ್ಷಕರ ಕ್ಷೇತ್ರ ಮತ್ತು ಪದವೀಧರರ ಕ್ಷೇತ್ರದಲ್ಲಿ ಆಯ್ಕೆಯಾಗಿರುವಂತಹ ಎಲ್ಲಾ ಶಾಸಕರ ಜೊತೆ ಹತ್ತು-ಹಲವಾರು ಸಭೆಗಳನ್ನು ನಡೆಸಿ ಅಂತಿಮವಾಗಿ ತಂದಿರತಕ್ಕಂತಹ ವಿಧೇಯಕ ಇದು. **(ಗೊಂದಲ)** ಬಹಳ ಮುಖ್ಯವಾಗಿ ಯಾವುದೇ ಕಾಯಿದೆಗಳನ್ನು ತರತಕ್ಕಂತಹ ಸಂದರ್ಭದಲ್ಲಿ ಹಾಗೂ ತಂದಾದ ಮೇಲೆ ಅದರ pros and cons ಜಾಸ್ತಿ ಗೊತ್ತಾಗುತ್ತದೆ. ಅದೆಲ್ಲವನ್ನೂ ಅರಿವಿಟ್ಟು ಈ ವಿಧೇಯಕವನ್ನು ತಂದಿರುತ್ತಾರೆ. ಆದರೂ ಸಹ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತರಬಯಸುತ್ತೇನೆ. ಈ ಬಗ್ಗೆ ನಾನು ಈಗಾಗಲೇ ಪತ್ರ ಸಹ ಶಿಕ್ಷಣ ಸಚಿವರಿಗೆ ನೀಡಿರುತ್ತೇನೆ. ಅದೇನೆಂದರೆ, 'ಎ' ವಲಯ ವರ್ಗೀಕರಣದಲ್ಲಿ ಸ್ಪಷ್ಟನೆ ಇರುವುದಿಲ್ಲ. ಅದರ ಬಗ್ಗೆ ದಯಮಾಡಿ ಸ್ಪಷ್ಟನೆ ಕೊಡಬೇಕು. ಏಕೆಂದರೆ, ಪಿಯುಸಿ ತಾಲ್ಲೂಕು ಕೇಂದ್ರಕ್ಕೆ 'ಬಿ' ವಲಯ ಮಾಡಿದ್ದಾರೆ. ಆದರೆ, ಪ್ರೌಢಶಾಲೆಯವರಿಗೆ 'ಎ' ವಲಯ ಮಾಡಿದ್ದಾರೆ. ಇದರ ಬಗ್ಗೆ ಗಮನಹರಿಸಬೇಕು. ಆ ನಂತರ, ಪ್ರೌಢಶಾಲೆಗೆ ಬಂದಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸೇವಾ ಜೇಷ್ಠತೆಯನ್ನು ಪ್ರೌಢಶಾಲೆಗೆ ಬಂದ ದಿನಾಂಕದಿಂದ ಪರಿಗಣಿಸಬೇಕು ಎನ್ನುವ ಬಗ್ಗೆ ಗಮನ ಹರಿಸಬೇಕು. ಜೊತೆಗೆ, 'ಎ' ವಲಯಕ್ಕೆ ವರ್ಗಾವಣೆಯಾದ ಶಿಕ್ಷಕರಿಗೆ ಯಾವುದೇ ಷರತ್ತುಗಳಿಗೆ ಇಲ್ಲದೇ, 'ಸಿ' ವಲಯಕ್ಕೆ ಒಂದು ಬಾರಿ ಪರಸ್ಪರ mutual transfer ಕೊಡಬೇಕು. ಇದು ಮೊದಲು ಇರಲಿಲ್ಲ, ಈಗ ಅದನ್ನು ಮಾಡಬೇಕೆಂದು ಕೋರುತ್ತೇನೆ. ಹೆಚ್‌ಆರ್‌ಎ ಆಧಾರದ ಮೇರೆಗೆ ವಲಯ ವರ್ಗೀಕರಣ ನಡೆಯಬೇಕು. HRA is very important. HRA ಆಧಾರದಲ್ಲಿ ವಲಯ ವರ್ಗೀಕರಣ ನಡೆಯಬೇಕು. ಜೊತೆಗೆ, 'ಎ' ವಲಯ ಅಪೇಕ್ಷೆ ಪಟ್ಟ ಎಲ್ಲಾ ಶಿಕ್ಷಕರಿಗೆ ವಲಯಕ್ಕೆ mutual transfer ಕೊಡುವುದು ಒಳ್ಳೆಯದು. ಜೊತೆಗೆ, ಬಹಳ ದುರ್ದೈವದ ಸಂಗತಿ ಎಂದು ಹೇಳಿದರೆ, ಪತಿ-ಪತ್ನಿ ಪ್ರಕರಣ. ಅಂದರೆ, ಗಂಡ-ಹೆಂಡತಿ ಇಬ್ಬರು ಸರ್ಕಾರಿ ಕೆಲಸ ಮಾಡುತ್ತಿದ್ದವರು ಪತಿ-ಪತ್ನಿ ಆಗುವುದು ಬಿಟ್ಟರೆ, ಖಾಸಗಿ ಕೆಲಸ ಮಾಡುವಂತಹ ಪತಿ ಅಥವಾ ಪತ್ನಿ, ಪತಿ-ಪತ್ನಿ ಪ್ರಕರಣ ಆಗುವುದಿಲ್ಲವೆಂದರೆ ಬಹಳ ದುರ್ದೈವ ಎಂದು ನಾನು ವೈಯಕ್ತಿಕವಾಗಿ ಹಲವಾರು ಬಾರಿ ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ.

**ಶ್ರೀ ಎಸ್. ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, I have to mention it. ಬಹಳಷ್ಟು ಜನ ಶಿಕ್ಷಕರು ನನ್ನ ಬಳಿ ಬಂದು, "ನಾವು ಸರ್ಕಾರಿ ಕೆಲಸ ಮಾಡದೇ ಇರುವುದೇ ನಮ್ಮ ತಪ್ಪಾ" ಎಂದು ಕೇಳಿರುತ್ತಾರೆ. ಇದರಿಂದಾಗಿ, ಎಷ್ಟೋ ಮನೆಗಳಲ್ಲಿ ಜಗಳವಾಗಿ ವಿವಾಹ-ವಿಚ್ಛೇದನ ಮಟ್ಟಕ್ಕೆ ಕೂಡ ಹೋಗಿರುತ್ತವೆ. ಮಾನ್ಯ ಸದಸ್ಯರ ವಿಚಾರಕ್ಕೆ ನನ್ನ ಸಹಮತವಿದೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಉದಾಹರಣೆಗೆ, ನಾನು ಕೃಷಿ ಕೆಲಸ ಮಾಡುತ್ತಿದ್ದೇನೆ. ಮನೆಯವರು(ಪತ್ನಿ) ಶಿಕ್ಷಕರಿರುತ್ತಾರೆ. ಆ ಶಿಕ್ಷಕರು ಕನಿಷ್ಠ ಪಕ್ಷ ನಾನು ಕೃಷಿ ಕೆಲಸ ಮಾಡುವ ಸಮೀಪದ ಶಾಲೆ ಇರದೇ ಇದ್ದರೂ ಸಹ, ಸಮೀಪದ ಜಾಗಕ್ಕಾದರೂ ನನ್ನ ಪತ್ನಿ ಬರಬೇಕಲ್ಲವೇ? ಆ ರೀತಿ ಬರದೇ ಇದ್ದರೆ, ಗಂಡ-ಹೆಂಡತಿ ಸಾಮರಸ್ಯ ಜೀವನ ಏನಾಗುತ್ತದೆ? ಅಥವಾ ನಾವಿಬ್ಬರಲ್ಲಿ ಯಾರಾದರೂ ಒಬ್ಬರು ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ಅವರನ್ನು ಒಟ್ಟಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೇರಿಸುವಂತಹ ಕೆಲಸ ಮಾಡಬೇಕು. ಅದು ಮಾಡದೇ ಇದ್ದರೆ, ವಿವಾಹ–ವಿಚ್ಛೇದನದ ಮಟ್ಟಕ್ಕೂ ಹೋಗುತ್ತದೆ.

**ಸಭಾಪತಿಯವರು:–** ಮಾನ್ಯ ಸಚಿವರು ತಾವು ಹೇಳಿದ್ದನ್ನು ಒಪ್ಪಿದ್ದಾರೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಹೇಳಿದ್ದನ್ನು ಒಪ್ಪಿದ್ದಾರೆ ಸರಿ. ಆದರೆ, ಅದು ಅನುಷ್ಠಾನವಾಗಬೇಕಲ್ಲವೇ? ಹೇಗಾದರೂ ಮಾಡಿ, ಕನಿಷ್ಠ ಪಕ್ಷ ಅವರನ್ನು ನಾವು ಪತಿ–ಪತ್ನಿ ಎಂದು ಪರಿಗಣಿಸದೇ ಇದ್ದರೆ, ಅವರ ದಾಂಪತ್ಯ ಜೀವನಕ್ಕೆ ನಾವು ನ್ಯಾಯ ಕೊಟ್ಟ ಹಾಗೆ ಆಗುವುದಿಲ್ಲ. ಹಾಗಾಗಿ, ಆ ಕೆಲಸ ಎಷ್ಟೇ ಕಷ್ಟವಾದರೂ ಸಹ ಅದು ಆಗಲೇಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಸಚಿವರಿಗೆ ಕಾಳಜಿ ಇದೆ. ಇದರಲ್ಲಿ ತಿದ್ದುಪಡಿ ಮಾಡುವುದಕ್ಕೆ ಯಾವ ಕಷ್ಟವೂ ಇರುವುದಿಲ್ಲ. ಆ ಹೆಂಡತಿಯನ್ನು ಇಲ್ಲಿ ಮತ್ತು ಈ ಗಂಡನನ್ನು ಅಲ್ಲಿ ಸೇರಿಸಬೇಕು. ಎರಡರಲ್ಲಿ ಯಾವುದಾದರೂ ಒಂದು ಕೆಲಸ ಆಗಬೇಕು. ಮೊರಾರ್ಜಿ ಶಾಲೆಯ ವಿಚಾರ... **(ಗೊಂದಲ)** ಅಂದರೆ, ಹೆಂಡತಿ ಬಯಸಿದರೆ ಸರ್ಕಾರಿ ನೌಕರ ಆಗಿದ್ದರೆ, ... ಇದರಲ್ಲಿ ಅನ್ಯತಾ ವಿಚಾರ ಸೇರಿಸುವುದು ಬೇಡ. ಅಂದರೆ, ಗಂಡ ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರೆ... **(ಗೊಂದಲ)**ಉದಾಹರಣೆಗೆ, ನಮ್ಮ ಹೆಂಡತಿ ಬೇರೆಡೆ ಯಾವುದೋ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದು, ಕೆಲಸ ಮುಕ್ತಾಯವಾದ ನಂತರ ನಾವಿರುವ ಕಡೆಗೆ(ನಮ್ಮ ಮನೆಗೆ) ಬರಬೇಕಲ್ಲವೇ?

ಇನ್ನೊಂದು ಬಹಳ ಮುಖ್ಯ ವಿಚಾರವೆಂದರೆ, ಶಿಕ್ಷಕರು ಮತ್ತು ಮಕ್ಕಳ ಅನುಪಾತ ಏನಿದೆ ಅದು ದಯಮಾಡಿ ಮೊರಾರ್ಜಿ ಶಾಲೆಯಲ್ಲಿ ಯಾವ ರೀತಿ ಇದೆ, ಮೊರಾರ್ಜಿ ಶಾಲೆಯಲ್ಲಿ ಅಥವಾ ಸಿಬಿಎಸ್‌ಸಿ ಶಾಲೆಯಲ್ಲಿ, ಆ ರೀತಿ ಮಾಡಿದರೆ, ಮಾನ್ಯ ಸಚಿವರು ತಂದಿರುವ ಶಿಕ್ಷಣ ಸ್ನೇಹಿ ವರ್ಗಾವಣೆ ಏನಿದೆ, ಅದರಲ್ಲಿ ಶಿಕ್ಷಕರ ಅನುಪಾತ ಜಾರಿಗೆ ತಂದರೆ ಶಿಕ್ಷಕರ ವರ್ಗಾವಣೆಯಲ್ಲಿ ಶೇಕಡ 90 ರಷ್ಟು ಸಮಸ್ಯೆ ಬಗೆಹರಿಯುತ್ತದೆ. ಈ ಸದನದಲ್ಲಿ ಕುಳಿತಿರುವ ಅಧಿಕಾರಿಗಳಿಗೆ ಈ ಬಗ್ಗೆ ಎಲ್ಲಾ ಗೊತ್ತಿರುತ್ತದೆ. ಆದರೆ, ಇದನ್ನು ಮಾನ್ಯ ಸಚಿವರಿಗೆ ಏತಕ್ಕೆ ತಿಳಿಸಿರುವುದಿಲ್ಲವೆಂದು ನನಗೆ ಗೊತ್ತಿರುವುದಿಲ್ಲ.

**ಶ್ರೀ ಎಸ್. ಸುರೇಶ್‌ಕುಮಾರ್:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಅಧಿಕಾರಿಗಳು ಎಲ್ಲಾ ಮಾಹಿತಿ ನೀಡಿರುತ್ತಾರೆ.

**ಡಾ|| ವೈ.ಎ. ನಾರಾಯಣಸ್ವಾಮಿ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶಿಕ್ಷಕರ ವರ್ಗಾವಣೆ ನಿಯಂತ್ರಣ ಕಾಯಿದೆಯಲ್ಲಿ 2007ರಲ್ಲಿ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಈ ಸದನದಲ್ಲಿ ವಿಧೇಯಕ ತಂದಾಗ ಬೆಳಗ್ಗಿನ ಜಾವ 2–00 ಗಂಟೆಯವರೆಗೆ ಚರ್ಚೆ ಮಾಡಿರುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವೊತ್ತಿನ ದಿವಸ ನಾವೆಲ್ಲರೂ ಸಹ ಇದೇ ಸದನದಲ್ಲಿ ಹಾಜರಿದ್ದೆವು. ಆ ಕಾಯಿದೆ ಮುಖಾಂತರ ಶಿಕ್ಷಣ ಇಲಾಖೆಯ ವರ್ಗಾವಣೆ ನೀತಿಗೆ ಹೊಸ ಆಯಾಮವನ್ನು ಕೊಟ್ಟಿದ್ದು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು. ಈ ಕಾಯಿದೆಯನ್ನು ಬೇರೆ ಇಲಾಖೆಗಳು ಸಹ ಅನುಸರಿಸುವಂತಹ ವ್ಯವಸ್ಥೆ ಈ ರಾಜ್ಯದಲ್ಲಿ ಆಗಿದೆ. ಮಾನ್ಯ ಎಸ್. ಸುರೇಶ್‌ಕುಮಾರ್‌ರವರು ಶಿಕ್ಷಣ ಮಂತ್ರಿಗಳಾದಾಗ, ಇಡೀ ಶಿಕ್ಷಣ ವ್ಯವಸ್ಥೆಯನ್ನು ಸುಮಾರು 6–8 ತಿಂಗಳುಗಳಿಂದ ಅಧ್ಯಯನ ಮಾಡಿ, ಶಿಕ್ಷಕರು ನೆಮ್ಮದಿಯಿಂದ ಪಾಠ ಬೋಧನೆ ಮಾಡಬೇಕು; ಸಮತೋಲಿತ ಮನಸ್ಸನ್ನು ಸೃಷ್ಠಿ ಮಾಡುವ ವಾತಾವರಣವನ್ನು ಅವರು ಕೊಡಬೇಕು; ಬಹಳ ಖುಷಿಯಿಂದ ಮಕ್ಕಳು ಯಾವ ರೀತಿ ಶಾಲೆಗೆ ಬರುತ್ತಾರೆ, ಅದೇ ಖುಷಿಯಿಂದ ಶಿಕ್ಷಕರು ಸಹ ಶಾಲೆಗೆ ಹೋಗಿ ಪಾಠ ಬೋಧನೆ ಮಾಡಬೇಕು ಎನ್ನುವ ಭಾವನೆಯಿಂದ ಶಾಲಾ ವಾಸ್ತವ್ಯವನ್ನು ಮಾಡುವ ದೃಷ್ಟಿಯಿಂದ ವಿಶೇಷವಾಗಿ...

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ತಾವು ಈ ವಿಧೇಯಕದ ಮೇಲೆ ಮಾತನಾಡಿ.

**ಡಾ॥ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ವಿಧೇಯಕದ ಮೇಲೆ ಮಾತನಾಡುತ್ತಿದ್ದೇನೆ. ನನ್ನ ಕ್ಷೇತ್ರವಾದ ಪಾವಗಡ ತಾಲ್ಲೂಕಿನ ಅಚ್ಚಮ್ಮನಹಳ್ಳಿ ಮಾನ್ಯ ಸಚಿವರ ಮೊದಲ ಶಾಲಾ ವಾಸ್ತವ್ಯ ಎಂದುಕೊಂಡಿದ್ದೇನೆ. ತದನಂತರ, ಈ ರಾಜ್ಯವನ್ನು ಕಾಡಿದ ಶ್ರೀ ವೀರಪ್ಪನ್ ಊರಾದ ಗೋಪಿನಾಥಂ ಗ್ರಾಮದ ಶಾಲೆಗೆ ಹೋಗಿ, ಆ ಶಾಲೆಯಲ್ಲಿ ವಾಸ್ತವ್ಯ ಮಾಡಿ, ಆ ಶಿಕ್ಷಕರ, ಊರಿನ, ಪೋಷಕರ ಮತ್ತು ವಿದ್ಯಾರ್ಥಿಗಳ ಎಲ್ಲಾ ಸಮಸ್ಯೆಗಳನ್ನು ಆಲಿಸಿ, ಏನಾದರೂ ಮಾಡಿ ಶಿಕ್ಷಣ ವ್ಯವಸ್ಥೆಗೆ ಹೊಸ ಆಯಾಮವನ್ನು ಕೊಡಬೇಕೆಂಬ ಆಸೆಯನ್ನಿಟ್ಟುಕೊಂಡು ಈ ವಿಧೇಯಕವನ್ನು ತಂದಿದ್ದಾರೆ. ಈ ವಿಧೇಯಕ ಎಲ್ಲಾ ವಿಚಾರಗಳಲ್ಲಿಯೂ ಸಹ, ಕಷ್ಟಗಳನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ಜೊತೆಗೆ ವಿಶೇಷವಾಗಿ ಈ ಉದ್ದೇಶಗಳು ಮತ್ತು ಕಾರಣಗಳಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ, "ಹೊಸ ಶಾಸನವು ಶಿಕ್ಷಕರ ಹಲವಾರು ಪ್ರವರ್ಗಗಳಿಗಾಗಿ ಎಲ್ಲಾ ವಿನಾಯಿತಿಗಳು ಮತ್ತು ಆದ್ಯತೆಗಳೊಂದಿಗೆ ಶಿಕ್ಷಕ ಸಂಪನ್ಮೂಲದ ವರ್ಗಾವಣೆ ಮತ್ತು ಸಮರ್ಪಕ ಮರುಹಂಚಿಕೆ ಮಾಡುವ ವಿಷಯದಲ್ಲಿ ಶಿಕ್ಷಕರ ಸ್ನೇಹಿ ವಿಧಾನವನ್ನು ಪ್ರಸ್ತಾಪಿಸುತ್ತಿದೆ" ಎನ್ನುವಂತಹ ಬಹಳ ದೊಡ್ಡ ಅರ್ಥವುಳ್ಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ, ನಾನು ಈ ವಿಧೇಯಕವನ್ನು ಹೃದಯ ಪೂರ್ವಕವಾಗಿ ಸ್ವಾಗತ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ತಾವು ವಿಧೇಯಕದ ಮೇಲೆ ಮಾತನಾಡಿದ್ದು ಮುಗಿಯಿತೇ? ವಿಧೇಯಕವನ್ನು ಸ್ವಾಗತ ಮಾಡಿದ ಮೇಲೆ ಚರ್ಚೆ ಏನಿರುತ್ತದೆ?

**ಡಾ|| ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ವಿಧೇಯಕದ ಮೇಲೆ ನಾನು ನನ್ನ ಮಾತನ್ನು ಇನ್ನೂ ಶುರು ಮಾಡಿರುವುದಿಲ್ಲ. ಬಹಳ ಮುಖ್ಯವಾಗಿ, ಮಾನ್ಯ ಸಚಿವರು ನಮ್ಮ ಎಲ್ಲಾ ಶಿಕ್ಷಕರ ಕ್ಷೇತ್ರ ಮತ್ತು ಪದವೀಧರರ ಕ್ಷೇತ್ರದ ಸದಸ್ಯರ ಜೊತೆ, ಸುಮಾರು ಸಭೆಗಳನ್ನು ನಡೆಸಿ, ಚರ್ಚೆ ಮಾಡಿ, ಎಲ್ಲರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ, ಇದ್ದಂತಹ ನ್ಯೂನತೆಗಳನ್ನು ಪರಿಹಾರ ಮಾಡುವುದಕ್ಕೆ ಒಳ್ಳೆಯ ಮಾರ್ಗೋಪಾಯಗಳನ್ನು ನಮಗೆ ಸೂಚಿಸಿ ಕೊಟ್ಟಿದ್ದಾರೆ. ನಾನು ಈ ವಿಧೇಯಕವನ್ನು point by point ಓದುವುದಕ್ಕೆ ಹೋಗುವುದಿಲ್ಲ. I will take only five minutes. ಸೆಕ್ಷನ್–3(2)ರಲ್ಲಿ, **"...ಹತ್ತು ವರ್ಷಗಳ ನಿರಂತರ ಸೇವೆ ಅಥವಾ ಒಟ್ಟು ಹದಿನೈದು ವರ್ಷ..."** ಇದು ಬಹಳ ಸೂಕ್ತವಾಗಿದೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಸೆಕ್ಷನ್–4(1), **"ಶಿಕ್ಷಕರ ಸಮರ್ಪಕ ಮರುಹಂಚಿಕೆ"** ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದು ಸರಿಯಾಗಿದೆ. ಸೆಕ್ಷನ್–5ರಲ್ಲಿ, **"ವಲಯವಾರು ವರ್ಗಾವಣೆಗಳು"** every alternative year ಮಾಡಬೇಕೆಂದು ಹೇಳಿದ್ದಾರೆ. ಅದು ಸಹ ಪ್ರಸ್ತುತವಾಗಿದೆ. ಸೆಕ್ಷನ್–6ರಲ್ಲಿ, ಮಾನ್ಯ ಶರಣಪ್ಪ ಮಟ್ಟೂರರವರು ಕೊಟ್ಟ ಹಾಗೆ, ನನ್ನದೊಂದು ಸಣ್ಣ ಸಲಹೆ ಇದೆ. ಅದೇನೆಂದರೆ, **"...ಹತ್ತು ವರ್ಷ ನಿರಂತರವಾಗಿ ಹೈದರಾಬಾದ್–ಕರ್ನಾಟಕದಲ್ಲಿ ಕೆಲಸ ಮಾಡಿರಲೇಬೇಕೆಂಬ"** ಷರತ್ತು ಹಾಕಿದ್ದಾರೆ. ಅದರ ಬಗ್ಗೆ, ಸ್ವಲ್ಪ ರಿಲ್ಯಾಕ್ಸ್ ಮಾಡಬೇಕೆನ್ನುವ ಮನವಿಯನ್ನು ಮಾಡುತ್ತೇನೆ. ಸೆಕ್ಷನ್–7, ಇದು ಬಹಳ ಮುಖ್ಯವಾಗಿದೆ. ವರ್ಗಾವಣೆ ನಿಯಂತ್ರಣ ಕಾಯಿದೆಯ ಮೊದಲನೇ ಭಾಗ ಏನಿತ್ತೆಂದರೆ, ಅದರಲ್ಲಿ ಶೇಕಡ 5 ರಷ್ಟು ನಿಗದಿ ಮಾಡಿದ್ದಾರೆ. ಶೇಕಡ 5 ರೊಳಗೆ ಎಲ್ಲಾ privileges, ಅಂದರೆ, ಪತಿ–ಪತ್ನಿ ಪ್ರಕರಣ ಎಲ್ಲವೂ ಆಗಿ ಯಾವುದು ಸಹ ಉಳಿಯುತ್ತಿರಲಿಲ್ಲ. ಸಿಂಗಲ್ ಟೀಚರ್ ಅಂದರೆ, ರೈತನನ್ನು, ವಕೀಲರನ್ನು, ಖಾಸಗಿ ಕಾರ್ಖಾನೆಯಲ್ಲಿ ಕೆಲಸ ಮಾಡುವ ವ್ಯಕ್ತಿಗಳನ್ನು ಮದುವೆ ಮಾಡಿಕೊಂಡಂತಹ ಯಾರಿಗೂ ಸಹ ವರ್ಗಾವಣೆ ಸಿಗುತ್ತಿರಲಿಲ್ಲ. ಮಾನ್ಯ ಸಚಿವರು ಈ ವಿಷಯದಲ್ಲಿ ದೊಡ್ಡ ಮನಸ್ಸು ಮಾಡಿ ಶೇಕಡ 15 ರಷ್ಟು ನಿಗದಿ ಮಾಡಿದ್ದಾರೆ.

(ಮುಂದುವರೆದಿದೆ...)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(538)18.03.2020/5.30/ವೈಎಲ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಡಾ॥ ವೈ.ಎ.ನಾರಾಯಣಸ್ವಾಮಿ(ಮುಂದು):-**

ಇದುವರೆಗೂ ಯಾರು ವರ್ಗಾವಣೆ ಮರುಹಂಚಿಕೆ ಎಂದು ಭಾವಿಸಿದರೋ ಅವರಿಗೆ ಶೇಕಡಾ 15 ರಷ್ಟು ನೀಡಿದ್ದೀರಿ. Over and above this, ಇದನ್ನು ಮೀರಿ ಎಲ್ಲಾ privileges ನ್ನು ನೀಡಿದ್ದೀರಿ. ಅದಕ್ಕೆ ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ, ಬೆಳಗಾವಿ ಜಿಲ್ಲೆಯ ಶ್ರೀನಿವಾಸಪುರದಲ್ಲಿ ಸುಮಾರು 17 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದಂತಹ ಶಿಕ್ಷಕರಿಗೆ ಇನ್ನೂ ವರ್ಗಾವಣೆ ಮಟ್ಟಕ್ಕೆ ಹೋಗಲು ಸಾಧ್ಯವಾಗಿಲ್ಲ. ಹಾಗಾಗಿ ಮಾನ್ಯ ಸಚಿವರು ತಂದಿರತಕ್ಕಂಥ ವಿಧೇಯಕ ಬಹಳ ಪ್ರಸ್ತುತವಾಗಿದೆ. ನಿಜವಾಗಿಯು ಇದರ ಶ್ರೇಯಸ್ಸು ಮಾನ್ಯ ಸಚಿವರಿಗೆ ಸಲುತ್ತದೆ ಎಂದು ಹೇಳುತ್ತಾ, ಈ ಪ್ರಕ್ರಿಯೆಯನ್ನು ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿಯೇ ಮುಗಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ, ಇದು ಬಹಳ ಮುಖ್ಯವಾದ ವಿಚಾರ. Academic year start ಆಗುವುದಕ್ಕೂ ಮೊದಲೆ ಈ ವರ್ಗಾವಣೆ, ನಿಯೋಜನೆ ಪ್ರಕ್ರಿಯೆಗಳೆಲ್ಲವನ್ನು ಏಪ್ರಿಲ್, ಮೇ ಮಾಹೆಯಲ್ಲಿಯೇ ಮುಗಿಸಿದರೆ, ಜೂನ್ ಮಾಹೆಯಲ್ಲಿ ನೆಮ್ಮದಿಯಾಗಿ ಶಾಲಾ ಶಿಕ್ಷಕರು ಶಾಲೆಗೆ ಹೋಗುತ್ತಾರೆ. ಜೊತೆಗೆ ಪಾಠ-ಪ್ರವಚನಗಳು, ಎಲ್ಲಾ ವ್ಯವಸ್ಥೆಯು ಚೆನ್ನಾಗಿ ಆಗುತ್ತದೆ ಎನ್ನುವ ಮಾತನ್ನು ಹೇಳುತ್ತಾ, ಈ ವಿಧೇಯಕವನ್ನು ಸ್ವಾಗತಿಸುತ್ತೇನೆ.

ಬಹಳ ಮುಖ್ಯವಾದ ವಿಚಾರವೆಂದರೆ, ಈ ಮೊದಲು ವಿಧವೆಯರಿಗೆ ಮಾತ್ರ ಹಕ್ಕಿತ್ತು, ವಿದುರರಿಗೆ ಇರಲಿಲ್ಲ. ನನ್ನ ಸ್ನೇಹಿತರೊಬ್ಬರು ತುಮಕೂರಿನಲ್ಲಿ ಪಿ.ಯು. ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅವರ ಪತ್ನಿ ಮರಣ ಹೊಂದಿದ ಸಂದರ್ಭದಲ್ಲಿ ಆತನ ಮಕ್ಕಳಿಗೆ 8 ವರ್ಷಗಳು, 9 ವರ್ಷಗಳಾಗಿತ್ತು. ಆದರೂ ವರ್ಗಾವಣೆ ನಿಯಂತ್ರಣ ಕಾಯ್ದೆಯಲ್ಲಿ ಆತನಿಗೆ ಅವಕಾಶ ಸಿಗಲಿಲ್ಲ. ನಂತರ ಬೆಳಗಾವಿಗೆ ಹೋಗುವ ಪರಿಸ್ಥಿತಿ ಬಂತು, ಅದಕ್ಕೆ ಆತ ಮನವಿ ಮಾಡಿಕೊಂಡಾಗ ವಿದುರ ಎಂದು ಸೇರಿಸಲಾಗಿದೆ. ಶಿಕ್ಷಕನ ಪತ್ನಿ ಮರಣ ಹೊಂದಿದ ಮೇಲೆ ಆತನ ಮಕ್ಕಳು 18 ವರ್ಷಗಳ ಕೆಳಗಿದ್ದರೆ ಆತನಿಗೆ ಅವಕಾಶ ಮಾಡಿಕೊಡಬೇಕೆಂದು ಪುರಸ್ಕಾರ ಮಾಡಿದ್ದೀರಿ. ತಮಗೆ ನಿಜವಾಗಿಯು ಅಭಿನಂದನೆ ಸಲ್ಲಿಸುತ್ತೇನೆ. ಬಹಳ ಮುಖ್ಯವಾಗಿ manual counselling ನ್ನು ಎಲ್ಲಾ ಕಡೆಯು ಮುಚ್ಚಲಾಗಿದೆ. ಮಾನ್ಯ ಶರಣಪ್ಪ ಮಟ್ಟೂರ್‌ರವರು ಹೇಳಿದ ಹಾಗೆ ಸರ್ಕಾರಕ್ಕೆ ಇಂತಹ ವಿಚಾರದಲ್ಲಿ ಯಾವುದೇ ಒಂದು discretionary power ಇರಬಾರದು. ನಾನು ಸಹ ಕಣ್ಣಾರೆ ನೋಡಿದ್ದೇನೆ; ಶ್ರೀ ಹೆಚ್.ವಿಶ್ವನಾಥ್‌ರವರು, ಶ್ರೀ ರಾಮಲಿಂಗಾರೆಡ್ಡಿರವರು, ಶ್ರೀ ಬಿ.ಕೆ.ಚಂದ್ರಶೇಖರ್‌ರವರೆಲ್ಲರೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರಾಗಿದ್ದಾಗ ಅವರ ಕೊಠಡಿಯ ಮುಂದೆ ಸಾವಿರಾರು ಜನ ಶಿಕ್ಷಕರು ಕಾಣಸಿಗುತ್ತಿದ್ದರು. ಸಚಿವರುಗಳು ಇವರ ಸಹವಾಸವೇ ಬೇಡ ಎಂದು ಓಡಿ ಹೋಗುತ್ತಿದ್ದರು. ಸನ್ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಅಂತಹ ಪರಿಸ್ಥಿತಿಗೆ ತಿಲಾಂಜಲಿ ಇಟ್ಟಿದ್ದಾರೆ. ಯಾವುದೇ ಕಾರಣಕ್ಕೂ ನಮ್ಮ ಹಸ್ತಕ್ಷೇಪ ಇರಬಾರದು ಎಂದು ಬಹಳ ಸ್ಪಷ್ಟವಾಗಿ, ವಿವರವಾಗಿ, ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ವಿಧೇಯಕವನ್ನು ತಂದಿದ್ದಾರೆ. ಎಲ್ಲರೂ ಈ ವಿಧೇಯಕವನ್ನು ಸ್ವಾಗತಿಸಿದ್ದಾರೆ. ನಾನು ವಿಶೇಷವಾಗಿ ಈ ವಿಧೇಯಕಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಶಿಕ್ಷಣ ಇಲಾಖೆ ಇನ್ನೂ ಹೆಚ್ಚಿನ ಪ್ರಗತಿ ಕಾಣಲಿ ಎಂದು ದೇವರನ್ನು ಪ್ರಾರ್ಥಿಸುತ್ತೇನೆ. ಮಾನ್ಯ ಸಚಿವರಿಗೂ ಇದನ್ನು ನಿಭಾಯಿಸಲು ದೇವರು ಶಕ್ತಿ ನೀಡಲಿ ಎಂದು ಹೇಳುತ್ತಾ, ಈ ವಿಧೇಯಕವನ್ನು ಸ್ವಾಗತಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ಬಹಳ ಗಂಭೀರವಾಗಿ ನಾವು ಚರ್ಚೆ ಮಾಡಬೇಕಾಗುತ್ತದೆ. ಕೇವಲ ಶಿಕ್ಷಕರ ಪರವಾಗಿ ಮಾತನಾಡುತ್ತಾರೆ ಎನ್ನುವ ಅಪವಾದ ಅನೇಕ ಸ್ನೇಹಿತರಂತೆ ನನ್ನ ಮೇಲಿಯೂ ಇದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ, ಇಲ್ಲವೆಂದು ಹೇಳುವುದಿಲ್ಲ. ಇತ್ತೀಚೆಗೆ ಈ ಮಾತು ಬರುತ್ತಿದೆ, ಈ ಮೊದಲು ಇರಲಿಲ್ಲ. ಮಾನ್ಯ ಸಚಿವರಾದ ಎಸ್.ಸುರೇಶ್ ಕುಮಾರ್‌ರವರು ವರ್ಗಾವಣೆ ನೀತಿಗೆ ಸಂಬಂಧಿಸಿದಂತೆ ಈ ವಿಧೇಯಕವನ್ನು ತಂದಿದ್ದು, ನಾನು ಏನೇನು ವಿಚಾರ ಮಾಡಿದ್ದೆ ಅದೆಲ್ಲವನ್ನು ಈ ವಿಧೇಯಕದಲ್ಲಿ ಅಳವಡಿಸಿದ್ದಾರೆ, ನನಗೆ ಅದರಿಂದ ಸಮಾಧಾನ ಮತ್ತು ಸಂತೋಷವಾಗಿದೆ. ಒಳ್ಳೆಯ ಕೆಲಸ ಮಾಡಿದವರಿಗೆ ಒಳ್ಳೆಯದು ಮಾಡಿದ್ದಾರೆ ಎಂದು ಹೇಳುವುದು ನಮ್ಮ ಧರ್ಮ.

ಈ ವಿಧೇಯಕವನ್ನು ಏತಕ್ಕೆ ತಂದಿದ್ದಾರೆ ಎಂದು ಹೇಳುವುದಕ್ಕೆ 2-3 ಕಾರಣಗಳಿವೆ. ಮೊದಲನೆಯದಾಗಿ, ನನಗೆ ತಿಳಿದಿರುವ ಮಟ್ಟಿಗೆ ಹೇಳುತ್ತೇನೆ, ಅದರ ಬಗ್ಗೆ ಅಧಿಕಾರಿಗಳ ಹತ್ತಿರ ಮಾನ್ಯ ಸಚಿವರು ಮಾಹಿತಿ ತೆಗೆದುಕೊಳ್ಳಬೇಕು. ಉದಾಹರಣೆಗೆ: 2002ನೇ ಸಾಲಿನಲ್ಲಿ ಶಿಕ್ಷಕರ ನೇಮಕಾತಿ ಮಾಡಿದಾಗ ಕೊಪ್ಪಳ ಜಿಲ್ಲೆಯಲ್ಲಿ 1100 ಹುದ್ದೆಗಳಿದ್ದು, ಇಡೀ ಗುಲ್ಬರ್ಗಾ ವಿಭಾಗದಲ್ಲಿ ನೇಮಕಾತಿಯಾದವರ ಸಂಖ್ಯೆ 192 ಮಾತ್ರವಾಗಿದ್ದು, ಉಳಿದವರೆಲ್ಲಾ ಹೊರಗಿನ ಜಿಲ್ಲೆಯವರು. ಎರಡು ವರ್ಷಗಳ ಪರೀಕ್ಷಾರ್ಥ ಅವಧಿ ಮುಗಿದ ನಂತರ ಸದರಿಯವರು ತಮ್ಮ ಜಿಲ್ಲೆಗೆ ವರ್ಗಾವಣೆಯಾಗುತ್ತಿದ್ದರು. ಆಗ ಆ ಹುದ್ದೆಗಳು ಖಾಲಿ ಉಳಿಯುತ್ತಿತ್ತು. ಪುನಃ ಆ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದಾಗ ಇದೇ ಪರಿಸ್ಥಿತಿ ಮುಂದುವರೆಯುತ್ತಿತ್ತು. ಒಟ್ಟಾರೆಯಾಗಿ ಕಲ್ಯಾಣ ಕರ್ನಾಟಕ ಎಂದು ಹೇಳುವ ನಮ್ಮ ಉತ್ತರ ಕರ್ನಾಟಕದವರಿಗೆ ನೇಮಕಾತಿಯಲ್ಲಿ ಅವಕಾಶ ಸಿಗುತ್ತಿರಲಿಲ್ಲ. ಅದರ ಬಗ್ಗೆ ನಮಗೆ ಅನೇಕ ಸಲ ದೂರು ಬಂದಿತ್ತು.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡನೆಯದಾಗಿ, ಈಗಾಗಲೇ ಮಾನ್ಯ ಸಚಿವರು ಬುದ್ಧಿಮಾಂದ್ಯ ಮಕ್ಕಳನ್ನುಳ್ಳ ಪೋಷಕರಿಗೆ ಸಂಬಂಧಿಸಿದಂತೆ ಒಂದು ವಿಚಾರವನ್ನು ಹೇಳಿದ್ದರು. ಈ ವರ್ಗಾವಣೆ ತರುವುದಕ್ಕೆ ಅದು ಸಹ ಒಂದು ಕಾರಣ. ನಾನು ಮೈಸೂರಿಗೆ ಹೋಗಿದ್ದ ಸಂದರ್ಭದಲ್ಲಿ ಹಾಸನ ವಿಭಾಗದಿಂದ ಬಿಸಿ ಊಟ ತಯಾರಿಸುವ ಒಬ್ಬ ಹೆಣ್ಣು ಮಗಳು ಬೆಳಗ್ಗೆ 9 ಗಂಟೆಗೆ ಬಂದು ಮೈಸೂರಿನ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಕಾಯ್ದುಕೊಂಡು ಕುಳಿತುಕೊಂಡಿದ್ದಳು. ನಾವು ಅಲ್ಲಿಯೇ ಉಳಿದುಕೊಂಡು ಸ್ವಲ್ಪ ತಡವಾಗಿ ಹೋಗಿದ್ದರಿಂದ ಮಧ್ಯಾಹ್ನ ಸುಮಾರು ಒಂದೂವರೆಯವರೆಗೂ ಅಲ್ಲಿಯೇ ಕುಳಿತಿದ್ದಾಳೆ. ಆ ಸಭೆ ನಡೆಯುತ್ತಿದ್ದಾಗ ಒಬ್ಬ ಪೊಲೀಸ್ ಜಿಲ್ಲಾಧಿಕಾರಿಯ ಹತ್ತಿರ ಬಂದು 'ಸಾರ್, ಒಬ್ಬ ಹೆಣ್ಣು ಮಗಳು ಬೆಳಗ್ಗೆ 9.30 ಕ್ಕೆ ಬಂದಿದ್ದಾಳೆ, ಸಚಿವರನ್ನು ಭೇಟಿಯಾಗುವುದಕ್ಕೆ' ಎಂದು ಹೇಳಿದ್ದ. ಅದಕ್ಕೆ ಆ ಜಿಲ್ಲಾಧಿಕಾರಿಯು ಇನ್ನು 15 ನಿಮಿಷಗಳ ಕಾಲ ಕಾಯುವುದಕ್ಕೆ ಹೇಳು ಎಂದು ಹೇಳಿದ್ದರು. ಆಗ ಆ ಪೊಲೀಸ್ 'ಪಾಪ ಒಂದು ಮಗುವನ್ನು ಕರೆದುಕೊಂಡು ಬಂದಿದ್ದಾಳೆ' ಎಂದು ಹೇಳಿದಾಗ ನಾನು ಅವರನ್ನು 'ಒಳಗೆ ಕರೆಯಪ್ಪ' ಎಂದು ಹೇಳಿದ್ದೆ. ಆಕೆ ಒಳಗೆ ಬಂದ ಮೇಲೆ ಮಾನ್ಯ ಸಚಿವರು ಹೇಳಿದ್ದ ಹಾಗೆ 'ನಂಜನಗೂಡಿನಿಂದ ಕೊನ್ನಿ ಹಳ್ಳಿಗೆ ಪ್ರತಿ ದಿವಸ 36 ಕಿಲೋ ಮೀಟರ್ ಪ್ರಯಾಣಿಸುತ್ತಿದ್ದಳು' ಎಂಬುದು ಗೊತ್ತಾಗಿತ್ತು. ಮದುವೆಯಾಗಿ 9 ವರ್ಷಗಳಾಗಿದ್ದ ಆಕೆಗೆ 7 ವರ್ಷದ ಒಂದು ಬುದ್ಧಿಮಾಂದ್ಯ ಮಗು ಇತ್ತು. ನನಗೆ ಅದು ಇವತ್ತಿಗೂ ನೆನಪಿನಲ್ಲಿದೆ. ಆ ಮಗುವು ಒಂದು ರೀತಿಯ ಮುಖಮಾಡಿಕೊಂಡು, ಆಕೆಯ ಭುಜದ ಎತ್ತರದವರೆಗೂ ಇತ್ತು. ಆ ಮಗುವನ್ನು ನೋಡಿ ನನಗೆ ಬಹಳಷ್ಟು ನೋವಾಗಿತ್ತು. ಈ ಹಿಂದೆ ಷರೀಫ್ ಎಂಬ ಜಂಟಿ ನಿರ್ದೇಶಕರಿದ್ದರು, ಅವರ ಬಗ್ಗೆ ಈಗಲೂ ನೆನಪಿದೆ. ಆಕೆ ವರ್ಗಾವಣೆ ಸಲುವಾಗಿ ಬಂದಿದ್ದಳು. ಅದಕ್ಕೆ ಆ ಜಂಟಿ ನಿರ್ದೇಶಕರು 'ಏನಮ್ಮಾ, middle of the year ವರ್ಗಾವಣೆ ಮಾಡುವುದಕ್ಕೆ ಬರುವುದಿಲ್ಲ, ನಿನ್ನ ಕಷ್ಟ ಏನೆಂಬುದು ಅರ್ಥವಾಗುತ್ತದೆ. Deputation ಮಾಡುತ್ತೇನೆ' ಎಂದು ಹೇಳಿದ್ದರು. ಆಕೆ 'ನವೆಂಬರ್ 23 ರಂದು ಒಬ್ಬ ಶಿಕ್ಷಕಿ ಮರಣ ಹೊಂದಿದ್ದಾರೆ ಎಂದು ಮರಣ ಪ್ರಮಾಣ ಪತ್ರವನ್ನು ತಂದು, ಯಾರೂ ಆ ಹುದ್ದೆಯನ್ನು ಭರ್ತಿ ಮಾಡಿಲ್ಲ' ಎಂದು ತೋರಿಸಿದ್ದಳು. ಆಕೆ ಆ ಮಾತನ್ನು ಹೇಳಿದ ತಕ್ಷಣ ನಾನು ಶ್ರೀ ಷರೀಫ್‌ರವರಿಗೆ ಕಾರಿನಲ್ಲಿ ಕರೆದುಕೊಂಡು ಹೋಗಿ ಆ ಹೆಣ್ಣು ಮಗಳನ್ನು ತಕ್ಷಣ ಆ ಹುದ್ದೆಗೆ ನೇಮಕಾತಿ ಮಾಡಿಸು ಎಂದು ಹೇಳಿದ್ದೆ. ನಮಗೂ ಆ ಅಧಿಕಾರಿಯ ಮೇಲೆ ಅನುಮಾನ, ಎಲ್ಲಿ ಆ ಹೆಣ್ಣು ಮಗಳನ್ನು ಮಧ್ಯದಲ್ಲಿಯೇ ಬಿಟ್ಟು ಹೋಗುತ್ತಾರೆಯೋ ಎಂದು ನಮ್ಮ ಗನ್‌ಮ್ಯಾನ್‌ಗೆ ಕಾರಿನಲ್ಲಿ ಕೂರಿಸುವುದಕ್ಕೆ ಹೇಳಿದ್ದೆ. ನಂತರ ಹೋದರು. ನಾನು ಈ ಕೆಲಸವನ್ನು ಮಧ್ಯಾಹ್ನ ಒಂದೂವರೆಯಲ್ಲಿ ಮಾಡಿದ್ದೆ, ಸುಮಾರು ಮೂರುವರೆಗೆ ಹುದ್ದೆ ಖಾಲಿ ಇಲ್ಲವೆಂದು ದೂರವಾಣಿ ಕರೆ ಬಂತು. ನನಗೆ ಆ ಮಾತಿನಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ ನೋವಾಗಿತ್ತು. ನಂತರ ಆ ಹೆಣ್ಣು ಮಗಳನ್ನು ಕೂರಿಸಿಕೊಂಡು ಶ್ರೀ ವಿಜಯಭಾಸ್ಕರ್ ಎಂಬ ಕಾರ್ಯದರ್ಶಿಯವರಿಗೆ ಕರೆ ಮಾಡಿದ್ದೆ. ನಮ್ಮ ಕಛೇರಿಯಲ್ಲಿ ಯಾರು ಇರಲಿಲ್ಲ, ಮುಖ್ಯಮಂತ್ರಿಯವರ ಕಛೇರಿಯಿಂದ ಅನುಮತಿ ತೆಗೆದುಕೊಳ್ಳಬೇಕಲ್ಲವೇ. ನಾನು ಸಹ ಮಾರನೇ ದಿನ ರೋಣಕ್ಕೆ ಹೋಗಬೇಕಾಗಿತ್ತು. ಆದರೆ, ಆ ಹೆಣ್ಣು ಮಗಳ ಪರಿಸ್ಥಿತಿ ನೋಡಿ ನನಗೆ ಕಣ್ಣೀರು ಬಂತು. ನಾನು by road ಮೈಸೂರಿಗೆ ಹೋಗಿ ಬಿಇಓ, ಡಿಡಿಪಿಐ. ಜೆ.ಡಿ. ಎಲ್ಲರ ಹತ್ತಿರ ಕುಳಿತುಕೊಂಡು ಹೇಳಿದ್ದಾಗ ಆಕೆಯನ್ನು deputation ಮಾಡಿದ್ದರು. Deputation ಅಂದರೆ vacancy ಅಲ್ಲ. ಮತ್ತೆ ಅಲ್ಲಿಯ ಮುಖ್ಯೋಪಾಧ್ಯಾಯರನ್ನು ಕರೆಸಿ ಮಾತನಾಡಿ ರಾತ್ರಿ 8.00 ಗಂಟೆಗೆ ಆ ಹೆಣ್ಣು ಮಗಳನ್ನು ಹಾಜರುಪಡಿಸಿ ರೋಣಗೆ ಹೋಗಿದ್ದೆ. ಇದರ ಮೇಲೆಯು ವಿಧೇಯಕ ತರಬೇಕೆಂದು ಮನಸ್ಸಿಗೆ ಬಂತು.

ಮೂರನೆಯದಾಗಿ, 2006ನೇ ಸಾಲಿನಲ್ಲಿ ನಾನು ಸಚಿವನಾದ ನಂತರ ಪತ್ರಿಕಾ ಮಾಧ್ಯಮದವರು 'ಶಿಕ್ಷಕರ ವರ್ಗಾವಣೆಯಲ್ಲಿ ಪ್ರಾಥಮಿಕ ಹಂತದಿಂದ ಪಿಯುಸಿ ವರೆಗೂ ರೂ. 6.00 ಕೋಟಿಯಿಂದ ರೂ. 7.00 ಕೋಟಿಯವರೆಗೂ ಭ್ರಷ್ಟಾಚಾರವಾಗುತ್ತಿದೆ, ಆ ಭ್ರಷ್ಟಾಚಾರಿಗಳು ಶಾಸಕರ ಭವನದ ಸುತ್ತ-ಮುತ್ತ ಇರುತ್ತಾರೆ' ಎಂದು ದೊಡ್ಡದಾಗಿ ವರದಿಯಾಗಿತ್ತು. ನಾನು ಅವರ ಹತ್ತಿರ ಮಾತನಾಡಿದ್ದಕ್ಕೆ 'Being a Minister you should not talk unnecessary' ಎಂದೆಲ್ಲಾ ಮಾತನಾಡಿದ್ದರು. ನನಗೆ ಆ ಶಬ್ದದ ಅರ್ಥವಾಗಲಿಲ್ಲ. ನಾನು ಎಲ್ಲಾ ಕಡೆಯು ನೋಡಿದ್ದೆ tape ಸಿಗಲಿಲ್ಲ. ನಂತರ ಮಾನ್ಯ ಕೆ.ಸುರೇಶ್‌ಕುಮಾರ್‌ರವರು ಅವರ ಒಂದು tape ತಂದು ಹಾಕಿದ್ದರು. ನನ್ನ PS ಆಗಿದ್ದ ಮಂಜುನಾಥ್ ಎಂಬುವವರು 'ಸಾರ್, ಬೇಡ, ಪತ್ರಿಕೆಯವರ ಮುಂದೆ ಏತಕ್ಕೆ ಆ ರೀತಿ ಮಾಡುತ್ತೀರಿ, ತಪ್ಪಾಗುತ್ತದೆ' ಎಂದು ಹೇಳಿದ್ದ. ನಾನು ರಾತ್ರಿ ಆ ಪ್ರೆಸ್ ಹತ್ತಿರ ಹೋಗಿದ್ದಾಗ ಒಂದು tape ಹಾಕಿ, ಆ ವರದಿಗಾರ ಒಬ್ಬ ಹೆಣ್ಣು ಮಗಳನ್ನು ನಿನ್ನ ಹೆಸರೇನು ಎಂದು ಕೇಳಿದ್ದ, ಆಕೆ 'ಸುಮಿತ್ರಾ' ಎಂದು ಹೇಳಿದ್ದಳು. ಎಲ್ಲಿ ವಾಸವಾಗಿದ್ದೀಯಾ ಎಂದು ಕೇಳಿದ್ದ, ಆಕೆ ಗುಲ್ಬರ್ಗಾದಲ್ಲಿದ್ದೇನೆ ಎಂದು ಹೇಳಿದ್ದಳು. ನಂತರ ಎಲ್ಲಿ ಹೋಗಬೇಕು ಎಂದು ಕೇಳಿದ್ದ, ಅದಕ್ಕೆ ಆಕೆ ಬೆಂಗಳೂರಿಗೆ ಹೋಗಬೇಕು ಎಂದಳು. ಎಷ್ಟು ಹಣವನ್ನು ನೀಡಿದ್ದೀಯಾ ಎಂದರು, ಆಕೆ ರೂ.4.00 ಲಕ್ಷ ನೀಡಿದ್ದೇನೆ' ಎಂದಳು. ಹೀಗೆ ಎಲ್ಲಾ ಜಿಲ್ಲೆಗಳಲ್ಲಿಯು ಹೋರಾಡಿ ಮಾಹಿತಿಯನ್ನು ಸಂಗ್ರಹಿಸಿ ನಮಗೆ ತೋರಿಸಿದ್ದ. "Mister Minister, without the evidence I won't talk. You please take back your words."ಎಂದರು. ನಾನು ಅದನ್ನು ಕೇಳಿ 'ಕ್ಷಮಿಸು' ಎಂದು ಹೇಳಿದ್ದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ರಾಜೇಂದ್ರ ಎಂಬಾತ ಹಿಂದೂ ಪತ್ರಿಕೆಯ ವರದಿಗಾರನಾಗಿದ್ದ ನನಗೆ ಆತನ ಬಗ್ಗೆ ಇನ್ನೂ ನೆನಪಿದೆ. ನನಗೆ ಅದನ್ನು ನೋಡಿ ಬಹಳ ಆಶ್ಚರ್ಯವಾಗಿತ್ತು. ನಂತರ corruption ಬಗ್ಗೆ ಹೇಳಿದನು. ಅದೇನೆಂದರೆ, 'ನಿಮ್ಮ ಕಛೇರಿಯಲ್ಲಿದ್ದವರು ಕೆಳಗಡೆ ಶೌಚಾಲಯದಲ್ಲಿ ಲಂಚ ಪಡೆಯುತ್ತಾರೆ' ಎಂದು ಹೇಳಿದ್ದ. ಇವೆಲ್ಲಾ ಕಾರಣದಿಂದಾಗಿ ವರ್ಗಾವಣೆ ನೀತಿ ತರಬೇಕೆಂದು ಬಹಳ ಪ್ರಯತ್ನ ಮಾಡಿದ್ದೇನೆ. ನಮ್ಮೆಲ್ಲಾ ಅಧಿಕಾರಿಗಳು ಅದಕ್ಕೆ ಸಂಬಂಧಪಟ್ಟ ನಿಯಮಗಳೆಲ್ಲವನ್ನು ನೀಡಿದ್ದರು. ಆದರೆ, ಅದರಿಂದ ಏನು ಪ್ರಯೋಜನವಾಗಲಿಲ್ಲ. ಕೊನೆಯದಾಗಿ ದೇವರು ನನಗೆ ಒಂದು ಬುದ್ಧಿ ನೀಡಿದ್ದ, ಅದೇನೆಂದರೆ, A, B and C zones ಎಂದು ಮಾಡಿ. A zone ಅಂದರೆ City, B zone ಅಂದರೆ within 15 kilometers and C zone ಅಂದರೆ above 15 kilometers from the City, ಎಂದು ಮಾಡಲಾಗಿತ್ತು. ಆಗ ಗೋಲ್ಡ್ ಮೆಡಲ್ ತೆಗೆದುಕೊಂಡವರು ಸಹ ಕಡ್ಡಾಯವಾಗಿ ಹಳ್ಳಿಗೆ ಹೋಗಬೇಕೆನ್ನುವ ಕಾನೂನು ಆ ವಿಧೇಯಕದಲ್ಲಿ ತರಲಾಗಿತ್ತು. ಈ ಒಂದು ದೃಷ್ಟಿಯಿಂದ ಮಾಡಿದ್ದೇವೆ. ಹಾಗೆಯೇ ಪತಿ-ಪತ್ನಿಯರ ಪ್ರಕರಣದಲ್ಲಿ ಒಬ್ಬರನ್ನು ಕಾರವಾರಕ್ಕೆ ಕಳುಹಿಸುವುದು, ಮತ್ತೊಬ್ಬರನ್ನು ಬೆಳಗಾವಿಗೆ ಕಳುಹಿಸುವುದು, ಬೆಳಗಾವಿಯವರನ್ನು ಮೈಸೂರಿಗೆ ಕಳುಹಿಸುವ ಹಾಗೆ ಮಾಡಲಾಗುತ್ತಿತ್ತು. ನಾವು ಅದರ ಸಲುವಾಗಿ ದಿನಾಂಕ: 13ನೇ ಏಪ್ರಿಲ್ 2007ರಂದು ವಿಧೇಯಕವನ್ನು ತಂದಾಗ ರಾತ್ರಿ 2.00 ಗಂಟೆ ಆ ವಿಧೇಯಕ pass ಆಗಿತ್ತು. ವಿಧಾನಸಭೆಯಲ್ಲಿ 2 ಬಾರಿ, ವಿಧಾನ ಪರಿಷತ್ತಿನಲ್ಲಿ 1 ಬಾರಿ ಈ ರೀತಿ ಒಟ್ಟು 3 ಬಾರಿ ಆ ವಿಧೇಯಕವು fail ಆಗಿದೆ. ನಾವು ಬಹಳ ವಿನಂತಿ ಮಾಡಿಕೊಂಡು ಆ ವಿಧೇಯಕವನ್ನು pass ಮಾಡಿಸಿದ್ದೆವು. ಅದರ ಉದ್ದೇಶವೇನೆಂದರೆ, ಸಮಾನಾಂತರವಾಗಿ ವರ್ಗಾವಣೆಗೆ ಅವಕಾಶ ಸಿಗಲಿ ಎಂಬುದಾಗಿತ್ತು. ಆಗ ಯಾವ ಶಿಕ್ಷಕರು ಹಳ್ಳಿಗಳಿಗೆ ಹೋಗುತ್ತಿರಲಿಲ್ಲ. Appointment rules, 90, 89, 87, 86, 85 percent score ಮಾಡಿದವರು, ಆ ರೀತಿ ನಿಯಮವಾದರೆ ಹೇಗೆ? 50 ಸೀಟ್ ನೀಡಿ, ಗರಿಷ್ಠ ಫಲಿತಾಂಶ ಹೊಂದಿದ್ದವರಿಗೆ ಮೊದಲ ಆದ್ಯತೆ ನೀಡುತ್ತಿದ್ದು, ಆತನಿಗೆ ಎಲ್ಲಿ ಬೇಕು ಎಂದು ಕೇಳಿದರೆ, ಆತ ನಗರದೊಳಗೆ ಇರುವುದಕ್ಕೆ ಬಯಸುತ್ತಾರೆ. ಅಂದರೆ, ಶೇಕಡಾ 90 ಕ್ಕಿಂತಲೂ ಗರಿಷ್ಠ ಫಲಿತಾಂಶ ಹೊಂದಿದವರು ನಗರದೊಳಗಿನ ಮಕ್ಕಳಿಗೆ ಪಾಠ ಮಾಡಲು ಕಳುಹಿಸುತ್ತಿದ್ದು, ಕನಿಷ್ಠ ಫಲಿತಾಂಶ ಹೊಂದಿದವರು ಎಲ್ಲೆಲ್ಲಿಯೋ ಹಳ್ಳಿಗಳಿಗೆ ಹೋಗುವಂಥ ವ್ಯವಸ್ಥೆ ಇತ್ತು. ತಾವು ನಂಬುತ್ತೀರೋ, ಇಲ್ಲವೋ. ಈ ರೀತಿ ಆಗಬಾರದೆಂಬ ಕಾರಣದಿಂದ ಇದರ ಬಗ್ಗೆ 6 ತಿಂಗಳು ಅಧ್ಯಯನ ಮಾಡಿದ್ದೇನೆ. ನಂತರ ಅದೆಲ್ಲವನ್ನು ಮಾಡಿದ ಮೇಲೆ 'ಗೋಲ್ಡ್ ಮೆಡಲ್'

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಡೆದವರು ಸಹ ಕಡ್ಡಾಯವಾಗಿ ಹಳ್ಳಿಗಳಿಗೆ ಹೋಗಬೇಕೆಂದು ಮಾಡಲಾಗಿತ್ತು. ಈ ರೀತಿ ಹಳ್ಳಿಗಳಿಗೆ ಹೋದಂಥವರು ತಕ್ಷಣ ಬೇರೆ ಕಡೆ ವರ್ಗಾವಣೆ ಬಯಸಿದರೆ ಅದನ್ನು ಬದಲಾವಣೆ ಮಾಡಲು ಯಾವ ಮುಖ್ಯಮಂತ್ರಿಗಳಿಗೂ ಅಧಿಕಾರ ಇರದ ರೀತಿ ಆ ವಿಧೇಯಕವನ್ನು ತರಲಾಗಿತ್ತು.

(ಮುಂದು) . . .

(539)/18.03.2020/5.40/ಎಸ್‌ಕೆ-ವಿಕೆ

**(ಸಭಾಪತಿಯವರು ಉಪಸ್ಥಿತಿ )**

**ಶ್ರೀ ಬವವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):-**

ಆ ವಿಧೇಯಕದಲ್ಲಿ ವರ್ಗಾವಣೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೂ ಅಧಿಕಾರವಿಲ್ಲ ಎಂಬ ಅಂಶ ಈ ವಿಧೇಯಕದಲ್ಲಿದೆ. ಶಿಕ್ಷಕರು ವರ್ಗಾವಣೆಗೆ ಬರಬೇಕೆಂದರೆ counselling ಮುಖಾಂತರವೇ ಬರಬೇಕು.ಅಂದರೆ ಹತ್ತರಿಂದ ಹನ್ನೆರಡು ವರ್ಷ ಸೇವೆಯನ್ನು ಸಲ್ಲಿಸಿರಬೇಕು. ಕೆಲವರು ನನ್ನ ಬಳಿ ಬಂದು ನಮ್ಮ ಮಗಳು ಬೀದರ್ ಜಿಲ್ಲೆಗೆ ಹೋಗಿ ಎಂಟರಿಂದ ಒಂಭತ್ತು ವರ್ಷಗಳಾಗಿವೆ. ಅವರನ್ನು ವರ್ಗಾವಣೆ ಮಾಡಿಕೊಡಿ ಎಂದು ಕೇಳಿದರು. ಆಗ ನಾನು ಆ ರೀತಿ ವರ್ಗಾವಣೆ ಮಾಡಿಕೊಡುವುದಕ್ಕಾಗುವುದಿಲ್ಲ, ಅವರು counselling ಮುಖಾಂತರ ಬರಬೇಕು ಎಂದು ಹೇಳಿದೆ. ಆಗ ನನ್ನ ಮೇಲೆ ಸಿಟ್ಟಿಗೆದ್ದರು. ನಮ್ಮ ಸದನದಲ್ಲಿ ವಿಧೇಯಕ ಪಾಸಾಯಿತು. ಆ ಬಿಲ್ ಪಾಸ್ ಆದ ನಂತರ, ಅವರು ನಮಗೆ ವರ್ಗಾವಣೆ ಮಾಡಿಕೊಡುವುದಕ್ಕಾಗುವುದಿಲ್ಲ ನೀವು ಎಂತಹವರು? ನಿಮ್ಮನ್ನು ಓಟು ಹಾಕಿ, ಆಯ್ಕೆ ಮಾಡಿ ಇಲ್ಲಿಗೆ ಕಳುಹಿಸಿದ್ದೇವೆ. ಇದನ್ನು ಮಾಡುವುದಕ್ಕೆ ಬರುವುದಿಲ್ಲವೆಂದರೆ ಹೇಗೆ? ಎಂದು ಕೇಳಿದರು. ನಂತರ ಚುನಾವಣೆಯ ಸಮಯದಲ್ಲಿ ನನ್ನ ವಿರುದ್ಧವಾಗಿ ಹುಟ್ಟು ಹಾಕುವಂತಹ ವ್ಯವಸ್ಥೆಯನ್ನು ಮಾಡಿದರು. ಇವೆಲ್ಲವುಗಳ ನಡುವೆ ಶಿಕ್ಷಕರು ಮತ್ತು ಮಕ್ಕಳ ಹಿತದೃಷ್ಟಿಯಿಂದ ನಾವು ಈ ವಿಧೇಯಕವನ್ನು ಮಾಡಿದಾಗ, ವರ್ಗಾವಣೆಯು ಸುಸೂತ್ರವಾಗಿ ನಡೆದಿತ್ತು. ಇದು ನಡೆದ ನಂತರ ಈ ಹಿಂದೆ ಒಬ್ಬ ಸಚಿವರು ಬಂದಾಗ, ಅವರು ಏನು ಮಾಡಿದರೆಂದರೆ, ವರ್ಗಾವಣೆಯಲ್ಲಿ ಸ್ವಲ್ಪ ಬದಲಾವಣೆ ಮಾಡಿದರು. ಅದು ತಪ್ಪಾಗಿ ಇದರ ಬಗ್ಗೆ ಇಲ್ಲಿ ಚರ್ಚೆಯಾಗಲಿಲ್ಲ. ಎರಡನೇ ಸಾರಿ ಕಡ್ಡಾಯ ವರ್ಗಾವಣೆ ಎಂದು ಬಂದಾಗ, ಸದನದಲ್ಲಿ ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಚರ್ಚೆ ಆಗಲಿಲ್ಲ. ಆ ದಿವಸ ನಾವು ಕಡ್ಡಾಯ ವರ್ಗಾವಣೆ ಮಾಡಿರುವುದು ಮಹಾ ಅಪರಾಧವೆಂದು ಹೇಳಿದರೂ ಕೂಡ ಅದು ಕಡತಕ್ಕೆ ಹೋಗಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಈ ವರ್ಗಾವಣೆಯು 2007ರಲ್ಲಿ ಆಯಿತು. ಈ ವರ್ಗಾವಣೆ ಮಾಡಿದ್ದಕ್ಕೆನನ್ನ ಮೇಲೆ ಬಹಳಷ್ಟು ಜನ ಶಿಕ್ಷಕರು ಸಿಟ್ಟಿಗೆದ್ದರು. 2010 ರಲ್ಲಿ ನಡೆದಂತಹ ಚುನಾವಣೆಯಲ್ಲಿ ಸುಮಾರು 1200 ಜನ ಶಿಕ್ಷಕರು ನನ್ನ ವಿರುದ್ಧವಾಗಿ ಮತ ಹಾಕಿದರು. ಕೊನೆಗೆ ನಮ್ಮ ಅಧಿಕಾರ ಹೋಯಿತು. ಮುಂದೆ ಐದಾರು ವರ್ಷಗಳಾದ ನಂತರ ಅವರೇ ಬಂದು ಸರ್, ಯಾರಿಗೂ ಹಣ ಕೊಡದೆ ನಾವೆಲ್ಲರೂ ವರ್ಗಾವಣೆಯಾಗಿ ಬಂದಿದ್ದೇವೆ ನಿಮ್ಮಿಂದ ನಮಗೆ ಬಹಳ ಉಪಕಾರವಾಯಿತು ಎಂದು ಹೇಳಿದರು. ಸದನದಲ್ಲಿ ಹೇಳಲಾರದಂತಹ ಮತ್ತು ಬಹಳ ಭಯಂಕರವಾದಂತಹ ಒಂದು ವಿಷಯವನ್ನು ಕೇಳಿದ್ದೇನೆ ಮೈಸೂರಿನ ಹೆಣ್ಣು ಮಗಳ ವರ್ಗಾವಣೆಯ ಬಗ್ಗೆ ಅವರು ಯಾವ್ಯಾವ ಅಧಿಕಾರಿಗಳಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೇನೆ, ಮತ್ತು ಏನೇನು ಮಾಡಿದ್ದಾರೆಂಬುದರ ಬಗ್ಗೆ ನನಗೆ ತಿಳಿಸಿದ್ದಾರೆ. ಆದರೆ ನಾನು ಈ ಸದನದಲ್ಲಿ ಆ ವಿಷಯವನ್ನು ಹೇಳಬಾರದು. ಒಟ್ಟಿನಲ್ಲಿ ಸುಂದರವಾದಂತಹ ಹೆಣ್ಣು-ಮಕ್ಕಳು ಶಿಕ್ಷಕಿಯಾಗಿ ಕೆಲಸ ಮಾಡಬಾರದು. ಇದರ ಅರ್ಥ ನೀವೆ ತಿಳಿದುಕೊಳ್ಳಿ ಎಂದು ಪತ್ರ ಬರೆಯುತ್ತಾಳೆ. ಇವೆಲ್ಲವನ್ನೂ ಇಟ್ಟುಕೊಂಡು ನಾವು ಸ್ಟಡಿ ಮಾಡಿ, ಈ ವಿಧೇಯಕವನ್ನು ತಂದಿದ್ದೆ. ಇವತ್ತು ನಾನು ಹೇಳುವುದೇನೆಂದರೆ, ಮಾನ್ಯ ನಾರಾಯಣ ಸ್ವಾಮಿಯವರು ಮಾರಕ ಕಾಯಿಲೆ, ಹೆಚ್‌ಐವಿ, ಕಿಡ್ನಿ, ಕ್ಯಾನ್ಸರ್, ಬಗ್ಗೆ ಹೇಳಿದ್ದಾರೆ. ಈ ಹಿಂದೆ ನಾನು ಸಚಿವನಾಗಿ ಬಂದಾಗ, ಈ ಮೂವತ್ತೇಳು ಜನ ಶಿಕ್ಷಕರು medical certificate ನ್ನು ಬೋಗಸ್ ಆಗಿ ತೆಗೆದುಕೊಂಡು ಬಂದಾಗ, ನಾವು ಅವರನ್ನು dismiss ಮಾಡಲು ಹೋದಾಗ, ಅವರೇ ಸ್ವತಃ ಒಪ್ಪಿಕೊಂಡು ಮತ್ತೆ ಗುಲ್ಬರ್ಗಾಕ್ಕೆ ಹೋದರು. ನಾನು ಹೇಳುವುದೇನೆಂದರೆ, ಮಾರಕ ಕಾಯಿಲೆ ಇದ್ದಂತಹ ಶಿಕ್ಷಕರಿಗೆ ದಾರಿ ಏನಾದರೂ ಮಾಡಬೇಕು. ಅವರಿಗೆ ಐದು ವರ್ಷ extension ಕೊಟ್ಟು, ಕಡ್ಡಾಯ ವರ್ಗಾವಣೆ, ಕಡ್ಡಾಯ ನಿವೃತ್ತಿಯಲ್ಲ, ಅವರಿಗೊಂದು ಐದು ವರ್ಷweightage ಕೊಟ್ಟು ಅವರು voluntary retirement ಕೊಡುವುದಕ್ಕೆ ಸಾಧ್ಯತೆಯಿದೆ ಎನ್ನುವುದನ್ನು ನೋಡಬೇಕು. ಮಾನ್ಯ ಸಭಾಪತಿಯವರೇ, ಅದೊಂದು ವಿಷಯವಿದೆ. ಈಗ ಒಬ್ಬ ಶಿಕ್ಷಕನಿಗೆ ಕ್ಯಾನ್ಸರ್ ಆಗಿರುತ್ತದೆ. ಕ್ಯಾನ್ಸರ್ ಅಗಿರುವಂತಹ ಶಿಕ್ಷಕ ಶಾಲೆಗೆ ಬಂದ ಮಕ್ಕಳಿಗೆ ಪಾಠ ಏನು ಕಲಿಸುತ್ತಾನೆ? ಈಗ ಒಬ್ಬ ಶಿಕ್ಷಕನಿಗೆ ಬಹಳ ಅಧಿಕ ರಕ್ತದೊತ್ತಡ ಇರುತ್ತದೆ. ಆಗ ಡಾಕ್ಟರ್ ವಿಶ್ರಾಂತಿ ತೆಗೆದುಕೋ ಎಂದು ಅವನಿಗೆ ಹೇಳುತ್ತಾರೆ. ಆಗ ಅವನು ಪಾಠ ಮಾಡುವುದಕ್ಕಾಗುವುದಿಲ್ಲ. ಆಗ ಏನು ಮಾಡುತ್ತಾರೆಂದರೆ, ಮಾನವೀಯತೆಯಿಂದ ಹೋಗಲಿ ಬಿಡಪ್ಪ, ಎಂದು ಹೇಳಿ ಯಾರಾದರೊಬ್ಬರಿಗೆ ಕೊಡಪ್ಪ ಎಂದು ಹೇಳುತ್ತಾರೆ. ಈ ತರಹದೆಲ್ಲಾನಡೆಯುತ್ತದೆ. ಆ ಹಿನ್ನೆಲೆಯಲ್ಲಿ ಮಾರಕವಾದಂತಹ ಕಾಯಿಗಳಿದ್ದಂತಹ ಶಿಕ್ಷಕರಿಗೆ ನೋಡಿಕೊಂಡು ಅದಕ್ಕೆ ಏನಾದರೂ ದಾರಿ ಹುಡುಕುವಂತಹ ಕೆಲಸವನ್ನು ಮಾಡಿದರೆ ಸೂಕ್ತವೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಸಲಹೆಯನ್ನು ಕೊಡುತ್ತೇನೆ. ಹೊಸ ನೇಮಕಾತಿಯಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮಾಡಿಲ್ಲ. ಹೆಚ್ಚುವರಿ ಶಿಕ್ಷಕರ ಬಗ್ಗೆ ಚರ್ಚೆ ಮಾಡುವುದು ಬೇಡ. ಆ ಹೆಚ್ಚುವರಿ ಶಿಕ್ಷಕರಿದ್ದಂತಹವರನ್ನು ಏನು ಮಾಡಬೇಕೆಂದರೆ, ಮುಂದೆ ಆ ಶಾಲೆಯಲ್ಲಿ vacancy ಆದಾಗ, ಅವರನ್ನು ಮರು ವಾಪಸ್ಸು ಕಳುಹಿಸುವಂತಹ ಕೆಲಸವನ್ನು ಮಾಡಿದರೆ, ಹೆಚ್ಚುವರಿ ಶಿಕ್ಷಕರ ಸಮಸ್ಯೆ ಸ್ವಲ್ಪ ಪ್ರಮಾಣಿಕವಾಗಿ ಬಗೆಹರಿಯುತ್ತದೆ ಎನ್ನುವುದೊಂದು. ಇದೇ ತರಹ first grade ಕಾಲೇಜಿನಲ್ಲಿದೆ. ಎರಡನೆಯದಾಗಿ, ರೂಲ್ಸ್‌ನಲ್ಲಿ ಕಡ್ಡಾಯ ವರ್ಗಾವಣೆ ಮಾಡಿದ್ದೀರಿ. ಇನ್ನೂರಿಂದ ಮುನ್ನೂರು ಕಿಲೋ ಮೀಟರ್‌ವರೆಗೆ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಹೊದಂತಹ ಶಿಕ್ಷಕರನ್ನು ವಾಪಸ್ಸು ಕಳುಹಿಸುವಂತಹ ಮೊದಲ ಆದ್ಯತೆಯನ್ನು ಕೊಡಬೇಕು ಮತ್ತು ವರ್ಗಾವಣೆ ಮಾಡಬೇಕು. ಅದೇ ಜಿಲ್ಲೆಯಲ್ಲಿದ್ದವರಿಗೆ ವರ್ಗಾವಣೆ ಮಾಡಬಾರದು. ಅದೇ ಜಿಲ್ಲೆಯಿದ್ದವರಿಗೆ ವರ್ಗಾವಣೆ ಮಾಡುವಂತಹ ಅವಶ್ಯಕತೆ ಏನಿಲ್ಲ. ಪ್ರೈಮರಿ ಸ್ಕೂಲ್ ತಾಲ್ಲೂಕಿನಲ್ಲಿ ಮತ್ತು ಜಿಲ್ಲೆಯಲ್ಲಿ ಹೈಸ್ಕೂಲ್‌ನವರನ್ನು ಮಾಡಿದ್ದೀರಿ. ಆ ತರಹವಿದ್ದರೆ ನೋಡಿ, ನಮ್ಮ ಅನಿಸಿಕೆಯನ್ನು ಹೇಳುತ್ತೇನೆ. ಆಮೇಲೆ C zone ನಲ್ಲಿ ಮೂವತ್ತು ಸಾವಿರ ಶಿಕ್ಷಕರ ಕೊರತೆಯಿದೆ ಎಂದು ಹೇಳಿದ್ದೀರಿ. ಇನ್ನೂ ಸಮೀಪವಿರುವಂತಹ ಸುಮಾರು ಇಪ್ಪತ್ನಾಲ್ಕು ಸಾವಿರ ಶಿಕ್ಷಕರ ನಿವೃತ್ತಿಯಾಗುತ್ತಾರೆಂದು ಹೇಳಿದ್ದಾರೆ. ಇದು ಪ್ರತಿ ವರ್ಷ ಶಿಕ್ಷಕರ ವರ್ಗಾವಣೆ ಬರುವುದಕ್ಕಿಂತ ಮುಂಚಿತವಾಗಿ, ಪ್ರತಿ ವರ್ಷ ಶಿಕ್ಷಕರನ್ನು ನೇಮಕಾತಿ ಮಾಡಿದರೆ, ಈ ಸಮಸ್ಯೆ ಬರುವುದಿಲ್ಲ. ನೇಮಕಾತಿಯಾದವರು 'ಸಿ' ನಲ್ಲಿ ಬರತ್ತಾರೆ. 'ಸಿ' ನವರು 'ಬಿ' ಗೆ ಬರುತ್ತಾರೆ. ಬಿ ನವರು 'ಎ' ಗೆ ಬರುತ್ತಾರೆ. ಅದನ್ನು ಮಾಡುವುದರ ಜೊತೆಗೆ ಹೆಚ್ಚುವರಿ ಅವು ಇವು ಎಲ್ಲಾ ಆಗಿದೆ. ಇದರ ಬಗ್ಗೆ ಏನು ಮಾಡುತ್ತೀರಾ? ಕನಿಷ್ಟ ಮೂರು ವರ್ಷ ವರ್ಗಾವಣೆ ಎಂದು ಹೇಳಿದ್ದೀರಿ. ನೀವು ಗರಿಷ್ಟ ವರ್ಗಾವಣೆ ಹಾಕಿಲ್ಲ. ಕನಿಷ್ಠ ಮೂರು ವರ್ಷ ವರ್ಗಾವಣೆ ಎಂದಾಗ, ಒಂದೇ ಹಳ್ಳಿಯ ಶಾಲೆಯಲ್ಲಿ ಸುಮಾರು ಇಪ್ಪತ್ತೈದು ವರ್ಷಗಳವರೆಗೆ ಶಿಕ್ಷಕ ಇರುತ್ತಾನೆ. ಅವರು ಬೇರೆ ಬೇರೆನೇ ಆಗುತ್ತಾರೆ. ಎಲ್ಲರೂ ಅಲ್ಲ ಕೆಲವರು ಮಾತ್ರ. ಅದಕ್ಕೆ ಒಂದು ಶಾಲೆಯಲ್ಲಿ ಗರಿಷ್ಠ ಐದು ಅಥವಾ ಹತ್ತು ವರ್ಷಗಳಿರುವಂತಹದ್ದನ್ನು ಮಾಡಬೇಕು. ಅವರನ್ನು ಮಾಡಬೇಕಾದರೆ ಸಿನಿಯಾರಿಟಿ ಪ್ರಕಾರ ಮಾಡಬೇಕಾದರೆ, 'ಬಿ' ನಲ್ಲಿ ಬರಲಿಲ್ಲವೆಂದರೆ, 'ಸಿ' ಗೆ ಇಡಿ. 'ಬಿ' ಗೆ ಇದ್ದವರನ್ನು 'ಬಿ' ದವರಿಗೆ ಮಾಡಿ. ಒಂದೇ ಶಾಲೆಯಲ್ಲಿ ಹತ್ತು ರಿಂದ ಹದಿನೈದು ವರ್ಷಗಳಿದ್ದರೆ, ಅದು ಬೇರೆ ಬೇರೆಯಾಗುತ್ತದೆ. ಆಮೇಲೆ ಕೆಲವರು ಮಾಡುವಂತಹದ್ದಕ್ಕೆ ಎಲ್ಲರಿಗೂ ಬರುತ್ತದೆ. ಅದು ಆ ರೀತಿಯಾಗಬಾರದೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳಬಯಸುತ್ತೇನೆ. ಇನ್ನೊಂದು ವಿಷಯವೇನೆಂದರೆ, ಇಪ್ಪತ್ತು ಪರ್ಸೆಂಟ್‌ಗಿಂತ ಹೆಚ್ಚು ಇದ್ದಲ್ಲಿ ಹಾಕುತ್ತೇವೆ ಎನ್ನುತ್ತೀರಿ. ಅದನ್ನು ಮಾಡುವುದೇ ಬೇಡ. ನಾನು ಹೇಳುವುದೇನೆಂದರೆ, ಎಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

vacancy ಇರುತ್ತವಲ್ಲಾ, ಅಲ್ಲಿ ನೇಮಕಾತಿ ಮಾಡುವುದಕ್ಕಷ್ಟಗೆ vacancy ಕೊಟ್ಟುಬಿಡಿ. ಇಪ್ಪತ್ತು ಪರ್ಸೆಂಟ್ ಕೇಳಬೇಡಿ. ಉದಾಹರಣೆಗೆ ಒಂದು ತಾಲ್ಲೂಕು, ಆ ತಾಲ್ಲೂಕಿನಲ್ಲಿ ಸುಮಾರು 110 vacancy ಇರುತ್ತವೆ. ಆ 110vacancy ಇರುವಂತಹ ತಾಲ್ಲೂಕುಗಳಿಗೆ ಕೊಟ್ಟುಬಿಡಿ. ಅದನ್ನು ತರುವ ಪ್ರಶ್ನೆಯೇ ಬರುವುದಿಲ್ಲ. ಆಮೇಲೆ ನೀವು ಏಪ್ರಿಲ್-ಮೇ ತಿಂಗಳಿನಿಂದ ವರ್ಗಾವಣೆ ಮಾಡುತ್ತೀರೆಂದು ಹೇಳುತ್ತೀರಿ, ಅದು ಅಷ್ಟು ಸುಲಭವಾದಂತಹ ಕೆಲಸವಲ್ಲ. ಈ ವಿಷಯ ಬಹಳ ಜನರಿದ್ದಾಗ ಯಾರಿಗಾದರೂ ಹೇಳಿಬಿಟ್ಟರಿ. June 31st is the last date for the admission of the students. ಜೂನ್ ತಿಂಗಳು 31 ನೇ ತಾರೀಖಿನಲ್ಲಿ ಮಕ್ಕಳ ಅಡ್ಮಿಷನ್ ಇರುತ್ತದೆ. ಆಗ ಎಷ್ಟು ಮಕ್ಕಳು ಅಡ್ಮಿಷನ್ ಆಗಿದ್ದಾರೆ ಮತ್ತು ಎಷ್ಟು ಮಕ್ಕಳು shortage ಆಗಿದ್ದಾರೆಂದು ಆಗ ನಮಗೆ ಗೊತ್ತಾಗುತ್ತದೆ. ಅದಕ್ಕಿಂತಲೂ ಮೊದಲು ಹತ್ತು ಪರ್ಸೆಂಟ್ ಶಿಕ್ಷಕರನ್ನು ಇಟ್ಟುಕೊಂಡು ತೊಂಭತ್ತು ಪರ್ಸೆಂಟ್ ಶಿಕ್ಷಕರನ್ನು ಪಟ್ಟಿ ಮಾಡಿ, ಆಗ ಮಕ್ಕಳ ಸಂಖ್ಯೆ ಯಾರಿಗೆ ಕಡಿಮೆಯಾಗುತ್ತದೆ. ಆಗ ಹತ್ತು ಪರ್ಸೆಂಟ್‌ನ್ನು ಅಲ್ಲಿ adjust ಮಾಡುವಂತಹ ಕೆಲಸವನ್ನು ಮಾಡಿ. ನೀವು rules ಮಾಡುವಾಗ ಸ್ವಲ್ಪ ನೋಡಿ ಅಧಿಕಾರಿಗಳ ಜೊತೆ ಚರ್ಚೆ ಮಾಡಿ. ಏಕೆಂದರೆ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ವರ್ಗಾವಣೆ ಮಾಡುತ್ತೀರಾ, ಜೂನ್ 31 ಕೊನೆ ದಿನಾಂಕ. ಜೂನ್ ತಿಂಗಳು 31 ರಲ್ಲಿ ನೂರೈವತ್ತು ಮಕ್ಕಳು ಅಡ್ಮಿಷನ್ ಇದ್ದಲ್ಲಿ, ಎರಡನೂರೈವತ್ತು ಮಕ್ಕಳು ಅಡ್ಮಿಷನ್‌ಗೆ ಬಂದರೆ, ಆಗ ಏನು ಮಾಡುತ್ತೀರಾ? Deputation ಮಾಡಬೇಕು ಮತ್ತೊಂದು ಮಾಡಬೇಕು. ಆಮೇಲೆ mutual transfer ತಂದಿದ್ದೀರಿ. Mutual transfer ಬಗ್ಗೆ ದಯಮಾಡಿ ಹೇಳುತ್ತೇನೆ. ಐವತ್ತು ವರ್ಷ ಮೇಲ್ಪಟ್ಟ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ mutual transfer ಕೊಡಿ. ಬೇರೆಯವರಿಗೆ mutual transfer ಏಕೆ ಕೊಡುತ್ತೀರಾ? ಶಿಕ್ಷಕನಾಗಿ ನೇಮಕಾತಿಯಾದಾಗ ಬಳ್ಳಾರಿ ಅಥವಾ ಮೈಸೂರಿಗೆ ಹೋಗುತ್ತಾನೆ, ಅವನು ಏನು ಮಾಡುತ್ತಾನೆಂದರೆ, ಮೂರು ವರ್ಷಗಳಾದ ಮೇಲೆ mutual transfer ಕೊಟ್ಟು ಹೋಗಿ ಬಿಡುತ್ತಾರೆ. ಆ ರೀತಿಯಾಗಬಾರದು. mutual transfer ಕೊಡುವಂತಹ ಪರಿಸ್ಥಿತಿ ಏಕೆ ಬೇಕು? ಇದರಿಂದ ಏನಾಗುತ್ತದೆಂದರೆ, ಇಲ್ಲಿ ಯಾರು ಏನಾದರೂ ಅಂದು ಕೊಳ್ಳಲಿ. ಸುಮಾರು ವರ್ಷಗಳಿಂದ ಶಿಕ್ಷಕರ ಕ್ಷೇತ್ರದಿಂದ ನಾನು ಪ್ರತಿನಿಧಿಯಾಗಿ ಬಂದಿದ್ದೇನೆ. ಹದಿನೈದು ರಿಂದ ಇಪ್ಪತ್ತು ವರ್ಷಗಳಲ್ಲಿದ್ದಂತಹ commitment ಇವತ್ತು ಶಿಕ್ಷಕರಿಗೂ ಮತ್ತು ನಮಗೂ ಇಲ್ಲ. ಇದು ಬಹಳ ನೋವಿನ ಸಂಗತಿಯಾಗಿದೆ. ಶಿಕ್ಷಕರು ಏಕೆ ಹೆಚ್ಚುವರಿಯಾಗುತ್ತಾರೆ, ಏತಕ್ಕೆ ಬೇರೆ ಬೇರೆ ಕಡೆ ಹೋಗುತ್ತಾರೆ ಎನ್ನುವುದು; ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಖ್ಯಮಂತ್ರಿಯಿದ್ದಾಗ, ಒಬ್ಬರು ತುಮಕೂರಿನಿಂದ ವರ್ಗಾವಣೆ ಸಲುವಾಗಿ ಅವರ ಬಳಿ ಬಂದು ನನ್ನ ಗಂಡನಿಗೆ dialysis ಆಗುತ್ತಿದೆ. ಪ್ರತಿವಾರ ಎರಡು ಬಾರಿ dialysis ಗೆ ಹೋಗಬೇಕು. ನಾನು ಪಾವಗಡದಲ್ಲಿದ್ದೇನೆ. ನನ್ನನ್ನು ವರ್ಗಾವಣೆ ಮಾಡಿಕೊಡಿ ಎಂದು ಕೇಳಿ ಕೊಂಡರು. ಆಗ ಮಾನ್ಯ ಹೆಚ್.ಡಿ. ಕುಮರಸ್ವಾಮಿಯವರು ತಕ್ಷಣವೇ ಅವರನ್ನು ವರ್ಗಾವಣೆ ಮಾಡಿದರು. ಆ ಸಮಯದಲ್ಲಿ ಆ ಹೆಣ್ಣು ಮಗಳ ಇಬ್ಬರು ಮಕ್ಕಳು ಅವರ ಜೊತೆ ಬಂದಿದ್ದರು. ಆಗ ಮಾನ್ಯ ಹೆಚ್.ಡಿ. ಕುಮರಸ್ವಾಮಿಯವರು ಆ ಮಕ್ಕಳಿಗೆ  ಏನು ಪುಟ್ಟ ಎಲ್ಲಿ ಓದುತ್ತಿದ್ದೀಯಾ ಎಂದು ಕೇಳಿದರು. ಮೊದಲನೇ ಹುಡುಗ ಏನು ಹೇಳಿದ ಎಂದರೆ St. Mary’s ಶಾಲೆಯಲ್ಲಿ ಓದುತ್ತಿದ್ದೇನೆ. ಹಾಗೇ ಇನ್ನೊಬ್ಬ ಹುಡುಗನಿಗೆ, ನೀನು ಎಲ್ಲಿ ಓದುತ್ತಿದ್ದೀಯಾ ಎಂದು ಕೇಳಿದಾಗ, ಆಗ ಹುಡುಗ ನಾನು ಸಹ St. Joseph’s ಶಾಲೆಯಲ್ಲಿ ಓದುತ್ತಿದ್ದೇನೆ ಎಂದು ಹೇಳಿದರು. ಆಗ ಮಾನ್ಯ ಮುಖ್ಯ ಮಂತ್ರಿಗಳು ಏನಮ್ಮಾ ನೀನು ಪ್ರಾಥಮಿಕ ಕನ್ನಡ ಶಾಲೆಯ ಶಿಕ್ಷಕಿಯಾಗಿದ್ದೀಯಾ. ನಿನ್ನ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮಕ್ಕೆ ಕಳುಹಿಸುತ್ತೀಯಾ ಎಂದು ಹೇಳಿ ಆಗ ತಕ್ಷಣವೇ ಆಕೆಯ ವರ್ಗಾವಣೆಯನ್ನು cancel ಮಾಡಿದರು. ನಿನ್ನನ್ನು ವರ್ಗಾವಣೆ ಮಾಡುವುದಿಲ್ಲ ಹೋಗು ಎಂದರು. ಬಹಳಷ್ಟು ಜನ ಒಳ್ಳೆಯ ಶಿಕ್ಷಕರಿದ್ದಾರೆ. ನಾನು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ದಿನದಿಂದ ದಿನಕ್ಕೆ percentage ಕಡಿಮೆಯಾಗುತ್ತಾ ಬರುತ್ತಿದೆ. ಈ ಹಿನ್ನೆಲೆಯಲ್ಲಿ ವರ್ಗಾವಣೆ ಏನು ತಂದಿದ್ದೀರಿ; ಆಯಿತು ನಾನು ನಿಮ್ಮಂತೆಯೇ ವಿಚಾರ ಮಾಡಿದ್ದೆ. ಒಬ್ಬ ಶಿಕ್ಷಕ ಮತ್ತು ಶಿಕ್ಷಕಿ ಕ್ಲಾಸ್ ರೂಮಿಗೆ ಹೋದಾಗ, ಮಾನಸಿಕವಾಗಿ ನೆಮ್ಮದಿಯಿಂದ ಪಾಠ ಮಾಡಬೇಕೆನ್ನುವಂತಹ ವಾತಾವರಣವನ್ನು ನಿರ್ಮಾಣ ಮಾಡಬೇಕು. ಶಿಕ್ಷಕರಿಗೆ ವರ್ಗಾವಣೆ, ಪ್ರಮೋಷನ್‌ಮಾಡಬೇಕು. ಈ ಹಿಂದೆ ಶಿಕ್ಷಣ ಮಂತ್ರಿಯಾಗಿದ್ದಂತಹ ಮಾನ್ಯಬಿ. ರಾಚಯ್ಯನವರು ಇದ್ದಾಗ, primary school teacher ಗೆ ಒಂದು promotion ಕೊಡಿ ಸಾರ್ ಎಂದು ಕೇಳಿದ್ದೆ. ಆದರೆ ಇಪ್ಪತ್ತು ವರ್ಷಗಳಾಗಿದ್ದರೂ ಮಾಡಿರಲಿಲ್ಲ. 2006 ರಲ್ಲಿ ನಾನು ಬಂದಾಗ, ಶಿಕ್ಷಕರು ಮಾನಸಿಕವಾಗಿ ಮತ್ತು ನೆಮ್ಮದಿಯಾಗಿ ಪಾಠ ಮಾಡಲಿ ಎಂಬ ಉದ್ದೇಶದಿಂದ ಸುಮಾರು 9800 ಮಂದಿಗೆ promotion ಕೊಟ್ಟಿದ್ದೇನೆ. ಶಿಕ್ಷಕರ ವರ್ಗಾವಣೆ ಮೊದಲಿನಂತೆ ಇದ್ದಂತೆ ಇತ್ತೀಚೆಗೆ ಇಲ್ಲ. ಇದರಲ್ಲಿ ಏನು ತಪ್ಪಾಗಿದೆ ಎಂದರೆ, ಯಾವ ಶಿಕ್ಷಕರು ಅವರ ಜಿಲ್ಲೆಯ ಸಮೀಪದಲ್ಲಿ ಹಾಕಿದರೆ ಬರುವುದಿಲ್ಲ. ಈಗ ಮೈಸೂರಿನಿಂದ ಬೀದರ್‌ಗೆ ಹೋಗುವುದು.  ಬೀದರ್‌ನಿಂದ ಮಂಗಳೂರಿಗೆ ಹೋಗುವುದು. ವಿಜಯಪುರದಿಂದ ಚಿಕ್ಕಮಗಳೂರಿಗೆ ಹೋಗುವುದು. ವಿಜಯಪುರದಮೂವತ್ತೊಂದು ಜನ teachers ಚಿಕ್ಕಮಗಳೂರಿನಲ್ಲಿದ್ದರು. Teachers ಎಲ್ಲರೂ ಬಂದು ನನ್ನ ಬಳಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕುಳಿತುಕೊಂಡರು. ಮೂವತ್ತೊಂದು ಜನ teachers ಗೆ ಇಲ್ಲಿಗೆ ಏಕೆ ಬಂದಿದ್ದೀರಿ ಎಂದು ನಾನು ಕೇಳಿದೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ ಅಲ್ಲಿದ್ದಂತಹ ಶಿಕ್ಷಕರ ಬಾಯಿಗೆ ಮಣ್ಣು ಹಾಕುತ್ತಾರೆ. ಇವರು ನೇಮಕಾತಿಯಾಗಿ ಇಲ್ಲಿಗೆ ಬರುತ್ತಾರೆ ಮುಂದೆ ಅಲ್ಲಿ ನೇಮಕಾತಿಯಾಗುವುದಿಲ್ಲ. ಈ ತರಹ ಸಮಸ್ಯೆಯಾಗುತ್ತದೆ. ಇದಕ್ಕೆ rules ಮಾಡಿ, ದಯವಿಟ್ಟು ನಾನು ಹೇಳುವುದೇನೆಂದರೆ, ಒಂದ ಸಾರಿಯಲ್ಲ ಹತ್ತು ಸಾರಿ ಚರ್ಚೆ ಮಾಡಿ. ನಿಯಮಗಳನ್ನು ಮಾಡುವುದು ಸೂಕ್ತವೆಂದು ನನಗೆ ಅನಿಸಿದೆ. ಇದರಲ್ಲಿ ಬಹಳವಾಗಿ ಹೇಳಿದ್ದೀರಿ. ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದೆ. ಕಡ್ಡಾಯವಾಗಿ ನಿಯಮ ಮೂರು ವರ್ಷಕ್ಕೆ ಏನು apply ಮಾಡುವುದಕ್ಕೆ ಮಾಡುತ್ತೀರಿ. ಆದರೆ ಗರಿಷ್ಠ ಒಂದೇ ಶಾಲೆಯಲ್ಲಿ ಎಷ್ಟು ವರ್ಷ ಇರಬೇಕು ಎನ್ನುವುದು ಸಹ ತಿಳಿಸಬೇಕೆಂಬುದು ನನ್ನ ಸಲಹೆ. ತಾವು ವಿಚಾರ ಮಾಡಿ ನೋಡಿದರೆ, ಅದು ಸರಿಯಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ನಾನು ಹೇಳುವುದೇನೆಂದರೆ, ಒಟ್ಟಾರೆ ಒಳ್ಳೆಯ ವಿಧೇಯಕವನ್ನು ತಂದಿದ್ದೀರಿ. ಇದನ್ನು ನಾನು ಬಹಳ ಗೌರವದಿಂದ ಸ್ವಾಗತ ಮಾಡುತ್ತೇನೆ. ಏಕೆಂದರೆ,ನಿಯಮ ಮಾಡುವಾಗ, ಯಾವ ಮಂತ್ರಿಗೆ concern ಇರುತ್ತದೆ ಅದು ಆಗುತ್ತದೆ. ಕಡ್ಡಾಯ ವರ್ಗಾವಣೆ ಮಾಡುವಾಗ, ಬಹಳಷ್ಟು ಸಲ ಸದನದಲ್ಲಿ ಹೇಳಿದ್ದೇವೆ. ಅದನ್ನು ಕೇಳಲಿಲ್ಲ. ಆ ವರ್ಗಾವಣೆಯಾಗಬೇಕಾದರೆ 13ನೇ ಏಪ್ರಿಲ್ 2007ರ ರಾತ್ರಿ ಎರಡು ಗಂಟೆಗೆ ಆ ವಿಧೇಯಕ pass ಆಗಿತ್ತು. ಮರು ದಿನ ಡಾ॥ ಬಿ.ಆರ್ ಅಂಬೇಡ್ಕರ್‌ರವರ ಜಯಂತಿ ಇತ್ತು. ಈ ವಿಧೇಯಕದ ಮೇಲೆ ಇಡೀ ರಾತ್ರಿ ಚರ್ಚೆಯಾಗಿ, ವಿಧೇಯಕ pass ಆಗಿತ್ತು.

(ಮುಂದು...)

(540) 18.03.2020 5.50 ಟಿಸಿಹೆಚ್-ಬಿಎನ್‌ಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು)**

ಒಳ್ಳೆಯ ಬಿಲ್ ಇತ್ತು, ಅದು ತಿದ್ದುಪಡಿ ಏಕೆ ಆಗುತ್ತದೋ ಗೊತ್ತಿಲ್ಲ. ಅದು ತಿದ್ದುಪಡಿ ಆಗಬಾರದಿತ್ತು. ನಾವು ಅಖಿಲ ಭಾರತ ಶಿಕ್ಷಕರ ಸಮ್ಮೇಳನಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾವು ಹೋಗಿದ್ದೆವು. ಒಂಭತ್ತು ರಾಜ್ಯದವರು ಇದನ್ನು appreciate ಮಾಡಿದ್ದರು. ಇದರ ಬಗ್ಗೆ ನಮ್ಮನ್ನು ಕೇಳುತ್ತಿದ್ದರು. ಅಷ್ಟು appreciation ಏಕೆ ಬಂತು ಎಂದರೆ, ನಮ್ಮ ರಾಜ್ಯದಲ್ಲಿ ಶಿಕ್ಷಕರ ಸಂಖ್ಯೆ ಸಾಕಷ್ಟಿದೆ. ನೇಮಕಾತಿ ನಿಯಮ ಮಾಡಿರತಕ್ಕಂಥದ್ದರಲ್ಲಿ 2 ವರ್ಷಕ್ಕೆ ಎಂದು ಇರುವುದರಿಂದ, ಎಲ್ಲಾ ಕಡೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭ್ರಷ್ಟಾಚಾರ ಆಗಿ, ಶಿಕ್ಷಣದ ಮಟ್ಟ ಕಡಿಮೆ ಆಗುತ್ತದೇನೊ ಎನ್ನುವಂತಹ ದೃಷ್ಟಿಯಿಂದ ಈ ಬಿಲ್ ಅನ್ನು ತರುವಂಥದ್ದು ಅವೊತ್ತಿನ ಸರ್ಕಾರಕ್ಕೆ ಬಂತು. ಹಾಗಾಗಿ, ತಾವು ಈ ಬಿಲ್‌ನ್ನು ತಂದಿದ್ದೀರಿ. ಎರಡು ಬಾರಿ ಬಿಲ್ ತಿದ್ದುಪಡಿಯಾದರೂ ಕೂಡ ನನಗೆ ಇಲ್ಲಿಯವರೆಗೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಸಿಕ್ಕಿರಲಿಲ್ಲ. ಶಿಕ್ಷಕರಿಗೆ ಸಂಬಂಧಪಟ್ಟ ಈ ಬಿಲ್ ತಂದಿದ್ದು, ಮಕ್ಕಳ ಹಿತದೃಷ್ಟಿಯಿಂದ ಈ ಬಿಲ್‌ನ್ನು ಪಾಸ್ ಮಾಡಬೇಕಾಗಿರುತ್ತದೆ. ಅದಕ್ಕಾಗಿ ನೋಡಿ, ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಒಟ್ಟಾರೆಯಾಗಿ, ಒಂದು ಉತ್ತಮವಾದಂತಹ ಒಂದು ಬಿಲ್‌ನ್ನು ಮಂಡಿಸುವುದಕ್ಕೆ ತಂದಿದ್ದಾರೆ, ಈ ಬಿಲ್‌ನ್ನು ನಾನು ಸ್ವಾಗತ ಮಾಡುತ್ತೇನೆ.

(ಈ ಹಂತದಲ್ಲಿ ಆಡಳಿತ ಪಕ್ಷದವರು ಮೇಜು ಕುಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರ ಬಿಲ್ ರೂಪದಲ್ಲಿ ಇದನ್ನು ಮಂಡನೆ ಮಾಡಿದೆ. ನಾನು ಹೇಳುವುದೇನೆಂದರೆ, ಇವತ್ತಿನ ದಿವಸ ಶಿಕ್ಷಣ ಇಲಾಖೆಯಲ್ಲಿ ಅತಿ ಹೆಚ್ಚು ಸರ್ಕಾರಿ ನೌಕರರುಗಳು ಇದ್ದಾರೆ. ಶಿಕ್ಷಣವನ್ನು ಎಲ್ಲರಿಗೂ ಒದಗಿಸಬೇಕೆಂಬ ಉದ್ದೇಶದಿಂದ 400 ಜನಸಂಖ್ಯೆ ಯಾವ ಹಳ್ಳಿಗಳಲ್ಲಿ ಇರುತ್ತದೋ ಅಂತಹ ಕಡೆಗಳಲ್ಲಿ ಒಂದು ಸರ್ಕಾರಿ ಶಾಲೆಯನ್ನು ಪ್ರಾರಂಭ ಮಾಡಲಾಗಿದೆ. ಸರ್ಕಾರ ಶಿಕ್ಷಕರಿಗೆ ಇಷ್ಟೆಲ್ಲಾ ರಕ್ಷಣೆಯನ್ನು ಕೊಟ್ಟಿದೆ. ಆದರೆ ಶಿಕ್ಷಕರುಗಳು ಅವರವರ ಶಾಲೆಗಳಲ್ಲಿ ಮಕ್ಕಳ ಪರೀಕ್ಷಾ ಫಲಿತಾಂಶ ಯಾವ ರೀತಿ ಬರುತ್ತಿದೆ. ಶಿಕ್ಷಣ ಯಾವ ರೀತಿ ಕೊಡುತ್ತಿದ್ದಾರೆ ಇದಕ್ಕೊಂದು ಕಡ್ಡಾಯವಾಗಿ ಏನಾದರೂ ಒಂದು rider ಹಾಕಬೇಕು. ಅವರಿಗೆ rider ಇಲ್ಲ. ನಾನು ಕೂಡ ಗ್ರಾಮೀಣ ಭಾಗದ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿರುತ್ತೇನೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಹೇಳಿದಂತೆ, ಹಳ್ಳಿಗಳಿಗೆ ಹೋದರೆ ನಮ್ಮ ಶಾಲೆಗಳಿಗೆ ಶಿಕ್ಷಕರು ಇಲ್ಲ. ನಾವು ಆ ಶಿಕ್ಷಕರು ಎಲ್ಲಿಗೆ ಹೋಗಿದ್ದಾರೆಂದು ಬಿ.ಇ.ಓ. ಮತ್ತು ಡಿ.ಡಿ.ಪಿ.ಐ. ಯವರಿಗೆ ದೂರವಾಣಿ ಮೂಲಕ ಕೇಳಿದರೆ, ಅವರು ನಿಯೋಜನೆ ಮೇರೆಗೆ ಹೋಗಿದ್ದಾರೆಂದು ಹೇಳುತ್ತಾರೆ. ಆದರೆ ಅವರನ್ನು ನಿಯೋಜನೆ ಮಾಡುವುದು ನಿಮ್ಮ ಅಕೌಂಟ್‌ನಲ್ಲಿ ಎಲ್ಲೂ ಸಿಗುವುದಿಲ್ಲ. ಅಲ್ಲಿ ಮಾತ್ರ ಶಿಕ್ಷಕರು ಇರುವುದಿಲ್ಲ. ರಿಮೋಟ್ ಏರಿಯಾದಲ್ಲಿ ಒಂದು ಶಾಲೆಯ ಜೊತೆಗೆ ಆಶ್ರಯ ಮನೆಗಳ ರೀತಿ ಎರಡು-ಮೂರು ವಸತಿ ಗೃಹಗಳನ್ನು ಕಟ್ಟಿಕೊಟ್ಟರೆ ಚೆನ್ನಾಗಿರುತ್ತದೆ. ವಸತಿ ಗೃಹಗಳನ್ನು ಆ ಶಾಲೆಯ ಪಕ್ಕದಲ್ಲಿಯೇ ಕಟ್ಟಿಕೊಟ್ಟರೆ ಆ ಶಿಕ್ಷಕ ಅಲ್ಲೇ ವಾಸವಾಗಿರುತ್ತಾನೆ. ಆ ಶಿಕ್ಷಕ ಸೋಮವಾರದಿಂದ ಶುಕ್ರವಾರದವರೆಗೆ ಅಲ್ಲಿಯೇ ಇರುವಂತೆ ಒಂದು Dormitory ರೀತಿ ಮಾಡಬೇಕು. ಕಡ್ಡಾಯವಾಗಿ. .

**ಸಭಾಪತಿಯವರು:-** ಏನು ಆಶ್ರಯ ಮನೆಗಳ ಬಗ್ಗೆ ಹೇಳುತ್ತಿದ್ದೀರಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ನಾನು ಒಂದೆರಡು ಸಲಹೆಗಳನ್ನು ಕೊಡುತ್ತಿದ್ದೇನೆ. ಅಂದರೆ, ಆಶ್ರಯ ಮನೆಗಳನ್ನು ಕಟ್ಟಿಕೊಟ್ಟರೆಶಿಕ್ಷಕರು ಅಲ್ಲಿಯೇ ಇದ್ದು ಮಕ್ಕಳಿಗೆ ಓದು ಬರಹ ಕಲಿಸುತ್ತಾರೆ. ಅಂದರೆ, ಎರಡು ಬೆಡ್ ರೂಂಗಳು ಇರುವಂತಹ ಮನೆಗಳನ್ನು ಸರ್ಕಾರ ಕಟ್ಟಿಕೊಟ್ಟರೆ ಆ ರಿಮೋಟ್ ಏರಿಯಾದಲ್ಲಿಯೆ ಅವರು ಇರುತ್ತಾರೆ. ನಾವೆಲ್ಲರೂ ನೋಡುತ್ತಿದ್ದೇವೆ, ಒಂದು ಹಳ್ಳಿಗೆ ಮಧ್ಯಾಹ್ನ ಒಂದು ಗಂಟೆಗೆ ಬಸ್ ಬರುತ್ತದೆ. ಆದರೆ ಶಿಕ್ಷಕರು ಶಾಲೆಯಲ್ಲಿ 3 ಗಂಟೆಯವರೆಗೆ ಇರಬೇಕಾಗುತ್ತದೆ. ಆ ಹಳ್ಳಿಗೆ ಬಸ್ ಮಧ್ಯಾಹ್ನ ಒಂದು ಗಂಟೆಗೆ ಬರುವುದರಿಂದ ಅವರು 1 ಗಂಟೆಗೆ ಬಂದು ನಿಂತುಬಿಡುತ್ತಾರೆ. ಆ ಶಾಲೆ ಬಿಟ್ಟು ಹೊರಟುಬಿಡುತ್ತಾರೆ. ಈ ರೀತಿಯಾದರೆ, ಆ ವಿದ್ಯಾರ್ಥಿಗಳ ಗತಿಯೇನು? ಅದಕ್ಕೆ ಅವರ ಜವಾಬ್ದಾರಿಯನ್ನು ಕೂಡ ತೋರಿಸಬೇಕು. ಸರ್ಕಾರ ಇಷ್ಟೆಲ್ಲಾ ರಕ್ಷಣೆ ಕೊಡುತ್ತಿದೆ, ಇದನ್ನು ಕೂಡ study ಮಾಡಿ, ಅವರಿಗೆ ವಸತಿ ಗೃಹ ಕಟ್ಟಿಕೊಟ್ಟರೆ ಅನುಕೂಲವಾಗುತ್ತದೆ. ಏಕೆಂದರೆ, ನಾವು competitive world ನಲ್ಲಿ ಇದ್ದೇವೆ. ಖಾಸಗಿ ಶಾಲೆಗಳಲ್ಲಿ ಯಾವ ರೀತಿ ಮಾಡುತ್ತಾರೆಂದು ನೀವು study ಮಾಡಿದ್ದೀರಾ, ಇಲ್ಲ. ಖಾಸಗಿ ಶಾಲೆಗಳಲ್ಲಿ ಅವರೇನಾದರೂ ಕೆಲಸ ಮಾಡದಿದ್ದರೆ, hire and fire ಮಾಡಿಬಿಡುತ್ತಾರೆ. ಸರ್ಕಾರಿ ಶಾಲೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಖಾಸಗಿ ಶಾಲೆಗಳಿವೆ. ಅವರು ಕೂಡ ಶಾಲೆಗಳಲ್ಲಿ ಮಕ್ಕಳಿಗೆ ಓದು-ಬರಹ ಕಲಿಸುತ್ತಿದ್ದಾರೆ. ಆದಕಾರಣ, ಅವರು ವಾಸವಾಗಿರುವುದಕ್ಕೆ ವಸತಿ ಗೃಹ ಕಟ್ಟಿಕೊಡುವುದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಿಕ್ಷಣ ಸಚಿವರು ಇವತ್ತಿನ ದಿವಸ ಶಿಕ್ಷಕರ ವರ್ಗಾವಣೆ ನಿಯಂತ್ರಣ ವಿಧೇಯಕವನ್ನು ಮಂಡಿಸಿದ್ದಾರೆ, ಇದರಲ್ಲಿ ಬಹಳಷ್ಟು ವಿಷಯಗಳು ಶಿಕ್ಷಕರ ಪರವಾಗಿ ಇರತಕ್ಕಂಥ ಅಂಶಗಳನ್ನು ಈ ವಿಧೇಯಕ ಒಳಗೊಂಡಿರುವುದರಿಂದ, ಯಾವುವು ಶಿಕ್ಷಕರ ಪರವಾಗಿವೆಯೆಂದು ಈಗಾಗಲೇ ಹಿರಿಯ ಸದಸ್ಯರು ಹೇಳಿದ್ದಾರೆ. ಅದನ್ನು ನಾನು ಮತ್ತೆ ರಿಪೀಟ್ ಮಾಡುವುದಿಲ್ಲ. ಇದು ಶಿಕ್ಷಕರ ಸ್ನೇಹಿ ವರ್ಗಾವಣೆ ವಿಧೇಯಕವಾಗಿರುವುದರಿಂದ ಈ ಬಿಲ್‌ನ್ನು ನಾನು ಸ್ವಾಗತಿಸುತ್ತೇನೆ. ನಾನು ಎರಡು ಸಲಹೆಗಳನ್ನು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ನನ್ನ ಸ್ನೇಹಿತರಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ಪ್ರಸ್ತಾಪ ಮಾಡಿದ್ದಾರೆ, ಇದರಲ್ಲಿ ಗರ್ಭಿಣಿ ಶಿಕ್ಷಕಿಯರಿಗೆ ರಿಯಾಯಿತಿ ಕೊಟ್ಟಿದ್ದಾರೆ. 50 ವರ್ಷ ಮೀರಿದ ಮಹಿಳಾ ಶಿಕ್ಷಕಿಯರಿಗೆ ಹಾಗೂ 55 ವರ್ಷ ಮೀರಿದ ಪುರುಷ ಶಿಕ್ಷಕರಿಗೆ ರಿಯಾಯಿತಿ ಕೊಟ್ಟಿದ್ದಾರೆ, ಅದೇ ರೀತಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರನ್ನು ಕೂಡ exemption ನಲ್ಲಿ ಸೇರಿಸಬೇಕೆಂದು ನಾನು ವಿನಂತಿಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದೇನೆ. ಎರಡನೆಯದಾಗಿ, ಸೇವಾವಧಿಯಲ್ಲಿ ಒಂದೇ ಒಂದು ಬಾರಿ mutual transfer ಅನ್ನು ಮಾಡಬಹುದೆಂದು ಹೇಳಲಾಗಿದೆ. 60 ವರ್ಷದ ಸೇವಾ ಅವಧಿಯಲ್ಲಿ ಒಂದೇ ಒಂದು ಬಾರಿ mutual transfer ಮಾಡಿಕೊಳ್ಳಬೇಕು ಎನ್ನುವುದು ತಪ್ಪಾಗುತ್ತದೆ. ಇದು ಸರಿಯಾಗುವುದಿಲ್ಲ. ಆದ್ದರಿಂದ ದಯವಿಟ್ಟು ಸೇವಾ ಅವಧಿಯಲ್ಲಿ ಎರಡು ಬಾರಿ ಅಥವಾ ಮೂರು ಬಾರಿ mutual transfer ಮಾಡಬೇಕು ಎನ್ನತಕ್ಕಂಥ ಸಲಹೆಯನ್ನು ಕೊಟ್ಟು ಮತ್ತೊಮ್ಮೆ ಈ ಬಿಲ್‌ನ್ನು ಸ್ವಾಗತಿಸುತ್ತಿದ್ದೇನೆ.

**ಶ್ರೀ ಎಂ.ನಾರಾಯಣ ಸ್ವಾಮಿ(ವಿರೋಧ ಪಕ್ಷದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ಸರ್ಕಾರ ಸದನದಲ್ಲಿ ಶಿಕ್ಷರ ವರ್ಗಾವಣೆ ನಿಯಂತ್ರಣ ವಿಧೇಯಕ, 2020 ನ್ನು ಮಂಡಿಸುತ್ತಿದೆ. ಇದು ನಿಜವಾಗಲೂ ಕೂಡ ಶಿಕ್ಷಕರಿಗೆ ಅನುಕೂಲವಾಗುವಂತಹ ವಿಧೇಯಕವಾಗಿದೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ವಿಧೇಯಕದ ಪುಟ ಸಂಖ್ಯೆ.5ರಲ್ಲಿ ಕೊನೆಯ ಕಾಲಂ ನಲ್ಲಿ ಇರತಕ್ಕಂಥ; "(v)ನೇ ಪ್ರವರ್ಗದ ಅಡಿಯಲ್ಲಿ ಬರುವ ಶಿಕ್ಷಕರಿಗೆ ಕೋರಿಕೆ ವರ್ಗಾವಣೆಯ ಅವಧಿಯಲ್ಲಿ ಪ್ರಾಶಸ್ತ್ಯವನ್ನು ನೀಡತಕ್ಕದ್ದು. ಶಿಕ್ಷಕನು, ಆತನ ಪತ್ನಿ ಅಥವಾ ಆಕೆಯ ಪತಿಯು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಲ್ಲದೆ ಬೇರೆ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ, ಆತನ ಪತ್ನಿ ಅಥವಾ ಆಕೆಯ ಪತಿಯು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಿಗೆ ಮಾತ್ರವೇ ವರ್ಗಾವಣೆಯನ್ನು ಕೋರುವುದಕ್ಕೆ ಅನುಮತಿಸಬಹುದು." ಎಂದು ಹೇಳಲಾಗಿದೆ. ಇನ್ನು ಸರ್ಕಾರಿ ನೌಕರರು, ಗಂಡ ಮತ್ತು ಹೆಂಡತಿ ಇಬ್ಬರೂ ಕೂಡ ಸರ್ಕಾರಿ ನೌಕರರಾಗಿದ್ದಾಗ, ಆ ತಾಲ್ಲೂಕಿಗೆ ಅವರು ವರ್ಗಾವಣೆ ಕೇಳತಕ್ಕಂಥದ್ದು ಎಂದು ಹೇಳಲಾಗಿದೆ. ಆದರೆ, ನಾನು ಆ ಶಿಕ್ಷಕರ ಕ್ಷೇತ್ರದಿಂದ ಬರದೇ ಇದ್ದರೂ ಕೂಡ, ಬೆಂಗಳೂರಿನಲ್ಲಿ ಹಲವಾರು ಶಿಕ್ಷಕರುಗಳು ನನ್ನ ಬಳಿ ಬಂದು ಮಾತನಾಡಿದಾಗ ಆಗಿರತಕ್ಕಂಥದ್ದು. ಅದು ತಪ್ಪಾಗಿದ್ದರೆ, ಅದನ್ನೂ ಕೂಡ ಸರಿಪಡಿಸಬಹುದು. ಸರ್ಕಾರ ರಿಯಾಯಿತಿಯನ್ನು ಘೋಷಣೆ ಮಾಡಿದೆ. ಗರ್ಭಿಣಿ ಹೆಂಗಸರು, ಗಂಭೀರವಾದ ಕಾಯಿಲೆ, ಯೋಧರ ಪತ್ನಿಯಾಗಿದ್ದವರು ಅಥವಾ 50 ವರ್ಷ ಮೇಲ್ಪಟ್ಟಿರತಕ್ಕಂಥ ಮಹಿಳಾ ಶಿಕ್ಷಕರು, ಇದರ ಜೊತೆಗೆ ಶಿಕ್ಷಕರ ಸಂಘ, ತಾಲ್ಲೂಕು ಶಿಕ್ಷಕರ ಸಂಘ, ಜಿಲ್ಲಾ ಮಟ್ಟದ ಶಿಕ್ಷಕರ ಸಂಘ, ರಾಜ್ಯ ಮಟ್ಟದ ಶಿಕ್ಷಕರ ಸಂಘಕ್ಕೆ ರಿಯಾಯಿತಿ ನೀಡಲಾಗಿದೆ. ಈ ಎಲ್ಲಾ ರಿಯಾಯಿತಿಯನ್ನು ನೋಡಿದಾಗ ಸುಮಾರು 80-85ರಷ್ಟು ರಿಯಾಯಿತಿ ಆಗಿಬಿಡುತ್ತದೆ. ಇನ್ನು ಬರೀ ಶೇ.15 ರಷ್ಟು ಮಾತ್ರ ಉಳಿಯುತ್ತದೆ. ಸರ್ಕಾರಿ ನೌಕರರಿಗೆ ಗಂಡ ಯಾವ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿರುತ್ತಾರೊ ಅಲ್ಲಿಗೆ ಆತನ ಹೆಂಡತಿ ಕೂಡ ವರ್ಗಾವಣೆ ಕೇಳುತ್ತಾರೆ. ಇಬ್ಬರಿಗೂ ಕೂಡ ಸರ್ಕಾರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

House Rent Allowance ಕೊಡುತ್ತದೆ. ಅವರಿಬ್ಬರೂ ಒಂದೇ ಮನೆಯಲ್ಲಿ ವಾಸ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ. ಆದರೆ ಒಬ್ಬರು ಶಿಕ್ಷಕಿ ಖಾಸಗಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕಂಥವರನ್ನು ವಿವಾಹವಾಗಿದ್ದರೆ, ಆ ಶಿಕ್ಷಕಿಯ ಗಂಡ ರೈತನಾಗಿದ್ದರೆ, ಆಕೆಯ ಗಂಡ ಕೂಲಿ ಮಾಡುತ್ತಿದ್ದರೆ, ಆಕೆ ಏನು ಪಾಪ ಮಾಡಿದ್ದಾಳೆ. ನಿಮ್ಮ ರಿಯಾಯಿತಿಯಲ್ಲಿ ಕೇವಲ ಶೇ.80-85 ರಿಯಾಯಿತಿಯಲ್ಲಿಯೇ ಹೋಗಿಬಿಟ್ಟರೆ, ಇನ್ನು ಶೇ.15 ರಷ್ಟು ಶಿಕ್ಷಕರು ಏನು ಪಾಪ ಮಾಡಿದ್ದಾರೆ? ಇದನ್ನು ಪರಿಗಣಿಸುವುದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯಬೇಕೆಂದು ಮಾನ್ಯ ಸಚಿವರಲ್ಲಿ ನಾನು ಕೇಳುತ್ತಿದ್ದೇನೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಶಿಕ್ಷಣ ಸಚಿವರು ಏನು ವರ್ಗಾವಣೆ ಬಿಲ್‌ನ್ನು ತಂದಿದ್ದಾರೆ, ನಿಜವಾಗಲೂ ಕೂಡ ಈ ಬಿಲ್ ಮಂಡನೆ ಮಾಡಿದ್ದಕ್ಕೆ ನಾನು ಅವರಿಗೆ ಸ್ವಾಗತವನ್ನು ಬಯಸುತ್ತಿದ್ದೇನೆ. ಆದರೆ ನಾನು ಈ ಸದನದಲ್ಲಿ ನೋಡಿದಂತೆ, ಯಾವುದೇ ಬಿಲ್ ಪಾಸ್ ಆಗಬೇಕಾದರೆ ಗದ್ದಲ, ಗಲಾಟೆಯಿಂದ ಪಾಸ್ ಆಗುತ್ತದೆ. ಆದರೆ ಈ ಬಿಲ್ ಮೇಲಿನ ಚರ್ಚೆ ಎಷ್ಟು ಸುಸೂತ್ರವಾಗಿ ನಡೆಯುತ್ತಿದೆಯೆಂದರೆ, ಮಾನ್ಯ ಭೋಜೇಗೌಡರವರು ಹೇಳಿದಂತೆ, ಅವರು ಒಬ್ಬ ಶಿಕ್ಷಕರ ಮಗನಾಗಿ ಶಿಕ್ಷಕರ ಮೇಲೆ ಇರತಕ್ಕಂಥ ಪ್ರೀತಿಯಿಂದ ಅದನ್ನು ಆಳವಾಗಿ ಅಧ್ಯಯನ ಮಾಡಿ ಅದಕ್ಕೆ ತಕ್ಕಂತೆ ಪೂರಕವಾಗಿ ಶಿಕ್ಷಣ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳು ಕೂಡ ಇದಕ್ಕೆ ಸ್ಪಂದನೆ ಕೊಟ್ಟು, ಮೊದಲನೆಯ ಬಾರಿಗೆ ಅವರು ಸಚಿವರಾದಂತಹ ಸಂದರ್ಭದಲ್ಲಿ ನಮ್ಮ ಶಿಕ್ಷಕರ ಕ್ಷೇತ್ರದಿಂದ ಹಾಗೂ ಪದವೀಧರರ ಕ್ಷೇತ್ರದಿಂದ ಆಯ್ಕೆಯಾಗಿರತಕ್ಕಂಥ ಎಲ್ಲಾ ವಿಧಾನ ಪರಿಷತ್ತಿನ ಸದಸ್ಯರನ್ನು ಕರೆದು ಈ ಒಂದು ಕಡ್ಡಾಯ ಶಿಕ್ಷಣ ಇರಬಹುದು, ಬೇರೆ ಬೇರೆ ವರ್ಗಾವಣೆಗಳಲ್ಲಿ ಇರತಕ್ಕಂಥ ನ್ಯೂನತೆಗಳನ್ನು ಯಾವ ರೀತಿ ಸರಿಪಡಿಸಿಕೊಳ್ಳಬೇಕೆಂದು ಮಾಜಿ ಶಿಕ್ಷಣ ಸಚಿವರಾದಂತಹ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ನೇತೃತ್ವದಲ್ಲಿ ಎಲ್ಲರ ಸಲಹೆಗಳನ್ನು ಪಡೆದುಕೊಂಡು ಇವತ್ತಿನ ದಿವಸ ಈ ಬಿಲ್ ಅನ್ನು ತಂದಿದ್ದಾರೆ. ಈ ಬಿಲ್ ಕಾನೂನಾತ್ಮಕವಾಗಿ ಬರಬೇಕಾದರೆ, ಇಲ್ಲಿ ಚರ್ಚೆಯಾಗುತ್ತಿದೆ. ಈ ಚರ್ಚೆ ಮಾಡುವುದಕ್ಕಿಂತ ಮುಂಚೆಯೇ ನಮ್ಮನ್ನು ಕರೆಸಿದ್ದರು. ಎಲ್ಲಾ ಚರ್ಚೆ ಮುಗಿದಿದೆ. ಆ ಕಾನೂನಾತ್ಮಕವಾಗಿ ಬರುವುದಕ್ಕೆ ಮಾತ್ರ ಇವತ್ತಿನ ದಿವಸ ಚರ್ಚೆ ನಡೆಯುತ್ತಿದೆ. ನಿಜವಾಗಲೂ ಕೂಡ ಈ ಬಿಲ್‌ನ್ನು ತಂದಿರತಕ್ಕಂಥ ಮಾನ್ಯ ಸಚಿವರಿಗೆ, ಅದಕ್ಕೆ ಸಲಹೆಗಳನ್ನು ಕೊಟ್ಟಿರತಕ್ಕಂಥ ಅವರ ಅಧಿಕಾರಿ ವರ್ಗಕ್ಕೂ ಕೂಡ ಅಭಿನಂದನೆಗಳನ್ನು ಹೇಳುತ್ತಿದ್ದೇನೆ. ನಾನು ಈ ಬಿಲ್‌ಗೆ ಸ್ವಾಗತವನ್ನು ಬಯಸಿ, ಈ ಬಿಲ್‌ನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನಾನು ಪ್ರಪ್ರಥಮವಾಗಿ ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಲ್ಲಿಸುತ್ತೇನೆ. ಸುರೇಶ್ ಕುಮಾರ್ ರವರು ಎಂದರೆ, ಎಸ್.ಸುರೇಶ್‌ಕುಮಾರ್ ಬರೆದುಕೊಂಡಾಗ, 'ಸೂಕ್ಷ್ಮ ಸಂವೇದಿ ಸುರೇಶ್‌ಕುಮಾರ್, ಎಂದು ಕರ್ನಾಟಕ ರಾಜ್ಯದಲ್ಲಿ ಹೆಸರುವಾಸಿಯಾಗಿದ್ದಾರೆ. ವಿಶೇಷವಾಗಿ ಶಿಕ್ಷಕರಿಂದ ಹೇಳಿಸಬೇಕು ಎಂದರೆ, ಇವರ ಬಗ್ಗೆ ಶಿಕ್ಷಕರಿಗೆ ಸಾಕಷ್ಟು ಅಭಿಪ್ರಾಯ ಬಂದಿದೆ.

(ಮುಂದು...)

**(541)18.3.2020/6.00/ಎಂ.ಎಂ–ಬಿ.ಎನ್.ಎಸ್**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಅರುಣ ಶಹಾಪುರ (ಮುಂದು):–**

ಈ ಬಿಲ್‌ನ ಪ್ರತಿಯನ್ನು ಸುಮಾರು 3–4 ದಿನಗಳ ಹಿಂದೆ ವಿಧಾನಸಭೆಯ ಪ್ರತಿ ಎಂದು ಕೊಟ್ಟಿದ್ದರು. ನಾನು ಕೊಠಡಿಯಲ್ಲಿ ಕುಳಿತುಕೊಂಡಿದ್ದಾಗ ಈ ಬಿಲ್‌ನ್ನು ನೋಡಿರುವಂತಹ ಒಬ್ಬ ವ್ಯಕ್ತಿ ಪರವಾಗಿಲ್ಲರೀ, ಮೇಲ್ನೋಟದಲ್ಲಿಯೇ ಬದಲಾವಣೆ ಕಾಣಿಸುತ್ತಿದೆ ಎಂದು ಹೇಳಿದರು. ಇಲ್ಲಿ ಮರು–ನಿಯೋಜನೆ ಎನ್ನುವುದರ ಜೊತೆಗೆ ಶಿಷ್ಯ–ಶಿಕ್ಷಕನ ಎನ್ನುವ ಶಬ್ಧವನ್ನು ಪ್ರಥಮ ಬಾರಿಗೆ ಬಳಸಿದ್ದಾರೆ. ವಿದ್ಯಾರ್ಥಿ, ಮಗು, ಶಿಕ್ಷಕ ಹೀಗೆಲ್ಲಾ ಇರುತ್ತಿತ್ತು. ಶಿಷ್ಯ–ಶಿಕ್ಷಕರ ಅನುಪಾತ ಎನ್ನುವಂತಹ ಶಬ್ಧವನ್ನು ಉಪಯೋಗಿಸಿದ್ದಾರೆ ಎಂದರೆ, ಈ ಬಿಲ್ ಮೇಲ್ನೋಟಕ್ಕೆ ಒಂದು ಸಂದೇಶವನ್ನು ಕೊಡುತ್ತಿದೆ ಎಂಬ ಮಾತನ್ನು ನನಗೊಬ್ಬರು ಹೇಳಿದರು. ಮಾನ್ಯ ಎಸ್. ಸುರೇಶ್ ಕುಮಾರ್‌ರವರು ಇದನ್ನು ತರಬೇಕಾದರೆ, ಸಹೃದಯತೆಯನ್ನು ಇಟ್ಟುಕೊಂಡು ಕಳಕಳಿಯಿಂದ ಈ ಬಿಲ್‌ನ್ನು ತರುವಂತಹ ಕೆಲಸ ಮಾಡಿದ್ದಾರೆ, ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಬಿಲ್‌ನ್ನು ಅತ್ಯಂತ ಸರಳವಾಗಿ ತಂದಿದ್ದಾರೆ. ತುಂಬಾ ಸಂಗತಿಗಳನ್ನು ಹಿಂದೆ ಮೂರು ವರ್ಷಗಳ ಕಾಲ ನಮಗೆ ವರ್ಗಾವಣೆ ಮಾಡುವುದಕ್ಕೆ ಆಗದೇ ಇರುವುದಕ್ಕೆ ಬಹಳ ದೊಡ್ಡ ಕಾರಣ ಯಾವುದಿತ್ತು ಎಂದರೆ, ಬಹುತೇಕ ಸಂಗತಿಗಳನ್ನು ಈ ಬಿಲ್‌ನ ಭಾಗವಾಗಿ ತಂದಿದ್ದರು. ರೂಲ್‌ನಲ್ಲಿ ತರಬಹುದಾಗಿರುವ ಸಂಗತಿಗಳು ಬಿಲ್‌ನ ಭಾಗವಾಗಿ ಬಂದಿದ್ದವು. ಹೀಗಾಗಿ ಯಾರೂ ಮಧ್ಯದಲ್ಲಿ ಹಸ್ತಕ್ಷೇಪ ಮಾಡದೇ ಇರುವಂತಹ ಸ್ಥಿತಿ ಬಂದಿತ್ತು. ಬಹಳ ಸರಳಗೊಳಿಸಿ ಇದನ್ನು ತಂದಿರುವುದಕ್ಕೆ ಅವರಿಗೆ ಎರಡನೇ ಬಾರಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಒಂದೇ ಒಂದು ಸ್ಪಷ್ಟೀಕರಣ ನನಗೆ ಬೇಕಾಗಿದೆ. ಮುಂದಿನ ದಿನಮಾನಗಳಲ್ಲಿ, ತಮಗೆ ಗೊತ್ತಿರುವಂತೆ, ಲಿಪಿಕ ಬ್ರಹ್ಮರು ಕುಳಿತುಕೊಂಡಿರುವವರು ಯಾವರೀತಿ ಇದನ್ನು ಮಾಡುತ್ತಾರೆ ಎನ್ನುವುದರ ಬಗ್ಗೆ ತಮಗೆ ಅರಿವಿದೆ. ಸೆಕ್ಷನ್ 7ರಲ್ಲಿ ಒಂದು ಸ್ಪಷ್ಟನೆ ಬೇಕಾಗಿರುವುದೇನೆಂದರೆ, ಜ್ಯೇಷ್ಠತಾ ಘಟಕದ ಹೊರಗಿನ ಸ್ಥಳಕ್ಕೆ ಪರಸ್ಪರ ವರ್ಗಾವಣೆಯನ್ನು ಆ ವಲಯಕ್ಕೆ ವರ್ಗಾಯಿಸಬೇಕಾದ ಅರ್ಹವಾಗಿರುವ ಮತ್ತು ಐದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಷಗಳ ಬಾಕಿ ಉಳಿದ ಸೇವೆಯನ್ನು ಹೊಂದಿರುವ ಅನ್ಯಥಾ, ಇಬ್ಬರೂ ಶಿಕ್ಷಕರು ಏಳು ವರ್ಷಗಳ ಕನಿಷ್ಠ ಸೇವೆಯನ್ನು ಪೂರೈಸಿರುವ ಷರತ್ತಿಗೆ ಒಳಪಟ್ಟು ಸೇವೆಯಲ್ಲಿ ಒಂದು ಸಲಕ್ಕಿಂತ ಹೆಚ್ಚಲ್ಲದಂತೆ ಅನುಮತಿಸತಕ್ಕದ್ದು. ಆತನು ಜ್ಯೇಷ್ಠತೆಯನ್ನು ರಕ್ಷಿಸಿಕೊಳ್ಳಲು ಅರ್ಹನಾಗಿರತಕ್ಕದ್ದಲ್ಲ ಎನ್ನುವಂತಹ ಶಬ್ಧ ಇದೆ. ಇದು ಮುಂಚೆಯೂ ಇತ್ತು, ಈಗಲೂ ಇದೆ. ಆದರೆ financial benefit ಕೊಡುತ್ತಿದ್ದರು. ನನಗೆ ನಿಮ್ಮ ಮೂಲಕ ಆ ಭರವಸೆ ಬೇಕಾಗಿದೆ. ಏಕೆಂದರೆ, financial benefit ನೊಂದಿಗೆ ಹಿಂದಿನ ಸೇವೆಯನ್ನು ಪರಿಗಣಿಸತಕ್ಕದ್ದಲ್ಲ ಎನ್ನುವುದು ಮುಂಚೆ ಇತ್ತು, ಅದನ್ನು ಮುಂದುವರೆಸಬೇಕೆನ್ನುವ ಕೋರಿಕೆಯನ್ನು ಮಾಡುತ್ತಾ ವಿಶೇಷವಾಗಿ ಕರ್ನಾಟಕ ರಾಜ್ಯ ಶಿಕ್ಷಣ ಕ್ಷೇತ್ರದಲ್ಲಿ ಒಂದು ದೊಡ್ಡ ಸವಾಲಿದೆ. ಹೈದರಾಬಾದ್-ಕರ್ನಾಟಕ ಭಾಗದ ಒಂದು ತಾಲ್ಲೂಕನ್ನು ಒಳಗೊಂಡಂತೆ, ನನ್ನ ಕ್ಷೇತ್ರದಲ್ಲಿ ಖಾನಾಪುರ, ಕಾಗವಾಡ, ಅಥಣಿ ಇಲ್ಲಿ ವಿಶೇಷವಾಗಿ ಶಿಕ್ಷಕರ ಕೊರತೆ ಇದೆ. ಸ್ಥಳೀಯ ಸಂಸ್ಥೆಗಳ ಕ್ಷೇತ್ರದವರಾದ ಮಾನ್ಯ ಕೆ.ಸಿ. ಕೊಂಡಯ್ಯನವರು ಬಹಳ ಚೆನ್ನಾಗಿ ಹೇಳಿದರು. ಒಂದು ಕಡೆ ಶಿಕ್ಷಕರ ಕೊರತೆ ಇದೆ, ಇನ್ನೊಂದು ಕಡೆ ಶಿಕ್ಷಕರು ಅಲ್ಲಿಗೆ ಹೋಗಿ ಕೆಲಸ ಮಾಡುವುದಕ್ಕೆ ಸಮಸ್ಯೆಗಳಿದೆ. ಇದರ ಮಧ್ಯದಲ್ಲಿ ಸಮನ್ವಯವನ್ನು ಸಾಧಿಸುವಂತಹ ಕೆಲಸವನ್ನು ಅದ್ಭುತವಾಗಿ ಮಾಡಿದ್ದೀರಿ. ಸುಮಾರು 30-35 ತಾಲ್ಲೂಕುಗಳ ಶಿಕ್ಷಕರಿಗೆ 10 ವರ್ಷಗಳ ಕಾರಣಕ್ಕೋ ಅಥವಾ ಶೇ.20 ಎನ್ನುವ ಕಾರಣಕ್ಕೆ ವರ್ಗಾವಣೆ ಸಿಗುವುದಿಲ್ಲ ಎನ್ನುವ ನೋವಿದೆ. ಮುಂಬರುವ ದಿನಗಳಲ್ಲಾದರೂ ನಿಮ್ಮ ಕಡೆಯಿಂದ ಒಂದು ಪರಿಹಾರದ ನಿರೀಕ್ಷೆಯನ್ನು ಆ ಭಾಗದ ಶಿಕ್ಷಕರು ಮಾಡುತ್ತಿದ್ದಾರೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಾ, ಮತ್ತೊಮ್ಮೆ ತಮಗೆ ಕೃತಜ್ಞತೆಗಳನ್ನು ಸಲ್ಲಿಸಿ ಈ ಬಿಲ್‌ನ್ನು ಸ್ವಾಗತಿಸಿ ನನ್ನೆರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಶಿಕ್ಷಣ ಸಚಿವರಾದಂತಹ;

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಮರಿತಿಬ್ಬೇಗೌಡರೇ, ನಾನು ಮಾತನಾಡಿಬಿಡುತ್ತೇನೆ, ತಾವು ಬಹಳ ಸುದೀರ್ಘವಾಗಿ ಮಾತನಾಡುವವರು.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ನೀವು ನಿಮ್ಮ ಸ್ಥಾನ ಬಿಟ್ಟು ಬೇರೆ ಕಡೆ ಕುಳಿತುಕೊಂಡಿರುವುದಕ್ಕೆ ನೀವೇನು ಹೇಳುವುದಿಲ್ಲವೆಂದು ತಿಳಿದುಕೊಂಡಿದ್ದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸದನದಲ್ಲಿ ನಗು)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾನು ಮಾತನಾಡಲೇ ಬೇಕಲ್ಲವೇ? ಒಂದೆರಡು ನಿಮಿಷ ಅಷ್ಟೇ, ಈಗ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲಿ ನಂತರ ನಾನು ಮಾತನಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಶಿಕ್ಷಣ ಸಚಿವರಾದಂತಹ ಮಾನ್ಯ ಎಸ್. ಸುರೇಶ್ ಕುಮಾರ್‌ರವರು ತಂದಂತಹ ಈ ವಿಧೇಯಕವು ಬಹುತೇಕ across the line, ಈ ಕಡೆಯವರು, ಆ ಕಡೆಯವರೆಲ್ಲರೂ ಸ್ವಾಗತ ಮಾಡಿದ್ದಾರೆ. ನನಗೂ ಕೂಡ ವೈಯಕ್ತಿಕವಾಗಿ ಶಿಕ್ಷಣ ಸಚಿವರ ಬಗ್ಗೆ ಬಹಳ ಗೌರವವಿದೆ. He is a matured Minister. ಬದ್ಧತೆ;

**ಶ್ರೀ ಯು.ಬಿ. ವೆಂಕಟೇಶ್:–** ಶಿಕ್ಷಣ ಮಂತ್ರಿಯಾಗುವುದು ಕಷ್ಟವೆನ್ನುತ್ತಾರೆ . . .

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಜನಪರ ಕಾಳಜಿ ಇರುವಂತಹವರು, ತತ್ವನಿಷ್ಠ ರಾಜಕಾರಣಿಗಳೆಂದರೆ ಕೂಡ ತಪ್ಪಾಗುವುದಿಲ್ಲ. ಅವರು ತಂದಂತಹ ವಿಧೇಯಕವನ್ನು ನಾನು ಕೂಡ ಸ್ವಾಗತ ಮಾಡುತ್ತೇನೆ. ಈ ಸಂದರ್ಭದಲ್ಲಿ Counselling system, ಮೊದಲ ಸಲ ಈ ಸದನದ ಸದಸ್ಯರು ಮತ್ತು ಹಿಂದಿನ ಶಿಕ್ಷಣ ಸಚಿವರಾದಂತಹ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವಂತಹದ್ದು, ನಾನು ವಿಧಾನ ಪರಿಷತ್ ಸದಸ್ಯನಾಗಿ ಬಂದಾಗ ತಾವು ನಾವು ಜೊತೆಯಾಗಿ ಬಂದಿದ್ದೆವು, ಶಿಕ್ಷಣ ಸಚಿವರ ಕೊಠಡಿ ಮುಂದೆ ಇರುವಷ್ಟು ಜನರು ಮುಖ್ಯಮಂತ್ರಿಯವರ ಕೊಠಡಿ ಮುಂದೆ ಇರುತ್ತಿರಲಿಲ್ಲ. ನಾವು ಶಿಕ್ಷಣ ಸಚಿವರ ಕೊಠಡಿಯ ಕಾರಿಡಾರ್ ಮುಂದೆ ಹಾದು ಹೋಗುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ, ಅಲ್ಲಿ ಬ್ಯಾರಿಕೇಡ್ ಹಾಕಿರುತ್ತಾರೆ. ನಾನು ಮೊದಲು ಬಂದಾಗ, ಅವರು ಎಂತಹ ಮಂತ್ರಿ ಎಷ್ಟು ಜನಪ್ರಿಯರಾಗಿದ್ದಾರೆ ಎಂದು ಕೇಳಿದರೆ, ಎಲ್ಲರೂ ಶಿಕ್ಷಕರೇ, ಅವರೆಲ್ಲರೂ ವರ್ಗಾವಣೆಗೆ ಬಂದಿದ್ದಾರೆ ಎಂದರು. ಈ ಕಡೆಯವರು ಶೇ.95 ಅಂಕ ಪಡೆದವರು ನಮ್ಮ ಜಿಲ್ಲೆ ಕಡೆ ನೇಮಕಾತಿಯಾಗಿ ಪರಿವೀಕ್ಷಣಾ ಅವಧಿ ಮುಗಿದ ಕೂಡಲೇ ಹುಡುಕಾಡಿದರೂ ಒಬ್ಬ ಶಿಕ್ಷಕರು ಇಲ್ಲದ ಪರಿಸ್ಥಿತಿ ಇರುತ್ತದೆ. ಅದರಲ್ಲಿ ಭ್ರಷ್ಟಾಚಾರಕ್ಕಂತೂ ಇತಿ ಮಿತಿಯೇ ಇಲ್ಲ. ನಮಗೆ ಬಹುತೇಕ ಶಿಕ್ಷಕರದ್ದೇ ಒಂದು ದೊಡ್ಡ ಸಮಸ್ಯೆ. ಅವರಿಗೆ ವರ್ಗಾವಣೆ ಬಿಟ್ಟರೆ ಬೇರೆ ಕೆಲಸವೇ ಇರುವುದಿಲ್ಲ. ಅವರು ಎಷ್ಟು ಪ್ರಕ್ಷುಬ್ಧವಾದ ವಾತಾವರಣ ಇದ್ದರೂ, ಭ್ರಷ್ಟಾಚಾರವಂತೂ ಹಾಸುಹೊಕ್ಕಾಗಿ ಬೆಳೆದಿದೆ. ಅದನ್ನು ತಹಬಂದಿಗೆ ತಂದವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಜವಾಗಲೂ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ. ಈಗ ಮಾನ್ಯ ಎಸ್. ಸುರೇಶ್ ಕುಮಾರ್‌ರವರು ಕೂಡ ಈ ವಿಧೇಯಕದಲ್ಲಿ ಬುದ್ಧಿಮಾಂದ್ಯ ಮಕ್ಕಳಿದ್ದವರಿಗೆ ವಿನಾಯಿತಿ ಕೊಟ್ಟಿದ್ದು ಮತ್ತು ತೀರಿ ಹೋದಂತಹ ಸೈನಿಕರು, ನಿವೃತ್ತ ಸೈನಿಕರ ಕುಟುಂಬದವರು ಅವರು ದೇಶ ಸೇವೆ ಮಾಡುತ್ತಾರೆ ಅವರ ಕುಟುಂಬದವರಿಗೆ ಇದು ಬಹಳ ಸಹಕಾರಿಯಾಗುತ್ತದೆ. ಈ ರೀತಿ ಬಹಳ ಯೋಗ್ಯ ವ್ಯಕ್ತಿಗಳಿಗೆ ವಿನಾಯಿತಿ ನೀಡಿದ್ದಾರೆ. ನಮಗನ್ನಿಸುತ್ತದೆ, ಈ ಬಿಲ್ ತರುವ ಮುಂಚೆ ಅವರು ಹೇಳಿದರು, 'Compulsory Retirement' ಎಂದರೆ, ಒಂದು ರೀತಿ ಅಯೋಗ್ಯನಿದ್ದಾನೆ ಎನ್ನುವ ಭಾವನೆ ಬರುತ್ತದೆ. ಇದರಲ್ಲಿ ಏಕೆ ಕಡ್ಡಾಯ ನಿವೃತ್ತಿ? ಅವರ ವಿಶ್ಲೇಷಣೆ ನನಗೂ ಮೆಚ್ಚುಗೆಯಾಗಿದೆ. ಇಲ್ಲಿ ವರ್ಗಾವಣೆ ಹಿಂಸೆಯಾಗಬಾರದು, ಮಕ್ಕಳಿಗೆ ನೆಮ್ಮದಿಯ ವಾತಾವರಣ ಇರಬೇಕು. ವರ್ಗಾವಣೆಯಿಂದ ಮಕ್ಕಳಿಗೂ ಕೂಡ ತೊಂದರೆಯಾಗಬಾರದು, ಶಿಕ್ಷಕರಿರುವುದು ಮಕ್ಕಳ ಸಲುವಾಗಿ. ಶಿಕ್ಷಕರ ಅನುಕೂಲತೆಗಾಗಿ ವರ್ಗಾವಣೆ ಇರಬಾರದು. ಮಕ್ಕಳ ಅನುಕೂಲತೆಗಾಗಿ; ನಿಯೋಜನೆ ಮಾಡುತ್ತಾರೆ, ತಮಗೆ ಇಲ್ಲಿ ಅನಾನುಕೂಲತೆ ಇದೆ, ತಮ್ಮ ಮನೆ, ಊರು ದೂರ ಇದೆ, ವಯಸ್ಸಾದ ತಂದೆ ತಾಯಿ ಇದ್ದಾರೆ ಹೀಗೆ ಕಾರಣಗಳು ಫಿಕ್ಸ್ ಆಗಿರುತ್ತವೆ. ಮಕ್ಕಳ ಗತಿ ಏನು ಎನ್ನುವ ಬಗ್ಗೆ ಯೋಚನೆ ಮಾಡುವುದಿಲ್ಲ. ನಿಯೋಜನೆ, it should be for the convenience and welfare of the children. ಮಕ್ಕಳ ಅನುಕೂಲತೆಗಾಗಿ ನಿರ್ದಿಷ್ಟವಾಗಿ ಒಬ್ಬ ಶಿಕ್ಷಕರು ಇಲ್ಲ ಎಂದಾಗ ಅಲ್ಲಿಗೆ ಒಬ್ಬ subject teacher ಅನ್ನು ನಿಯೋಜನೆ ಮಾಡಿಬಿಡುತ್ತಾರೆ. ಶಿಕ್ಷಕರ ಅನುಕೂಲತೆಗಾಗಿ ನಿಯೋಜನೆ ಆಗುತ್ತವೆ. ಇದರಿಂದ ಮತ್ತೆ education suffer ಆಗುತ್ತದೆ. ಆ ದೃಷ್ಟಿಯಿಂದ ಶಿಕ್ಷಕರಿಗೆ ನೆಮ್ಮದಿಯ ವಾತಾವರಣ ನಿರ್ಮಾಣವಾಗಬೇಕು. ಯಾರಾದರೂ ಮಾತನಾಡುವಾಗ ಏನಪ್ಪಾ ಮನೆಯಲ್ಲಿ ಹೆಂಡತಿ ಜೊತೆ ಜಗಳವಾಡಿ ಬಂದಿದ್ದೀಯಾ ಎಂದು ಕೇಳುತ್ತಾರೆ. ಅವರಿಗೆ ನೆಮ್ಮದಿಯ ವಾತಾವರಣವನ್ನು create ಮಾಡಿದರೆ ಮಕ್ಕಳಿಗೆ ಪ್ರಶಾಂತ ಮನಸ್ಸಿನಿಂದ ನಾಲ್ಕು ಗೋಡೆಯ ಮಧ್ಯದಲ್ಲಿ ಅದ್ಭುತವಾದ, ಉತ್ತಮವಾದ ಶಿಕ್ಷಣ ಕೊಡುವುದಕ್ಕೆ ಸಾಧ್ಯವಿದೆ. ತನ್ನನ್ನು ಇಲ್ಲಿ ತಂದು ಹಾಕಿದರು ಏನು ಮಾಡಲಿ, ತನಗೆ ತೊಂದರೆಯಾಗುತ್ತಿದೆ, ಕಷ್ಟವಾಗುತ್ತಿದೆ ಎಂದು ಇದೇ ಚರ್ಚೆಯಾಗುತ್ತದೆ. ಆ ಮಕ್ಕಳಿಗೆ ಅತ್ಯುತ್ತಮವಾದಂತಹ ಪ್ರಾಂಜಲ ಮನಸ್ಸಿನಿಂದ ಶಿಕ್ಷಣ ನೀಡುವುದು ಬಹಳ ಕಡಿಮೆ. ಏಕೆಂದರೆ, ಉಳಿದವರು ತಪ್ಪು ಮಾಡಿದರೆ ನಮ್ಮಲ್ಲಿ ಹೇಳುತ್ತಾರೆ ಒಬ್ಬ ವೈದ್ಯ ತಪ್ಪು ಮಾಡಿದರೆ, ಒಬ್ಬ ರೋಗಿ ಸಾಯಬಹುದು, ಒಬ್ಬ ಇಂಜಿನಿಯರ್ ತಪ್ಪು ಮಾಡಿದರೆ ಒಂದು ಕಟ್ಟಡ ನೆಲಸಮವಾಗಬಹುದು ಅಥವಾ ಒಬ್ಬ ಶಿಲ್ಪಿ ತಪ್ಪು ಮಾಡಿದರೆ ಒಂದು ಮೂರ್ತಿ ಕೆಡಬಹುದು ಆದರೆ ಒಬ್ಬ ಶಿಕ್ಷಕನಿಗೆ ನೆಮ್ಮದಿಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಾತಾವರಣ ಇಲ್ಲದ ಸಂದರ್ಭದಲ್ಲಿ ಶಿಕ್ಷಕ ತಪ್ಪು ಮಾಡಿದರೆ ಇಡೀ ಜನಾಂಗದ ಸರ್ವನಾಶವಾಗುತ್ತದೆ. ಅದಕ್ಕೆ ಅವರಿಗೆ ನೆಮ್ಮದಿಯ ವಾತಾವರಣವನ್ನು ನಿರ್ಮಾಣ ಮಾಡಬೇಕು. ರಾಷ್ಟ್ರ ರೂವಾರಿಗಳೆಂದು ಯಾರಿಗೂ ಹೇಳುವುದಿಲ್ಲ, ಈ ದೇಶದಲ್ಲಿ ಪ್ರಧಾನ ಮಂತ್ರಿಗೂ ಹೇಳುವುದಿಲ್ಲ, ರಾಷ್ಟ್ರಪತಿಗೂ ಅನ್ನುವುದಿಲ್ಲ, ರಾಷ್ಟ್ರ ನಿರ್ಮಾಣ ಮಾಡುವಂತಹ ಗುರುತರ ಜವಾಬ್ದಾರಿ ಶಿಕ್ಷಕರ ಹೆಗಲ ಮೇಲಿರುವುದರಿಂದ ಅವರಿಗೆ ನೆಮ್ಮದಿಯ ವಾತಾವರಣ ನಿರ್ಮಾಣ ಮಾಡುವುದು ಅಷ್ಟೇ ಮಹತ್ವದ್ದು. ಆ ನೆಮ್ಮದಿಯ ವಾತಾವರಣ ಇಲ್ಲದಿದ್ದರೆ ಅದರ impact ಮಕ್ಕಳ ಮೇಲಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಏನಾದರೂ impact ಆದರೆ ಅದು ದೇಶದ ಅಭಿವೃದ್ಧಿಗೆ ತೊಂದರೆಯಾಗುತ್ತದೆ. ದೇಶವು ಪ್ರಗತಿ ಪಥದಲ್ಲಿ ಮುನ್ನಡೆಯಬೇಕಾದರೆ, ಅತ್ಯುತ್ತಮವಾದಂತಹ ಶಿಕ್ಷಣದ ಮುಖಾಂತರ ಅಗಾಧವಾದ ಸಾಧನೆ ಸಾಧಿಸುವುದಕ್ಕೆ ಸಾಧ್ಯತೆ ಇದೆ. ಅದಕ್ಕೆ ನಾನು ಹೇಳುವುದೇನೆಂದರೆ, ಮಾನ್ಯ ಸಭಾಪತಿಯವರ ಮೂಲಕ ಮನವಿ ಮಾಡಿಕೊಳ್ಳುವುದೇನೆಂದರೆ, ಖಾಸಗಿ ಸಂಸ್ಥೆಯಲ್ಲಿ ಶಿಕ್ಷಕರ ಮಕ್ಕಳು ಅಲ್ಲಿಯೇ ಇರುತ್ತಾರೆ. ಶಿಕ್ಷಕರು ತರಗತಿಯಲ್ಲಿರುವಂತಹ ಮಕ್ಕಳನ್ನು ತಮ್ಮ ಸ್ವಂತ ಮಕ್ಕಳಂತೆ ವಿದ್ಯೆ ನೀಡಬೇಕಾಗುತ್ತದೆ. ತಮ್ಮ ಮಕ್ಕಳನ್ನು ನಗರದಲ್ಲಿರುವ ಕಾನ್ವೆಂಟ್‌ಗಳಲ್ಲಿ ಓದಿಸುವುದು, ಇಲ್ಲಿ ಬಂದು ನಮ್ಮ ಗ್ರಾಮೀಣಭಾಗದಲ್ಲಿ ಶಿಕ್ಷಣ ಕೊಡುವುದನ್ನು ಮಾಡುತ್ತಾರೆ. ಶಾಲೆಯಲ್ಲಿರುವ ಮಕ್ಕಳನ್ನು ತಮ್ಮ ಸ್ವಂತ ಮಕ್ಕಳಂತೆ ಟ್ರೀಟ್ ಮಾಡಿ ತಮ್ಮ ಸ್ವಂತ ಮಕ್ಕಳಿಗೆ ಯಾವ ರೀತಿ ವಿದ್ಯೆ ನೀಡುತ್ತಾರೋ ಆ ರೀತಿಯ ವಿದ್ಯೆ ಕೊಡುವ ವಾತಾವರಣ ನಿರ್ಮಾಣ ಮಾಡಲು ನೀವು ಮನಸ್ಸು ಮಾಡಿದರೆ ಸಾಧ್ಯವಾಗುತ್ತದೆ. ತಮ್ಮ ಮಕ್ಕಳನ್ನು ಖಾಸಗಿ ಶಾಲೆಯಲ್ಲಿಟ್ಟು ಇಲ್ಲಿ ಕಲಿಸುವುದು ಎಂದರೇನು? ಪಗಾರಕ್ಕಾಗಿ. Teacher should come for love of teaching. ಉಳಿದ ವೃತ್ತಿಗಳು ನಡೆಯುತ್ತವೆ ಶಿಕ್ಷಕ ವೃತ್ತಿ ಏನಿದೆ, Teacher should come for love of teaching.

(ಮುಂದು)

(542) 18-03-2020/ 06-10/ ಕೆಹೆಚ್-ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್. ಪಾಟೀಲ್ (ಮುಂದು):-**

ಕಲಿಸುವಂತಹ ಭಾವನೆಯನ್ನು ಇಟ್ಟುಕೊಂಡು ಶಿಕ್ಷಣವನ್ನು ಕೊಟ್ಟರೆ ಅದು ಪ್ರಯೋಜನಕಾರಿಯಾಗುತ್ತದೆ. ಅಂತಹ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಮಾನ್ಯ ಸಚಿವರು ಬಹಳಷ್ಟು ಪ್ರಯತ್ನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದ್ದಾರೆ. ಈ ವಿಧೇಯಕವನ್ನು ತರುವುದಕ್ಕಿಂತ ಮುಂಚೆ ಶಿಕ್ಷಣ ತಜ್ಞರ ಜೊತೆಯಲ್ಲಿ ಚರ್ಚೆ ಮಾಡಿ ಈ ವಿಧೇಯಕವನ್ನು ತಂದಿದ್ದಾರೆ. ಇದರ ಬಗ್ಗೆ ಅವರೆಲ್ಲರೂ ಹೇಗೆ ಸ್ವಾಗತ ಮಾಡಿದ್ದಾರೆಯೋ, ಹಾಗೆಯೇ ನಾನು ಕೂಡ ಹೃದಯ ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಧನ್ಯವಾದಗಳು.

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಾನು ಈ ವಿಧೇಯಕವನ್ನು ನೋಡುತ್ತಿದ್ದೆ. ಕಡ್ಡಾಯ ವರ್ಗಾವಣೆ ವಿಷಯ ಕುರಿತಂತೆ ಪತ್ರಿಕೆಗಳಲ್ಲಿ ಬಂದಿರುವ ವರದಿಯನ್ನು ಜಾಸ್ತಿ ನೋಡುತ್ತಿದ್ದೆ. ಈ ವಿಷಯದಲ್ಲಿ ಶಿಕ್ಷಕರು ಬಹಳ ಅಸಮಾಧಾನಕರವಾಗಿರುವಂತಹದ್ದನ್ನು ಇದನ್ನೆಲ್ಲಾ ನಾನು ನೋಡುತ್ತಿದ್ದೆ. ಮಾನ್ಯ ಸಚಿವರಾದ ಸುರೇಶ್ ಕುಮಾರ್‌ರವರು ಶಾಲೆಗಳಿಗೆ ಹೋಗಿ ವಸತಿ (ವಾಸ್ತವ್ಯ) ಮಾಡುವಂತಹದ್ದು. ವರ್ಗಾವಣೆಗೆ ಸಂಬಂಧಪಟ್ಟಂತೆ ಬೆಳಗ್ಗೆ 6 ಗಂಟೆಗೆ ಹೋಗಿ ಅವರನ್ನು ಕಾಣುವಂತಹದ್ದು. ನಮ್ಮ ಕಛೇರಿಗೆ ಬಂದು ಮಾನ್ಯ ಸಚಿವರಾದ ಸುರೇಶ್ ಕುಮಾರ್‌ರವರು ಏನಾದರೂ ಮಾಡಿ ಅವರಿಗೆ appointment ಮಾಡಿಸಿ, ಅವರಿಗೆ ಏನಾದರೂ ವರ್ಗಾವಣೆ ಮಾಡಿಸಿಕೊಡಿ ಎಂದು ಬರುವಂತಹದ್ದು. ಈಗ ಈ ವಿಧೇಯಕವನ್ನು ನೋಡಿದಾಗ ನನಗೆ ಅನಿಸುವುದೇನೆಂದರೆ, ಇದು education friendly, teachers friendly, family friendly and school friendly. ಒಟ್ಟಾರೆಯಾಗಿ ಈ ವಿಧೇಯಕವನ್ನು ನೋಡಿದಾಗ ಯಾರ್ಯಾರಿಗೆ ಸಾಕಷ್ಟು ಕಷ್ಟವಾಗುತ್ತದೆ; ಸೈನಿಕರ ಕುಟುಂಬದವರಿಗೆ, ಗರ್ಭಿಣಿಯರಿಗೆ, ಅಂಗವಿಕಲರಿಗೆ, ಒಟ್ಟಾರೆಯಾಗಿ ಶಾಲೆಯಲ್ಲಿ ಒಂದು ಕಲಿಕೆಯ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಶಿಕ್ಷಕರ role ಏನಿದೆ; ಶಿಕ್ಷಣ ಕ್ಷೇತ್ರದಲ್ಲಿ ಮಾನ್ಯ ಸಚಿವರಿಗೆ ಬಹಳ ಅನುಭವ ಇದೆ. ಸೊಸೈಟಿ ಗೊತ್ತಿದೆ. ಎಜುಕೇಷನ್ ಗೊತ್ತಿದೆ ಮತ್ತು ಎಲ್ಲರನ್ನೂ ಕರೆದು; ಅಧಿಕಾರಿಗಳು, ಶಿಕ್ಷಕರು, ಸಂಘಟನೆಗಳು, ಮತ್ತು ಎಂ.ಎಲ್.ಸಿ.,ಗಳ ಜೊತೆಯಲ್ಲಿ ಮಾತನಾಡಿ ಬಹಳ ಅನುಭವವುಳ್ಳ ನುರಿತ ಶಿಕ್ಷಣ ತಜ್ಞ ಈ ವಿಧೇಯಕವನ್ನು ಹೇಗೆ ಮಾಡಬಹುದು ಎಂಬ ಕುತೂಹಲ ನನ್ನಲ್ಲಿತ್ತು. ಆ ರೀತಿಯ ಒಂದು ವಿಧೇಯಕವನ್ನು ತಂದಿರುವುದಕ್ಕಾಗಿ ನಾನು ಅವರಿಗೆ ಅಭಿನಂದಿಸುತ್ತೇನೆ. ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2020 ಈ ವಿಧೇಯಕವನ್ನು ಸ್ವಾಗತಿಸುತ್ತಾ, ಮೊದಲನೆಯದಾಗಿ ನಾನು ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ಮಾನ್ಯ ಸಚಿವರ ಮನೆ ಹತ್ತಿರ ಹೋದಾಗಲೆಲ್ಲಾ ಅವರು ಬ್ಯಾರಿಕೇಡ್ ಹಾಕಿಕೊಂಡಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲದಿದ್ದರೆ ಅವರನ್ನು ಬಿಡುವತನಕ ವಾಪಸ್ ಹೋಗುವುದಿಲ್ಲ, ಸಚಿವರಿಗೆ ನಿದ್ದೆ ಮಾಡುವುದಕ್ಕೆ ಬಿಡುವುದಿಲ್ಲ. ಆ ರೀತಿ ಪರಿಸ್ಥಿತಿ ಕಡ್ಡಾಯ ವರ್ಗಾವಣೆಯ ಸಂದರ್ಭದಲ್ಲಿ ಆಗಿರುವುದನ್ನು ನಾನು ಹೋದಾಗ ನೋಡಿದ್ದೆ. ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರು ಹೇಳಿದ ಹಾಗೆ ಎಲ್ಲಾ ಹಿರಿಯ ಶಾಸಕರು ಈಗಾಗಲೇ ಸಲಹೆಯನ್ನು ಕೊಟ್ಟಿದ್ದಾರೆ. ಈ ಶಿಕ್ಷಕರ ಸಮಸ್ಯೆಯಿಂದ ಬಳ್ಳಾರಿ, ಮೈಸೂರು, ಚಿತ್ರದುರ್ಗ ಎಲ್ಲಾ ಕಡೆಗಳಿಂದ ಶಿಕ್ಷಕರು ತಮ್ಮ ಕೆಲಸವನ್ನು ಬಿಟ್ಟು ಬೆಂಗಳೂರಿನ ಶಾಸಕರ ಭವನ ಮತ್ತು ಮಾನ್ಯ ಸಚಿವರ ಮನೆಯ ಹತ್ತಿರ ಓಡಾಡುತ್ತಿದ್ದರು. ನಮ್ಮ ಹಿರಿಯ ಸದಸ್ಯರು ಇದರ ಬಗ್ಗೆ ಸಲಹೆ ಕೊಟ್ಟಿರುವುದರಿಂದ, ಮುರಾರ್ಜಿ ಶಾಲೆಗಳನ್ನು ಪರಿಗಣಿಸುವಂತಹದ್ದು, mutual ಒಂದು ಅವಕಾಶ ಮಾಡಿಕೊಟ್ಟು, ಕಲ್ಯಾಣ ಕರ್ನಾಟಕದ ಬಗ್ಗೆ ನಮ್ಮ ಹಿರಿಯ ಸದಸ್ಯರು ಹೇಳಿದ ಹಾಗೆ ನೇಮಕಾತಿಯಲ್ಲಿ ಏನಾದರೂ ಒಂದು ಹೊಸ ನಿಯಮವನ್ನು ತರಬೇಕು. ಆ ಜಿಲ್ಲೆಯ ಅಭ್ಯರ್ಥಿಗಳನ್ನೆ ಶಿಕ್ಷಕರಾಗಿ ನೇಮಕ ಮಾಡಿಕೊಳ್ಳುವ ಹಾಗೆ ಮಾಡಬೇಕು. ಆಗ ಖಾಲಿ ಹುದ್ದೆಗಳು ಜಾಸ್ತಿಯಾಗುತ್ತದೆ. ಇಲ್ಲಿ ಮೈಸೂರು, ಬೆಂಗಳೂರಿನ ಶಿಕ್ಷಕರು ಬೇರೆ ಜಿಲ್ಲೆಗಳಲ್ಲಿ ನೇಮಕಗೊಂಡು ನಂತರ ಇಲ್ಲಿಗೆ ವರ್ಗಾವಣೆ ಮಾಡಿಸಿಕೊಳ್ಳುವುದಕ್ಕೆ ಒತ್ತಾಯ ಮಾಡುತ್ತಿರುತ್ತಾರೆ. ಮಾನ್ಯ ಸಚಿವರು ಇದಕ್ಕೆ ಏನಾದರೂ ಒಂದು ನಿಯಮವನ್ನು ತಂದು ಕಲ್ಯಾಣ ಕರ್ನಾಟಕ ಮತ್ತು ಹೈದರಾಬಾದ್-ಕರ್ನಾಟಕದಲ್ಲಿ ಅಲ್ಲಿರುವವರನ್ನೇ ನೇಮಕಾತಿ ಮಾಡಿಕೊಳ್ಳುವುದಕ್ಕೆ ಏನಾದರೂ ಒಂದು ನಿಯಮವನ್ನು ತಿದ್ದುಪಡಿ ಮಾಡಬೇಕೆಂಬುದು ನನ್ನ ಸಲಹೆಯಾಗಿದೆ. ಇದಕ್ಕೆಲ್ಲಾ ಪರಿಹಾರವನ್ನು ಕಂಡುಹಿಡಿಯಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತಾ, ಸನ್ಮಾನ್ಯ ಶಿಕ್ಷಣ ಸಚಿವರು ತಂದಿರುವಂತಹ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2020 ರ ಕಾಯಿದೆಯನ್ನು ಅತ್ಯಂತ ತುಂಬು ಹೃದಯದಿಂದ ಸ್ವಾಗತ ಮಾಡುತ್ತಿದ್ದೇನೆ. ಸನ್ಮಾನ್ಯ ಸಚಿವರು ಸಾಕಷ್ಟು ಬಾರಿ ಚಿಂತನೆ ಮತ್ತು ಯೋಚನೆ ಮಾಡಿ, ಅನೇಕ ತಜ್ಞರ ಜೊತೆಯಲ್ಲಿ ಸಮಾಲೋಚನೆ ಮಾಡಿ, 'ಕಡ್ಡಾಯ ಶಿಕ್ಷಕರ ವರ್ಗಾವಣೆ' ಎನ್ನುವಂತಹ ಶಬ್ದವನ್ನು ತೆಗೆದು ಹಾಕಿ 'ಶಿಕ್ಷಕರ ವರ್ಗಾವಣೆ ನಿಯಂತ್ರಣ ಕಾಯಿದೆ' ಎನ್ನುವಂತಹದ್ದನ್ನು ತಂದಿರುವಂತಹ ಶಬ್ದದಲ್ಲಿ ಅವರ ಜಾಣತನ ಇಲ್ಲಿ ಎದ್ದು ಕಾಣುತ್ತಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಕಡ್ಡಾಯ ಶಿಕ್ಷಕರ ವರ್ಗಾವಣೆ ಎಂದಾಗ ಎಷ್ಟೋ ಜನ ಶಿಕ್ಷಕರು ಕಡ್ಡಾಯವಾಗಿ ನಮ್ಮನ್ನು ತೆಗೆದುಹಾಕುತ್ತಾರೆ ಎಂದು ನೊಂದುಕೊಂಡಿದ್ದರು. ಅದರಲ್ಲಿಯೇ ಸ್ವಲ್ಪ ಇವರು ಜಾಣತನವನ್ನು ಉಪಯೋಗಿಸಿ ಶಬ್ದವನ್ನು ಬದಲಾವಣೆ ಮಾಡಿ, 'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಗಾವಣೆ ನಿಯಂತ್ರಣ) ವಿಧೇಯಕ, 2020' ರ ಕಾಯಿದೆಯನ್ನು ತಂದಿದ್ದಾರೆ. ಇದು ನಿಜಕ್ಕೂ ಶಿಕ್ಷಣ ಸ್ನೇಹಿಯಾಗಿರುವಂತಹ ಶಿಕ್ಷಕರಿಗೆ ಅನುಕೂಲವಾಗುವಂತಹ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಅದರ ಜೊತೆಗೆ ವಿದ್ಯಾರ್ಥಿಗಳಿಗೂ ಅನುಕೂಲವಾಗುವಂತಹ ಹಿನ್ನೆಲೆಯಲ್ಲಿ ಈ ವಿಧೇಯಕವನ್ನು ತಂದಿದ್ದಾರೆ. ಬಹಳ ಉತ್ತಮವಾಗಿರುವಂತಹ ಈ ವಿಧೇಯಕ ಇವತ್ತು ಸದನದ ಮುಂದೆ ಬಂದಿದೆ. ಇದರ ಬಗ್ಗೆ ಎಲ್ಲಾ ಹಿರಿಯ ಶಾಸಕರುಗಳು ಈಗಾಗಲೇ ಮಾತನಾಡಿದ್ದಾರೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಬಯಸುವುದಿಲ್ಲ. ನಾನು ಈ ವಿಧೇಯಕವನ್ನು ಅತ್ಯಂತ ತುಂಬು ಹೃದಯದಿಂದ ಸ್ವಾಗತವನ್ನು ಮಾಡುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ಮಾತನಾಡುವುದು ಬಹಳ ಕಷ್ಟಕರವಾದ ಕೆಲಸವಾಗಿದೆ. ಈ ವಿಧೇಯಕದ ಪಿತಾಮಹರು ಸನ್ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು. ಒಂದು ವಿಧೇಯಕ ಬಂದ ಮೇಲೆ ಅದರಲ್ಲಿ ಸಾಕಷ್ಟು ನ್ಯೂನತೆಗಳು ಇರುತ್ತದೆ. ಆ ನ್ಯೂನತೆಗಳನ್ನು ಬಿಡಿಸಿ, ರಾಜ್ಯಾದ್ಯಂತ ಪ್ರವಾಸ ಮಾಡಿ, ಆ ನ್ಯೂನತೆಗಳನ್ನು ಸರಿಪಡಿಸುವಂತಹ ಕೆಲಸವನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಬಹಳ ಸಮಯೋಚಿತವಾಗಿ ಇವತ್ತಿನ ದಿವಸ ತಿದ್ದುಪಡಿಗೆ ತಂದಿದ್ದಾರೆ. ಅದರಲ್ಲಿ ಕೆಲವೇ ಕೆಲವು ಅಂಶಗಳ ಬಗ್ಗೆ ನಾನು ಮಾನ್ಯ ಸಚಿವರ ಮತ್ತು ಸದನದ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ಪುಟ ಸಂಖ್ಯೆ-2 ರಲ್ಲಿ ಕ್ರಮ ಸಂಖ್ಯೆ-3 ರಲ್ಲಿ "ಶಿಕ್ಷಕನ ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿಯ ಮೇಲೆ ಮೊದಲ ಸ್ಥಳ ನಿಯುಕ್ತಿಯನ್ನು ಮಾಡುವಾಗ, ಪ್ರತಿಯೊಂದು ನೇಮಕಾತಿ ಪ್ರಾಧಿಕಾರವು, ಮೊದಲಿಗೆ ವಲಯ-ಸಿ ನಲ್ಲಿನ ಖಾಲಿ ಹುದ್ದೆಗಳನ್ನು ತುಂಬತಕ್ಕದ್ದು ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು". ಎಂದು ಇದೆ. ಇದು ಈ ವಿಧೇಯಕ ಬಂದ ಪ್ರಾರಂಭದಿಂದಲೂ ಇದೆ. ಏಕೆಂದರೆ, ಬಡ್ತಿ ಪಡೆಯುವಂತಹಒಬ್ಬ ಶಿಕ್ಷಕ; ನೇರ ನೇಮಕಾತಿ ಆಗುವಂತಹವರ ಬಗ್ಗೆ ನಮಗೆ ಯಾವುದೇ ತಕರಾರು ಇಲ್ಲ. ಬಡ್ತಿ ಪಡೆದುಕೊಂಡು ಬರುವಂತವನ್ನು ಈಗ 10 ವರ್ಷ, 12 ವರ್ಷ ಮತ್ತು 15 ವರ್ಷಕ್ಕಿಂತ ಕಡಿಮೆ ಯಾರಿಗೂ ಬಡ್ತಿಯಾಗುವುದಿಲ್ಲ. ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಗೆ ಬರುವುದಕ್ಕಾಗಲಿ, ಪ್ರೌಢಶಾಲೆಯಿಂದ ಪದವಿ ಪೂರ್ವ ಕಾಲೇಜಿಗೆ ಹೋಗುವುದಕ್ಕಾಗಲಿ ಸುಮಾರು 10 ರಿಂದ 15 ವರ್ಷಗಳ ಕಾಲ ಸೇವೆ ಮಾಡಿರುತ್ತಾನೆ. ಅವರು ಗ್ರಾಮೀಣ ಪ್ರದೇಶ ವಲಯ-ಸಿ ನಲ್ಲಿಯೇ ಸೇವೆ ಮಾಡಿರುತ್ತಾರೆ. ಬಡ್ತಿ ಪಡೆದಾಗ ಅವರು ಗ್ರಾಮೀಣ ಪ್ರದೇಶದಲ್ಲಿ ಅಂದರೆ, ವಲಯ-ಸಿ ಯಲ್ಲಿ ಕನಿಷ್ಟ ಸೇವೆಯನ್ನು ಸಲ್ಲಿಸಿದ್ದರೆ, ಅವರನ್ನು ವಲಯ-ಎ ಮತ್ತು ವಲಯ-ಬಿ ಗೆ ಕೊಡಬೇಕು ಎನ್ನುವಂತಹದ್ದು. ಇದನ್ನು ಪ್ರಾರಂಭದಿಂದಲೂ ಕೂಡ ನಾವು ಹೀಗೆ ಇಟ್ಟುಕೊಂಡು ಬರುತ್ತಿದ್ದೇವೆ. ನಾವು ಇದನ್ನು ಸರಿಪಡಿಸುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ವಲಯ–ಸಿ ಯಲ್ಲಿ ಸೇವೆಯನ್ನು ಸಲ್ಲಿಸಿದ್ದರೆ, ಅವರು ಬಡ್ತಿಗೆ ಬಂದಾಗ ಆ ಬಡ್ತಿಯಿಂದ counseling ಗೆ ಕೊಡುವಾಗ ವಲಯ–ಬಿ ಮತ್ತು ವಲಯ–ಎ ಯಲ್ಲಿ ಕೊಡಬೇಕು ಎನ್ನುವಂತಹ ಗಂಭೀರವಾದ ಚಿಂತನೆಯನ್ನು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಮತ್ತೊಂದು ವಿಚಾರವೆಂದರೆ, ಈಗ 10 ರಿಂದ 15 ವರ್ಷಗಳ ಕಾಲ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸೇವೆಯನ್ನು ಸಲ್ಲಿಸಿ ಬಡ್ತಿಯನ್ನು ಪಡೆಯುತ್ತಾರೆ. ಬಡ್ತಿಯನ್ನು ತೆಗೆದುಕೊಂಡ ಮೇಲೆ ಅದರ ಮುಂದಿನ ವರ್ಷ ವರ್ಗಾವಣೆಗೆ ಹಿಂದಿನ ಸೇವೆಯನ್ನು ಪರಿಗಣಿಸಿ, ಮತ್ತೆ ಅವನಿಗೆ ವರ್ಗಾವಣೆ ಕೊಡುವಂತಹ ನಿಯಮಗಳು ಇಲ್ಲಿ ಇವೆ. ಆದ್ದರಿಂದ, ಇದನ್ನು ದಯಮಾಡಿ ಕೈಬಿಡಬೇಕು. ನಿಯಮಗಳನ್ನು ಮಾಡುವಂತಹ ಸಂದರ್ಭದಲ್ಲಿ ಹಿಂದಿನ ಸೇವೆಯನ್ನು ತೆಗೆದುಕೊಂಡು ಅವರಿಗೆ ವರ್ಗಾವಣೆ ಕೊಡುವಂತಹದ್ದನ್ನು ದಯಮಾಡಿ ನಿಯಂತ್ರಣ ಮಾಡಬೇಕು.

**ಶ್ರೀ ಎಸ್.ಸುರೇಶ್‌ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):–** ಮಾನ್ಯ ಮರಿತಿಬ್ಬೇಗೌಡರವರೇ, ಪುಟ ಸಂಖ್ಯೆ–2 ರಲ್ಲಿ ಸೆಕ್ಷನ್–3 ರ ಕೊನೆಯ ಪ್ಯಾರದಲ್ಲಿ "ಅಲ್ಲದೇ ಪರಂತು, ಒಬ್ಬ ಶಿಕ್ಷಕನು ವಲಯ–ಸಿ ನಲ್ಲಿ ನಿರಂತರವಾಗಿ ಹತ್ತು ವರ್ಷಗಳಿಗೂ ಅಥವಾ ಸಂಚಿತವಾಗಿ ವಲಯ–ಸಿ ನಲ್ಲಿ ಹದಿನೈದು ವರ್ಷಗಳಿಗೂ ಹೆಚ್ಚಾಗಿ ಈಗಾಗಲೇ ಸೇವೆ ಸಲ್ಲಿಸಿದ್ದಲ್ಲಿ, ಅಂಥ ಶಿಕ್ಷಕನನ್ನು ಬಡ್ತಿಯ ಮೇಲೆ ಅಂಥ ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು ಕೌನ್ಸಿಲಿಂಗ್ ಮೂಲಕ ವಲಯ–ಬಿ ಅಥವಾ ವಲಯ–ಎ ಯಲ್ಲಿನ ಶಾಲೆಗೆ ಕ್ರಮದಲ್ಲಿ ಸ್ಥಳನಿಯುಕ್ತಿ ಮಾಡಬಹುದು". ಎಂದು ಇದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅಲ್ಲಿ ಏನು ಹೇಳಿದ್ದಾರೆ ಎಂದರೆ, ವಲಯ–ಎ ಮತ್ತು ವಲಯ–ಬಿ ನಲ್ಲಿ ಹುದ್ದೆಗಳು ಖಾಲಿ ಇದ್ದರೆ ಎಂದು ಹೇಳಿದ್ದಾರೆ. ಖಾಲಿ ಹುದ್ದೆಗಳ ಲಭ್ಯತೆಗಳಿಗೆ ಒಳಪಟ್ಟು ಎಂದು ಹೇಳಿದ್ದಾರೆ. ಆದರೆ, ಇಲ್ಲಿ ಏನಿದೆ ಎಂದರೆ, 10 ವರ್ಷಗಳ ಕಾಲ ವಲಯ–ಸಿ ನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸೇವೆ ಮಾಡಿದ್ದರೆ, ವಲಯ–ಬಿ ಮತ್ತು ವಲಯ–ಎ ಗೆ ವರ್ಗಾವಣೆ ಕೊಡಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಮರಿತಿಬ್ಬೇಗೌಡರವರೇ, ಅಲ್ಲಿ ಏನಾದರೂ ಖಾಲಿ ಹುದ್ದೆಗಳು ಇಲ್ಲದೆ ಇದ್ದರೆ . . .

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, 10 ವರ್ಷ, 15 ವರ್ಷ ಯಾರು ಸೇವೆಯನ್ನು ಸಲ್ಲಿಸಿ, ಬಡ್ತಿ ಪಡೆದುಕೊಂಡ ಮರು ವರ್ಷವೇ ಅವರಿಗೆ ಮತ್ತೆ ವರ್ಗಾವಣೆ ಕೊಡುವಂತಹದ್ದು ಸಾದುವಲ್ಲ, ಇದನ್ನು ತಾವು ನಿಯಮದಲ್ಲಿ ರೂಪಿಸಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

**(543) 18/03/2020/6:20/ಎಸ್‌ಪಿಆರ್/ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಎರಡನೆಯದಾಗಿ ನಿಯಮ 3 ರಲ್ಲಿ 'ಶೇಕಡಾ ಇಪ್ಪತ್ತಕ್ಕಿಂತ ಹೆಚ್ಚಿನ ಖಾಲಿ ಹುದ್ದೆಗಳು ಇರುವ ತಾಲ್ಲೂಕುಗಳಿಗೆ ಆದ್ಯತೆಯ ಮೇಲೆ ಭರ್ತಿ ಮಾಡುವುದಕ್ಕೆ ಪ್ರಾಶಸ್ತ್ಯ ನೀಡತಕ್ಕದ್ದು' ಎಂದು ತಿಳಿಸಲಾಗಿದೆ. ರಾಜ್ಯದಲ್ಲಿನ ಜಿಲ್ಲೆಗಳ ಪೈಕಿ ಸುಮಾರು 20 ಜಿಲ್ಲೆಗಳಲ್ಲಿ ಶೇಕಡ ಇಪ್ಪತ್ತಕ್ಕಿಂತ ಹೆಚ್ಚು ಹುದ್ದೆಗಳು ಖಾಲಿಯಿರಬಹುದು. ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಈ ಭಾಗದವರು ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ರಾಯಚೂರು ಇತ್ಯಾದಿ ಜಿಲ್ಲೆಗಳ ತಾಲ್ಲೂಕುಗಳಲ್ಲಿ ನೇಮಕಗೊಂಡು, ಸುಮಾರು 20-25 ವರ್ಷಗಳಿಂದ ಸೇವೆಗಳನ್ನು ಸಲ್ಲಿಸುತ್ತಿದ್ದಾರೆ. ಆದರೆ ಈ ನಿಯಮದಿಂದಾಗಿ ಅವರುಗಳಿಗೆ ಯಾವುದೇ ವರ್ಗಾವಣೆ ಇಲ್ಲ. ಮಾನ್ಯ ಮಂತ್ರಿಗಳು ಪ್ರಸ್ತಾವನೆ ಸಲ್ಲಿಸುವ ಸಂದರ್ಭದಲ್ಲಿ 30 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇದೆ ಎನ್ನುವ ಮಾತನ್ನು ಹೇಳಿದ್ದರು. ಹಾಗೆ ಖಾಲಿಯಿರುವ 30 ಸಾವಿರ ಶಿಕ್ಷಕರ ಹುದ್ದೆಗಳಿಗೆ ನಾವು ಇವತ್ತಿನ ದಿವಸ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡು ಮಕ್ಕಳಿಗೆ ಪಾಠವನ್ನು ಕೊಡಿಸುತ್ತಿದ್ದೇವೆ. ದಯಮಾಡಿ ಅಂತಹ ವ್ಯವಸ್ಥೆಯನ್ನು ಈ ತಾಲ್ಲೂಕುಗಳಲ್ಲಿ ಜಾರಿಗೆ ತಂದರೆ ... ವಿಧೇಯಕದಲ್ಲಿ 'ಕನಿಷ್ಠ ಹತ್ತು ವರ್ಷಗಳ ಸೇವೆ' ಎಂದು ತಿಳಿಸಲಾಗಿದೆ. ಕನಿಷ್ಠ ಹತ್ತು ವರ್ಷಗಳ ಸೇವೆಯನ್ನು ಸಲ್ಲಿಸಿದ ಶಿಕ್ಷಕರಿಗೆ ವರ್ಗಾವಣೆ ಪಡೆಯುವ ಅವಕಾಶವನ್ನು ನೀಡಬೇಕು. ಇಲ್ಲವಾದರೆ, ಆ ಶಿಕ್ಷಕರುಗಳು ತನ್ನ ಸೇವಾವಧಿ ಪೂರ್ತಿ ಅಂದರೆ 30-35 ವರ್ಷ ಅಲ್ಲಿಯೇ ಪಾಠ ಮಾಡಿ ಅವರ ಜೀವನವನ್ನೆಲ್ಲಾ ಅದೇ ತಾಲ್ಲೂಕಿನಲ್ಲಿ ಕಳೆಯಬೇಕಾಗುತ್ತದೆ. ಇಲಾಖೆಯ ಶಿಕ್ಷಕರು ನೆಮ್ಮದಿ ಹಾಗೂ ಪ್ರೀತಿಯಿಂದ ಪಾಠ ಮಾಡಬೇಕೆಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಈ ವಿಧೇಯಕವನ್ನು ತರಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದರು. ಶೇಕಡಾ ಇಪ್ಪತ್ತರಷ್ಟು ಖಾಲಿ ಹುದ್ದೆಗಳು ಇರುವ ತಾಲ್ಲೂಕುಗಳಲ್ಲಿನ ಶಿಕ್ಷಕರಿಗೆ ವರ್ಗಾವಣೆ ಇಲ್ಲವೆಂದಾದರೆ ಅವರುಗಳೆಲ್ಲರೂ ಸಹ 'ಇನ್ನು ಮೇಲೆ ನಮ್ಮ ಕತೆ ಮುಗಿಯಿತು, ರಿಟೈರ್ ಆಗುವವರೆಗೆ ಇಲ್ಲಿಯೇ' ಎಂದುಕೊಂಡು ಕರೋನಾ ಕಾಯಿಲೆಗಿಂತ ಹೆಚ್ಚು ಭಯಭೀತರಾಗುತ್ತಾರೆ. ಶೇಕಡಾ ಇಪ್ಪತ್ತಕ್ಕಿಂತ ಹೆಚ್ಚಿನ ಹುದ್ದೆಗಳು ಖಾಲಿಯಿರುವ ಕಡೆಗಳಲ್ಲಿ ಸರ್ಕಾರ ಅತಿಥಿ ಉಪನ್ಯಾಸಕರುಗಳನ್ನು ಆದ್ಯತೆಯ ಮೇಲೆ ನೇಮಕ ಮಾಡುವುದರ ಮೂಲಕ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸಗಳನ್ನು ಮಾಡಬೇಕು. ಇದರ ಜೊತೆಗೆ ನಿಯಮಗಳಲ್ಲಿನ ಷರತ್ತುಗಳನ್ನು ಸಡಿಲಿಸಿ ಅಲ್ಲಿನಶಿಕ್ಷಕರ ವರ್ಗಾವಣೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೂರನೆಯದಾಗಿ, ನಾನು ಪದವಿ ಪೂರ್ವ ಶಿಕ್ಷಣದ ಬಗ್ಗೆ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಏಕೆಂದರೆ ಪದವಿ ಪೂರ್ವ ಶಿಕ್ಷಣವು ಅತ್ಯಂತ ಪ್ರಮುಖವಾದ ಘಟ್ಟವಾಗಿದೆ. 23ನೇ ತಾರಿಖು ಸಂಜೆ ಯಾವಾಗ ಆಗುತ್ತದೆಂದು ಮಾನ್ಯ ಮಂತ್ರಿಗಳು ಯೋಚಿಸುತ್ತಿದ್ದಾರೆ. ಅಲ್ಲಿಯವರೆಗೆ ಅವರಿಗೆ ನೆಮ್ಮದಿ ಹಾಗೂ ನಿದ್ರೆಗಳಿಲ್ಲ. ಪ್ರಸ್ತುತ ವಿಧೇಯಕವು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಶಿಕ್ಷಕರ ವರ್ಗಾವಣೆಗೆ ಸಂಬಂಧಪಟ್ಟಿದ್ದು, ಇವರಿಗೆ ಮಾತ್ರವೇ ಸೀಮಿತ ಎಂದು ವಿಧೇಯಕದಲ್ಲಿ ತಿಳಿಸಲಾಗಿದೆ. ಆದರೆ ಪದವಿ ಪೂರ್ವ ಶಿಕ್ಷಣವು ಅತ್ಯಂತ ಪ್ರಮುಖವಾಗಿದೆ. ಅಲ್ಲಿನ ಶಿಕ್ಷಕರಿಗೂ ಸಹ ಇದೇ ಕಾಯ್ದೆಯನ್ನನುಸರಿಸಿ ವರ್ಗಾವಣೆ ಮಾಡಿದರೆ ಅದು ತೀರ ಅವೈಜ್ಞಾನಿಕವಾಗುತ್ತದೆ. ಆದ್ದರಿಂದ ದಯಮಾಡಿ ಹಾಲಿ ಇರುವ ನಿಯಮಗಳಿಗೂ ಸಹ ಕೆಲವು ಸೂಕ್ತವಾದ ತಿದ್ದುಪಡಿ ಮಾಡಬೇಕಾಗುತ್ತದೆಂದು ನಾನು ಒತ್ತಾಯ ಮಾಡುತ್ತೇನೆ. ಈ ವಿಚಾರದಲ್ಲಿ ಯಾವ ರೀತಿಯ ತಿದ್ದುಪಡಿಗಳನ್ನು ಮಾಡಬೇಕೆನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ಮತ್ತೊಮ್ಮೆ ನಮ್ಮೊಂದಿಗೆ ಸಮಾಲೋಚನೆ ಮಾಡಿದಾಗ ನಾನು ತಿಳಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೌನ್ಸಲಿಂಗ್ ಮುಖಾಂತರ ಶಿಕ್ಷಕರ ವರ್ಗಾವಣೆಯನ್ನು ಮಾಡಲಾಗುತ್ತದೆ. ಮಾನ್ಯ ಶ್ರೀಕಂಠೇಗೌಡರು ಪ್ರಸ್ತಾಪಿಸಿದಂತೆ, ಮಲ್ಲೇಶ್ವರಂನ ಶಾಲೆಯಲ್ಲಿ ಎರಡು ಸಾವಿರ ವಿದ್ಯಾರ್ಥಿಗಳಿದ್ದಾರೆ; ಹೀಗಾಗಿ ಇಲ್ಲಿ ಕೆಲಸದ ಒತ್ತಡ ಜಾಸ್ತಿ ಇರುವುದರಿಂದ ಇಲ್ಲಿಗೆ ಯಾವ ಶಿಕ್ಷಕರೂ ಬರುವುದಿಲ್ಲ. ಈ ರೀತಿಯ ಮನೋಭಾವನೆಯುಳ್ಳ ಶಿಕ್ಷಕರಿದ್ದಾರೆ. ನಮ್ಮ ಭಾಗದಲ್ಲಿ 13 ಕಿಲೋಮೀಟರ್ ದೂರದ ಶಾಲೆಗೆ ಶಿಕ್ಷಕರು ಹೋಗಿದ್ದಾರೆ. ಏಕೆಂದರೆ ಅಲ್ಲಿ ಕೇವಲ 42 ವಿದ್ಯಾರ್ಥಿಗಳಿದ್ದಾರೆ. ಅದೇ ಕೇವಲ 4 ಕಿಲೋಮೀಟರ್ ದೂರದ ಶಾಲೆಗೆ ಶಿಕ್ಷಕರು ಬರುವುದಿಲ್ಲ ಏಕೆಂದರೆ ಅಲ್ಲಿ 625 ವಿದ್ಯಾರ್ಥಿಗಳಿದ್ದಾರೆ. ಇಂತಹ ಸಂಗತಿಗಳಿಂದ ಸಮಾಜಕ್ಕೆ ಕೆಟ್ಟ ಸಂದೇಶ ಹೋಗುತ್ತದೆ. ಹೀಗಾಗಿ ನಿಯಮಾವಳಿಗಳಿಗೆ ತಿದ್ದುಪಡಿಯನ್ನು ಮಾಡಬೇಕು.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿವರಣೆ ನೀಡುವಾಗ ಪ್ರಾಸ್ತಾವಿಕವಾಗಿ ಹೇಳಿದರು. ಡಾ॥ವೈ.ಎ.ನಾರಾಯಣಸ್ವಾಮಿ ಸ್ವಲ್ಪ **ಕುತ್ಕೋಳೋ.** ಈ ವಿಧೇಯಕಕ್ಕೆ ಕಳೆದ ಮೂರು ವರ್ಷಗಳ ಹಿಂದೆ ತಿದ್ದುಪಡಿ ತರುವ ಸಂದರ್ಭದಲ್ಲಿ ಆದ ಅನಾಹುತ . . .

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಡಾ॥ ವೈ.ಎ.ನಾರಾಯಣಸ್ವಾಮಿಯವರು ಮಾನ್ಯ ಸದಸ್ಯರಾದ ಶ್ರೀ ಲಹರ್ ಸಿಂಗ್ ಸಿರೋಯಾರವರ ಆಸನದ ಬಳಿ ನಿಂತುಕೊಂಡು ಆಡಳಿತ ಪಕ್ಷದ ಕೆಲವು ಸದಸ್ಯರೊಂದಿಗೆ ಮಾತನಾಡುತ್ತಿದ್ದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಮಾತನಾಡುವಾಗ ಯಾರೂ ಮಾತನಾಡಬಾರದು. ಆದರೆ ನಾವುಗಳು ಮಾತನಾಡುವಾಗ ಮಾನ್ಯ ಸದಸ್ಯರು ಮಾತನಾಡಬಹುದೇ? ಇದರ ಬಗ್ಗೆ ಮಾನ್ಯ ಸದಸ್ಯರು ಹೇಳಬೇಕು. ಅಂದರೆ ಮಾನ್ಯ ಸದಸ್ಯರು ನನಗೆ 'ಕುತ್ಕೋಳ್ಳೋ' ಎಂದು ಹೇಳುತ್ತಾರೆ. What is the meaning of that? ದಯಮಾಡಿ ಮಾನ್ಯ ಸದಸ್ಯರು ಈ ಬಗ್ಗೆ ಹೇಳಬೇಕು. He is a senior Member. ಅವರು ನನ್ನನ್ನು ಯಾವ ರೀತಿ ಕರೆಯಬೇಕೆಂದು ...

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಎಂದೂ ಮಾತನಾಡುವಾಗ ನನ್ನನ್ನು ಈ ರೀತಿಯಾಗಿ ಗುರ್ತಿಸಿ ಹೇಳಿಲ್ಲ.

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸರಿಯಾಗಿ ಮಾತನಾಡಬೇಕು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವೈ.ಎ.ನಾರಾಯಣಸ್ವಾಮಿ ಕುತ್ಕೋಳ್ರೀ

**ಸಭಾಪತಿಯವರು:–** ಮಾನ್ಯ ಸದಸ್ಯರುಗಳೇ ಇದನ್ನು ಬಿಡಿ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರು ನನಗೆ ಹೇಳುತ್ತಾರೆ. ಮಾನ್ಯ ಸದಸ್ಯರಿಗೆ ಅದರ ಉಸಾಬರಿ ಏಕೆ?

**ಶ್ರೀ ಮರಿತಿಬ್ಬೇಗೌಡ:–** ನಾನು ಮಾನ್ಯ ಸಭಾಪತಿಯವರನ್ನು ಕೇಳುತ್ತಿದ್ದೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–**ಹಾಗಾದರೆ ಮಾನ್ಯ ಸದಸ್ಯರು ಮಾನ್ಯ ಸಭಾಪತಿಯವರಿಗೆ ಹೇಳಲಿ.

**ಶ್ರೀ ಮರಿತಿಬ್ಬೇಗೌಡ:–** ನಾನು ಮಾನ್ಯ ಸಭಾಪತಿಯವರನ್ನು ಕೇಳುತ್ತಿದ್ದೇನೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಮಾಡಿದ ತಿದ್ದುಪಡಿಯಲ್ಲಿ 'ಕಡ್ಡಾಯ ವರ್ಗಾವಣೆ' ಎನ್ನುವುದನ್ನು ತಂದಿರುವುದರಿಂದ ಏನೆಲ್ಲಾ ಅನಾಹುತವಾಯಿತು ಎಂಬ ಬಗ್ಗೆ ಮಾನ್ಯ ಸಚಿವರು ಪ್ರಾಸ್ತಾವಿಕವಾಗಿ ಮಾತನಾಡುವಾಗ ತಿಳಿಸಿದರು. ಆಗ ಎಷ್ಟು ಮಂದಿ ಮಹಿಳಾ ಶಿಕ್ಷಕಿಯರು ಹಾಗೂ ಪುರುಷ ಶಿಕ್ಷಕರು ಎಲ್ಲರೂ ಕೂಡ ಬಹಳ ಸಂಕೋಲೆಯಲ್ಲಿ... ಅವರ ಸಂಖ್ಯೆ ಕಡಿಮೆ ಇರಬಹುದು; ಆದರೆ ಅವರ ಜೀವನದಲ್ಲಿ ಎಂದೂ ಕೂಡ ನಿರೀಕ್ಷೆ ಮಾಡಿರದಂತಹ ತೊಂದರೆಗೆ ಅವರುಗಳು ಈಡಾದರು. ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗಳಲ್ಲಿ ವರ್ಗಾವಣೆ ಮಾಡಿದಾಗ ಶಿಕ್ಷಕರುಗಳಿಗೆ ತೊಂದರೆಯಾಯಿತು. ಆದರೆ ಕಳೆದ ಮೂರು ವರ್ಷಗಳಿಂದ ವರ್ಗಾವಣೆಯಾಗಿಲ್ಲ, ಅನಿವಾರ್ಯವಾಗಿ ಅವರುಗಳು ಹೋಗಲೇಬೇಕೆಂದು ಹೇಳಿ ಮಾನ್ಯ ಸಚಿವರು ಮಾಡಿದ ಮನವಿಯ ಮೇರೆಗೆ ಶಿಕ್ಷಕರುಗಳೆಲ್ಲರೂ ವರ್ಗಾವಣೆಯನ್ನು ಒಪ್ಪಿಕೊಂಡರು. ಆ ಸಂದರ್ಭದಲ್ಲಿ 'ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗಳಲ್ಲಿ ಈ ಸಾಲಿನಲ್ಲಿ ವರ್ಗಾವಣೆ ಹೊಂದಿದ ಶಿಕ್ಷಕರಿಗೆ ಮುಂದೆ ವರ್ಗಾವಣೆ ಮಾಡುವ ಸಂದರ್ಭದಲ್ಲಿ ಖಂಡಿತವಾಗಿಯೂ ಸಹ ಒಂದು ವಿಶೇಷ ಅವಕಾಶವನ್ನು ತಂದು ಕೊಡುವ' ಭರವಸೆಯನ್ನು ಮಾನ್ಯ ಸಚಿವರು ನೀಡಿದರು. ಒಂದು ವೇಳೆ ಹುದ್ದೆ ಖಾಲಿಯಿದ್ದರೆ ಅದೇ ಶಾಲೆಗೆ ಇಲ್ಲವೆಂದಾದರೆ ಪಕ್ಕದಲ್ಲಿನ ಯಾವುದಾದರೂ ಶಾಲೆಗೆ ಮಾನವೀಯತೆಯ ದೃಷ್ಟಿಯಿಂದ ವರ್ಗಾವಣೆ ಮಾಡಿಕೊಡುವುದಾಗಿ ಮಾನ್ಯ ಮಂತ್ರಿಗಳು ಹೇಳಿದರು. ಇದರಿಂದ ಶಿಕ್ಷಕರಿಗೆ ತೊಂದರೆಯಾದರೂ ಸಹ ಅನಿವಾರ್ಯವಾಗಿ ವರ್ಗಾವಣೆ ಮಾಡುವುದಾಗಿ ಮಾನ್ಯ ಮಂತ್ರಿಗಳು ತಿಳಿಸಿದರು. ಈ ವಿಧೇಯಕದ ಹೊರತಾಗಿಯೂ ಸಹ ಶಿಕ್ಷಕರಿಗೆ ನೀಡಿದ ವಾಗ್ದಾನವನ್ನು ನಡೆಸಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಮತ್ತೊಮ್ಮೆ ಮನವಿ ಮಾಡುತ್ತೇನೆ. ಏಕೆಂದರೆ ಶಿಕ್ಷಕರು ಸಂಕಷ್ಟದಲ್ಲಿದ್ದಾರೆ.

ವಿಧೇಯಕದ ಪುಟ ಸಂಖ್ಯೆ (3) ರ ನಿಯಮ (7) ರಲ್ಲಿ **'ಪರಂತು ಏಪ್ರಿಲ್ ಮತ್ತು ಮೇ ತಿಂಗಳಿನ ತರುವಾಯವೂ ವಿಶೇಷ ಸನ್ನಿವೇಶಗಳಲ್ಲಿ ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ರಾಜ್ಯ ಸರ್ಕಾರದ ನಿರ್ದೇಶನದ ಮೇಲೆ ವರ್ಗಾವಣೆಯನ್ನು ಮಾಡಬಹುದು'** ಎಂದು ನಮೂದಿಸಲಾಗಿದೆ. ಇದು ಮಾನ್ಯ ಶಿಕ್ಷಣ ಸಚಿವರಿಗೆ ಮಾತ್ರವಲ್ಲದೇ ರಾಜ್ಯದ ಮುಖ್ಯಮಂತ್ರಿಗಳಿಗೂ ಸಹ ಮೊದಲು ನಿದ್ದೆ ಕೆಡಿಸಿ ಬಿಡುತ್ತದೆ. ಮಾನ್ಯ ಸಚಿವರು ಅವರ ಕಛೇರಿಯಲ್ಲಿ ಯಾರಿಗೂ ಸಹ ದೊರೆಯದಂತಾಗಿ ಬಿಡುತ್ತಾರೆ. ಈಗ ರಾಜ್ಯಾದ್ಯಂತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಗೆ ಏನೆಲ್ಲಾ ಕೆಲಸ ಕಾರ್ಯಗಳಿವೆ... ಅವರು ರಾಜ್ಯದ ಮೂಲೆಮೂಲೆಗೂ ಅಂದರೆ ಗಡಿ ಭಾಗದ ಜಿಲ್ಲೆಗಳಿಗೂ ಸಹ ಭೇಟಿ ನೀಡಿ ವಾಸ್ತವ್ಯ ಮಾಡುತ್ತಾರೆ. ನಾನು ಅವರನ್ನು ಮೆಚ್ಚಿಸುವುದಕ್ಕಾಗಿ ಈ ಮಾತನ್ನು ಹೇಳುತ್ತಿಲ್ಲ. ಇದು ಶಿಕ್ಷಣ ಇಲಾಖೆ ಹಾಗೂ ವಿದ್ಯಾರ್ಥಿಗಳ ಬಗ್ಗೆ ಮಾನ್ಯ ಮಂತ್ರಿಗಳಿಗಿರುವ ಕಾಳಜಿ ಎಂದು ನಾನು ಭಾವಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಗಾವಣೆಯ ಕೌನ್ಸಲಿಂಗ್ ಅವಧಿ ಮುಗಿದ ಮೇಲೆ ಶಿಕ್ಷಕರು ತಮ್ಮ ಕಷ್ಟ ಸುಖಗಳನ್ನು ಹೇಳಿಕೊಳ್ಳುತ್ತಾರೆ. ಆಗ ಅವರಿಂದ ಲಿಖಿತವಾಗಿ ಪಡೆದುಕೊಂಡು ವರ್ಗಾವಣೆ ಮಾಡಬಹುದುದೆಂದು ...

**ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಮಂತ್ರಿ):-** ಮಾನ್ಯ ಸಭಾಪತಿಯವರೇ, ಈ ಎರಡು ಸಾಲುಗಳು individual cases ಗಳಿಗಲ್ಲ. ಉದಾಹರಣೆಗೆ ಹೇಳುವುದಾದರೆ, ಏಪ್ರಿಲ್ ಮತ್ತು ಮೇ ತಿಂಗಳುಗಳ ಅವಧಿಯಲ್ಲಿ ಚುನಾವಣೆ ಬಂದರೆ ಶಿಕ್ಷಕರ ವರ್ಗಾವಣೆ ಮಾಡುವುದಕ್ಕಾಗುವುದಿಲ್ಲ. ದೇವರ ದಯೆಯಿಂದ ಕರೋನಾ ವೈರಸ್ ಅಂತಹ ಕಾಯಿಲೆಗಳು ಮರುಕಳಿಸುವುದು ಬೇಡ. ಒಂದು ವೇಳೆ ಈ ರೀತಿಯ ಕಾಯಿಲೆಗಳು ಬಂದಾಗ ಕ್ಲಿಷ್ಟ ಪರಿಸ್ಥಿತಿಯಲ್ಲಿ ನಾವು ಮುಳುಗಿ ಹೋಗುತ್ತೇವೆ. ಈ ರೀತಿಯ ಬೇರೆ ಬೇರೆ ಪ್ರಸಂಗಗಳು ಎದುರಾದಾಗ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ವರ್ಗಾವಣೆ ಮಾಡುವುದಕ್ಕಾಗುವುದಿಲ್ಲ ಅಂತಹ ಸಂದರ್ಭಗಳಲ್ಲಿ ಸರ್ಕಾರದ ಅನುಮತಿ ಪಡೆದು ವರ್ಗಾವಣೆ ಪ್ರಕ್ರಿಯೆಗೆ ಚಾಲನೆ ನೀಡುತ್ತೇವೆ. ಇದು individual cases ಗಳಿಗಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈ ಎರಡು ಸಾಲುಗಳಿಂದ ನಾಳೆಯ ದಿವಸ ಸರ್ಕಾರವು ಬಹಳ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ. ಏಕೆಂದರೆ ಮೇಷ್ಟ್ರುಗಳು ಅಷ್ಟು ಸುಲಭವಾಗಿ ಬಿಡುವುದಿಲ್ಲ. ನಾನು ಶಿಕ್ಷಕರ ಪ್ರತಿನಿಧಿಯಾಗಿ ಇಲ್ಲಿಗೆ ಬಂದಿದ್ದೇನೆ. ಇವತ್ತಿನ ದಿವಸ ವಿದ್ಯಾರ್ಥಿಗಳಿಗೆ ಗುಣಾತ್ಮಕವಾದ ಶಿಕ್ಷಣವನ್ನು ಕೊಡಬೇಕೆನ್ನುವ ಹಿನ್ನಲೆಯಲ್ಲಿ ಸರ್ಕಾರವು ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಪರವಾಗಿ ಪ್ರಸ್ತುತ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದಿದೆ.

**(ಮುಂದು)**

(544)/18-3-2020/6-30/ಎಲ್ಎಂ/ಎಂಡಿ

**ಶ್ರೀ ಮರಿತಿಬ್ಬೇಗೌಡ(ಮುಂದು):-** ಇದನ್ನು ನಾವು ಸ್ವಾಗತಿಸುತ್ತೇವೆ. ಈ ವಿಧೇಯಕದಲ್ಲಿ ಬಹಳಷ್ಟು ನ್ಯೂನತೆಗಳನ್ನು ಸರಿಪಡಿಸುವಂತಹ ಕೆಲಸವನ್ನು ಮಾಡಿದ್ದೀರಿ ನಾವು ಸ್ವಾಗತ ಮಾಡುತ್ತೇವೆ. ಆದರೆ ಎರಡು ಲೈನ್ ಮಾತ್ರ ಎಲ್ಲರನ್ನೂ ಕುಕ್ಕಿ ಹಾಕಿ ತಿನ್ನುತ್ತದೆ. ದಯಮಾಡಿ ಇದನ್ನು ತೆಗೆದುಬಿಡಿ. ಚುನಾವಣೆ ಬರಲಿ, ಕೊರೋನಾ ಬಂದು ಜಗತ್ತೆ ಮುಳುಗಲಿ ಕೌನ್ಸಿಲಿಂಗ್ ಮೂಲಕವೇ ವರ್ಗಾವಣೆಯಾಗಬೇಕು. ಇದರಿಂದ ಆ ಮಕ್ಕಳಿಗೆ ನ್ಯಾಯ ಕೊಟ್ಟಹಾಗೆ ಆಗುತ್ತದೆ. ಇದಕ್ಕಾಗಿ ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶೇಷವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಧೇಯಕದಲ್ಲಿ 50 ವರ್ಷಗಳಾದ ಮಹಿಳೆಯರಿಗೆ, 55 ವರ್ಷಗಳಾದ ಪುರುಷರಿಗೆ ವಿಶೇಷ ವಿನಾಯಿತಿಗಳನ್ನು ಕೊಟ್ಟಿದ್ದೀರಿ. ಇದೆಲ್ಲಕ್ಕೂ ನಮ್ಮ ಸಹಮತಿ ಇದೆ. ಈ ವಿಧೇಯಕವನ್ನು ತಿದ್ದುಪಡಿ ಮಾಡಿ ತರುತ್ತಿರುವುದು ಮೂರನೇ ಅಥವಾ ನಾಲ್ಕನೆ ಬಾರಿ. ಮೊದಲು ಈ ವಿಧೇಯಕವನ್ನು ತಂದವರು ಶ್ರೀ ಬಸವರಾಜ ಹೊರಟ್ಟಿಯವರು. ಅವರು ಶಿಕ್ಷಣ ಸಚಿವರಾಗಿದ್ದಾಗ ಇದರಲ್ಲಿ ಇರುವ ಕೊಳಕನ್ನು ತೊಳೆದು, ಶುದ್ಧ ಮಾಡಿದ್ದಾರೆ. ಇದು ದೇಶದಲ್ಲಿಯೇ ಮಾದರಿ ವಿಧೇಯಕ. ಇದರ ಶ್ರೇಷ್ಠತೆ ತಮಗೆ ಸೇರಬೇಕು. ಈ ವಿಧೇಯಕಕ್ಕೆ ನಮ್ಮ ಸಹಮತವನ್ನು ವ್ಯಕ್ತ ಮಾಡಿ ತಮ್ಮನ್ನು ಅಭಿನಂದಿಸುತ್ತೇನೆ. ನಿಯಮಗಳನ್ನು ರೂಪಿಸುವಾಗ ದಯಮಾಡಿ ನಾವು ಶಾಸಕರು ಕೊಟ್ಟಿರುವ ಸಲಹೆ – ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಬೇಕು. ಅಧಿಕಾರಿಗಳನ್ನು ನಂಬಿದರೆ ಮತ್ತೊಂದು ಅಪರಾಧವಾಗುತ್ತದೆ. ಈ ಕಾಯಿದೆಯಲ್ಲಿ ಕಡ್ಡಾಯ ಅದು ಇದು ಎಲ್ಲ ನ್ಯೂನತೆಗಳು ಬರಲು ಕೆಲವು ಅಧಿಕಾರಿಗಳು ಕಾರಣ. ಅಂತಹ ಕೆಲವು ಅಧಿಕಾರಿಗಳು ಈಗಲೂ ಇದ್ದಾರೆ, ಮುಂದೆಯು ಇರುತ್ತಾರೆ. ಆದ್ದರಿಂದ ನಿಯಮ ರೂಪಿಸುವಾಗ ದಯಮಾಡಿ ಸದನದ ಎಲ್ಲ ಸದಸ್ಯರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಬೇಕೆಂದು ಮತ್ತೊಮ್ಮೆ ವಿನಂತಿ ಮಾಡಿಕೊಂಡು, ಈ ವಿಧೇಯಕಕ್ಕೆ ಬೆಂಬಲವನ್ನು ವ್ಯಕ್ತಪಡಿಸಿ, ತಮಗೆ ಮತ್ತೊಮ್ಮೆ ಅಭಿನಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್( ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, ಶ್ರೀ ಶರಣಪ್ಪ ಮಟ್ಟೂರು ರವರಿಂದ ಪ್ರಾರಂಭವಾಗಿ ಶ್ರೀ ಮರಿತಿಬ್ಬೇಗೌಡರವರೆಗೆ ಸುಮಾರು 17ಜನ ಗೌರವಾನ್ವಿತ ಸದಸ್ಯರು ಈ ವಿಧೇಯಕದ ಬಗ್ಗೆ ಮಾತನಾಡಿ ಬೆಂಬಲವನ್ನು ಸೂಚಿಸಿದ್ದಾರೆ ಹಾಗೆಯೇ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಮರಿತಿಬ್ಬೇಗೌಡರು ನಮ್ಮ ಮೇಸ್ಟ್ರುಗಳು ಏನು ಸಾಮಾನ್ಯದವರಲ್ಲ ಎಂದು ಹೇಳಿದರು. ಒಂದು challenging portfolio ಎಂದರೆ ಶಿಕ್ಷಣ ಇಲಾಖೆ. ಬಹಳ ದೊಡ್ಡ challenge ಇದೆ. ಅದಕ್ಕೆ ನಾನು ಶಿಕ್ಷಕರು ನನ್ನ ಹತ್ತಿರ ಬಂದಾಗ ಶಿಕ್ಷಕರ ದಿನಾಚರಣೆಯನ್ನು ಯಾರ ಹೆಸರಿನಲ್ಲಿ ಮಾಡೋಣ ಎಂದು ಹಾಸ್ಯ ಮಾಡುತ್ತೇನೆ. ಶ್ರೀ ರಾಧಾ ಕೃಷ್ಣನ್‌ರವರ ಹೆಸರಿನಲ್ಲಿ ಮಾಡುವುದು ಸರ್ ಎಂದು ಹೇಳುತ್ತಾರೆ. ಶ್ರೀ ರಾಧಾ ಕೃಷ್ಣನ್‌ರವರೆ ಶಿಕ್ಷಣ ಸಚಿವರಾದರೂ ನಿಮ್ಮ ಸಮಸ್ಯೆಗಳನ್ನು ಪರಿಹರಿಸುವುದು ಕಷ್ಟ ಎಂದು ಹೇಳುತ್ತೇನೆ. ಬಹಳ ವರ್ಷಗಳಿಂದ accumulate ಆಗಿ ತುಂಬಾ ಸಮಸ್ಯೆಗಳಿವೆ. ಇವತ್ತು ಬಹಳ ಚೆನ್ನಾಗಿ ಬಹಳ ಪ್ರಶಾಂತವಾದ ವಾತಾವರಣದಲ್ಲಿ ಚರ್ಚೆಯಾಗಿದೆ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಈ ಶಿಕ್ಷಕರ ವರ್ಗಾವಣೆ ವಿಧೇಯಕದ ಮೇಲೆ ಚರ್ಚೆಯಾದ ಹಾಗೆ, 7 ದಿವಸಗಳಿಂದ ಸಂವಿಧಾನದ ಮೇಲೆ ಚರ್ಚೆಯಾದ ಹಾಗೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ದಿವಸ ಶಿಕ್ಷಣದ ಬಗ್ಗೆ ಚರ್ಚೆ ಮಾಡೋಣ. ಶಿಕ್ಷಣದ ಬಗ್ಗೆ, ಶಿಕ್ಷಣ ಕ್ಷೇತ್ರದಲ್ಲಿ ಯಾವ ರೀತಿ ಅಭಿವೃದ್ಧಿಯಾಗಬೇಕು, ಯಾವ ರೀತಿ improvement ತರಬೇಕು ಎನ್ನುವುದನ್ನು ಮತ್ತು ವಿಶೇಷವಾಗಿ ಸರ್ಕಾರಿ ಶಾಲೆಗಳನ್ನು ಉಳಿಸುವುದು ಹೇಗೆ, ಸಬಲೀಕರಣವಾಗುವುದು ಹೇಗೆ ಎನ್ನುವುದರ ಬಗ್ಗೆ ದಯಮಾಡಿ ಚರ್ಚೆಯಾಗಬೇಕು. ನಾವೆಲ್ಲರೂ ಸರ್ಕಾರಿ ಶಾಲೆಗಳು ಸಬಲೀಕರಣಗೊಳ್ಳಬೇಕು ಎಂದು ಹೇಳುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಶಿಕ್ಷಣ ಕ್ಷೇತ್ರದ ಬಗ್ಗೆ ಚರ್ಚೆಯಾಗಬೇಕೆಂದು ಮಾನ್ಯ ಶಿಕ್ಷಣ ಸಚಿವರು ಹೇಳುತ್ತಿದ್ದಾರೆ. ಆ ಚರ್ಚೆಯಲ್ಲಿ ಶಿಕ್ಷಕರ ವರ್ಗಾವಣೆಯ ವಿಚಾರ ಬರುತ್ತದೆಯೋ ಇಲ್ಲವೋ ಎಂದು ಕೇಳುತ್ತಿದ್ದೇನೆ.

**ಶ್ರೀ ಎಸ್. ಸುರೇಶ್ ಕುಮಾರ್:-** ಮಾನ್ಯ ಸಭಾಪತಿಗಳೆ, ದೊಡ್ಡ ಸಂಖ್ಯೆಯಲ್ಲಿ ಶಿಕ್ಷಕರು ಮತ್ತು ನೌಕರರು ಇರುವುದು ಶಿಕ್ಷಣ ಇಲಾಖೆಯಲ್ಲಿ ಎಂದು ಮಾನ್ಯ ಶ್ರೀ ಎಸ್.ಆರ್.ಪಾಟೀಲ್‌ರವರು ಹೇಳಿದರು. ಆದರೆ ಶಿಕ್ಷಣ ಇಲಾಖೆಯಲ್ಲಿ main stake holders ಆ ಮಕ್ಕಳು ಎನ್ನುವುದನ್ನು ಮರೆತು ಬಿಡುತ್ತೇವೆ. ಆ ಮಕ್ಕಳ ಬಗ್ಗೆ ನಾವು ಯಾರು ಮಾತನಾಡುವುದೇ ಇಲ್ಲ. ಏಕೆಂದರೆ ಮಕ್ಕಳ ಓಟ್ ಇಲ್ಲ, ಮಕ್ಕಳ ಸಂಘಟನೆಗಳು ಇಲ್ಲ. ಇದರಿಂದ ಅವರ ಬಗ್ಗೆ ನಾವು ಮಾತನಾಡುತ್ತಿಲ್ಲ. ಅದಕ್ಕಾಗಿ ನಾನು ಯಾವುದೇ ಶಾಲೆಗೆ ಭೇಟಿ ಕೊಟ್ಟಾಗ ಮಕ್ಕಳ ಜೊತೆಯಲ್ಲಿ ಸಂವಾದ ಮಾಡುವುದನ್ನು ಪ್ರಾರಂಭ ಮಾಡಿದ್ದೇನೆ. ಅವರ ಮನಸ್ಸಿನಲ್ಲಿ ಏನಿದೆ ಎನ್ನುವುದನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡುತ್ತಿದ್ದೇನೆ. ಈಗ ತಂದಿರುವ ವಿಧೇಯಕ ಎಲ್ಲಾ ಸಮಸ್ಯೆಗಳಿಗೆ ರಾಮಬಾಣ ಎಂದು ನಾನು ಹೇಳುವುದಿಲ್ಲ. ಆದರೆ 80% ಸಮಸ್ಯೆಗಳಿಗೆ ಪರಿಹಾರವನ್ನು ಕೊಡಲು ಸಾಧ್ಯವಾಗುತ್ತದೆ. ತಾವೇ ಹೇಳಿದ ಹಾಗೆ ವಿಧೇಯಕ ಎಷ್ಟೆ ಚೆನ್ನಾಗಿದರೂ ಅನುಷ್ಠಾನ ಚೆನ್ನಾಗಿ ಆಗಬೇಕು. ಅದಕ್ಕೆ discretion ಗೆ ಅವಕಾಶ ಕೊಡಬಾರದು. ಎಷ್ಟು ಕಡಿಮೆ ಕೊಡಲು ಸಾಧ್ಯ ಅಷ್ಟು ಕಡಿಮೆ ಕೊಡಬೇಕು. ಬೇರೆ ಎಲ್ಲ ಇಲಾಖೆಗಿಂತ ಅದು ಒಳ್ಳೆಯದು ಕೆಟ್ಟದ್ದೊ ಎನ್ನುವುದನ್ನು ಸದಸ್ಯರೆ ಹೇಳಬೇಕು, 60% ರಷ್ಟು ಮಹಿಳಾ ಶಿಕ್ಷಕಿಯರೆ ಇರುವುದು. ಶಿಕ್ಷಕರ ಸಂಖ್ಯೆ ಕಡಿಮೆ, ಶಿಕ್ಷಕಿಯರ ಸಂಖ್ಯೆ ಜಾಸ್ತಿ. ಮಹಿಳಾ ಶಿಕ್ಷಕಿಯರಿಗೆ ಅವರದೇ ಆದ ಅನೇಕ ಸಮಸ್ಯೆಗಳು ಇವೆ. ಆ ಸಮಸ್ಯೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಈ ವಿಧೇಯಕವನ್ನು ತಂದಿರುವುದು. ಮಾನ್ಯ ಕೊಂಡಯ್ಯನವರು, ಮಾನ್ಯ ಮರಿತಿಬ್ಬೇಗೌಡರು ಶಿಕ್ಷಕರ ಬಗ್ಗೆ ಹೇಳಿದರು. ನಿಜ ಶಿಕ್ಷಕರ ಮಧ್ಯಯು ಅನೇಕ ಕೊರತೆಗಳು ಇವೆ. ಅವರ ಬದಲು ಬೇರೆ ಶಿಕ್ಷಕರನ್ನು ಕಳುಹಿಸುವುದು, ಶಾಲೆಗೆ ಬರದೆ ಇರುವುದು ಅಥವಾ ಹಣದ ವ್ಯವಹಾರ ಮಾಡಿಕೊಂಡು ಇರುವುದು. ಹೆಸರಿಗೆ ಶಿಕ್ಷಕರಾಗಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದು ಹಣದ ವ್ಯವಹಾರ. ಆದರೆ with all the authority at my command ನಾನು ಒಂದು ಮಾತನ್ನು ಹೇಳುತ್ತೇನೆ. ಶಿಕ್ಷಕರ ಕೆಲಸ ಬೇರೆ ಎಲ್ಲಾ ಇಲಾಖೆಗಳ ಸಿಬ್ಬಂದಿಗಳಿಗಿಂತ ಹೆಚ್ಚು ಪ್ರಮಾಣಿಕತೆಯಿಂದ ನಡೆಯುತ್ತಿದೆ ಎಂದು ನಾನು ವಿಶ್ವಾಸದಿಂದ ಹೇಳುತ್ತೇನೆ. Remote ಗ್ರಾಮಗಳಲ್ಲಿ ಮಕ್ಕಳಿಗೆ ಕಲಿಸುತ್ತಿದ್ದಾರೆ. ಅವರ ತೊಂದರೆಗಳನ್ನು ನೀಗಿಸಬೇಕು ಎನ್ನುವುದು ಈ ವಿಧೇಯಕದ ಉದ್ದೇಶ. 17 ಜನ ಗೌರವಾನ್ವಿತ ಸದಸ್ಯರೆಲ್ಲರೂ ತುಂಬಾ valid ಆಗಿ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಶ್ರೀ ಬಸವರಾಜ ಹೊರಟ್ಟಿಯವರು ಹೇಳಿದ ಹಾಗೆ ನಿಯಮಗಳನ್ನು ಮಾಡುವಾಗ ಅವರ ಜೊತೆಯಲ್ಲಿ ಮತ್ತೆ ಮಾತನಾಡುತ್ತೇನೆ. ಆ ನಿಯಮಗಳೆಲ್ಲವನ್ನು ಈ ವಿಧೇಯಕದಲ್ಲಿ ಅಳವಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಮತ್ತು ಪ್ರಾಮಾಣಿಕ ಕ್ರಮ ತೆಗೆದುಕೊಳ್ಳುತ್ತೇನೆ. ದಯಮಾಡಿ ಈ ವಿಧೇಯಕಕ್ಕೆ ಬೆಂಬಲ ಸೂಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"2020 ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸುವುದು."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>

<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.</u>

<u>ಖಂಡ 2 ರಿಂದ 20 ರವರೆಗೆ</u>

**ಸಭಾಪತಿಯವರು:-** "ಖಂಡ 2 ರಿಂದ 20ರವರೆಗೆ ಈ ವಿಧೇಯಕದ ಅಂಗವಾಗಿರುತ್ತದೆ"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

(ಖಂಡ 2 ರಿಂದ 20ವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಸಭಾಪತಿಯವರು:- ಪ್ರಸ್ತಾವ ಏನೆಂದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಸ್ ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020 ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ "2020 ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸುವುದು "

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

(545)18-032020(06-40)bsd/md

**8. ಪ್ರಕಟಣೆ**

**ಸಭಾಪತಿಯವರು:–** ರಾಜ್ಯದಲ್ಲಿ ವ್ಯಾಪಕವಾಗಿ ಹರಡುತ್ತಿರುವ Novel Coronavirus (COVID-19) ಅನ್ನು ಗಮನದಲ್ಲಿಟ್ಟುಕೊಂಡು ಮುಂಜಾಗ್ರತಾ ಕ್ರಮವಾಗಿ ಕರ್ನಾಟಕ ವಿಧಾನ ಪರಿಷತ್ತಿನ ಸಭಾಂಗಣದ ಸಾರ್ವಜನಿಕರ ಹಾಗೂ ಸಭಾಪತಿಯವರ gallery ಗಳಿಗೆ ಮುಂದಿನ ಆದೇಶದವರೆಗೆ ಪ್ರವೇಶವನ್ನು ನಿರ್ಬಂಧಿಸಲು ತೀರ್ಮಾನಿಸಲಾಗಿದೆ. ಆದ್ದರಿಂದ ಸಾರ್ವಜನಿಕರು ಹಾಗೂ ಸಭಾಪತಿಯವರ gallery ಗಳಿಗೆ pass ಅನ್ನು ವಿತರಿಸಲು ಶಿಫಾರಸ್ಸು ಮಾಡಬಾರದೆಂದು ಮಾನ್ಯ ಶಾಸಕರನ್ನು ಈ ಮೂಲಕ ಕೋರಲಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

9. **ರಾಜ್ಯದಲ್ಲಿ ಕೋವಿಡ್-19(ಕೊರೊನಾ ವೈರಸ್) ವೈರಸ್ ಹರಡುವಿಕೆಯ ನಿಯಂತ್ರಣ ಹಾಗೂ ಕೈಗೊಳ್ಳಲಾಗುತ್ತಿರುವ ಮುನ್ನೆಚ್ಚರಿಕೆಗಳಿಗೆ ಸಂಬಂಧಿಸಿದಂತೆ ಸಚಿವಸಂಪುಟ ಸಭೆಯ ತೀರ್ಮಾನಗಳ ಬಗ್ಗೆ ಸಚಿವರಿಂದ ವಿವರಣೆ ಮತ್ತು ಚರ್ಚೆ.**

**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಕರ್ನಾಟಕದಲ್ಲಿ ಇಲ್ಲಿವರೆಗೂ 14 ಜನರು Coronavirus (COVID-19) ನಿಂದ positive ಎಂದು ದೃಢಪಟ್ಟಿದ್ದು, ತಕ್ಷಣ ರಾಜ್ಯದ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಯಡಿಯೂರಪ್ಪನವರು ಸಚಿವ ಸಂಪುಟವನ್ನು ಕರೆದು ಕೆಲವೊಂದು ತೀರ್ಮಾನಗಳನ್ನು ತೆಗೆದುಕೊಂಡಿದ್ದು, ಈ ತೀರ್ಮಾನಗಳ ಬಗ್ಗೆ ಸಭೆಗೆ ತಿಳಿಸುವಂತಹ ಕೆಲಸ ಮಾಡುತ್ತೇನೆ.

ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ಒಂದು Task Force ರಚಿಸಲಾಗಿದ್ದು, ಈ Task Force ನಲ್ಲಿ ಉಪ ಮುಖ್ಯಮಂತ್ರಿಗಳಾದ ಡಾ॥ ಅಶ್ವಥನಾರಾಯಣರವರು, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ॥ಸುಧಾಕರ್‌ರವರು, ಮಾನ್ಯ ಗೃಹ ಸಚಿವರಾದ ಬಸವರಾಜ ಬೊಮ್ಮಾಯಿರವರು ಮತ್ತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸದಸ್ಯರಾಗಿರುತ್ತಾರೆ. ಈ ಮಾರಕ Coronavirus ಅನ್ನು ತಡೆಗಟ್ಟಲು ಮಾನ್ಯ ಮುಖ್ಯಮಂತ್ರಿಯವರು ರೂ.200 ಕೋಟಿಗಳನ್ನು ಮೀಸಲಾಗಿಟ್ಟಿದ್ದಾರೆ. ಮಾರ್ಚ್ 31ನೇ ತಾರೀಖಿನವರೆಗೆ Cinema Theatre ಗಳು, Mall ಗಳು, Pub ಗಳು, ಜಾತ್ರೆ ಮತ್ತು ಉತ್ಸವಗಳು, ಕ್ರೀಡಾ ಕೂಟಗಳು, Summer Camp ಗಳು, ಸಾರ್ವಜನಿಕ ಸಭೆಗಳು ಹಾಗೂ ಎಲ್ಲ ಸಾರ್ವಜನಿಕರ ಸ್ಥಳಗಳಲ್ಲಿ ಜನರು ಸೇರದಂತೆ ನಿಷೇಧವನ್ನು ಹೇರಲಾಗಿದೆ. ಅದೇ ರೀತಿ Airport ಗಳಲ್ಲಿ ಬರುವ ಪ್ರವಾಸಿಗರನ್ನು home quarantine ನಲ್ಲಿಟ್ಟು, ಎಲ್ಲಾ ಜನರಿಗೆ stamping ಮಾಡಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಗಿದೆ. ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಸಾರ್ವಜನಿಕರಿಗೆ ಪ್ರವೇಶವನ್ನು ನಿಷೇಧಿಸಲಾಗಿದೆ. ಈ ಎಲ್ಲಾ ನಿರ್ಧಾರಗಳನ್ನು ಸಚಿವ ಸಂಪುಟದಲ್ಲಿ ತೆಗೆದುಕೊಳ್ಳಲಾಗಿದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

**ಶ್ರೀ ಐವನ್ ಡಿಸೋ'ಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಂಗಳೂರಿನಲ್ಲಿ ನಿನ್ನೆ ಮತ್ತು ಇವತ್ತು ವಿದೇಶದಿಂದ positive ಆಗಿವವರು Airport ಗಳಿಗೂ ಬರುತ್ತಿದ್ದು, ದಯಮಾಡಿ International Airport ಗಳನ್ನು close ಮಾಡಬೇಕು. ಈಗ ಎಲ್ಲವೂ International Airport ಗಳಿಂದ ಬರುತ್ತಿದೆ. ಹಾಗಾಗಿ ಮಂಗಳೂರಿನಲ್ಲಿ ಏನೇನು ಆಗಿದೆ, ಎಲ್ಲ International Airport ಗಳಿಂದ ಬಂದಿರುವ passenger ಗಳ ಮುಖಾಂತರವೇ ಆಗಿದೆ.

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದ್ದರಿಂದ International Airport ಗೆ ಬರುವಂಥ flight ಗಳನ್ನು close ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು test ಮಾಡುವಂತಹ Lab ಗಳು establishment ಆಗಿಲ್ಲ. ಹಾಗಾಗಿ ಅದರಿಂದ ತುಂಬಾ ತೊಂದರೆಗಳಾಗುತ್ತಿದ್ದು, ಅದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ರೂ.200 ಕೋಟಿಗಳನ್ನು ಬಿಡುಗಡೆ ಮಾಡಿದ್ದಾರೆ. ಮತ್ತೆ ಮಂಗಳೂರಿನಲ್ಲಿ Private Hospitals cooperate ಮಾಡುತ್ತಿಲ್ಲ. ಯಾವ ಆಸ್ಪತ್ರೆಯಲ್ಲಿಯೂ DC ಯವರು visit ಮಾಡುತ್ತಿಲ್ಲ ಮತ್ತು ward ಗಳನ್ನು ಮೀಸಲಿಡುತ್ತಿಲ್ಲ. Government Hospital ಗೆ ಬಂದವರನ್ನು ಅಲ್ಲಿಗೆ ಕಳುಹಿಸಿದಾಗ refuse ಮಾಡಿ ಹಿಂದಕ್ಕೆ ಕಳುಹಿಸಿದ್ದಾರೆ. ದಯವಿಟ್ಟು Private Medical College Hospitals ಗಳಿಗೆ Government Hospital ಗಳಿಂದ ರೋಗಿಗಳನ್ನು ಕಳುಹಿಸಿಕೊಟ್ಟರೆ test ಮಾಡದೇ ಹಿಂದಕ್ಕೆ ಕಳುಹಿಸಿಕೊಡುತ್ತಾರೆ. ನಮ್ಮಲ್ಲಿ Bed ಗಳು ಇಲ್ಲ, ನಮಗೆ ಬೇಕಾದ ಜನ ಇಲ್ಲ, Isolated Ward ಇಲ್ಲವೆಂದು ಹೇಳಿ ಹಿಂದಕ್ಕೆ ಕಳುಹಿಸುತ್ತಿದ್ದಾರೆ. ಇದರ ಬಗ್ಗೆ strict ಆಗಿ ಕ್ರಮ ತೆಗೆದುಕೊಳ್ಳದಿದ್ದರೆ ತಡೆಗಟ್ಟಲು ಕಷ್ಟ ಇದೆ.

**ಡಾ॥ ಜಯಮಾಲ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈಗ ನಮ್ಮಿಬ್ಬರಲ್ಲಿಯೇ contradictory ಇದೆ. ಏಕೆಂದರೆ, ನನ್ನ ಮಗಳು LondonAirport ಗೆ ಬಂದಿದ್ದು, ಅಲ್ಲಿ flight ಇಲ್ಲ. ಇವತ್ತು ಈ ರೋಗವು ಬಹಳವಾಗಿ ಹರಡಿದ್ದು Professors ಗಳಿಗೂ ಸೋಂಕು ತಟ್ಟಿದೆ. ಒಂದೊಂದು ದಿವಸಕ್ಕೆ 40 cases ಗಳು ಜಾಸ್ತಿಯಾಗುತ್ತಿವೆ. Airport ನಲ್ಲಿರುವವರು ಇಲ್ಲಿಗೆ ಬರುವ ಹಾಗೆ ಇಲ್ಲ. ಮಾನ್ಯ ಸಭಾಪತಿಯವರೇ, ಏನು ಮಾಡಬೇಕೆಂದು ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಎಷ್ಟೋ ಮಕ್ಕಳು ಇವತ್ತು London Airport ನಲ್ಲಿ ಸಿಕ್ಕಿಹಾಕಿಕೊಂಡಿವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದಕ್ಕೆ ನನ್ನ ಸಲಹೆ ಏನೆಂದರೆ, Airport ಬಂದ್ ಆದ ನಂತರ ದೊಡ್ಡ ದೊಡ್ಡ ಹೊಟೇಲ್‌ಗಳಿಗೆ ಅವರನ್ನು ಇಟ್ಟು, ಅಲ್ಲಿಯೇ ಚರ್ಚೆ ಮಾಡಿ, ಅಲ್ಲಿಯೇ treatment ಮಾಡಬೇಕು ಮತ್ತು positive ಇದ್ದರೆ ಅಲ್ಲಿಯೇ ಇಡಬೇಕು, negative ಇದ್ದರೆ ಕಳುಹಿಸಿಕೊಡುವ ವ್ಯವಸ್ಥೆ ಆಗಬೇಕು. ನಮ್ಮ ಮಾನ್ಯ ಜಯಮಾಲರವರ ಮಗಳು ಇರಬಹುದು ಅಥವಾ ಮಾನ್ಯ ಅರಣ್ಯ ಸಚಿವರ ಮಗಳು ಇರಬಹುದು,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಇಟಲಿಯಲ್ಲಿ ಕುಳಿತಿದ್ದಾರೆ, International Airport ಅನ್ನು ಬಂದ್ ಮಾಡಿದರೆ ಅವರ ಪರಿಸ್ಥಿತಿ ಏನಾಗುತ್ತದೆ? ಸರ್ಕಾರವು ಇದರ ಬಗ್ಗೆ ಒಂದು ಕ್ರಮ ತೆಗೆದುಕೊಳ್ಳಬೇಕು. ಅದಕ್ಕೆ ಹೋಟೇಲ್‌ಗಳಲ್ಲಿ ಕರೆದುಕೊಂಡು ಹೋಗಿ ಅಲ್ಲಿಯೇ ವೈದ್ಯರ ಮೂಲಕ ಚಿಕಿತ್ಸೆ ಮಾಡುವುದು ಸೂಕ್ತ, ಏಕೆಂದರೆ ಈಗ ಬಹಳ ಕಷ್ಟ ಇದ್ದು, ಮಕ್ಕಳು ನಾಲ್ಕೈದು ದಿವಸ ಇರುವುದಕ್ಕೆ ಆಗುವುದಿಲ್ಲ. ಇಂಗ್ಲೇಂಡ್‌ನಲ್ಲಿ food grains ಇಲ್ಲದೇ ಎಲ್ಲವನ್ನೂ stop ಮಾಡಿದ್ದಾರೆ. ತಿನ್ನುವುದಕ್ಕೆ ಏನೂ ಇಲ್ಲದೇ ಮಕ್ಕಳು ಕಣ್ಣೀರು ಹಾಕುತ್ತಿದ್ದಾರೆ. ನಮ್ಮ friend ಒಬ್ಬರು video call ನಲ್ಲಿ ಮಾತನಾಡಿಸಿದರು. ಅದಕ್ಕಾಗಿ International Airport ಅನ್ನು ಬಂದ್ ಮಾಡುವ ಬದಲು ಅಲ್ಲಿಯೇ ಏನಾದರೂ ವ್ಯವಸ್ಥೆ ಮಾಡುವ ಮೂಲಕ ಕಡ್ಡಾಯವಾಗಿ ಅವರನ್ನು ಅಲ್ಲಿಯೇ ಇಟ್ಟುಕೊಂಡು treatment ಕೊಡುವುದು ಸೂಕ್ತ ಎಂದು ನನ್ನ ಅಭಿಪ್ರಾಯ.

**ಶ್ರೀ ಐವನ್ ಡಿ'ಸೋಜಾ:–** ಹಾಗಾದರೆ passenger ಗಳನ್ನು ಏನು ಮಾಡುತ್ತಾರೆ?

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾಗಿ Airport and Railway Station ಗಳಲ್ಲಿ ನಿಗಾ ವಹಿಸಬೇಕು. Stage-2 Airport ನಿಂದ ಆಗುತ್ತದೆ. ಈಗ ಇಂಗ್ಲೇಂಡ್‌ನವರು ತೀರ್ಮಾನ ಮಾಡಿದ್ದಾರೆ. No flights from outside, ಕಳುಹಿಸುವುದಿಲ್ಲ ಎಂದು ಹೇಳಿದರು. ಆ ತೀರ್ಮಾನವನ್ನು ನಾವು ಏಕೆ ಮಾಡಬಾರದು? Stage 2 and 3 ನಲ್ಲಿ ನಾವು ಯಾಮಾರಿದರೆ ಬ್ರಹ್ಮ ಬಂದರೂ control ಮಾಡುವುದಕ್ಕೆ ಆಗುವುದಿಲ್ಲ. ದಯಮಾಡಿ ಇದನ್ನು ಬಹಳ strict ಆಗಿ impose ಮಾಡಬೇಕು. ಜಿಲ್ಲಾ ಕೇಂದ್ರಗಳಲ್ಲಿ ಹೊರಗಡೆ ಜಿಲ್ಲೆಯವರನ್ನು ಬರಬಾರದು ಎಂದು restrict ಮಾಡಬೇಕು. ಇದರಲ್ಲಿ Bar and Restaurant ಗಳನ್ನು ಮಾನ್ಯ ಸಚಿವರು ಸೇರಿಸಲಿಲ್ಲ. Bar and Restaurant ಗಳ ಬಗ್ಗೆ ಏಕೆ ತೀರ್ಮಾನ ಮಾಡಲಿಲ್ಲ? Income ಹೋದರೆ ಹೋಗಲಿ. Income ದೃಷ್ಟಿಯಿಂದಲೇ ನೋಡಿದರೆ what about the health? "Health is Wealth" ಎಂದು ಹೇಳುತ್ತಾರೆ. Bar and Restaurant ಗಳನ್ನು ತೆರೆಯಲು ಬಿಡುತ್ತಾರೆ. ಅಲ್ಲಿ ಜನ ಸೇರಿದಾಗ ರೋಗ ಹರಡುವುದಿಲ್ಲವೇ? Bar and Restaurant ಗಳು close ಆಗಲೇಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಮಗ ಪ್ಯಾರಿಸ್‌ನಲ್ಲಿ ಇದ್ದಾನೆ, ಈ ವಿಚಾರವನ್ನು ನಾನು ಇದುವರೆಗೂ ಹೇಳಲಿಲ್ಲ. ಪ್ಯಾರಿಸ್‌ನಲ್ಲಿ MBA ಮಾಡುತ್ತಿದ್ದಾನೆ. He is in Paris. ಅಲ್ಲಿ ಕರ್ಫ್ಯೂ declare ಮಾಡಿದ್ದಾರೆ. Military ಹಾಕಿದ್ದಾರೆ. ನನ್ನ ಜೊತೆ ಸಾಯಂಕಾಲದ ಸಮಯದಲ್ಲಿ video call ನಲ್ಲಿ ಮಾತನಾಡುತ್ತಾನೆ. ಹೊರಗೆ ಬರುವುದಕ್ಕೆ ಆಗುತ್ತಿಲ್ಲ. ಅವರು International Airport ಅನ್ನು ಬಂದ್ ಮಾಡಿಬಿಟ್ಟರೆ ಅವರನ್ನು ಕರೆಸಿಕೊಳ್ಳುವುದು ಹೇಗೆ? ನನ್ನ request ಇದೆ. ಮಾನ್ಯ ಐವನ್ ಡಿ'ಸೋಜರವರು ಹೇಳಿದ್ದು correct poirnt ಇದೆ. ಬೇರೆ ದೇಶ ದೇಶಗಳಿಂದ ಬರುವವರು virus ತರುತ್ತಿದ್ದಾರೆ ಎನ್ನುವ ಭಾವನೆ ನಮಗೆ ಬಂದುಬಿಟ್ಟಿದೆ.  Airport ಸುತ್ತಲಿನ Medical Colleges ಮತ್ತು ಹೊಟೇಲ್‌ಗಳನ್ನು complete ಆಗಿ ಸರ್ಕಾರವು ಸ್ವಾಧೀನಕ್ಕೆ ತೆಗೆದುಕೊಂಡು, ಯಾರು ಯಾರು passengers ಬರುತ್ತಾರೆ, ಅವರನ್ನು ಅಲ್ಲಿಯೇ 14 ದಿನ quarantine ಮಾಡಿ, ಅಲ್ಲಿಯೇ Lab set ಮಾಡಿ, negative ಬಂದರೆ ತಕ್ಷಣ ಅವರನ್ನು ಬೆಂಗಳೂರಿನ ಒಳಗೆ ಕಳುಹಿಸಬೇಕು ಅಥವಾ ಮಂಗಳೂರಿಗೆ ಕಳುಹಿಸಬೇಕು. ಈ ಕೆಲಸ ಸರ್ಕಾರ ಮಾಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ನಿನ್ನೆ ರಾತ್ರಿ 8-30 ಕ್ಕೆ ಮಾಗಡಿಗೆ ಹೋಗಿ ಬಂದೆನು. ಮಾಗಡಿಯಲ್ಲಿ ಮಲೇಷಿಯಾದಿಂದ ಬಂದ ಒಬ್ಬ ವ್ಯಕ್ತಿಯನ್ನು ಮಾಗಡಿ Town Hospital ಯಲ್ಲಿ ಇಟ್ಟಿದ್ದಾರೆ. ಅಲ್ಲಿ doctors ಅನ್ನು ಕೇಳಿದರೆ DC ಯವರು ಹೇಳಬೇಕು, ಇಲ್ಲವೇ DHO ಹೇಳಬೇಕು ಎಂದು ಹೇಳುತ್ತಾರೆ. ಅಲ್ಲಿ ಯಾವುದೇ ಸವಲತ್ತುಗಳು ಇಲ್ಲ. ಮಾಗಡಿಯಲ್ಲಿ ಇಡೀ ಹೊಟೇಲ್‌ಗಳು ಬಂದ್ ಆಗಿವೆ, ಎಲ್ಲಾ ವ್ಯವಹಾರಗಳು ಬಂದ್ ಆಗಿದೆ. ಆ ತಾಲ್ಲೂಕು level ನಲ್ಲಿ ಯಾವುದೇ ಸವಲತ್ತುಗಳು ಇಲ್ಲ. ಅಂತಹ ಕಡೆ patients ಇಟ್ಟು ಹೇಗೆ ನೋಡಿಕೊಳ್ಳುತ್ತಾರೆ. Atleast ಜಿಲ್ಲಾ ಆಸ್ಪತ್ರೆಗೆ transfer ಮಾಡಬೇಕು. ಇವತ್ತು ಮಾಗಡಿ ಪೂರಾ ಬಂದ್ ಆಗಿದೆ. ಒಂದು ಹೊಟೇಲ್ ಇಲ್ಲ, ಒಂದು ವ್ಯವಹಾರ ಇಲ್ಲ, ಒಂದು ಮಾರ್ಕೆಟ್ ಇಲ್ಲ, ಆಸ್ಪತ್ರೆಯಲ್ಲಿ ಯಾವುದೇ ಸವಲತ್ತುಗಳು ಇಲ್ಲ. ಅಂತಹ ಕಡೆ test ಗೆ ಕಳುಹಿಸಿದ್ದಾರೆ. Positive ಬಂದರೆ ಏನು ಕ್ರಮ ತೆಗೆದುಕೊಳ್ಳಬೇಕೋ, ಅದು ಬಹಳ ಕಷ್ಟವಾಗುತ್ತದೆ. ಇದು effect ಆಗಿರುವುದರಿಂದ ತಾಲ್ಲೂಕು level ಗೆ ಏನು ಮಾಡಿದ್ದಾರೆ ಎಂದು ದಯವಿಟ್ಟು ತಿಳಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಗಂಭೀರವಾದ ವಿಚಾರವಾಗಿದ್ದು, ಒಂದು ವಿಚಾರವನ್ನು ನಾವೆಲ್ಲರೂ ಒಪ್ಪಲೇಬೇಕು. ಬೇರೆ ದೇಶಗಳಿಂದ ಬಂದವರಿಂದಲೇ Coronavirus ನಮಗೆ ಬರುತ್ತಿದೆ. ಇದು ನಮ್ಮದಲ್ಲ. ಹಾಗಂತ ಭಾರತೀಯರು ಹೊರದೇಶದಲ್ಲಿದ್ದರೆ ಕರೆಸಿಕೊಳ್ಳಬಾರದೆಂದೇನೂ ಇಲ್ಲ. ಅವರನ್ನು ಕರೆಸಿಕೊಳ್ಳಲೇಬೇಕು. ನಿನ್ನೆ ಗಾಯತ್ರಿ ಎನ್ನುವವರು ವಿದೇಶದಿಂದ ಬಂದರು. ಇದರ ಬಗ್ಗೆ ನಾಗರಿಕರೊಬ್ಬರು ಹೇಳುತ್ತಾರೆ. Airport ಏನು ತಪಾಸಣೆ ನಡೆಯುತ್ತಿದೆ? ಒಂದು Thermal Thermometer ದನ್ನು ಇಡುತ್ತಾರೆ, ನೋಡುತ್ತಾರೆ. ಇಬ್ಬರು ಹೆಣ್ಣುಮಕ್ಕಳು ನಿಮಗೆ ನೆಗಡಿ ಇದೆಯಾ, ಕೆಮ್ಮು ಇದೆಯಾ? ಜ್ವರ ಇದೆಯಾ? ಇಲ್ಲದಿದ್ದರೆ ಹೋಗಿ ಎಂದು ಹೇಳುತ್ತಾರೆ.

(ಮುಂದು)

(546)/18.03.2020/6.50/ಹೆಚ್‌ವಿ–ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದುವರೆದದ್ದು):–**

ಸನ್ಮಾನ್ಯ ಸಭಾಪತಿಯವರೇ, ತಪಾಸಣೆಯ ವಿಧಾನ ಇಲ್ಲ. ವಿದೇಶದಿಂದ ಬಂದವರನ್ನು 10–15 ದಿನಗಳ ಕಾಲ ನಿಗಾವಣೆಯಲ್ಲಿ ಇಡಬೇಕಾಗುತ್ತದೆ. ಮೊನ್ನೆ ಚೀನಾ ದೇಶದಲ್ಲಿ 20 ಆಸ್ಪತ್ರೆಗಳನ್ನು 24 ಗಂಟೆಗಳಲ್ಲಿ ಕಟ್ಟಿದ್ದಾರೆ. ಮೂಲ ಭಾರತೀಯರು ವಿದೇಶದಿಂದ ಬರುವುದು ಬೇಡ ಎನ್ನುವುದಕ್ಕೆ ಆಗುವುದಿಲ್ಲ, ಅವರನ್ನು ಕರೆಯಿಸಿಕೊಳ್ಳಬೇಕಾಗುತ್ತದೆ. ಅವರು ಬರಲೇಬೇಕಾಗುತ್ತದೆ. ಮೂಲ ಭಾರತೀಯರು ವಿದೇಶದಿಂದ ಬಂದರೆ, ಅವರನ್ನು ಐಸೋಲೇಷನ್ ವಾರ್ಡ್‌ನಲ್ಲಿ 14–15 ದಿನಗಳವರೆಗೆ ನಿಗಾವಹಿಸಿ ಅವರಲ್ಲಿ ಸೋಂಕು ಇಲ್ಲವೆಂದು ಕಂಡುಬಂದ ಮೇಲೆ ಅವರನ್ನು ಅವರ ಮನೆಗಳಿಗೆ ಊರುಗಳಿಗೆ ಕಳುಹಿಸಿಕೊಡಬಹುದು. ಅಂತಹ ಏರ್ಪಾಡನ್ನು ಕೂಡಲೇ ಮಾಡಬೇಕಾಗಿದೆ. ಪರಿಣಾಮಕಾರಿಯಾದ ಸೋಂಕು ಪತ್ತೆ ಹಚ್ಚುವ ಪರೀಕ್ಷಾ ವಿಧಾನವೇ ಇಲ್ಲ, ಸೋಂಕು ಪತ್ತೆ ಹಚ್ಚುವ ಕಾರ್ಯ ವಿಮಾನ ನಿಲ್ದಾಣಗಳಲ್ಲಿ ಆಗುತ್ತಿಲ್ಲ. ಹೀಗಾದರೆ ಸೋಂಕು ಹರಡುವುದನ್ನು ಹೇಗೆ ಹತೋಟಿಗೆ ತರುವುದಕ್ಕೆ ಸಾಧ್ಯ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮುಚ್ಚುವ ಬದಲಿಗೆ ತಪಾಸಣಾ ವಿಧಾನವನ್ನು ಹೆಚ್ಚು ಪರಿಣಾಮಕಾರಿಯನ್ನಾಗಿಸುವುದು ಉತ್ತಮ ಎನ್ನುವುದು ನನ್ನ ಭಾವನೆಯಾಗಿದೆ. ಎಲ್ಲಾ ದೇಶಗಳಲ್ಲಿ ಭಾರತೀಯ ರಾಯಭಾರಿ ಕಚೇರಿ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿದೇಶದಲ್ಲಿರುವ ಒಬ್ಬ ಭಾರತೀಯ, ಆತ ವಿದ್ಯಾರ್ಥಿಯಾಗಿರಬಹುದು ಅಥವಾ ಸಾಮಾನ್ಯ ಪ್ರಜೆಯಾಗಿರಬಹುದು ಆತ ಸಂಕಷ್ಟದಲ್ಲಿದ್ದಾನೆ, ಆತ ಭಾರತಕ್ಕೆ ವಾಪಸ್ಸು ಬರುವುದಕ್ಕೆ ಆಗದೇ ಇರಬಹುದು ಅಥವಾ ಆತ ಅಲ್ಲೇ ವಾಸ ಮಾಡುವುದಕ್ಕೆ ತೊಂದರೆಯಾಗುತ್ತಿದೆಯೆಂದರೆ, ನಮ್ಮ ಭಾರತೀಯ ರಾಯಭಾರಿ ಕಚೇರಿಯಿಂದ ಆತ ತನ್ನ ಜೀವ ಉಳಿಸಿಕೊಳ್ಳುವುದಕ್ಕೆ ಕನಿಷ್ಠ ಸೌಲಭ್ಯಗಳನ್ನು ಕೊಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕೆನ್ನುವುದು ನನ್ನ ಸಲಹೆಯಾಗಿದೆ.

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು, 'ಇವತ್ತಿನಿಂದ ಅಂದರೆ, ಮಾರ್ಚ್ 18 ರಿಂದ 31ರವರೆಗೆ ಅಂತರರಾಷ್ಟ್ರೀಯ ವಿಮಾನಗಳನ್ನು ರದ್ದುಪಡಿಸಿದೆ. 'ವಿದೇಶದಿಂದ ಯಾರೂ ಇಲ್ಲಿಗೆ ಬರಬಾರದು' ಎನ್ನುವ ಸುತ್ತೋಲೆಯನ್ನು ಹೊರಡಿಸಿದೆ. ಕೆಲವು ವಿದ್ಯಾರ್ಥಿಗಳು ವಿಮಾನ ನಿಲ್ದಾಣದಲ್ಲಿದ್ದಾರೆ. ಅಲ್ಲಿಂದ ಅವರು ಬೇರೆ ಕಡೆಗೆ ಹೋಗುವುದಕ್ಕೆ ಕಷ್ಟವಾಗುತ್ತಿದೆ. ಅವರುಗಳು ಇರುವಂತಹ ವಿಮಾನ ನಿಲ್ದಾಣಗಳಲ್ಲಿಯೇ ಕಷ್ಟಪಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಉದಾಹರಣೆಗೆ ಹೇಳಬೇಕಾದರೆ, ಇಟಲಿ ವಿಮಾನ ನಿಲ್ದಾಣದಲ್ಲಿರುವ ಭಾರತೀಯ ವಿದ್ಯಾರ್ಥಿಗಳು ಎಲ್ಲಿಗೆ ಹೋಗಬೇಕೆನ್ನುವುದು ಗೊತ್ತಾಗದೇ ಊಟಕ್ಕೂ ಇಲ್ಲದೇ, ಎಲ್ಲೆಲ್ಲಿಗೋ ಹೋಗುತ್ತಿದ್ದಾರೆ. ಇಲ್ಲಿರುವ ಅವರ ಪಾಲಕರು 'ನಮ್ಮ ಮಕ್ಕಳು ಎಲ್ಲಿಗೆ ಹೋಗಿದ್ದಾರೆ' ಎನ್ನುವ ಆತಂಕದಲ್ಲಿದ್ದಾರೆ. ನನ್ನ ಮಗಳು ಲಂಡನ್‌ನಲ್ಲಿದ್ದಳು, ಇವತ್ತು ಬಂದಿದ್ದಾಳೆ. ಆದರೆ, ವಿದೇಶದಲ್ಲಿರುವ ವಿದ್ಯಾರ್ಥಿಗಳ ಪಾಡು ಹೇಳತೀರದು. ಪೋಷಕರು ಗೋಳಾಡುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ? ಸುಮಾರು 72 ಜನ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ವಿವಿಧ ದೇಶಗಳಿಗೆ ಓದಲು ಹೋಗಿದ್ದಾರೆ. ಅವರ ಪರಿಸ್ಥಿತಿಯ ಬಗ್ಗೆ ಸರ್ಕಾರ ಅವಲೋಕನ ಮಾಡಿದೆಯೇ? ಅವರನ್ನು ವಾಪಸ್ಸು ದೇಶಕ್ಕೆ ಕರೆತರುವ ಪ್ರಯತ್ನ ಮಾಡಲಾಗಿದೆಯೇ? ಸರ್ಕಾರ ಅವರನ್ನು ಕರೆತರುವ ಪ್ರಯತ್ನ ಮಾಡದಿದ್ದರೆ ಅವರುಗಳು ಹೇಗೆ ವಾಪಸ್ಸು ಬರುವುದಕ್ಕೆ ಸಾಧ್ಯ? ವಿದೇಶದಲ್ಲಿರುವ ವಿದ್ಯಾರ್ಥಿಗಳ ಬಗ್ಗೆ ಮತ್ತು ಭಾರತದ ನಾಗರಿಕರ ನೋವಿಗೆ ಸ್ಪಂದಿಸುವ ಕೆಲಸವಾಗಬೇಕಾಗುತ್ತದೆ.

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಅಧಿವೇಶನ ಪ್ರಾರಂಭವಾದಾಗ ಮಾರ್ಚ್ 2 ಅಥವಾ 3ನೇ ತಾರೀಖಿನಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಸದನದಲ್ಲೊಂದು ಹೇಳಿಕೆಯನ್ನು ನೀಡಿದ್ದರು. ನಾನು ಆಗ, ‘ಈ ಸೋಂಕು ಬಂದರೆ, 20 ದಿನಗಳ ಕಾಲ ಯಾರಿಗೂ ಗೊತ್ತಾಗುವುದಿಲ್ಲ ಎನ್ನುವ ವರದಿ ಇದೆ. ಯಾರ್‍ಯಾರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬರುತ್ತಾರೆ. ಅವರನ್ನು ಕನಿಷ್ಠ 14 ದಿನಗಳ ಕಾಲ ವಿಶೇಷ ನಿಗಾ ಘಟಕದಲ್ಲಿಟ್ಟು, ಅವರಿಗೆ ಸೋಂಕು ತಗಲಿಲ್ಲವೆಂದು ಗೊತ್ತಾದ ಮೇಲೆ ಹೋಗುವುದಕ್ಕೆ ಬಿಡಬೇಕು’ ಎಂದು ಮಾನ್ಯ ಸಚಿವರಿಗೆ ಹೇಳಿದ್ದೆ. ಮಂಗಳೂರು ಅಥವಾ ಬೆಂಗಳೂರಿನಲ್ಲಿರುವ ಮಿಲಿಟರಿ ಆಸ್ಪತ್ರೆಗಳು ಬಹಳ ದೊಡ್ಡದಾಗಿವೆ. ಈ ಆಸ್ಪತ್ರೆಗಳನ್ನು ಬಳಸಿಕೊಳ್ಳಬಹುದು. ಆದರೆ, ಆ ರೀತಿಯ ಯಾವುದೇ ಕ್ರಮವನ್ನು ಇಲ್ಲಿಯವರೆಗೆ ತೆಗೆದುಕೊಂಡಿಲ್ಲ. ಸರ್ಕಾರ ಈಗಿನ ಪರಿಸ್ಥಿತಿಯನ್ನು ಅವಲೋಕಿಸಬೇಕಾಗಿದೆ. ಈಗ ನಾವು ಮೊದಲನೆಯ, ಎರಡನೆಯ ಹಂತದಲ್ಲಿದ್ದೇವೆ. ಇದು ಮೂರು ಮತ್ತು ನಾಲ್ಕನೆಯ ಹಂತಕ್ಕೆ ಹೋದರೆ, ಇದರಿಂದಾಗುವ ಅನಾಹುತವನ್ನು ಯಾರೂ ಕೂಡ ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರ ಯಾವಯಾವ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು, ಅವುಗಳನ್ನು ಬಹಳ ತೀವ್ರಗತಿಯಲ್ಲಿ ತೆಗೆದುಕೊಳ್ಳಬೇಕೆನ್ನುವುದು ನನ್ನ ಸಲಹೆಯಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕೋವಿಡ್–19 ಎನ್ನುವುದು ಎಷ್ಟು ಮಾರಕ ರೋಗ ಎನ್ನುವುದರ ಬಗ್ಗೆ ನಾವೆಲ್ಲರೂ ಈಗಾಗಲೇ ಚರ್ಚೆ ಮಾಡಿದ್ದೇವೆ. ‘ಯಾರು ವಿದೇಶದಿಂದ ವಿಮಾನ ಮೂಲಕ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರುತ್ತಾರೆ, ಅವರುಗಳನ್ನು ಮುಂಜಾಗ್ರತಾ ಕ್ರಮವಾಗಿ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ’ ಎನ್ನುವ ಮಾತನ್ನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಹೇಳಿದ್ದಾರೆ. ನಾನು ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ಸಿ.ವಿ.ರಾಮನ್ ವಿಧಾನಸಭಾ ಕ್ಷೇತ್ರಕ್ಕೆ ಸೇರಿರುವ ಜಿ.ಎಂ.ಪಾಳ್ಯ ಎನ್ನುವ ಒಂದು ಊರಿದೆ. ಇಲ್ಲಿಗೆ ಅಮೆರಿಕಾದಿಂದ ಒಬ್ಬ ಇಂಜಿನಿಯರ್ ಬರುತ್ತಾನೆ. ಆತ ನಮ್ಮ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ, ಆತನನ್ನು ತಪಾಸಣೆ ಮಾಡಿ ಯಾವುದೇ ರೀತಿಯ ಸೋಂಕು ಇಲ್ಲವೆಂದು ಮನೆಗೆ ಕಳುಹಿಸಿಕೊಟ್ಟರು. ಮನೆಗೆ ಬಂದ ಮೇಲೆ ರೋಗಲಕ್ಷಣಗಳು ಗೊತ್ತಾಗಿ ಆತ ಒಂದು ಖಾಸಗಿ ಆಸ್ಪತ್ರೆಯಲ್ಲಿ ತಪಾಸಣೆಗೆ ಒಳಗಾದಾಗ ಆತ ಪಾಸಿಟಿವ್ ಎನ್ನುವುದು ಗೊತ್ತಾಗುತ್ತದೆ. ಆತ ತನ್ನ ಮನೆಯವರ ಹತ್ತಿರ ಮಾತ್ರ ಈ ಬಗ್ಗೆ ಚರ್ಚೆ ಮಾಡುತ್ತಾನೆ, ಬೇರೆ ಎಲ್ಲಿಯೂ ಹೇಳುವುದಿಲ್ಲ. ಆದರೆ, ಹೇಗೋ ಗೊತ್ತಿಲ್ಲ ಅದು ಹೊರಗಿನವರಿಗೂ ಗೊತ್ತಾಗುತ್ತದೆ. ಪೊಲೀಸಿನವರಿಗೆ ಗೊತ್ತಾಗಿ ಅವರು ಆತನನ್ನು ಕರೆದುಕೊಂಡು ಹೋಗುವುದಕ್ಕೆ ಮನೆಗೆ ಬರುತ್ತಾರೆ, ರೋಗಿಯನ್ನು ಕರೆದುಕೊಂಡು ಹೋಗುವುದಕ್ಕೆ ಆಂಬ್ಯುಲೆನ್ಸ್ ಅನ್ನು ಸಹ ಕರೆಯಿಸಿಕೊಳ್ಳುತ್ತಾರೆ. ಆತನನ್ನು ಯಾವ ರೀತಿ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕರೆದುಕೊಂಡು ಹೋಗುತ್ತಾರೆಂದರೆ, ಪೊಲೀಸರ ಮುಖಾಂತರ ಆತನನ್ನು ನಾಯಿಗಿಂತ ಕಡೆಯಾಗಿ ಎಳೆದುಕೊಂಡು ಹೋಗುತ್ತಾರೆ. 'ನಾವು ಯಾರೂ ಕೂಡ ಆಂಬ್ಯುಲೆನ್ಸ್ ಒಳಗೆ ಕುಳಿತುಕೊಳ್ಳುವುದಿಲ್ಲ. ನಿಮ್ಮ ಮನೆಯವರು ಯಾರಾದರು ರೋಗಿ ಜೊತೆಗೆ ಕುಳಿತುಕೊಳ್ಳಿ' ಎಂದು ಹೇಳಿ ಆತನನ್ನು ಬಲವಂತವಾಗಿ ಎಳೆದುಕೊಂಡು ಹೋಗುತ್ತಾರೆ. ಇದೊಂದು ನಿದರ್ಶನವಾದರೆ, ಎರಡನೆಯದಾಗಿ, ಮಾನ್ಯ ಸದಸ್ಯರು ಹೇಳಿದಂತೆ 14 ದಿನಗಳ ಕಾಲ ರೋಗದ ಲಕ್ಷಣಗಳು ಕಂಡು ಬರುವುದಿಲ್ಲ. ಇಂದಿರಾನಗರದ ಇ.ಎಸ್.ಐ. ಆಸ್ಪತ್ರೆಗೆ ಒಬ್ಬ ಶಂಕಿತ ರೋಗಿಯನ್ನು ಅಡ್ಮಿಟ್ ಮಾಡುತ್ತಾರೆ. ಆತನ ರಕ್ತ ಮತ್ತು ಕಫಾ ವನ್ನು ಪರೀಕ್ಷೆಗಾಗಿ ಡ್ರಾ ಮಾಡಿಕೊಳ್ಳುತ್ತಾರೆ. ಟೆಸ್ಟ್ ಆಗಿ ಫಲಿತಾಂಶ ದೊರೆಯುವುದಕ್ಕೆ ಸುಮಾರು 48 ಗಂಟೆಗಳ ಕಾಲ ಬೇಕಾಗುತ್ತದೆ. ಆ ಎರಡು ದಿನಗಳ ಕಾಲ ಆಸ್ಪತ್ರೆಯಲ್ಲಿ ಆ ರೋಗಿಯನ್ನು ಯಾವ ರೀತಿಯಲ್ಲಿ ನಡೆಸಿಕೊಳ್ಳಲಾಗುತ್ತದೆಂದರೇ, ಆತ ಭಯದಿಂದ ಅಲ್ಲಿಂದ ತಪ್ಪಿಸಿಕೊಂಡು ಹೋಗುತ್ತಾನೆ. ಕೊನೆಗೆ ಆ ರೋಗಿಯನ್ನು ಪೊಲೀಸಿನವರು ಅನಂತಪುರಕ್ಕೆಹೋಗಿ ಎಳೆದುಕೊಂಡು ಬರುತ್ತಾರೆ. ಇದೇ ಇ.ಎಸ್.ಐ. ಆಸ್ಪತ್ರೆಯಲ್ಲಿ ಗಂಡ ಹೆಂಡತಿ ಇಬ್ಬರು ಅಡ್ಮಿಟ್ ಆಗಿರುತ್ತಾರೆ. ಅವರುಗಳನ್ನು ಡಾಕ್ಟರ್‌ಗಳು ಟ್ರೀಟ್ ಮಾಡಿದ ರೀತಿಯಿಂದ ಬೇಸರಗೊಂಡ ಅವರು ಆಸ್ಪತ್ರೆಯಿಂದ ಓಡಿ ಹೋದರೆ ಸಾಕು ಎನ್ನುವ ಸ್ಥಿತಿಗೆ ಬಂದಿದ್ದಾರೆ. ಹಾಗಾದರೆ, ರೋಗಿಗಳಿಗೆ ಇಲ್ಲಿ ಯಾವ ರೀತಿಯ ಚಿಕಿತ್ಸೆಯನ್ನು ನೀಡುತ್ತಿದ್ದಾರೆಂದು ನಾವೆಲ್ಲರೂ ಊಹಿಸಿಕೊಳ್ಳಬಹುದು. ಖಾಸಗಿ ಆಸ್ಪತ್ರೆಯವರು ಯಾರೂ ನಮಗೆ ಸಹಕರಿಸುತ್ತಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಈ ರೀತಿಯಾಗಿ ನಡೆದುಕೊಳ್ಳುವುದನ್ನು ತಪ್ಪಿಸಬೇಕಾಗಿದೆ. ಇದೊಂದು ಮಾರಕವಾದ ರೊಗ, ಇದರ ಬಗ್ಗೆ ಸರ್ಕಾರ ಗಂಭೀರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಕೊರೊನಾ ಸೋಂಕು ಪತ್ತೆಯಾದ ದಿನದಿಂದ ನಾವು ಅಧಿವೇಶನಕ್ಕೆ ಬರುವಾಗ, ಸದನದ ಒಳಗೆ ಮತ್ತು ಹೊರಗೆ ಹೋಗುವಾಗ 'ನಾಳೆ ಅಧಿವೇಶನ ಕೊನೆಯಾಗುತ್ತಾ' ಎಂದು ಕೇಳುತ್ತಿರುತ್ತಾರೆ. ಶಾಸಕರು ಅಧಿಕಾರಿಗಳು ಮತ್ತು ಮಾಧ್ಯಮದವರು ಇಲ್ಲಿ ಒಂದು ಕಡೆ ಸೇರುವುದರಿಂದ ಜನರಿಗೆ ಒಳ್ಳೆಯ ಸಂದೇಶವನ್ನು ಕೊಡಬಹುದಾಗಿದೆ. ಈಗಾಗಲೇ ಹಿರಿಯ ನಾಯಕರುಗಳು 'ನಿಮ್ಮ ನಿಮ್ಮ ಕ್ಷೇತ್ರಗಳಿಗೆ ಹೋಗಿ ಜನರ ಸ್ಥಿತಿಗತಿಯನ್ನು ಅಲ್ಲಿನ ಸನ್ನಿವೇಶನವನ್ನು ನೋಡಿ' ಎಂದು ಕರೆ ಕೊಟ್ಟಿದ್ದಾರೆ. 'ಈ ರೋಗದ ಸೋಂಕು ಹರಡುವುದರಿಂದ ಯಾರೂ ಮನೆಯಿಂದ ಹೊರಗೆ ಬರಬೇಡಿ, ನಿಮ್ಮ ನಿಮ್ಮ ಮನೆಗಳಲ್ಲಿಯೇ ಉಳಿಯಿರಿ' ಎಂದು ಸಚಿವರು ಹೇಳುತ್ತಿರುವ ಸಂದರ್ಭದಲ್ಲಿ ತಾವು ಈ ಸದನವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಸದಿದ್ದರೆ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಒಳ್ಳೆಯದಾಗುತ್ತದೆನ್ನುವುದು ನನ್ನ ಭಾವನೆಯಾಗಿದೆ. 'ಖಾಸಗಿ ವೈದ್ಯರು ಯಾರೂ ಕೊರೊನಾ ಸೋಂಕಿತ ರೋಗಿಗಳನ್ನು ಟ್ರೀಟ್ ಮಾಡುತ್ತಿಲ್ಲ' ಎನ್ನುವ ವರದಿ ಪ್ರಕಟವಾಗಿದೆ. ರೋಗಿಗಳನ್ನು ಟ್ರೀಟ್ ಮಾಡುವುದಕ್ಕೆ ವೈದ್ಯರೇ ಹೆದರಿಕೊಂಡರೆ ಕಷ್ಟವಾಗುತ್ತದೆ. ಆದ್ದರಿಂದ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಅವರಿಗೂ ಸಹ ಸೂಚನೆ ಕೊಡಬೇಕು. ಇಂತಹ ಸಂದರ್ಭದಲ್ಲಿ ನೈತಿಕ ಬೆಂಬಲ ಬೇಕಾಗುತ್ತದೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ನಸೀರ್ ಅಹ್ಮದ್(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕೊರೊನಾ ಸೋಂಕಿನ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಅದೇ ರೀತಿಯಲ್ಲಿ ವಿದೇಶದಲ್ಲಿ ನೆಲೆಸಿರುವ ಮಕ್ಕಳು ಮತ್ತು ಅಲ್ಲಿಂದ ಬರುತ್ತಿರುವವರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಮ್ಮ ದೇಶದಲ್ಲಿ ಔರಂಗಾಬಾದ್‌ನಲ್ಲಿ ಟಾಟಾ ಗ್ರೂಪ್ ಕಂಪನಿಯವರಿಂದ hospitality ಗೆ ಸಂಬಂಧಿಸಿದಂತೆ ಒಂದು ನಿವಾಸಿತ ಕಾಲೇಜ್‌ನ್ನು ನಡೆಸಲಾಗುತ್ತಿತ್ತು. ಆ ಕಾಲೇಜಿನ ಒಬ್ಬ ಲೆಕ್ಚರರ್‌ಗೆ 'ಪಾಸಿಟಿವ್' ಇದೆಯೆಂದು ಘೋಷಣೆ ಮಾಡಿದ ಮೇಲೆ ಆ ಹಾಸ್ಟೆಲ್‌ನಲ್ಲಿರುವ ಮಕ್ಕಳನ್ನು ಸುಮಾರು 5–6 ದಿನಗಳಿಂದ ಗೃಹ ಬಂಧನದಲ್ಲಿ ಇರಿಸಲಾಗಿದೆ. ಅವರುಗಳಲ್ಲಿ ಸಾಕಷ್ಟು ಜನ ಬೆಂಗಳೂರಿನವರು.

ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಗಾಲ್ಫ್ ಅಸೋಸಿಯೇಷನ್‌ನಿಂದ ನನಗೊಂದು ಸಂದೇಶ ಬರುತ್ತದೆ. ಈಗ ಅಲ್ಲಿ ನಡೆಯುತ್ತಿದ್ದ ಗಾಲ್ಫ್ ಕೋರ್ಸ್ ಅನ್ನು ಕ್ಲೋಸ್ ಮಾಡಿದ್ದಾರೆ. ಅವರು ಕಳುಹಿಸಿದ ಸಂದೇಶದಲ್ಲಿ ಏನಿತ್ತು ಎಂದರೆ, 'ಅಲ್ಲಿ ಸುಮಾರು 300 Caddy ಗಳು ಕುಟುಂಬ ಸಮೇತರಾಗಿ ಇದ್ದಾರೆ. ಕುಟುಂಬ ಸಮೇತರಾಗಿ ಇರುವವರಿಗೆ ದಿನ ಒಂದಕ್ಕೆ 300 ರೂಪಾಯಿಗಳನ್ನು ಕೊಡಬೇಕಾಗಿದೆ. ಕುಟುಂಬ ಸಮೇತರಾಗಿ ಇಲ್ಲದೇ ಇರುವವರಿಗೆ ದಿನವೊಂದಕ್ಕೆ 200 ರೂಪಾಯಿಗಳನ್ನು ಕೊಡಬೇಕು. ಒಟ್ಟಾರೆ ಒಂದು ದಿನಕ್ಕೆ 9 ಲಕ್ಷದ 60 ರೂಪಾಯಿಗಳಷ್ಟು ಖರ್ಚು ಬರುತ್ತದೆ. ತಾವು ಸದಸ್ಯರಾಗಿ ಸ್ವಯಂಪ್ರೇರಿತರಾಗಿ ಎಷ್ಟು ಕೊಡುಗೆಯನ್ನು ಕೊಡುತ್ತೀರಾ' ಎಂದು ಕೇಳುತ್ತಿದ್ದಾರೆ. ಮತ್ತೊಂದು ವಿಚಾರವೇನೆಂದರೆ, ಮೇಕ್ರಿ ಸರ್ಕಲ್‌ನಲ್ಲಿ ಏರ್‌ಫೋರ್ಸ್ ಟ್ರೈನಿಂಗ್ ಕಮಾಂಡ್ ಇದೆ. ಇಲ್ಲಿಯೂ ಒಂದು ಗಾಲ್ಫ್ ಕೋರ್ಸ್ ನಡೆಯುತ್ತಿದೆ, ಅದನ್ನು ಸಹ ಮುಚ್ಚಿದ್ದಾರೆ. ಎಂ.ಇ.ಜಿ.ಯಲ್ಲಿ ಒಂದು ಗಾಲ್ಫ್ ಕೋರ್ಸ್ ಇದೆ, ಅದನ್ನು ಸಹ ಮುಚ್ಚಿದ್ದಾರೆ. ಮೇಕ್ರಿ ಸರ್ಕಲ್‌ನಲ್ಲಿರುವ ಏರ್‌ಫೋರ್ಸ್ ಟ್ರೈನಿಂಗ್ ಕಮಾಂಡ್‌ನ ಗಾಲ್ಫ್ ಕೋರ್ಸ್‌ನಲ್ಲಿರುವ ಗ್ರೂಪ್ ಕ್ಯಾಪ್ಟನ್ ಅವರಿಗೆ ನಾನು ಬೆಳಗ್ಗೆ ಫೋನ್ ಮಾಡಿ, 'ಏರ್‌ಫೋರ್ಸ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟ್ರೈನಿಂಗ್ ಕಮಾಂಡ್‌ನಲ್ಲಿರುವ ಗಾಲ್ಫ್ ಕೋರ್ಸ್ ಮುಚ್ಚಿದೆ. ನಾವು ಬೆಂಗಳೂರು ಗಾಲ್ಫ್ ಕ್ಲಬ್‌ಗೆ ಹೋಗೋಣ, ನೀವು ಬರುತ್ತೀರಾ?' ಎಂದು ಕೇಳಿದರೆ, 'ನಾವು ಹೊರಗೆ ಹೋಗುವುದನ್ನು ಬ್ಯಾನ್ ಮಾಡಿದ್ದಾರೆ. We are not supposed to leave the training command. ಗಂಭೀರವಾದ ಪರಿಸ್ಥಿತಿ ಇದೆ. ನಾವು ಹೊರಗಡೆ ಬರುವುದಕ್ಕೆ ಆಗುವುದಿಲ್ಲ ಅಂತಹ ಪರಿಸ್ಥಿತಿ ಇದೆ.' ಎಂದು ಹೇಳುತ್ತಾರೆ. ಪರಿಸ್ಥಿತಿ ಬಹಳ ಗಂಭೀರವಾಗಿದೆ. ಇದನ್ನು ನಾವು ಎಷ್ಟರ ಮಟ್ಟಿಗೆ ಅರ್ಥ ಮಾಡಿಕೊಂಡಿದ್ದೇವೆನ್ನುವುದು ನನಗೆ ಗೊತ್ತಾಗುತ್ತಿಲ್ಲ.

(ಮುಂದುವರಿದಿದೆ)

(547) 18.3.2020 7.00 ಪಿಕೆ:ಎಕೆ

(ಸಭಾಪತಿಗಳ ಉಪಸ್ಥಿತಿ)

**ಶ್ರೀ ನಜೀರ್ ಅಹ್ಮದ್ (ಮುಂದುವರೆದಿದೆ)**

ಡಿಫೆನ್ಸ್‌ಗೆ ಸೇರಿರುವ ಎಂಇಜಿ ಮತ್ತು ಏರ್‌ಫೋರ್ಸ್ ಕಮ್ಯಾಂಡ್ ಕ್ಲೋಸ್ ಆಗಿದೆ. ಅಲ್ಲಿರುವ ಜನರಿಗೆ ಆಚೆ ಬಿಡುವುದಕ್ಕೆ ಅವಕಾಶ ಇಲ್ಲ ಎಂದು ತೀರ್ಮಾನ ಮಾಡಿದ್ದಾರೆ. ಪರಿಸ್ಥಿತಿ ಬಹಳ ಗಂಭೀರವಾಗಿದೆ. ಮಾನ್ಯ ಆರೋಗ್ಯ ಸಚಿವರು ಈ ನಿಟ್ಟಿನಲ್ಲಿ ಗಮನಕೊಡಬೇಕು.

**ಶ್ರೀ ಎಂ.ಸಿ.ವೇಣುಗೋಪಾಲ್**:- ಮಾನ್ಯ ಸಭಾಪತಿಯವರೇ, ನಾನು ಇಷ್ಟು ಹೊತ್ತು ಗೌರವಾನ್ವಿತ ಸದಸ್ಯರು ಮಾತನಾಡಿದ್ದನ್ನು ಕೇಳಿಸಿಕೊಂಡೆ. ಮಾನ್ಯ ಮರಿತಿಬ್ಬೇಗೌಡರು ಮಾತನಾಡಿದ ಅಂಶಕ್ಕೆ ಒತ್ತು ಕೊಡಬೇಕಾಗುತ್ತದೆ. ಏಕೆಂದರೆ, ಕೇಂದ್ರ ಸರ್ಕಾರ, ವಿದೇಶದಲ್ಲಿರುವ ಭಾರತೀಯರು ಬರುವುದಕ್ಕೆ ಅವಕಾಶ ಕೊಡುತ್ತಿಲ್ಲ; ಏರ್‌ಪೋರ್ಟ್‌ನಲ್ಲಿರುವ ಜನ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಹೇಳಿದರು. ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, Embassy ಗೆ contact ಮಾಡಿ ಅವರಿಗೆ ರಕ್ಷಣೆ ಕೊಡುವ ವ್ಯವಸ್ಥೆ ಮಾಡಬೇಕು.

ಏರ್‌ಪೋರ್ಟ್‌ನಲ್ಲಿ ತಪಾಸಣೆ ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಮಾಹಿತಿ ಪಡೆದುಕೊಂಡೆ. ಮಾನ್ಯ ತಿಮ್ಮಾಪುರರವರ ಪತ್ನಿಯವರೂ ಸಹ ಇವತ್ತು ಬಂದರು. ಅಲ್ಲೇನಾಗಿದೆ ಎಂದರೆ, ಅಂತಹ ಸೀರಿಯಸ್ ಚೆಕ್-ಅಪ್ ನಡೆಯುತ್ತಿಲ್ಲ. ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕಾಂತರಾಜ್ (ಬಿಎಂಎಲ್)**:- ಮಾನ್ಯ ಸಭಾಪತಿಯವರೇ, ಖಾಸಗಿ ಆಸ್ಪತ್ರೆಗಳಲ್ಲಿ ಏನು ಲ್ಯಾಬೊರೇಟರಿಗಳಿವೆಯೋ ಅವುಗಳನ್ನು ಸರ್ಕಾರ takeover ಮಾಡಬೇಕು. ಅದುಬಿಟ್ಟು, ನಾಳೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೇವೆ, ನಾಳೆ ಮಾಡುತ್ತೇವೆ ಎಂದು ಹೇಳಿ ವಿಳಂಬ ಮಾಡಬೇಡಿ. ಖಾಸಗಿ ಆಸ್ಪತ್ರೆಗಳಲ್ಲಿ ಚೆನ್ನಾಗಿರುವ ಲ್ಯಾಬೊರೇಟರಿಗಳನ್ನು ನಿಮ್ಮ ವಶಕ್ಕೆ ತೆಗೆದುಕೊಂಡು ಇಲ್ಲೇ ತಪಾಸಣೆ ಮಾಡುವ ವ್ಯವಸ್ಥೆ ಮಾಡಿ. ಹೊಸದಾಗಿ ಸೆಟ್-ಅಪ್ ಮಾಡುವುದಕ್ಕೆ ಸಮಯ ಬೇಕಾಗುತ್ತದೆ.

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೇನಾದರೂ ಆರ್ಥಿಕ ಮುಗ್ಗಟ್ಟು ಇದ್ದರೆ ನಾವು ನಮ್ಮ ಒಂದು ತಿಂಗಳ ಸಂಬಳವನ್ನು ವಿನಿಯೋಗಿಸೋಣ.

**ಶ್ರೀ ವಿ.ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಇದೊಂದು ಗಂಭೀರವಾದ ವಿಚಾರವಾಗಿದೆ. ಮೊನ್ನೆ 6ನೇ ತಾರೀಖಿನಂದು ನನ್ನ ಕ್ಷೇತ್ರಕ್ಕೆ ಭ್ರಮರಾಂಬ ಮತ್ತು ಮೃತ್ಯುಂಜಯ ಎನ್ನುವವರು ಸ್ಯಾನ್‌ಫ್ರಾನ್ಸಿಸ್ಕೋನಿಂದ ಬಂದಿದ್ದಾರೆ. ಅವರ ಮಗ, ನೀವು 20 ದಿನ ಇಲ್ಲೇ ಇದ್ದುಬಿಡಿ, ಅಲ್ಲಿಗೆ ಹೋಗುವುದು ಬೇಡ ಎಂದು ಹೇಳುತ್ತಾನೆ. ಆದರೆ ಆ ಗಂಡ-ಹೆಂಡತಿ 6ನೇ ತಾರೀಖು ಏರ್‌ಪೋರ್ಟ್‌ಗೆ ಬಂದಾಗ ಚೆಕ್ ಮಾಡಿದ್ದಾರೆ. ಆ ಮಹಿಳೆಗೆ ಜ್ವರ ಇತ್ತೆಂದು ಪ್ಯಾರಾಸಿಟಮೋಲ್ ಮಾತ್ರೆಯನ್ನು ತೆಗೆದುಕೊಂಡಿದ್ದಾರೆ. ಪ್ಯಾರಾಸಿಟಮೋಲ್ ತಿಂದಿದ್ದರಿಂದ ಚೆಕ್ ಮಾಡುವಾಗ ಏನೂ ಗೊತ್ತಾಗದೇ ಅವರನ್ನು ಆಚೆ ಕಳುಹಿಸಿದ್ದಾರೆ. ಅವರ ಮಗ, ನೀವು ಯಾವುದೇ ಕಾರಣಕ್ಕೂ ಬೇರೆಯವರ ಮನೆಗೆ ಹೋಗಬೇಡಿ ಎಂದು ಹೇಳಿರುತ್ತಾನೆ. ಆದರೆ ಈ ಹೆಣ್ಣು ಮಗಳು ಅವರ ನೆಂಟರ ಮನೆಗೆ ಹೋಗಿದ್ದಾರೆ. ಅಲ್ಲಿಂದ, ಮಾನ್ಯ ಖರ್ಗೆಯವರ ಮನೆಯ ಪಕ್ಕದ ರಸ್ತೆಯಲ್ಲಿರುವ ಅವರ ಇನ್ನೊಬ್ಬರ ನೆಂಟರ ಮನೆಗೆ ಹೋಗಿದ್ದಾರೆ. ಇಷ್ಟೆಲ್ಲಾ ಆದಮೇಲೆ 16ನೇ ತಾರೀಖಿನಂದು ಟೆಸ್ಟ್ ಮಾಡಿದಾಗ ಪಾಸಿಟಿವ್ ಬಂದಿದೆ. ಅವರ ಯಜಮಾನರದ್ದು ನೆಗೆಟಿವ್ ಬರುತ್ತದೆ. ಇಬ್ಬರನ್ನೂ ರಾಜೀವ್ ಗಾಂಧೀ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಲಾಗಿದೆ. ಮಾನ್ಯ ಸಭಾಪತಿಯವರೇ, ಈಗ ಈ ವಿಷಯ ಪಕ್ಷಗಳಿಗೆ ಪ್ರತಿಷ್ಠೆಯ ಕಣದಂತಾಗಿದೆ. ಮಾನ್ಯ ನಾರಾಯಣಸ್ವಾಮಿಯವರು, ದೌರ್ಜನ್ಯ, ಮತ್ತೊಂದು, ಮಗದೊಂದು ಎಂದು ಹೇಳಿದರು. ವೈದ್ಯರು ಇರಬಹುದು, ಪೋಲೀಸ್‌ನವರು ಇರಬಹುದು, . . . ನಾನು ಬೆಂಗಳೂರನ್ನು 40 ವರ್ಷದಿಂದ ಪ್ರತಿನಿಧಿಸುತ್ತಿದ್ದೇನೆ. ಇಂತಹ ಸೂಕ್ಷ್ಮ ವಿಚಾರಗಳಲ್ಲಿ ನಮ್ಮದೇ ಆದ ವಿಚಾರಗಳನ್ನು ವ್ಯಕ್ತಪಡಿಸುವಾಗ . . . ಮಾನ್ಯ ಕಾಂತರಾಜ್‌ರವರು ಹೇಳಿದ ಹಾಗೆ, ನಾನು ಇಲ್ಲಿಗೆ ಬರುವುದಕ್ಕೆ ಮುಂಚೆ 8-10 ಜನ ವೈದ್ಯರು ಸಿಕ್ಕಿ ಅವರು ಒಂದು ಮಾತನ್ನು ಹೇಳಿದರು. ನಾನು ನನ್ನ ಸರ್ಕಾರಕ್ಕೆ ಷಹಬಾಸ್‌ಗಿರಿ ಕೊಡುವುದಕ್ಕೆ ಈ ಮಾತುಗಳನ್ನು ಹೇಳುತ್ತಿಲ್ಲ. ಮಾನ್ಯ ಶ್ರೀರಾಮುಲುರವರು ಗುಲ್ಬರ್ಗಾಗೆ ಹೋದರು, ರಾಯಚೂರಿಗೆ ಹೋದರು, ಮಂಗಳೂರಿಗೆ ಹೋದರು. ನಾನೂ ಕೂಡ ರಾತ್ರೋರಾತ್ರಿ ಮೈಸೂರಿಗೆ ಹೋಗಿ ಬಂದೆ. ಅಲ್ಲಿ ಹಕ್ಕಿಜ್ವರ ಇದೆ. 8 ಕೊಕ್ಕರೆಗಳು ಮತ್ತು 1 ನಾಟಿ ಕೋಳಿ ಸತ್ತಿದ್ದವು. ಅನಿರೀಕ್ಷಿತವಾಗಿ ನಮ್ಮ ಜಿಲ್ಲಾಧಿಕಾರಿಗಳಿಗೆ, ಇದರ ಪರೀಕ್ಷೆ ಮಾಡಿಸಿ ಎಂದು ಹೇಳಿದೆ. ಪರೀಕ್ಷೆ ಮಾಡಿದಾಗ 6 ಕೊಕ್ಕರೆಗಳಲ್ಲಿ ನೆಗೆಟಿವ್ ಬಂತು,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಕೊಕ್ಕರೆ ಮತ್ತು ಒಂದು ನಾಟಿ ಕೋಳಿಯಲ್ಲಿ ಪಾಸಿಟಿವ್ ಬಂತು. ತಕ್ಷಣ ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಸಂಘ-ಸಂಸ್ಥೆಗಳವರನ್ನು ಕರೆದು, ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿದೆ. ಇದಾದ ಮೇಲೆ ಸುಮಾರು ಹತ್ತಾರು ಸಾವಿರ ಕೋಳಿಗಳು, ಮತ್ತೊಂದು, ಮಗದೊಂದು ಹಕ್ಕಿ ಜ್ವರಕ್ಕೆ . . . ಅದಾಯಿತು. ಇದು ಒಂದು ಕಡೆ. ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಯಾರಿಗೆ ಈ ಸೋಂಕು ಹರಡಿದೆಯೋ ಅವರೆಲ್ಲರೂ ಹೊರ ರಾಷ್ಟ್ರದಿಂದ ಬಂದಿರುವವರು. ಭಾರತದಲ್ಲಿದ್ದವರಿಂದ ಇದು ಹರಡಿಲ್ಲ. ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಾಂಭೀರ್ಯತೆಯಿಂದ ಎನ್ನುವುದಕ್ಕಿಂತಲೂ ಮಾನವೀಯತೆಯ ದೃಷ್ಟಿಯಿಂದ 3 ಗಂಟೆಗಳ ಕಾಲ ಸಭೆ ಮಾಡಿದರು. ನಮ್ಮ ಇಬ್ಬರು ಆರೋಗ್ಯ ಸಚಿವರು ತಮ್ಮದೇ ಆದ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಈ ಮಧ್ಯೆ ಎಲ್ಲೋ ಒಂದು ಕಡೆ ದಗಲ್ಬಾಜಿಗಳು ಇದ್ದೇ ಇರುತ್ತಾರೆ, ಇನ್ನೊಬ್ಬರ ನೋವು ಅವರಿಗೆ ಗೊತ್ತಾಗುವ ಪರಿಸ್ಥಿತಿಯಲ್ಲಿ ಇಲ್ಲ. ಇವತ್ತು ಮೆಡಿಕಲ್ ಶಾಪ್‌ಗಳು ಇರಬಹುದು, ಮತ್ತೊಂದು, ಮಗದೊಂದು ಇರಬಹುದು, ಸಣ್ಣಪುಟ್ಟ ಘಟನೆಗಳು ಆಗುವುದು ಸಹಜ. ಮಾನ್ಯ ಸಭಾಪತಿಯವರೇ, ನನ್ನ ಕ್ಷೇತ್ರದಿಂದ, ಅಣ್ಣ ಏನು ಮಾಡಬೇಕು ಎಂದು ನೂರಾರು ದೂರವಾಣಿಗಳು ಬರುತ್ತಿವೆ. ನಮ್ಮ ಅಧಿಕಾರಿಗಳು 150 ಮನೆಗಳ ಸುತ್ತ ಸರ್ಚ್ ಮಾಡಿ, ಆ ಮನೆಗಳ ಮೇಲೆ ನಿಗಾ ವಹಿಸುವ ಕೆಲಸ ಮಾಡುತ್ತಿದ್ದಾರೆ. ನಮ್ಮ ಚಿಕ್ಕಮಗಳೂರಿನ ಸದಸ್ಯರು, ಬಾರ್ ಮತ್ತು ರೆಸ್ಟೋರೆಂಟ್‌ಗಳನ್ನು ತೆಗೆಯಬಾರದು ಎಂದು ಹೇಳಿದರು. ಬೆಂಗಳೂರಿಗೆ ದಿನಕ್ಕೆ ಕನಿಷ್ಠ 2-3 ಲಕ್ಷ ಜನ ಹೊರಗಡೆಯಿಂದ ಬರುತ್ತಿದ್ದಾರೆ. ಅಷ್ಟು floating population ಇದೆ. ಹೋಟೆಲ್‌ಗಳು ಇಲ್ಲದೇ ಹೋದರೆ ಅವರು ಏನಾಗುತ್ತಾರೆ ಎನ್ನುವ ಬಗ್ಗೆ ಚಿಂತನೆ ಮಾಡಬೇಕಿದೆ. ನಾವು ಸ್ವಚ್ಛತೆಗೆ ಆದ್ಯತೆ ಕೊಡಬೇಕಾಗಿದೆ. ನಾನೂ ಕೂಡ ಮಾನ್ಯ ಆರೋಗ್ಯ ಸಚಿವರಲ್ಲಿ, ಸರ್ಕಾರ ಕೈಗೊಂಡಿರುವ ಕಾರ್ಯವೈಖರಿಯನ್ನು ದುಪ್ಪಟ್ಟ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಬಿ.ಬಿ.ಎಂ.ಪಿ ಇರಬಹುದು, ಬೇರೆ ಬೇರೆ ಜಿಲ್ಲಾ ಕೇಂದ್ರಗಳಿರಬಹುದು, ತಾಲ್ಲೂಕು ಕೇಂದ್ರಗಳಿರಬಹುದು, ಸ್ಥಳೀಯ ಸಂಸ್ಥೆಗಳಿರಬಹುದು, ಖಾಸಗಿ ನರ್ಸಿಂಗ್ ಹೋಮ್‌ಗಳಿರಬಹುದು . . .

**ಶ್ರೀ ಹೆಚ್.ಎಂ.ರೇವಣ್ಣ:-** ತಾಲ್ಲೂಕು ಕೇಂದ್ರಗಳಲ್ಲಿ ಯಾವುದೇ ಸವಲತ್ತು ಇಲ್ಲ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಬೆಂಗಳೂರು, ಮೈಸೂರು, ಮಂಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಮಾತ್ರ ರೋಗ ಪತ್ತೆ ಹಚ್ಚುವ ಕೇಂದ್ರಗಳಿವೆ. ಆದರೆ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮಾಡಬೇಕೆಂದು, ಸಮರೋಪಾದಿಯಲ್ಲಿ ತೆಗೆದುಕೊಳ್ಳುವ ಕೆಲಸದ ಬಗ್ಗೆ ಚರ್ಚೆಯಾಗಿದೆ. ಗಾಂಭೀರ್ಯತೆ ಎನ್ನುವುದಕ್ಕಿಂತ ಹೆಚ್ಚಾಗಿ, ಇದರಿಂದ ಏನಾಗುತ್ತದೆ ಎನ್ನುವುದಕ್ಕಿಂತ, ಮನಸ್ಸನ್ನು ಗಟ್ಟಿ ಮಾಡಬೇಕಾಗಿದೆ, ಧೈರ್ಯ ತುಂಬ ಬೇಕಾಗಿದೆ, ಮಾನಸಿಕವಾಗಿ ನಾವು ಅವರ ಜೊತೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಬೇಕಾಗಿದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಚಿಂತನೆ ಮಾಡೋಣ. ನಮ್ಮ ಇಬ್ಬರು ಸಚಿವರು ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎನ್ನುವುದು ನನ್ನ ವೈಯಕ್ತಿಕ ಭಾವನೆಯಾಗಿದೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಕೊರೊನ ಸೋಂಕು ಹರಡಿದೆಯೋ ಇಲ್ಲವೋ ಎಂದು ಟೆಸ್ಟ್ ಮಾಡುವುದು ಬಹಳ ಮುಖ್ಯವಾಗುತ್ತದೆ. ಟೆಸ್ಟ್ ಮಾಡದೇ ಃಊಜ್ಞಣ ಮಾಡಿ ಯಾರಿಗೆ ಬಂದಿದೆ ಎಂದು ಹೇಳುತ್ತೇವೆಯೋ, ನಿಮೋನಿಯಾ ಬಂದಿರುವವರು ಮತ್ತು ಬೇರೆ ಬೇರೆ ಸೋಂಕಿಗೆ ಒಳಪಟ್ಟಿರುವವರನ್ನು ಮೊದಲು ಟೆಸ್ಟ್ ಮಾಡಬೇಕಾದುದು ಬಹಳ ಮುಖ್ಯ. ಇದಕ್ಕೆ ಬೇಕಾಗಿರುವುದು ಕಿಟ್ಸ್. ದಕ್ಷಿಣ ಕೊರಿಯಾ ದೇಶದವರು ಸಾಕಷ್ಟು ಕಿಟ್ಸ್‌ಗಳನ್ನು ರಿಡಿಥ್ಞಣಊಜ ಮಾಡಿಕೊಂಡಿದ್ದಾರೆ, ಅದೇ ಕೆಲಸವನ್ನು ಯುದ್ಧೋಪಾದಿಯಲ್ಲಿ ಮಾಡುತ್ತಿದ್ದಾರೆ. ಆ ರೀತಿ ಕಿಟ್ಸ್‌ಗಳನ್ನು ಸಂಗ್ರಹ ಮಾಡುವುದಕ್ಕೆ ಸರ್ಕಾರ ಏನು ಮಾಡುತ್ತದೆ ಎನ್ನುವುದರ ಬಗ್ಗೆ ತಿಳಿಸಬೇಕು.

**ಶ್ರೀ ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಶ್ರೀಮತಿ ಜಯಮಾಲ, ಮಾನ್ಯ ಐವನ್ ಡಿ'ಸೋಜಾ, ಮಾನ್ಯ ಬಸವರಾಜ ಹೊರಟ್ಟಿಯವರು, ಮಾನ್ಯ ತಿಮ್ಮಾಪುರರವರು, ಮಾನ್ಯ ನಾರಾಯಣಸ್ವಾಮಿಯವರು ಮಾನ್ಯ ಸೋಮಣ್ಣ ಹಾಗೂ ಇನ್ನಿತರ ಹಿರಿಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕೊರೊನಾ ಸೋಂಕು ಹರಡುತ್ತಿದ್ದ ಸಂದರ್ಭದಲ್ಲಿ ಇಟಲಿಯಂತಹ ದೇಶದವರು, ನಾವು ಬಹಳಷ್ಟು ಬುದ್ಧಿವಂತರು, ನಾವು ಸ್ವಚ್ಛತೆ ಕಾಪಾಡುತ್ತೇವೆ ಎಂದು ಎಲ್ಲೋ ಒಂದು ಕಡೆ ನಿರ್ಲಕ್ಷ್ಯ ಮಾಡಿದವು. ಆ ದೇಶಗಳಲ್ಲೂ ಶಾಲಾ-ಕಾಲೇಜುಗಳಿಗೆ ರಜಾ ಕೊಟ್ಟ ಸಂದರ್ಭದಲ್ಲಿ, ಅಲ್ಲಿನ ವಿದ್ಯಾರ್ಥಿಗಳು ನೇರವಾಗಿ ಪಬ್-ಬಾರ್‌ಗಳಿಗೆ ಹೋದರು. ಆಗ ಅಲ್ಲಿ ಜನಸಂದಣಿ ಜಾಸ್ತಿಯಾಗಿ ಸೋಂಕು ಕೂಡ ವೇಗವಾಗಿ ಹರಡಿತು. ಇವತ್ತೇಕೆ ಅಲ್ಲಿ ಅಷ್ಟೊಂದು ಅನಾಹುತ ಆಗುತ್ತಿದೆ ಎಂದರೆ ಅದು it is because of their negligence ಎಂದು ಕೊಂಡೆವು. ಅಲ್ಲಿ crowd ಸೇರಿದ ಕಾರಣ ಹಾಗಾಯಿತು. In Karnataka, now we are in the second stage. ಈ ಹಂತದಿಂದ ಅದು 3ನೇ ಹಂತ, 4ನೇ ಹಂತಕ್ಕೆ ಹೋಗದಂತೆ ನೋಡಿಕೊಳ್ಳಬೇಕು.

(ಮುಂದು . . .)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(548) 18-03-2020 7.10 ಡಿಎಸ್-ಆರ್‌ಎನ್

**ಶ್ರೀ ಬಿ.ಶ್ರೀರಾಮುಲು (ಮುಂದು):-**

ಏಕೆಂದರೆ, ಮೂರನೇ ಹಂತ, ನಾಲ್ಕನೇ ಹಂತಕ್ಕೆ ಹೋದರೆ ನಾವು ಊಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ಅಷ್ಟು ವೇಗವಾಗಿ ವೈರಸ್ ಪಾಸ್ ಆಗುತ್ತದೆ. ಅಷ್ಟು ವೇಗವಾದ ವೈರಸ್‌ನ್ನು ತಡೆಯಿಡಿಯಬೇಕೆಂದು ಪ್ರಾಮಾಣಿಕವಾದಂತಹ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಸಭಾಪತಿಯವರ ಅಪ್ಪಣೆ ತೆಗೆದುಕೊಂಡು ನಾನು ಮಂಗಳೂರಿಗೆ ಹೋಗಿದ್ದೆ. ಕೇರಳ ರಾಜ್ಯದಲ್ಲಿ ಕಾಸರಗೋಡಿನಿಂದ ಒಬ್ಬ ವ್ಯಕ್ತಿ ಮಂಗಳೂರು ವಿಮಾನ ನಿಲ್ದಾಣಕ್ಕೆ ಬಂದಿದ್ದಾನೆ. ಕಾಸರಗೋಡಿನಿಂದ ಬಂದಂತಹ ವ್ಯಕ್ತಿಗೆ positive ಆಗಿದೆ. Positive ಆದಂತಹ ವ್ಯಕ್ತಿ ಮಂಗಳೂರು ವಿಮಾನ ನಿಲ್ದಾಣದಿಂದ ಒಂದು ಟ್ಯಾಕ್ಸಿಯಲ್ಲಿ ಹೋಗಿ ಸ್ನೇಹಿತನನ್ನು ಭೇಟಿಯಾಗಿದ್ದಾನೆ. ನಾವು ಈಗಾಗಲೇ call monitor ಕೂಡ ಮಾಡುತ್ತಿದ್ದೇವೆ. ಅವನು ಎಲ್ಲೆಲ್ಲಿ ಓಡಾಡಿದ್ದಾನೆಂದು trace ಮಾಡುವಂತಹ ಪ್ರಯತ್ನವನ್ನು ಕೂಡ ಮಾಡುತ್ತಿದ್ದೇವೆ. ನಾನು ಅಲ್ಲಿ ನಿನ್ನೆ ಮಾತನಾಡಿದ್ದಂತಹ ಸಂದರ್ಭದಲ್ಲಿ ಜಿಲ್ಲಾಡಳಿತ ಮತ್ತು ಬೇರೆ ಬೇರೆ ಹಿರಿಯರು ಸೇರಿದಂತಹ ಸಂದರ್ಭದಲ್ಲಿ ಕೇರಳದಿಂದ ನಮ್ಮ ಕರ್ನಾಟಕಕ್ಕೆ ಏನು ಪ್ರವೇಶ ಮಾಡುತ್ತಾರೆಯೋ, ಬಹಳಷ್ಟು ಜನರು ಕೇರಳದಿಂದ ಗಡಿಯನ್ನು ಕ್ರಾಸ್ ಮಾಡುವಂತಹ ಸಂದರ್ಭದಲ್ಲಿ ಅಲ್ಲಿ ಕಡ್ಡಾಯವಾಗಿ Thermal Scanning ಆಗಬೇಕು, test ಆಗಬೇಕೆನ್ನುವ ಆದೇಶವನ್ನು ಕೊಟ್ಟಿದ್ದೇವೆ. ಅದೇ ರೀತಿ ಬೆಳಗಾವಿ, ಮಹಾರಾಷ್ಟ್ರದಲ್ಲಿ ಹೆಚ್ಚು ಇರುವ ಕಾರಣದಿಂದ ಅಲ್ಲಿ ಗಡಿ ಪ್ರದೇಶಕ್ಕೆ ಪ್ರವೇಶ ಮಾಡುವವರಿಗೆ test ಆಗಬೇಕು, ಚೆಕ್‌ಪೋಸ್ಟ್ ಆಗಬೇಕೆಂದು ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಕೇರಳದಿಂದ ಮಂಗಳೂರಿಗೆ 27 ರಸ್ತೆಗಳು ಬರುತ್ತವೆ. ಅದರಲ್ಲೂ ಮುಖ್ಯ ರಸ್ತೆಗಳಲ್ಲಿ ಎಲ್ಲಾ ಕಡೆ ಹಾಕಿದ್ದಾರೆ. ಇನ್ನು internal ರಸ್ತೆಗಳಲ್ಲಿ ಹಾಕಬೇಕಾಗಿದೆ. ನಿನ್ನೆ ಮಾತನಾಡಿದಂತಹ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಯಾವ್ಯಾವುದನ್ನು ಬಿಟ್ಟಿದ್ದೀರೋ ಅಲ್ಲಿಯೂ ಕೂಡ ಕಡ್ಡಾಯವಾಗಿ ಮಾನಿಟರ್ ಮಾಡಬೇಕೆಂದು ಹೇಳಿದ್ದೇನೆ. ಕೇರಳದಲ್ಲಿ ಸಾಕಷ್ಟು precaution ತೆಗೆದುಕೊಂಡು ಮಾಡುತ್ತಿದ್ದಾರೆ. ಕಾಸರಗೋಡಿನಿಂದ ಬಂದಿರುವ ವ್ಯಕ್ತಿಗೆ positive ಇರುವ ಕಾರಣ ಮಾನಿಟರ್ ಮಾಡಿ ಎಂದು ನಾನು ನಿನ್ನೆ ಆದೇಶ ಕೊಟ್ಟಿದ್ದೇನೆ. ಬೆಳಗಾವಿಯಿಂದ ಮಹಾರಾಷ್ಟ್ರಕ್ಕೆ, ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಪ್ರವೇಶ ಮಾಡುವಂಥ ಗಡಿಯಲ್ಲೂ ಕೂಡ screening ಆಗಬೇಕು, ಜೊತೆಗೆ Thermal Scanning ಆಗಬೇಕೆಂದು ಆದೇಶವನ್ನು ಕೊಟ್ಟಿದ್ದೇನೆ. ಅಲ್ಲೂ ಕೂಡ ಕೆಲಸಗಳು ಪ್ರಾರಂಭವಾಗಿವೆ. ಏಕೆಂದರೆ, ಇವತ್ತು ಅಂತರರಾಷ್ಟ್ರೀಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಮಾನ ನಿಲ್ದಾಣದಲ್ಲಿ Thermal scan ಆಗುತ್ತಿದೆ, ಜೊತೆಗೆ ಅಲ್ಲಿದ್ದಂಥವರಿಗೆ ಸ್ಕ್ಯಾನಿಂಗ್ ಮಾಡುವಂತಹ ಕೆಲಸ ಆಗುತ್ತಿದೆ. ಈ ರೀತಿ positive ಆಗಿ ಬಂದಂಥವರನ್ನು quarantine ಮಾಡಿ ಅವರಿಗೆ 14 ದಿನಗಳ ಕಾಲ observation ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. 14 ದಿನ observation ಮಾಡಿದಂತಹ ಸಂದರ್ಭದಲ್ಲಿ ಸಾಕಷ್ಟು ಜನರು ಗುಣಮುಖರಾಗುತ್ತಿದ್ದಾರೆ. ಅವರಿಗೂ ಕೇರ್ ತೆಗೆದುಕೊಳ್ಳುವಂತಹ ಕೆಲಸ ಮಾಡುತ್ತಿದ್ದೇವೆ. ಅದಕ್ಕೋಸ್ಕರ ಮುಂಬರುವಂತಹ ದಿನಗಳಲ್ಲಿ ಈ ವೈರಸ್ ಹರಡದಂತೆ ನೋಡಿಕೊಳ್ಳುವ ಸಲುವಾಗಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ನಾನು ವೈದ್ಯರುಗಳನ್ನು ಇಡೀ ರಾಜ್ಯದ ಜನರ ಪರವಾಗಿ, ಸರ್ಕಾರದ ಪರವಾಗಿ, ನಮ್ಮೆಲ್ಲರ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ನಾನು ಕಲಬುರಗಿ, ಮಂಗಳೂರಿಗೆ ಹೋದಂತಹ ಸಂದರ್ಭದಲ್ಲಿ ಜನರು ಎಷ್ಟು ಭಯಭೀತರಾಗಿದ್ದರು ಎಂದರೆ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ನರ್ಸ್‌ಗಳು, ವೈದ್ಯರುಗಳು ಯಾವ ರೀತಿ ನಿಂತಿದ್ದಾರೆಂದರೆ, ಯುದ್ಧ ಘೋಷಣೆಯಾದಾಗ ಸೈನಿಕರು ಯಾವ ರೀತಿ ತಯಾರಾಗುತ್ತಾರೆಯೋ ಆ ರೀತಿಯಲ್ಲಿ ವೈದ್ಯರುಗಳು, ನರ್ಸ್‌ಗಳು ಎಲ್ಲರೂ ಯುದ್ಧೋಪಾದಿಯಲ್ಲಿ ತಯಾರಾಗಿ ನಿಂತಿದ್ದಾರೆ. ಸರ್ಕಾರ ಕೆಲವು ಸಲ ನಿರ್ಲಕ್ಷ್ಯ ಮಾಡುವ ಸಂದರ್ಭ ಬಂದರೂ ಕೂಡ ವೈದ್ಯರುಗಳು ನಮಗೆ ಶಕ್ತಿಯನ್ನು ತುಂಬುವ ಕೆಲಸ ಮಾಡುತ್ತಿದ್ದರು. ಯಾರನ್ನೂ ನಾವು ತಿರಸ್ಕಾರ ಮಾಡುವುದಿಲ್ಲ, ಎಲ್ಲರನ್ನು ಕಾಪಾಡುವಂತಹ ಪ್ರಯತ್ನ ಮಾಡುತ್ತೇವೆಂದು ಅವರೇ ಸ್ವಯಂ ಪ್ರೇರಣೆಯಿಂದ ಪ್ರಾಮಾಣಿಕವಾಗಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಇಡೀ ವೈದ್ಯ ವೃಂದಕ್ಕೆ ನಮ್ಮ ಸರ್ಕಾರದ ಪರವಾಗಿ, ನಮ್ಮೆಲ್ಲರ ಸದಸ್ಯರ ಪರವಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಏಕೆಂದರೆ, ನಾನು ಅಲ್ಲಿ ನೋಡಿದಂತಹ ಸಂದರ್ಭದಲ್ಲಿ ನನ್ನ ಮೈಯಲ್ಲಿರುವಂತಹ ರೋಮಗಳು ಎದ್ದು ನಿಂತವು. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಈ ವೈರಸ್ ಬಂದರೆ ಸತ್ತು ಹೋಗುತ್ತಾರೆಂದು ಬಹಳಷ್ಟು ಜನರಿಗೆ ಭಯ ಇದೆ. ಈ ವೈರಸ್ ಬಂದರೆ ಯಾರು ಸಾಯುವುದಿಲ್ಲ. ಬಹಳಷ್ಟು ಜನರು ಗುಣಮುಖರಾಗುತ್ತಾರೆ. ಅವರಲ್ಲಿರುವಂತಹ resistance power ಕಡಿಮೆಯಾದರೆ ಸಾಯಬಹುದೇನೋ ಗೊತ್ತಿಲ್ಲ. ಇವತ್ತು death rate is 3.6%. ಏಕೆಂದರೆ, ಎಲ್ಲೋ ಒಂದು ಕಡೆ ಈ ಕಾಯಿಲೆ ಬಂದ ನಂತರ ನಾವು ಸಾಯುತ್ತೇವೆ ಎನ್ನುವ ಭಯ ಏನಿದೆ ಆ ಮನಃಸ್ಥಿತಿಯನ್ನು ತೆಗೆಯಬೇಕಾಗಿದೆ. ನಾವೆಲ್ಲರೂ ಈ ಜಗತ್ತನ್ನು ನೋಡಿದ್ದೇವೆ. ಇಲ್ಲಿ ಬಹಳಷ್ಟು ಬುದ್ಧಿವಂತರು ಕುಳಿತ್ತಿದ್ದೇವೆ. ಇವತ್ತು ಕೂಡ ಈ ಹಳ್ಳಿಗಾಡು ಪ್ರದೇಶಕ್ಕೆ ಹೋದರೆ ಈ ವೈರಸ್ ಬಗ್ಗೆ ಅವರಿಗೇನು ಗೊತ್ತಿಲ್ಲ. ನಿನ್ನೆ ನಾನು ಮಂಗಳೂರು ಆಸ್ಪತ್ರೆಗೆ ಹೋದಂತಹ ಸಂದರ್ಭದಲ್ಲಿ ಅಲ್ಲಿ ಕೆಲವೊಂದು positive cases ಇದ್ದಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ monitor ಮಾಡಲು isolation ward ಗೆ ಹೋದಂತಹ ಸಂದರ್ಭದಲ್ಲಿ ಅವರು ಮಾಸ್ಕ್ ಹಾಕಿಕೊಂಡಿಲ್ಲ. ಪಾಪ, ಅವರಿಗೇನೂ ಗೊತ್ತೇ ಇಲ್ಲ. ಅಂಥವರಿಗೆ ಧೈರ್ಯ ತುಂಬಬೇಕು.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರನ್ನು ನಾವು ನಿಜವಾಗಿಯೂ ಅಭಿನಂದಿಸುತ್ತೇವೆ. ಅವರು ಬಹಳ ಉತ್ತಮವಾಗಿ ಜಾಗರೂಕತೆಯಿಂದ ಕೆಲಸ ಮಾಡುತ್ತಿದ್ದಾರೆ. Death rate, 3.6% ಮಾತ್ರ ಇರುವಂಥದ್ದು. ಆದರೆ, ಮಾಧ್ಯಮಗಳು ದೂರದರ್ಶನದಲ್ಲಿ ಬೆಳಿಗ್ಗೆಯಿಂದ ರಾತ್ರಿವರೆಗೆ ಭಯದ ವಾತಾವರಣವನ್ನು ನಿರ್ಮಾಣ ಮಾಡುತ್ತಿದ್ದಾರೆ. ಅದೇನಾದರೂ ಬಂದರೆ ಜನ ಸತ್ತೇ ಹೋಗುತ್ತಾರೆ ಎನ್ನುವ ಭಯದ ವಾತಾವರಣ ನಿರ್ಮಾಣ ಮಾಡುತ್ತಿದ್ದಾರೆ. ದಯಮಾಡಿ ಅವರಿಗೆ ಸರ್ಕಾರದ ವತಿಯಿಂದ ಸಂದೇಶ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಸಚಿವರೇನು precaution measurement ತೆಗೆದುಕೊಳ್ಳಬೇಕೆಂದು ಹೇಳಿದ್ದಾರಲ್ಲಾ death rate ಕಡಿಮೆ ಇದೆ ಎಂದು ಹೇಳಿದ್ದಾರಲ್ಲಾ ಅದನ್ನೇ ದೂರದರ್ಶನದವರಿಗೆ ತೋರಿಸುವುದಕ್ಕೆ ಹೇಳಿ. ಸರ್ಕಾರದ ವತಿಯಿಂದ ಅವರಿಗೆ ಮಾಹಿತಿ ಕೊಡುವಂತಹ ಕೆಲಸ ಮಾಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಂಗಳೂರಿಗೆ ಭೇಟಿ ನೀಡಿದಾಗ, ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಎಲ್ಲರೂ ಕಾಸರಗೋಡಿನಿಂದ ಹೋಗುವುದರಿಂದ ಮಂಗಳೂರನ್ನು ಸ್ವಲ್ಪ ಜಾಗರೂಕತೆಯಿಂದ ನೋಡಿಕೊಳ್ಳಿ ಎಂದು ಹೇಳಿದ್ದಾರೆ. ಕಾಸರಗೋಡಿನಿಂದ ಬರುವಂತಹ ಎಲ್ಲಾ ಪ್ರಯಾಣಿಕರು ಮಂಗಳೂರು ಮೂಲಕವೇ ದುಬೈಗೆ, ಬೇರೆ ಬೇರೆ ಪ್ರದೇಶಗಳಿಗೆ ಹೋಗುತ್ತಾರೆ. We appreciate the work of Hon'ble Ministers. ಇಬ್ಬರು ಸಚಿವರಿಗೂ ಅಭಿನಂದಿಸಬೇಕಾಗುತ್ತದೆ. ಮಾನ್ಯ ಸೋಮಣ್ಣನವರು ಕೊರೋನಾ ಬಗ್ಗೆ ರಾಜ್ಯ ಸರ್ಕಾರ ನಿರ್ಲಕ್ಷ್ಯ ತೋರಲಿಲ್ಲವೆಂದು ಹೇಳಿದರು. ಅದನ್ನು ನಾನು ಎಲ್ಲಾ ಕಡೆಯಲ್ಲೂ ಹೇಳಬಲ್ಲೆ. I must appreciate it. Because they have done very good job.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾನೊಬ್ಬನೆ ಏನು ಮಾಡುವುದಕ್ಕಾಗುವುದಿಲ್ಲ. ನಾನು ಒಬ್ಬ ಮಂತ್ರಿಯಾಗಿ ಏನೂ ಮಾಡುವುದಕ್ಕಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ತಾವೆಲ್ಲರೂ ಸಹಕಾರ ಕೊಡುತ್ತಿದ್ದೀರಿ. ಈ ನಾಡಿನ ಜನರ ಹಿತದೃಷ್ಟಿಯಿಂದ ಇವತ್ತು

ಬಡಬಗ್ಗರನ್ನು ನೋಡಿದಂತಹ ಸಂದರ್ಭದಲ್ಲಿ ಅವರು ಮುಗ್ಧ ಜನರು, ಅವರಿಗೇನು ಗೊತ್ತಿಲ್ಲ. ಅವರಿಗೆ ಕರ್ಚೀಫ್ ಕಟ್ಟಿಕೊಳ್ಳಿ ಎಂದರೆ ಕರ್ಚೀಫ್ ಕಟ್ಟಿಕೊಳ್ಳುವುದಿಲ್ಲ, ಮಾಸ್ಕ್ ಹಾಕಿಕೊಳ್ಳಿ ಎಂದರೆ ಮಾಸ್ಕ್ ಹಾಕಿಕೊಳ್ಳುವುದಿಲ್ಲ. ಈ ಕಾಯಿಲೆ ಇದೆ ಎನ್ನುವುದು ಬಹಳಷ್ಟು ಜನರಿಗೆ ಗೊತ್ತಿಲ್ಲ. ಅಂತಹ ಸಂದರ್ಭದಲ್ಲಿ ನಾವೆಲ್ಲರೂ ಒಂದಾಗಿ ಈ ವೈರಸ್ ಬಗ್ಗೆ ಮಾಧ್ಯಮಗಳಲ್ಲಿ ಅವರು ಕೂಡ ಸ್ವಲ್ಪ ಬದಲಾವಣೆಯಾಗಿ ಪಾಸಿಟಿವ್ ಆಗಿ ತೋರಿಸಿದರೆ ಜನರಿಗೆ ವಿಶ್ವಾಸ ಮೂಡಿಸುವ ಕೆಲಸವಾಗುತ್ತದೆ. ಈಗ ಸದನ ನಡೆಯುತ್ತಿದೆ. ಇವತ್ತು ದೆಹಲಿಯಲ್ಲಿ ಪಾರ್ಲಿಮೆಂಟ್ ಕೂಡ ನಡೆಯುತ್ತಿದೆ. ಹಾಗಾಗಿ ಇವತ್ತು ಆದಷ್ಟು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. There are fourteen positive cases in the State. ಪ್ರಾಮಾಣಿಕವಾಗಿ ಪ್ರಯತ್ನ ಮಾಡಿ ಆದಷ್ಟು ಈ positive cases ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈಗಾಗಲೇ ಕೊರೋನಾ ವೈರಸ್ ಸೋಂಕಿತ ಒಬ್ಬ ವ್ಯಕ್ತಿ ಮೃತರಾಗಿದ್ದಾರೆ. ಅದರ ಬಗ್ಗೆ ಎಲ್ಲಾ ರೀತಿಯಿಂದಲೂ ಮಾನಿಟರ್ ಮಾಡಿ ಅವರ ಕುಟುಂಬದ ಸದಸ್ಯರನ್ನು ಕೂಡ ಮಾನಿಟರ್ ಮಾಡುವ ವ್ಯವಸ್ಥೆಯನ್ನು ಮಾಡುತ್ತೇವೆ. ಹಾಗಾಗಿ ಇನ್ನು ಮುಂದೆ ಏನೇನು latest updates ಆಗುತ್ತದೆ ಅದನ್ನು ಸದನಕ್ಕೆ ತಿಳಿಸುವಂತಹ ಕೆಲಸ ತಮ್ಮ ಮೂಲಕ ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಂಗಳೂರಿಗೆ ಟೆಸ್ಟಿಂಗ್ ಲ್ಯಾಬೊರೇಟರಿ ಮಾಡಬೇಕು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೂ ಟೆಸ್ಟಿಂಗ್ ಲ್ಯಾಬೊರೇಟರಿ ಮಾಡಬೇಕು.

**ಶ್ರೀ ಟಿ.ಎ.ಶರವಣ:- XXX** ....

**ಶ್ರೀ ಗೋವಿಂದ ಎಂ.ಕಾರಜೋಳ:- XXX**

**ಶ್ರೀ ಟಿ.ಎ.ಶರವಣ:-** ಏನು ಮಾತನಾಡುತ್ತಿದ್ದೀರಿ ನೀವು.

**ಶ್ರೀ ಗೋವಿಂದ ಎಂ.ಕಾರಜೋಳ:-** ಒಂದು ನಿಮಿಷ, ನಾನು ಉತ್ತರವನ್ನು ಕೊಡುತ್ತಿದ್ದೇನೆ. ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಆರ್.ಬಿ.ತಿಮ್ಮಾಪೂರ ರವರು ಸಮಾಜ ಕಲ್ಯಾಣ ಇಲಾಖೆಯ ಸಹಾಯಧನವನ್ನು ಪಡೆದು ಹೊರ ದೇಶಗಳಲ್ಲಿ ವ್ಯಾಸಂಗ ಮಾಡುತ್ತಿರುವವರ ಸ್ಥಿತಿಗತಿ

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ಎಂದು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. 191 ವಿದ್ಯಾರ್ಥಿಗಳು 11 ದೇಶದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಅವರೆಲ್ಲರಿಗೂ ಸಂದೇಶವನ್ನು ಕಳುಹಿಸಿಕೊಟ್ಟಿದ್ದೇವೆ. ಅವರ ಸ್ಥಿತಿಗತಿ ಬಗ್ಗೆ, ಆರೋಗ್ಯದ ಬಗ್ಗೆ ತಿಳಿದುಕೊಳ್ಳುವುದಕ್ಕೆ ಕಳುಹಿಸಿಕೊಟ್ಟಿದ್ದೇವೆ. ನಾವು ಕ್ಷೇಮವಾಗಿದ್ದೇವೆ, ನಮಗೆ ಯಾವುದೇ ಆತಂಕ, ತೊಂದರೆ ಇಲ್ಲ ಎಂದು 90 ಜನ ವಿದ್ಯಾರ್ಥಿಗಳು ಮರಳಿ ಉತ್ತರ ಕೊಟ್ಟಿದ್ದಾರೆ. ಇನ್ನು 100 ಜನರಿಂದ ನಮಗೆ ಉತ್ತರ ಬರಬೇಕಾಗಿದೆ. ಅವರಿಂದ ಉತ್ತರವನ್ನು ತೆಗೆದುಕೊಳ್ಳುವುದಕ್ಕೆ

ಪ್ರಯತ್ನ ಮಾಡುತ್ತಿದ್ದೇವೆ. ಮತ್ತೊಬ್ಬ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ಹಣಕಾಸಿನ ಮುಗ್ಗಟ್ಟು, ತೊಂದರೆ ಇದ್ದರೆ ನಾವು ಒಂದು ತಿಂಗಳ ಸಂಬಳ ಬೇಕಾದರೆ ಕೊಡುತ್ತೇವೆ ಎಂದು ಹೇಳಿದರು. ಅವರಿಗೆ ನಾವು ಧನ್ಯವಾದಗಳನ್ನು ಹೇಳುತ್ತೇವೆ. ನಾವು ಇದಕ್ಕಾಗಿ 200 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ಯಾವುದೇ ತೊಂದರೆ ಇಲ್ಲ. ಸರ್ಕಾರಕ್ಕೆ ಎಷ್ಟೇ ಖರ್ಚು-ವೆಚ್ಚ ಬಂದರೂ ಕೂಡ ನಿಭಾಯಿಸುವುದಕ್ಕೆ ಸರ್ಕಾರ ಸಿದ್ಧವಿದೆ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮಾಜ ಕಲ್ಯಾಣ ಇಲಾಖೆಯ ಅಭ್ಯರ್ಥಿಗಳ ಬಗ್ಗೆ ಹೇಳಿದ್ದಾರೆ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಸಚಿವ ಸಂಪುಟದಲ್ಲಿ ಇದಕ್ಕೋಸ್ಕರ 200 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಕೇಂದ್ರ ಸರ್ಕಾರ ಸಾಕಷ್ಟು ಅನುದಾನವನ್ನು ಕೊಟ್ಟಿದೆ. ಹಣಕಾಸಿನ ತೊಂದರೆ ಇಲ್ಲದಂತೆ ಸಂಪೂರ್ಣವಾಗಿ ಎಲ್ಲಾ ವ್ಯವಸ್ಥೆಯನ್ನು ಮಾಡುವಂತಹ ಕೆಲಸ ಸರ್ಕಾರ ಮಾಡುತ್ತದೆ.

(ಮುಂದು)

**(549) 18.03.2020 07.20 ಎಸ್‌ವಿ-ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್:-** ಅದರ ಜೊತೆಗೆ ಕೇಂದ್ರದಿಂದ ಎಷ್ಟು ಹಣ ಬಂದಿದೆ?

**ಶ್ರೀ ಗೋವಿಂದ ಎಂ.ಕಾರಜೋಳ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ NDRF and SDRF ನಲ್ಲಿ 184 ಕೋಟಿ ರೂಪಾಯಿಗಳನ್ನು ಉಪಯೋಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳಲಿಕ್ಕೆ ಅನುಮತಿ ನೀಡಿದೆ. ಮಾನ್ಯ ಕಂದಾಯ ಸಚಿವರು ಇಲ್ಲಿಯೇ ಇದ್ದಾರೆ. ಅವರು ಹೇಳುತ್ತಾರೆ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಕೇಂದ್ರ ಸರ್ಕಾರದ ಅನುದಾನದ ಬಗ್ಗೆ ಕೇಳಿದ್ದಾರೆ. ಈಗಾಗಲೇ ಮೂರು ದಿನಗಳ ಹಿಂದೆಯೇ ಕೇಂದ್ರ ಸರ್ಕಾರ ಇದೊಂದು ಪ್ರಕೃತಿ ವಿಕೋಪವೆನ್ನುವ ಘೋಷಣೆಯನ್ನು ಮಾಡಿದ್ದಾರೆ. ಈಗ NDRF Fund ನಿಂದ ನಮಗೆ ಸುಮಾರು 354 ಕೋಟಿ ರೂಪಾಯಿಗಳು ಪ್ರತಿ ವರ್ಷ ನಮಗೆ ಬರುತ್ತಿದೆ. ಇದಕ್ಕಾಗಿ ರೂ.184 ಕೋಟಿಯನ್ನು ಉಪಯೋಗ ಮಾಡಿಕೊಳ್ಳಲು ನಮಗೆ ಅನುಮತಿಯನ್ನು ಕೊಡಲಾಗಿದೆ. ನಾನು ಎರಡು ದಿನಗಳ ಹಿಂದೆಯೇ ರೂ.20 ಕೋಟಿಗಳನ್ನು ಆರೋಗ್ಯ ಇಲಾಖೆಗೆ ಬಿಡುಗಡೆ ಮಾಡಿದ್ದೇನೆ. ಇನ್ನೂ ರೂ.184 ಕೋಟಿಗಳು ಬಿಡುಗಡೆ ಮಾಡಲು ಇದೆ. ಈಗಾಗಲೇ ಗೌರವಾನ್ವಿತ ಸದಸ್ಯರು ಕಿಟ್ ಬಗ್ಗೆ ಮಾತನಾಡಿದ್ದಾರೆ. ಹೊಸ Testing Labs ಬಗ್ಗೆ ಮಾತನಾಡಿದ್ದಾರೆ. ಈಗ ಬೆಂಗಳೂರು, ಮೈಸೂರು, ಶಿವಮೊಗ್ಗದಲ್ಲಿ ಇದೆ. ಉಳಿದ ಭಾಗಗಳಲ್ಲಿ ಎಲ್ಲಿ ಅವಶ್ಯಕತೆಯಿದೆಯೋ ಅಲ್ಲಿ ಮಾಡುವುದಕ್ಕೆ ಒಂದು ನಿಮಿಷವೂ ತಡ ಮಾಡದೆ ಹಣವನ್ನು ಬಿಡುಗಡೆ ಮಾಡುತ್ತೇನೆ. ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೂ ನಾನು ಪತ್ರವನ್ನು ಬರೆದಿದ್ದೇನೆ. ಎಲ್ಲಾ ಜಿಲ್ಲೆಗಳಲ್ಲಿ ಕನಿಷ್ಠ ರೂ.5 ಕೋಟಿ ಹಣ maintain ಮಾಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಆರೋಗ್ಯ ಇಲಾಖೆಯವರ ಜೊತೆಯಲ್ಲಿ ಮಾತನಾಡಿಕೊಂಡು ಅವಶ್ಯಕ ಕ್ರಮಗಳನ್ನು ಕೈಗೊಳ್ಳುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಗಿದೆ. NDRF Norms ಪ್ರಕಾರ ಪೋಲೀಸ್ ಇಲಾಖೆ, Fire Department ಕೊಡುವುದಕ್ಕೆ ಹೇಳಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧಪಕ್ಷದ ನಾಯಕರು):-** ಮಾನ್ಯ ಸಚಿವರೇ, ನಿಮ್ಮ ಮಾತನ್ನು ಒಪ್ಪಿದೆ. ಪ್ರತಿ ವರ್ಷ NDRF and SDRF, Rs.184 Crore ಹಣವನ್ನು ಕೇಂದ್ರ ಸರ್ಕಾರ ಕೊಡುತ್ತಿರುತ್ತದೆ. ಅದರಿಂದ ಉಪಯೋಗ ಮಾಡಲು ನಿಮಗೆ ಪರವಾನಗಿಯನ್ನು ಕೊಟ್ಟಿದ್ದಾರೆ. In addition to that ರಾಜ್ಯ ಸರ್ಕಾರದವರು ರೂ.200 ಕೋಟಿಗಳನ್ನು ಕೊಟ್ಟಿದ್ದಾರೆ. ಎಲ್ಲವೂ ಕೂಡಿ.....

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಇದರ ಉದ್ದೇಶವಿಷ್ಟೆ. ಹಣಕಾಸಿನ ತೊಂದರೆಯಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಹಣಕಾಸಿನ ಸಮಸ್ಯೆ ಬರದಂತೆ ನೋಡಿಕೊಳ್ಳುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹಣಕಾಸಿನ ತೊಂದರೆಯಿಲ್ಲ ಎಂದು vague ಆಗಿ ಉತ್ತರವನ್ನು ಪಡೆದುಕೊಳ್ಳುವುದಕ್ಕೆ ನಾನು ಇಲ್ಲಿ ನಿಂತಿಲ್ಲ. ನಮ್ಮ ರಾಜ್ಯ ಸರ್ಕಾರದ ಬೊಕ್ಕಸದಿಂದ ರೂ.200 ಕೋಟಿ.....

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಕೇವಲ 200 ಕೋಟಿಗಳಲ್ಲ, ಎಷ್ಟು ಕೋಟಿ ಬೇಕಾದರೂ ಬಿಡುಗಡೆ ಮಾಡುವುದಕ್ಕೆ ಸಿದ್ಧರಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನಗೆ ನಿಖರವಾದ ಮಾಹಿತಿ ಬೇಕು. ಏಕೆಂದರೆ ನಾವು ಸಾರ್ವಜನಿಕ ಬದುಕಿನಲ್ಲಿರುವವರು. ರಾಜ್ಯ ಸರ್ಕಾರ ಎಷ್ಟು ಹಣ ಕೊಟ್ಟಿದೆ? ಕೇಂದ್ರ ಸರ್ಕಾರ ಎಷ್ಟು ಹಣ ಕೊಟ್ಟಿದೆ?

**(ಗೊಂದಲ)**

I am on my leg, ಮಾನ್ಯ ಸಭಾನಾಯಕರು ಎಷ್ಟು ಬಾರಿ interfere ಮಾಡುತ್ತಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ವಿರೋಧಪಕ್ಷದ ನಾಯಕರೇ, ಈಗ ಅತ್ಯಂತ ದೊಡ್ಡ ಮಟ್ಟದಲ್ಲಿ ಕೊರೋನಾದ ಗೊಂದಲವಿದೆ. ಅದಕ್ಕೋಸ್ಕರ ಯಾವುದೇ ಸಂದರ್ಭದಲ್ಲಿಯೂ ಹಣ ಪೂರೈಸಲಿಕ್ಕೆ ಸಿದ್ಧವಿದೆ. ಅದು ಕೇಂದ್ರ ಸರ್ಕಾರದಿಂದ ಬರಲಿ, ರಾಜ್ಯ ಸರ್ಕಾರದಿಂದ ಬರಲಿ......

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರದವರು ನಿರ್ದಿಷ್ಟವಾಗಿ ಎಷ್ಟು ಹಣವನ್ನು ಕೊಟ್ಟಿದ್ದಾರೆ? ಕೇಂದ್ರ ಸರ್ಕಾರವು NDRF and SDRF ಅಡಿಯಲ್ಲಿ ಇರುವ ಹಣದಲ್ಲಿ ಎಷ್ಟು ಬಳಕೆ ಮಾಡುವುದಕ್ಕೆ ಅವಕಾಶವಿದೆ ಎಂದು ನಾನು ಕೇಳಿದ್ದೇನೆ. ಈಗ ರಾಜ್ಯ ಸರ್ಕಾರ ರೂ.200 ಕೋಟಿ ಎಂದು ಮಾನ್ಯ ಉಪಮುಖ್ಯಮಂತ್ರಿಯವರು ಹೇಳಿದರು. In addition to that NDRF and SDRF ನಿಂದ ಇರುವ ಹಣದಲ್ಲಿ ರೂ.184 ಕೋಟಿ ಹಣವನ್ನು ಬಳಕೆ ಮಾಡಲು ಕೇಂದ್ರದಿಂದ ಅನುಮತಿ ದೊರೆತಿದೆ ಎಂದು ಕಂದಾಯ ಸಚಿವರು ಹೇಳಿದರು. ರೂ.384

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಟಿಗಳನ್ನು it has gone on record. It has been given to fight against COVID-19.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ರೂ.200 ಕೋಟಿಗಳನ್ನು ಇದಕ್ಕಾಗಿ ಘೋಷಿಸಿದ್ದಾರೆ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದಾಗ, ಮಾನ್ಯ ಸಭಾನಾಯಕರು ಅವರನ್ನು ತಡೆದರು.)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ನಿಮಗೆ ಏನಾಗಿದೆ? ಇದು ಬಹಳ ಮಹತ್ವವಾದ ವಿಚಾರವಾಗಿದೆ.

**(ಗೊಂದಲ)**

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರು ಹಣದ ಬಗ್ಗೆ ಏಕೆ ಯೋಚನೆ ಮಾಡುತ್ತೀರಿ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ನೀವೇನು ನಿಮ್ಮ ಜೇಬಿನಿಂದ ಹಣವನ್ನು ಕೊಡುತ್ತಿದ್ದೀರಾ? ಇದು ಇಂತಹ ಭಯಾನಕವಾದ ವೈರಸ್ ಆಗಿದ್ದು, ಇಂದು ಇಡೀ ರಾಜ್ಯವೇ ಆತಂಕದಲ್ಲಿದೆ. ಮಾನ್ಯ ಉಪಮುಖ್ಯಮಂತ್ರಿಯವರು ರೂ.200 ಕೋಟಿ ನೀಡಲಾಗಿದೆ ಎಂದು ಹೇಳಿದರು. ಮಾನ್ಯ ಕಂದಾಯ ಮಂತ್ರಿಗಳು ರೂ.184 ಕೋಟಿ ಎಂದು ಹೇಳಿದರು. ಪ್ರತಿವರ್ಷ ಮಹಾಪೂರ ಬಂದಾಗ, ಅನಾವೃಷ್ಟಿಯುಂಟಾದಾಗ ಇಂತಹ ಸಂದರ್ಭಗಳಲ್ಲಿ ನೀಡಲಾಗುವ ಹಣದಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಅನುಮತಿಯನ್ನು ನೀಡಲಾಗಿದೆ. ಮಾನ್ಯ ಆರೋಗ್ಯ ಸಚಿವರು ಕೇಂದ್ರದಿಂದ ಸಾಕಷ್ಟು ಅನುದಾನ ಬಂದಿದೆಯೆಂದು ಹೇಳಿದರು. ಪ್ರಕೃತಿ ವಿಕೋಪದಡಿಯಲ್ಲಿ ಬಂದಂತಹ ಹಣದಲ್ಲಿ ಸ್ವಲ್ಪ ಮೊತ್ತವನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ. ಇಂದು ಸಂಪುಟ ಸಭೆಯಲ್ಲಿ ರೂ.200 ಕೋಟಿಯನ್ನು ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿಯವರು ಹೇಳಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ದುಡ್ಡಿನ ವಿಚಾರಕ್ಕಿಂತ....

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಆರೋಗ್ಯ ಸಚಿವರು suo moto ಒಂದು ಹೇಳಿಕೆಯನ್ನು ಮಾಡಿದ್ದಾರೆ. ನಿಮಗೆ ಮತ್ತೇನಾದರೂ ಅನುಮಾನವಿದ್ದರೆ ಕೇಳಿ. ನಾಳೆ ಉತ್ತರವನ್ನು ಕೊಡುತ್ತಾರೆ. ನಾವೇನು ಹೇಳಿದ್ದಲ್ಲ. suo moto ಅವರೇ ಬಂದು ಹೇಳಿಕೆಯನ್ನು ನೀಡಿದ್ದಾರೆ. ಎಷ್ಟು ಕೊಟ್ಟಿದ್ದಾರೆ, ಹೇಗೆ ಕೊಟ್ಟಿದ್ದಾರೆ, ಎಲ್ಲಿ ಕೊಟ್ಟಿದ್ದಾರೆ ಎನ್ನುವಂತಹ ಯಾವುದೇ ಮಾಹಿತಿ ಬೇಕಾದರೆ ಕೇಳಿ. ಇಂದಲ್ಲದಿದ್ದರೆ ನಾಳೆ ಕೊಡುತ್ತಾರೆ. ಕೇಳಲು ನಿಮಗೆ ಹಕ್ಕಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಕೇವಲ ಅದನ್ನೇ ಕೇಳುತ್ತಿದ್ದೇವೆ. ಅದನ್ನು ಬಿಟ್ಟು ಬೇರೆ ಏನನ್ನೂ ಕೇಳುತ್ತಿಲ್ಲ. "ಸರ್ಕಾರ ಇಷ್ಟು ಹಣವನ್ನು ಕೊಟ್ಟಿದೆ. ನೀವು ಯಾರೂ ಹೆದರಬೇಡಿ, ಧೈರ್ಯದಿಂದ ಇರಿ" ಎಂದು ನಾವು ಜನರಿಗೆ ಹೇಳುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರ ಸುಳ್ಳು ಹೇಳುತ್ತಾ ಇದೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ನಮ್ಮ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ತಿಳಿಸುವುದೇನೆಂದರೆ ಇದಕ್ಕೆ ಹಣವನ್ನು ಸೀಮಿತಗೊಳಿಸುವುದು ಬೇಡ. ಎಷ್ಟು ಬೇಕಾದರೂ ಹಣ ಖರ್ಚು ಮಾಡುವುದಕ್ಕೆ ರಾಜ್ಯ ಸರ್ಕಾರ ಸಿದ್ಧವಿದೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು.)**

ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ರೂ.200 ಕೋಟಿಗಳನ್ನು ಬಿಡುಗಡೆ ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಕೇಂದ್ರದಿಂದ NDRF Norms ಪ್ರಕಾರ ರೂ.184 ಕೋಟಿ ಬಿಡುಗಡೆಯಾಗಿದೆ. ಎಲ್ಲವನ್ನೂ ಸೇರಿಸಿದರೆ ರೂ.384 ಕೋಟಿಗಳಾಗುತ್ತದೆ. ವಿರೋಧಪಕ್ಷದವರು ಅಷ್ಟಕ್ಕೇ ಸೀಮಿತಗೊಳಿಸುವುದು ಬೇಡ. ಎಷ್ಟು ಬೇಕಾದರೂ ಹಣವನ್ನು ಖರ್ಚು ಮಾಡಲು ಸರ್ಕಾರ ಸಿದ್ಧವಿದೆ.

**(ಗೊಂದಲ)**

ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿಯ ಖಾತೆಯಲ್ಲಿ ರೂ.5 ಕೋಟಿಗಳಿಗಿಂತ ಕಡಿಮೆ ಇರಬಾರದು. ರೂ.5 ಕೋಟಿಗಿಂತಲೂ ಹೆಚ್ಚು ಹಣವನ್ನು maintain ಮಾಡುವುದಕ್ಕೆ ಹೇಳಿದ್ದೇನೆ. ಯಾವ ಜಿಲ್ಲಾಧಿಕಾರಿಯಿಂದಲೂ ನಾನು ವರದಿಯನ್ನು ತೆಗೆದುಕೊಳ್ಳುವುದಿಲ್ಲ. Day to day ಅವರ bank balance ಅನ್ನು ನೋಡಿಕೊಂಡು funds release ಮಾಡುತ್ತಾ ಹೋಗುತ್ತೇನೆ.

ಇಂದು ಕೇಂದ್ರ ಹಾಗೂ ರಾಜ್ಯ ಸರ್ಕಾರ ಇದನ್ನು ಒಂದು ವಿಪತ್ತು ಎಂದು ಘೋಷಣೆ ಮಾಡಿದೆ. ಈಗಾಗಲೇ ಬಹಳಷ್ಟು ಸದಸ್ಯರು ಹೇಳಿದರು. ಮಾನ್ಯ ಎಂ.ನಾರಾಯಣಸ್ವಾಮಿಯವರು ಇದು ಬಹಳ ಅತಿಯಾಯಿತು. ಮಾಧ್ಯಮದಲ್ಲಿ ಸಾಕಷ್ಟು ವೈಭವೀಕರಿಸಲಾಗುತ್ತಿದೆ ಎಂದು ಹೇಳಿದರು. ಅವರು ಹೇಳಿರುವುದು ನಿಜ. ಇನ್ನೊಂದು ಅಂಶವನ್ನು ನಾವು consider ಮಾಡಬೇಕು. ಬೇರೆ ಕಾಯಿಲೆಗಳಿಗಿಂತ, ಬೇರೆ ವೈರಸ್‌ಗಳಿಗಿಂತ ಇದು fastest spreading. ಬೇರೆ ಕಾಯಿಲೆಗಳಲ್ಲಿ ಶೇ.5 ಕ್ಕಿಂತ ಹೆಚ್ಚು deaths ಆಗಿದೆ. ಇದರಲ್ಲಿ ಶೇ.1.6 ರಿಂದ ಶೇ.3.8ರವರೆಗೆ ಆಗಿದೆ. ಅಂದರೆ ಇದು fastest growing. ಆ ದೃಷ್ಟಿಯಿಂದ ಇಷ್ಟು awareness create ಮಾಡಲಾಗುತ್ತಿದೆ.

ಅಧಿವೇಶನ ಈ ತಿಂಗಳ 31ರವರೆವಿಗೂ ನಡೆಯುತ್ತದೆ. ನಾವೆಲ್ಲಾ ಇಲ್ಲಿ ಸದನದಲ್ಲಿ ಪ್ರತಿದಿನ ಸೇರುತ್ತೇವೆ. Every day, ಆಯಾ ದಿನದ ಆಗು-ಹೋಗುಗಳ ಬಗ್ಗೆ ನಮ್ಮ ಆರೋಗ್ಯ ಸಚಿವರು ವಿಧಾನಸಭೆ ಮತ್ತು ವಿಧಾನ ಪರಿಷತ್ತಿಗೆ ಹೇಳಿಕೆಯನ್ನು ನೀಡುತ್ತಾರೆ.

**ಶ್ರೀ ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಹಿರಿಯ ಸದಸ್ಯರಾದ ಮಾನ್ಯ ಹೊರಟ್ಟಿಯವರು, ಮಾನ್ಯ ಶ್ರೀಕಂಠೇಗೌಡರು ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಮಾನ್ಯ ಆರೋಗ್ಯ ಸಚಿವರು ಬಹಳ ಉತ್ಸುಕತೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ ಅವರು ಕೇಳಿದ ಪ್ರಶ್ನೆಗಳಿಗೆ ನಿಖರವಾದ ಉತ್ತರ ಸಿಗಲಿಲ್ಲ. ವಿದೇಶದಿಂದ ಬರುವಂತಹ ಭಾರತೀಯರಿಗೆ ಅಡಚಣೆಯನ್ನು ಮಾಡಬಾರದು. ಅವರನ್ನು receive ಮಾಡಿಕೊಳ್ಳಬೇಕು. ವಿಮಾನ ನಿಲ್ದಾಣದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಳಿಯಿರುವ ಆಸ್ಪತ್ರೆಗಳಾಗಲೀ, ಕಾಲೇಜುಗಳಾಗಲೀ ವಶ ಪಡಿಸಿಕೊಂಡು ಅಲ್ಲಿ 14 ದಿನಗಳ ಕಾಲ ತಪಾಸಣೆ ಮಾಡಬೇಕೆಂದು ಹೇಳಿದರು. ಇದಕ್ಕೆ ಸಚಿವರ ಕಡೆಯಿಂದ ನಿಖರವಾದ ಉತ್ತರ ಸಿಗಲಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ನಿಯಮ 59ರಡಿಯಲ್ಲಿ ನೋಟಿಸ್ ಕೊಟ್ಟಿದ್ದೇನೆ. ಇಂದು ಇಷ್ಟು ಹೊತ್ತಾಗುತ್ತದೆ ಎಂದು ತಿಳಿದಿರಲಿಲ್ಲ. ಆದ್ದರಿಂದ ದಯಮಾಡಿ ಸ್ವಲ್ಪ ಸಮಯವನ್ನು ಕೊಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:-** ಸರಿ. ನಾಳೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಡೋಣ.

**(...ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(550) 18-03-2020 (7-30) ಕೆಜಿ ವಿಕೆ

**10. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ 1389,1390, 1395**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 34,562 ಮುಜರಾಯಿ ದೇವಾಲಯಗಳು ಇವೆ. ಆದರೆ, ಮುಜರಾಯಿ ಇಲಾಖೆಗೆ ಸೇರದ ದೇವಸ್ಥಾನಗಳು ಎಷ್ಟು ಎನ್ನುವ ಬಗ್ಗೆ ನಮ್ಮಲ್ಲಿ ವಿವರ ಇಲ್ಲವೆಂದು ಹೇಳಿದ್ದಾರೆ. ನಮ್ಮ ಪ್ರಶ್ನೆ ಏನೆಂದರೆ, ಒಟ್ಟು ಒಂದು ವರ್ಷದಲ್ಲಿ ವಾರ್ಷಿಕ ವರಮಾನ ರೂ.25,00,000/-ಗಳನ್ನು ಮೀರಿದ ದೇವಸ್ಥಾನಗಳು ಎಷ್ಟು ಎಂದರೆ, 205 ಎಂದು ಹೇಳಿದ್ದಾರೆ. ವಾರ್ಷಿಕ ವರಮಾನವು ರೂ.ಐದು ಲಕ್ಷ ರೂಪಾಯಿಗಳನ್ನು ಮೀರಿ ಇಪ್ಪತ್ತೈದು ಲಕ್ಷಗಳನ್ನು ಮೀರದ ದೇವಸ್ಥಾನಗಳು ಎಷ್ಟು ಎಂದರೆ, 139 ಎಂದು ಹೇಳಿದ್ದಾರೆ ಮತ್ತು ವಾರ್ಷಿಕ ವರಮಾನವು ರೂ.ಐದು ಲಕ್ಷ ರೂಪಾಯಿಗಳನ್ನು ಮೀರದ ದೇವಸ್ಥಾನಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದರೆ 34218 ಎಂದು ಉತ್ತರವನ್ನು ನೀಡಿದ್ದಾರೆ.

ಮಾನ್ಯ ಸಭಾಪತಿಯವರೇ, ಇದರಲ್ಲಿ ಸುಮಾರು 100 ರಿಂದ 150 ಕೋಟಿ ರೂಪಾಯಿಗಳಷ್ಟು ವರಮಾನ ಇದೆ. ಆದರೆ, ಉತ್ತರದಲ್ಲಿ ರಾಜ್ಯದಲ್ಲಿರುವ ಮುಜರಾಯಿ ದೇವಾಲಯಗಳಲ್ಲಿ ಬರುವ ಆದಾಯವನ್ನು ಆಯಾಯ ದೇವಾಲಯಗಳ ಸಂಬಂಧಿಸಿದ ಖಾತೆಯಲ್ಲಿ ಸಂಗ್ರಹಿಸಿ ದೇವಾಲಯದ ನಿರ್ವಹಣೆಗೆ ನಿತ್ಯ ಕಟ್ಲೆ, ಹೆಚ್ಚು ಕಟ್ಲೆ ರಥೋತ್ಸವ ಸಿಬ್ಬಂದಿ ವೆಚ್ಚ ಮೂಲಭೂತ ಸೌಕರ್ಯ ಒದಗಿಸಲು ಹಾಗೂ ದೇವಾಲಯದ ವತಿಯಿಂದ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಮತ್ತು ಸಾರ್ವಜನಿಕ ಕಲ್ಯಾಣ ಉದ್ದೇಶ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ 1997ರ ಕಾಯಿದೆಯ ಕಲಂ 36 (1) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದ ಅನ್ವಯ ಬಳಸಲಾಗುತ್ತಿದೆ ಎಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಏನೆಂದರೆ, ದೇವಸ್ಥಾನಗಳಿಗೆ ನಾವು ಶಾಸಕರು ಕೊಟ್ಟದಕ್ಕೂ ಕೊಡುವುದಿಲ್ಲ ಅಥವಾ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಿಗೆ ಎಂದು ಹೇಳಿದ್ದಾರೆ. ನಮಗೆ ಯಾವ ಶಿಕ್ಷಣ ಸಂಸ್ಥೆಗಳು ಎಂದು ಗೊತ್ತಾಗುತ್ತಿಲ್ಲ. ಮತ್ತೆ ಈ ಅರ್ಚಕರ ವಿಚಾರದಲ್ಲಿ ಅನುಬಂಧ-3 ರಲ್ಲಿ ಒಂದು ದೇವಾಲಯದ ಸಂಬಂಧದಲ್ಲಿ ಪ್ರಧಾನ ಅರ್ಚಕ ಅಥವಾ ಅರ್ಚಕರನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದವರ ಪೈಕಿಯಿಂದ ಕೊನೇ ಪಕ್ಷ ಒಬ್ಬರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಹೇಳಿದ್ದಾರೆ. ಈ ಉತ್ತರದಲ್ಲಿ ಅರ್ಚಕರ ಹುದ್ದೆಗೆ ತೆಗೆದುಕೊಳ್ಳುತ್ತಾರೋ ಅಥವಾ ಕಸ ಗುಡಿಸುವುದಕ್ಕೆ ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಮಾಹಿತಿಯನ್ನು ನೀಡಿಲ್ಲ.

ಮಾನ್ಯ ಸಭಾಪತಿಯವರೇ, ಕೊನೆಯದಾಗಿ, ನನ್ನ ಪ್ರಶ್ನೆ ಏನೆಂದರೆ, ವರೋಪಚಾರದಲ್ಲಿ ಇಲ್ಲಿಯವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂದು ಕೇಳಿದ್ದೇನೆ. ಅದಕ್ಕೆ ವರನಿಗೆ ಒಂದು ಹೂವಿನ ಹಾರ, ಒಂದು ಪಂಚೆ, ಒಂದು ಶರಟು, ಒಂದು ಶಲ್ಯಕ್ಕೆಂದು ರೂ.5,000/-ಗಳು ಮತ್ತು ವಧುವಿಗೆ ಹೂವಿನ ಹಾರ, ರವಿಕೆ, ಸೀರೆ ಎಂದು ರೂ.10,000/-ಗಳು ಚಿನ್ನದ ತಾಳಿ ಮತ್ತು ಗುಂಡುಗಳಿಗೆ 40 ಸಾವಿರ ರೂಪಾಯಿ ಎಂದು ಹೇಳಿದ್ದಾರೆ. ಇವತ್ತಿನ ದಿವಸ ಬಡವರು ಸಹ ಒಂದು ಸ್ಕೂಟರ್, ಒಂದು ಗಡಿಯಾರ, ಒಂದು ನಿವೇಶನ, ಒಂದು ಮನೆ ಎಂದು ಕೊಡುತ್ತಾರೆ. ಈಗ ಸರ್ಕಾರದಿಂದ ಮದುವೆ ಮಾಡುವಾಗ ಕೊನೆಯ ಪಕ್ಷ ದಯಮಾಡಿ ಒಂದು ಸ್ಕೂಟರ್ ಮತ್ತು ಒಂದು ನಿವೇಶನವನ್ನು ಕೊಟ್ಟು ಮದುವೆ ಮಾಡಿದರೆ ಆ ಬಡವರಿಗೆ ಸಹಾಯ ಮಾಡಿದಂತೆ ಆಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇದು ಯಾವ ನ್ಯಾಯ? ಇದು ಧರ್ಮ ಕ್ಷೇತ್ರನಾ? ಆದರೂ ಮಾನ್ಯ ಸದಸ್ಯರ ಸಲಹೆಯನ್ನು ಸ್ವೀಕರಿಸಲಾಗಿದೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಆರ್.ಧರ್ಮಸೇನರವರಿಗೆ ವರೋಪಚಾರದ ಸಂದರ್ಭದಲ್ಲಿ ಏನೇನು ಕೊಟ್ಟಿದ್ದರು ಎನ್ನುವುದನ್ನು ಕೇಳಿ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ ನನಗೆ ಏನು ಕೊಟ್ಟಿಲ್ಲ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಆ ಮದುವೆಗಳನ್ನು ಹುಂಡಿ ಹಣದಿಂದ ಮಾಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ|| ಜಯಮಾಲ:-** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಎಷ್ಟು ಜೋಡಿಗಳ ಮದುವೆ ನೋಂದಣಿಯಾಗಿವೆ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಸಾಮೂಹಿಕ ವಿವಾಹಕ್ಕೆ ದಿನಾಂಕ 11.03.2020 ರವರೆಗೆ 435 ಅರ್ಜಿಗಳು ಸ್ವೀಕೃತವಾಗಿರುತ್ತವೆಂದು ತಿಳಿಸಿದ್ದಾರೆ. ದೇವಾಲಯವಾರು ವಿವರವನ್ನು ಅನುಬಂಧ-4 ರಲ್ಲಿ ಒದಗಿಸಿದೆ ಎಂದು ಉತ್ತರ ನೀಡಿದ್ದಾರೆ. ಆದರೆ, ಸ್ವೀಕೃತವಾಗಿರುವಂತಹ ಎಲ್ಲಾ ಅರ್ಜಿಗಳು ನೋಂದಣಿಯಾಗಲು ಸಾಧ್ಯವಿಲ್ಲ. ಏಕೆಂದರೆ, ಒಂದು ಮದುವೆ ನೋಂದಣಿಯಾಗಬೇಕೆಂದರೆ, 21 ದಿವಸಗಳ ಷರತ್ತುಗಳು ಇರುತ್ತವೆ. Sub-Registrar ರವರು ಬರಬೇಕಾಗುತ್ತದೆ. Sub-Registrar ರವರು ಸಹ ಮದುವೆಗಳಿಗೆ ಆ ದಿವಸವೇ ಬರಬೇಕೆಂದು ಮತ್ತು ಅಲ್ಲಿಯೇ ನೋಂದಣಿಯಾಗಬೇಕೆಂದು, ಇದು ಕಡ್ಡಾಯ ನೋಂಣಿಯಾಗಬೇಕೆಂದು ಕೇಳುತ್ತಿದ್ದೇವೆ. ಎರಡನೆಯದಾಗಿ, ವಿಧವಾ ವಿವಾಹಕ್ಕೆ, ಅಂತರ್ಜಾತಿ ವಿವಾಹಕ್ಕೆ, ವಿಚ್ಛೇದಿತ ಮಹಿಳೆಗೆ ಇಲ್ಲಿ ಮದುವೆ ಆಗುವುದಕ್ಕೆ ಅವಕಾಶ ಇದೆಯೇ ಎಂಬುದನ್ನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಿಮಗೆ ಏಕೆ ಇದರ ಬಗ್ಗೆ ಅನುಮಾನ ಬಂತು? ಅದು ಸಮಾಜಿಕ ನ್ಯಾಯ ಅಲ್ಲವೇ; ಕೊಡಲೇಬೇಕು ಅಲ್ಲವೇ.

**ಡಾ|| ಜಯಮಾಲ:-** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ divorce ಆದಾಗ, ಗಂಡ ಬಿಟ್ಟು ಹೋದಾಗ ಆ ಹೆಣ್ಣು ಮಕ್ಕಳಿಗೆ ಪುನಃ ವಿವಾಹವಾಗಲು ಅವಕಾಶ ಇರುವುದಿಲ್ಲ. ಬಹಳ ಬಡತನದಿಂದ ಬಂದಿರುವಂತಹ ಹೆಣ್ಣು ಮಕ್ಕಳು, ಅವರು ಮನೆಯಲ್ಲಿಯೇ ಇರುತ್ತಾರೆ. ಅಂತಹ ಹೆಣ್ಣು ಮಕ್ಕಳನ್ನು ಮದುವೆಯಾಗುವುದಕ್ಕೆ ಯಾರೂ ಮುಂದೆ ಬರುವುದಿಲ್ಲ. ಇಲ್ಲಿ ಈ ತರಹದ ಒಂದು ಅವಕಾಶ ಇದೆ ಎಂದರೆ, ಯಾರಾದರೂ ಮುಂದೆ ಬಂದು ಮದುವೆಯಾಗುವುದಕ್ಕೆ ಒಂದು ಅವಕಾಶ ಸಿಗುತ್ತದೆ ಎಂಬ ಭಾವನೆಯಿಂದ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ.

ಮಾನ್ಯ ಸಭಾಪತಿಯವರೇ, ದೇವಾಲಯದ ವತಿಯಿಂದ ಕರಪತ್ರಗಳನ್ನು ಮುದ್ರಿಸಿ ಅದನ್ನು ಯಾವ ತರಹ publicity ಮಾಡುತ್ತೀರಿ ಮತ್ತು ಎಷ್ಟು ಜನರು ದೇವಸ್ಥಾನಕ್ಕೆ ಬರುತ್ತಾರೆಂಬ ಪ್ರಶ್ನೆಯನ್ನು ಕೇಳಿದ್ದೆ. ಇದು ಬರಿ ದೇವಸ್ಥಾನದ ವತಿಯಿಂದ ನಡೆದರೆ ಇದು ಸಾರ್ವಜನಿಕರಿಗೆ ಗೊತ್ತಾಗಬೇಕು. ಇದು ಬಹಳ ಉತ್ತಮವಾದಂತಹ ಕಾರ್ಯಕ್ರಮ. ಜನರಿಗೆ ಇದು reach ಆಗಬೇಕೆಂದರೆ, ಕನಿಷ್ಠ ಪಕ್ಷ ಟಿ.ವಿಯಲ್ಲಿ ಇದು ಪ್ರಚಾರವಾಗಬೇಕು. ಇದು scrolling news ನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರಬೇಕು. ಇದರ ಬಗ್ಗೆ ಒಂದಷ್ಟು ಸಾಕ್ಷ್ಯಚಿತ್ರದಲ್ಲಿ ಬರಬೇಕು ಇದು ಅತಿಹೆಚ್ಚು ಜನರಿಗೆ ತಿಳಿಯಬೇಕು. ಆದ್ದರಿಂದ, ದಿನಾಂಕ ಮತ್ತು ಅರ್ಜಿಗಳನ್ನು ಪಡೆಯುವ ಬಗ್ಗೆ ಸಹ ಮಾಹಿತಿಗಳು scrolling news ನಲ್ಲಿ ಬರಬೇಕು. ಆಗ ಅದನ್ನು ಜನರು ನೋಡುತ್ತಾರೆ ಅನ್ನುವ ಮಾತನ್ನು ಸಹ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಕೇಳಿದವರಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಮರಿತಿಬ್ಬೇಗೌಡರು, ಶ್ರೀ ಆರ್.ಧರ್ಮಸೇನ ಮತ್ತು ಡಾ||ಜಯಮಾಲ ರವರು ಇದ್ದಾರೆ. ನಮ್ಮ ರಾಜ್ಯದಲ್ಲಿ ಒಟ್ಟು 34,562 ಮುಜರಾಯಿ ದೇವಸ್ಥಾನಗಳು ಇವೆ. ಖಾಸಗಿ ದೇವಸ್ಥಾನಗಳು ಇಲಾಖಾ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದರೂ ಸಹ ಖಾಸಗಿ ದೇವಸ್ಥಾನಗಳ ಸರ್ವೇ ಕಾರ್ಯವನ್ನು ಮಾಡುತ್ತಿದ್ದೇವೆ. ಹಾಗಾಗಿ, ಅದರ ಬಗ್ಗೆ ಮಾಹಿತಿಯನ್ನು ಒದಗಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ||ಜಯಮಾಲರವರು ವಿವಾಹಗಳನ್ನು ಯಾವ ರೀತಿ ಮಾಡುತ್ತೀರಿ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ಸಾಮಾನ್ಯವಾಗಿ ಮೇಲ್ನೋಟಕ್ಕೆ ಕಂಡು ಬಂದಿರುವಂತೆ ಈಗ ಇಷ್ಟು ಉತ್ತರವನ್ನು ಹೇಳಬಹುದು. ಮೊದಲು ಅರ್ಜಿಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ನಾವು ನಮ್ಮ 100 ದೇವಸ್ಥಾನಗಳು ಎಂದು ತಿಳಿದುಕೊಂಡರೆ, 'ಎ' ದರ್ಜೆಯ 100 ದೇವಸ್ಥಾನಗಳಲ್ಲಿ ಸಾಮೂಹಿಕ ವಿವಾಹ ಮತ್ತು ಸರಳ ವಿವಾಹದ ಕಲ್ಪನೆ ಇದೆ ಎಂದು ನಾನು ಮೊನ್ನೆ ದಿವಸ ಉತ್ತರ ಕೊಟ್ಟಿದ್ದೇನೆ. ಗದಗ ಮತ್ತು ಹುಬ್ಬಳಿ, ಧಾರವಾಡ ಜಿಲ್ಲೆಗಳಲ್ಲಿ 'ಎ' ದರ್ಜೆಯ ದೇವಸ್ಥಾನಗಳು ಇಲ್ಲ. ಈ ಜಿಲ್ಲೆಗಳಲ್ಲಿ 'ಬಿ' ಮತ್ತು ಸಿ ದರ್ಜೆಯ ದೇವಸ್ಥಾನಗಳಿಗೆ ಅವಕಾಶ ಕಲ್ಪಿಸಿ ನೇರವಾಗಿ ಹಣವನ್ನು ನಮ್ಮ ಇಲಾಖೆಯಿಂದ ಕೊಡಲಾಗುವುದು. ಇವತ್ತಿನವರೆಗೆ ಮದುವೆ ಆಗುವವರು ನಮ್ಮಿಂದ ಒಟ್ಟು 3,546 ಅರ್ಜಿಗಳನ್ನು ತೆಗೆದುಕೊಂಡು ಹೋಗಿದ್ದಾರೆ. ನಾವು ಹೇಳಿದಂತಹ ದಾಖಲೆಗಳನ್ನು ತೆಗೆದುಕೊಂಡು ಆ ದಿವಸದಂದು ಬರುತ್ತೇವೆಂದು ಇಲ್ಲಿಯವರೆಗೆ 710 ಅರ್ಜಿಗಳು ಸ್ವೀಕೃತವಾಗಿವೆ ಎಂಬುದನ್ನು ದೃಢೀಕರಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ||ಜಯಮಾಲರವರು ಮದುವೆಯ ಕರಪತ್ರಗಳನ್ನು ಯಾವ ರೀತಿ ಮುದ್ರಣ ಮಾಡುತ್ತೀರಿ. ಯಾವ ರೀತಿ ಈ ವಿಷಯವನ್ನು ಸಾರ್ವಜನಿಕರಿಗೆ ತಪುಪಿಸುತ್ತೀರಿ ಎಂದು ಕೇಳಿದ್ದಾರೆ. ಯಾವ ಯಾವ ದೇವಸ್ಥಾನಗಳಲ್ಲಿ ವಿವಾಹಗಳು ನಡೆಯುತ್ತವೆ, ಅಂತಹ ದೇವಸ್ಥಾನಗಳಲ್ಲಿ ಈಗಾಗಲೇ ಕರಪತ್ರಗಳನ್ನು ಮುದ್ರಿಸಿ ಇಡಲಾಗಿದೆ. ಅಲ್ಲಿಗೆ ಬರುವಂತಹ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಕ್ತರಿಗೆ ಎಲ್ಲಾ ವ್ಯವಸ್ಥೆ ಮಾಡಲಾಗಿರುತ್ತದೆ. 30 ಜಿಲ್ಲೆಗಳ ಪೈಕಿ 14 ಜಿಲ್ಲೆಗಳಲ್ಲಿ 'ಸಪ್ತಪದಿ ರಥ' ಎಂದು ನಮ್ಮ ದೇವಸ್ಥಾನಗಳ ಮೂಲಕ ಹೊರಡಿಸಿದ್ದೇವೆ. ಆ ರಥ ಕಲ್ಪನೆಯ ಮೂಲಕ ಆ ರಥದಲ್ಲಿ ಹಳ್ಳಿಗಳಿಗೆ, ಜಾತ್ರೆ ನಡೆಯುಂತಹ ಸ್ಥಳಗಳಲ್ಲಿ ಮತ್ತು ಸಂತೆ ನಡೆಯುವಂತಹ ಸ್ಥಳಗಳಿಗೆ ಹೋಗಿ ಕರಪತ್ರಗಳನ್ನು ಹಂಚಿ, ನಮ್ಮ ಧಾರ್ಮಿಕ ಇಲಾಖೆಯ ಮೂಲಕ ಏನು ಸಪ್ತಪದಿ ಕಾರ್ಯಕ್ರಮ ನಡೆಯುತ್ತದೆ ಅದಕ್ಕೆ ಇಂತಹ ನಿಯಮಗಳು ಇವೆ, ಅದರಲ್ಲಿ ಭಾಗವಹಿಸಿದರೆ ಅವಕಾಶ ಇದೆ ಎಂದು ಕರಪತ್ರಗಳನ್ನು ಹಂಚಿ ಪ್ರಚಾರ ಮಾಡುತ್ತಾರೆ. ಧಾರ್ಮಿಕ ದತ್ತಿ ಇಲಾಖೆಯ ಮೂಲಕ ಸುಮಾರು 7 ಜಿಲ್ಲೆಗಳಲ್ಲಿ, ಜಿಲ್ಲಾ ಮಟ್ಟದಲ್ಲಿ ಸಪ್ತಪದಿ ವಿಚಾರ ಸಂಕೀರ್ಣ ಎಂದು ಮಾಡಿದ್ದೇವೆ. ಅದರಲ್ಲಿ ಸುಮಾರು ಎರಡು ಸಾವಿರದಿಂದ ಮೂರು ಸಾವಿರ ಜನರು ಬಂದಿರುತ್ತಾರೆ. ಅದರಲ್ಲಿ ಅಂಗನವಾಡಿ ಕಾರ್ಯಕರ್ತರು. ಆಶಾ ಕಾರ್ಯಕರ್ತರು, ನಮ್ಮ ಗ್ರಾಮ ಪಂಚಾಯಿತಿ ಸದಸ್ಯರು, ಜಿಲ್ಲಾ ಪಂಚಾಯಿತಿಯ ಸದಸ್ಯರು, ತಾಲ್ಲೂಕು ಪಂಚಾಯಿತಿ ಸದಸ್ಯರು, ಶಾಸಕರು, ಬಿಹುತೇಕ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಇದರ ಉದ್ಘಾಟನೆ ಮಾಡುವಂತಹ ವ್ಯವಸ್ಥೆ ಇದೆ. ಇದು ಪ್ರಚಾರ ದೃಷ್ಟಿಯಿಂದ ಮಾಡಿರುವಂತಹ ಕಲ್ಪನೆಗಳಾಗಿವೆ.

ಮಾನ್ಯ ಸಭಾಪತಿಯವರೇ, ಹಾಗೆಯೇ 8 ಗ್ರಾಂಗೆ ಕಡಿಮೆ ಇಲ್ಲದ ಅಥವಾ 40 ಸಾವಿರ ರೂಪಾಯಿಗಳಿಗೆ ಹೆಚ್ಚು ಇಲ್ಲದ ಮಟ್ಟದಲ್ಲಿ ಮಾಂಗಲ್ಯವನ್ನು ಕೊಡುವುದರ ಬಗ್ಗೆ ಯೋಚನೆ ಮಾಡಿ ಟೆಂಡರ್ ಪ್ರಕ್ರಿಯೆ ಸಹ ನಮ್ಮ ಕೇಂದ್ರ ಸ್ಥಾನದಲ್ಲಿ ನಡೆಯುತ್ತಿದೆ. ಧಾರೆಯ ಸೀರೆಗಾಗಿ 10 ಸಾವಿರಗಳನ್ನು ವಧುವಿನ ಖಾತೆಗೆ ಹಾಕುವುದಕ್ಕೆ ಕ್ರಮವನ್ನು ಕೈಗೊಂಡಿದ್ದೇವೆ. ವರನಿಗೂ ಸಹ ಅಗತ್ಯ ಎನಿಸುತ್ತದೆ, ಆ ಕಾರಣಕ್ಕಾಗಿ ಆತನ ಖಾತೆಗೆ 5 ಸಾವಿರ ರೂಪಾಯಿಗಳನ್ನು ಹಾಕುತ್ತೇವೆ. ಒಟ್ಟು 55 ಸಾವಿರ ರೂಪಾಯಿಗಳಲ್ಲಿ ಈ ಕಾರ್ಯಕ್ರಮ ನಡೆಯುತ್ತದೆ. ನಮ್ಮ ಕಂದಾಯ ಇಲಾಖೆಯಲ್ಲಿ ಆದರ್ಶ ವಿವಾಹ ಎಂದು ಇದೆ. ಅದನ್ನು ಕಂದಾಯ ಇಲಾಖೆಯವರಿಗೆ ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಅದು ಸುಮಾರು ಎರಡರಿಂದ ಎರಡೂವರೆ ಕೋಟಿ ರೂಪಾಯಿಗಳು ಇದೆ. ಕಂದಾಯ ಇಲಾಖೆಯವರು ಸಾಮೂಹಿಕ ಮದುವೆಗಳಿಗೆ ಯಾವಾಗಲೂ ಹಣವನ್ನು ಕೊಡುತ್ತಾರೆ. ನಾವು ಮಾಡುವಂತಹ ಕಾರ್ಯಕ್ರಮಗಳಿಗೆ 10 ಸಾವಿರ ರೂಪಾಯಿಗಳ ಬಾಂಡ್‌ನ್ನು ಕೊಡಬೇಕೆಂದು ಹೇಳಿದ್ದೇವೆ.

(ಮುಂದು...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(551)18-03-2020(7-40)ಎಂವಿ-ವಿಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು...):-**

ಸಮಾಜ ಕಲ್ಯಾಣ ಇಲಾಖೆಯಲ್ಲಿ ಯಾವುದೇ ಮದುವೆಗೆ ಸುಮಾರು 50 ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಅದಕ್ಕೆ ಇದನ್ನು ಜೋಡಿಸಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಒಟ್ಟಾರೆ ಈ ಕಾರ್ಯಕ್ರಮ ಯಶಸ್ವಿಯಾಗಬೇಕು.

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದವರ ಬಗ್ಗೆ ಏನಾದರೂ ಕ್ರಮ ವಹಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-**ಮಾನ್ಯ ಸಭಾಪತಿಯವರೇ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟಿನ ಕುಟುಂಬಗಳಿಗೆ ನಮ್ಮ ನಿಯಮಗಳ ಜೊತೆಗೆ ಅವರಿಗೆ ನಗದಾಗಿ 50 ಸಾವಿರ ರೂಪಾಯಿಗಳನ್ನು ಕೊಡುವಂತಹ ಕಾರ್ಯಕ್ರಮ ಇಲಾಖೆಯಲ್ಲಿ ಇದೆ.

**ಶ್ರೀ ಆರ್.ಧರ್ಮಸೇನ:-**ಮಾನ್ಯ ಸಭಾಪತಿಯವರೇ, ಅವರು ಅರ್ಚಕರ ಹುದ್ದೆಗಳನ್ನು ಕೊಡಬೇಕಲ್ಲವೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅರ್ಚಕರ ಹುದ್ದೆಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿಲ್ಲ.

**ಶ್ರೀ ಆರ್.ಧರ್ಮಸೇನ:-**ಮಾನ್ಯ ಸಭಾಪತಿಯವರೇ, ಈಗ ನಾವು ಪ್ರಶ್ನೆಯನ್ನು ಕೇಳದೇ ಇದ್ದರು ಕಾನೂನು ಪ್ರಕಾರ ನೀಡಲಿ. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರನ್ನು ಖಾಸಗಿ ದೇವಸ್ಥಾನಗಳಿಗೆ ಅನ್ವಯಿಸಬೇಕು. ಅವರವರ ಇಷ್ಟ ಬಂದ ಹಾಗೆ ಮಾಡಿಕೊಳ್ಳುವುದಕ್ಕೆ ಬಿಡಬೇಡಿ. ಅದೂ ತಮ್ಮ ಕಾಲದಲ್ಲಿ ಈ ರೀತಿ ಬಿಟ್ಟರೆ ಮಹಾನ್ ಅಪರಾಧವಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ದೇವಸ್ಥಾನದ ಧರ್ಮದರ್ಶಿಗಳನ್ನು ನೇಮಕ ಮಾಡುವಾಗ ಯಾವ ಆಧಾರದ ಮೇಲೆ ನೇಮಕ ಮಾಡಲಾಗುತ್ತದೆ ಮತ್ತು ಅದಕ್ಕೆ ಇರುವ ಮಾನದಂಡಗಳೇನು ಎಂದು ಕೇಳಿದ್ದಾರೆ. ದೇವಸ್ಥಾನದ ಧರ್ಮದರ್ಶಿಗಳು ಎಂದು ಹೇಳಿದರೆ, ಅದನ್ನು ಆಡಳಿತ ಮಂಡಳಿ ಎಂದು ಹೇಳಲಾಗುತ್ತದೆ. ಆಡಳಿತ ಮಂಡಳಿಯಲ್ಲಿ ಒಬ್ಬರು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ, ಇಬ್ಬರು ಮಹಿಳೆಯರು, ಒಬ್ಬರು ಅರ್ಚಕರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೇರಿದಂತೆ ಒಂಬತ್ತು ಜನರನ್ನು ದೇವಸ್ಥಾನದ ಆಡಳಿತ ಮಂಡಳಿಯಲ್ಲಿ ರಚನೆ ಮಾಡಲಾಗುತ್ತದೆ. ಅವುಗಳಲ್ಲಿ 'ಸಿ' ದರ್ಜೆಯ ದೇವಸ್ಥಾನಗಳಾದರೆ, ಜಿಲ್ಲಾಧಿಕಾರಿಗಳು ಅರ್ಜಿ ಕರೆದು, police verification ಮಾಡಿ, ಜಿಲ್ಲಾ ಧಾರ್ಮಿಕ ಪರಿಷತ್ತಿನ ಮೂಲಕ ಅವರೇ ತೀರ್ಮಾನವನ್ನು ತೆಗೆದುಕೊಂಡು, ಅಲ್ಲಿಯ ಧರ್ಮದರ್ಶಿಗಳನ್ನು ನೇಮಕ ಮಾಡುವಂತಹ ಕೆಲಸವಾಗುತ್ತದೆ. 'ಬಿ' ದರ್ಜೆಯ ದೇವಸ್ಥಾನಗಳದ್ದನ್ನು ಸಹ ಜಿಲ್ಲಾಧಿಕಾರಿಗಳೇ ಮಾಡುತ್ತಾರೆ. 'ಎ' ದರ್ಜೆಯ 250 ದೇವಸ್ಥಾನಗಳಿಗೆ ರಾಜ್ಯ ಧಾರ್ಮಿಕ ದತ್ತಿ ಇಲಾಖೆಯ ಮೂಲಕ ಅರ್ಜಿ ಕರೆದು, ಧಾರ್ಮಿಕ ಪರಿಷತ್ತು ಅದನ್ನು ಅಂತಿಮಗೊಳಿಸುತ್ತದೆ. ಇದು ಈಗ ಇರುವ ತೀರ್ಮಾನಗಳು. ಪ್ರತಿಯೊಂದರಲ್ಲೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಅವಕಾಶವನ್ನು ಕಲ್ಪಿಸಲಾಗಿದೆ.

**ಡಾ|| ಜಯಮಾಲ:-**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಒಂದು ಪ್ರಶ್ನೆಗೂ ಉತ್ತರ ಕೊಟ್ಟಿಲ್ಲ. ಮದುವೆ ನೋಂದಣಿ ಪ್ರಕ್ರಿಯೆ ಬಗ್ಗೆ ಕೇಳಿದ್ದೆ, ಅದಕ್ಕೆ ಉತ್ತರ ನೀಡಿಲ್ಲ. ನಂತರ ಅಂತರ್ ಜಾತಿ ವಿವಾಹ, ವಿಧವಾ ವಿವಾಹ ಮತ್ತು ಪರಿತ್ಯಕ್ತ ಮಹಿಳೆಯರಿಗೆ ಅವಕಾಶವಿದೆಯೇ ಎಂದು ಕೇಳಿದೆ. ಕರಪತ್ರಗಳನ್ನು ಕೇವಲ ದೇವಸ್ಥಾನದಲ್ಲಿ ಮಾತ್ರವಲ್ಲ, ಎಲ್ಲಾ ಕಡೆ scrolling news ನಲ್ಲಿ ಬರಬೇಕು. ಅದು ಜನರಿಗೆ ಪ್ರಚಾರವಾಗಬೇಕು ಮತ್ತು ಪತ್ರಿಕೆಗಳಲ್ಲಿ ಇವುಗಳ ಬಗ್ಗೆ ತಿಳಿಸಬೇಕು ಎಂದು ಕೇಳಿದ್ದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶ, ನಗರ ಪ್ರದೇಶ, ಜಿಲ್ಲಾಧಿಕಾರಿಗಳ ಕಚೇರಿ ಮತ್ತು ತಾಲ್ಲೂಕು ಕಚೇರಿಗಳ ಎದುರಿಗೆ ಸುಮಾರು ಒಂದು ಸಾವಿರ ಸರ್ಕಾರಿ ಫಲಕಗಳಿವೆ. ಈ ಒಂದು ಸಾವಿರ ಫಲಕಗಳಲ್ಲಿ ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಮೂಲಕ ಜಾಹೀರಾತುಗಳನ್ನು ಹಾಕಿದ್ದೇವೆ. ರಾಜ್ಯದ ಎಲ್ಲಾ ಪತ್ರಿಕೆಗಳಲ್ಲೂ ಕೂಡ, ಒಟ್ಟು 13 ಪತ್ರಿಕೆಗಳಿವೆ ಎಂದು ವಾರ್ತಾ ಇಲಾಖೆಯವರು ಹೇಳುತ್ತಾರೆ. ಆ ಎಲ್ಲಾ 13 ಪತ್ರಿಕೆಗಳ 2ನೇ ಪುಟದಲ್ಲಿ ಜಾಹೀರಾತು ಕೊಡುವಂತಹ ಕೆಲಸಗಳು ಆಗಿವೆ. ಇನ್ನು ಸದಸ್ಯರಾದ ಡಾ||ಜಯಮಾಲರವರು ಕೇಳಿರುವುದು ಏನೆಂದರೆ, ಅಂತರ್ ಜಾತಿಯ ವಿವಾಹಕ್ಕೆ ಪ್ರಸ್ತಾಪವಿದೆಯೆ ಎಂದು ಕೇಳಿದ್ದಾರೆ. ಈಗ ಮದುವೆ ಮನೆಯಲ್ಲಿ ವಾದ-ವಿವಾದ ಆಗಬಾರದು ಎನ್ನುವ ಕಾರಣಕ್ಕೆ, ಅಂತರ್ ಜಾತಿಯ ವಿವಾಹವಾಗುವುದಕ್ಕೆ ಅಡ್ಡಿ ಇಲ್ಲ. ಆದರೆ, ಅದಕ್ಕೆ ತಂದೆ ತಾಯಿಗಳ ಸಹಮತ ಬೇಕು ಎನ್ನುವಂತಹ ಕಾರಣಗಳನ್ನು ಹೇಳಲಾಗಿದೆ. ಮದುವೆಯ ನೋಂದಣಿಯನ್ನು ಸ್ಥಳದಲ್ಲಿಯೇ ಮಾಡಲಾಗುತ್ತದೆ. ಈಗ ಯಾವ ದೇವಸ್ಥಾನದಲ್ಲಿ ವಿವಾಹ ನಡೆಯುತ್ತದೆಯೋ ಅಲ್ಲಿಗೆ ಫಾರ್ಮ್‌ಗಳನ್ನು ಮೊದಲೇ ತುಂಬಿಸಿಕೊಂಡು ಬಂದು, ಅಲ್ಲಿಗೆ ನೋಂದಣಿ ಅಧಿಕಾರಿಯವರು ಬರುತ್ತಾರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿಯೇ ನೋಂದಣಿ ಮಾಡಲಾಗುತ್ತದೆ. ಆದರೆ, ನೋಂದಣಿ ಅಧಿಕಾರಿ ಏನನ್ನು ಹೇಳುತ್ತಾರೆಂದರೆ, ಅವರಿಗೆ ಪ್ರಮಾಣ ಪತ್ರ ಕೊಡುವುದಕ್ಕೆ ಎರಡು ದಿವಸಗಳ ಸಮಯ ಬೇಕು ಎಂದು ಹೇಳಿದ್ದಾರೆ. ಅದನ್ನು ಕೂಡ ಮಾಡಲಾಗುತ್ತದೆ. ಇನ್ನೊಂದು ಪ್ರಶ್ನೆ ಏನೆಂದರೆ, ಯಾವುದೇ ಕಾರಣಕ್ಕೂ ಸಹ ಬಾಲ್ಯ ವಿವಾಹಕ್ಕೆ ಅವಕಾಶವಿಲ್ಲದಂತೆ ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸಲಾಗಿದೆ. ಅವರ ಕೊನೆಯ ಪ್ರಶ್ನೆಗೆ ಉತ್ತರ ಕೊಡಬೇಕು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-**ಮಾನ್ಯ ಸಭಾಪತಿಯವರೇ, ಅಂತರ್ ಜಾತಿ ವಿವಾಹದಲ್ಲಿ ವಧುವಿಗೆ 18 ವರ್ಷ ಮತ್ತು ವರನಿಗೆ 21 ವರ್ಷವಾಗಿ ಅವರು ಒಪ್ಪಿಕೊಂಡರೆ, Hindu Marriage Act ಪ್ರಕಾರ solemnize ಆಗುತ್ತದೆ. ನಾನು ಹೇಳುವುದನ್ನು ಕೇಳಿ. ಯಾವ ಮದುವೆಯಲ್ಲೂ ಕೂಡ ಅವರ ತಂದೆ ತಾಯಿ ಒಪ್ಪಿಕೊಳ್ಳಬೇಕೆಂದು ಇಲ್ಲ. ಈಗ ಕಾನೂನು ಏನಿದೆ. ಕಾನೂನಿಗೆ ವ್ಯತಿರಿಕ್ತವಾಗಿ ಅವರ ತಂದೆ ತಾಯಿ ಒಪ್ಪುವುದಿಲ್ಲವೆಂದರೆ, ಅದು ಇಲ್ಲವೆಂದ ಹಾಗೆ ಆಗುತ್ತದೆ. ಈಗ ನಾನು ಭಾಷಣ ಮಾಡಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ಈಗ ಅವರು majority ಪ್ರಕಾರ ಮದುವೆಯಾಗುತ್ತಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, ಈಗ Hindu Marriage Act ಪ್ರಕಾರ ವಧುವಿಗೆ 18 ವರ್ಷವಾಗಿರಬೇಕು ಮತ್ತು ವರನಿಗೆ 21 ವರ್ಷವಾಗಿರಬೇಕು. ಈಗ ನೋಡಿ ಆ ಭಗವಂತನು ಸಹ ಅಂಥಹ ಮದುವೆಯನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಮತ್ತೆ ತಂದೆ, ತಾಯಿ, ಅಜ್ಜ ಮತ್ತು ಅಜ್ಜಿ ಇವರ ಅನುಮತಿ ತೆಗೆದುಕೊಳ್ಳಬೇಕೆಂದರೆ, ಇದು ಯಾವ ರೀತಿಯದು? It is against the provision of law. ಇದು ಕಾನೂನಿಗೆ ವಿರುದ್ಧವಾದದ್ದು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-**ಮಾನ್ಯ ಸಭಾಪತಿಯವರೇ, ಇದು ಕಾನೂನಿಗೆ ವಿರುದ್ಧವಾಗುತ್ತದೆ. ಅವರು major ಇದ್ದಾಗ ತಂದೆ ತಾಯಿಯವರ ಅನುಮತಿ ತೆಗೆದುಕೊಳ್ಳಬೇಕು ಎಂದರೆ, ಈ ತರಹ ಯಾವ ಕಾನೂನು ಅನುಮತಿ ನೀಡಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, ಸರ್ಕಾರದ ಆದೇಶ ಏನಿರಬೇಕು?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-**ಮಾನ್ಯ ಸಭಾಪತಿಯವರೇ, ಯಾವ ಕಾನೂನಿನ ಅಡಿಯಲ್ಲಿ ಈ ತರಹ ಇದೆ.

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, ಈಗ Hindu Marriage Act ಪ್ರಕಾರ ವಧುವಿಗೆ 18 ವರ್ಷ ಆಗಿರಬೇಕು ಮತ್ತು ವರನಿಗೆ 21 ವರ್ಷ ಪೂರ್ಣಗೊಂಡಿರಬೇಕು. ಅವರು ಅಂತರ್ ಜಾತಿ ಇರಲಿ, ಯಾವುದೇ ಇರಲಿ, ನೇರವಾಗಿ ಉಪ ನೋಂದಣಾಧಿಕಾರಿಗಳ ಕಚೇರಿಗೆ ಹೋಗಬಹುದು. ಆ ರೀತಿಯ ಕಾನೂನು ಇದೆ. ಆದರೆ, ಅವರು ಕಾನೂನಿಗೆ ವ್ಯತಿರಿಕ್ತವಾಗಿ ತಂದೆ, ತಾಯಿ, ಅಜ್ಜ, ಅಜ್ಜಿ, ಮುತ್ತಜ್ಜ ಮತ್ತು ಮುತ್ತಜ್ಜಿ ಇವರುಗಳ ಅನುಮತಿ ಎಂದು ಏಕೆ ಹಾಕಿದ್ದಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಗಂಭೀರವಾದ ಸಲಹೆಯನ್ನು ಕೊಟ್ಟಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, ಅದು ಸಲಹೆ ಅಲ್ಲ. ಅದು ಕಾನೂನು ಎಂದು ಹೇಳುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-**ಮಾನ್ಯ ಸಭಾಪತಿಯವರೇ, ಅವರು ಕಾನೂನು ಬಿಟ್ಟು ಮಾಡುತ್ತಾರೆಯೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-**ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮಾತನಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, Government circular is against the existing law.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ವಿರೋಧ ಪಕ್ಷದವರು ಏನು ಹೇಳುತ್ತಾರೆ ಅದನ್ನು ಕೇಳುತ್ತೇವೆ. ಸರ್ಕಾರ ಈ ವಿಚಾರದಲ್ಲಿ ಮುಕ್ತ ಮನಸ್ಸಿನಲ್ಲಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-**ಮಾನ್ಯ ಸಭಾಪತಿಯವರೇ, ಈಗ ತಂದೆ ತಾಯಿ ಒಪ್ಪಲಿಲ್ಲವೆಂದರೆ ಅಗ ಏನು ಮಾಡುತ್ತಾರೆ. ಯಾರು ಮದುವೆ ವಯಸ್ಸನ್ನು ಮೀರಿರುತ್ತಾರೋ ಅವರು ಸ್ವತಂತ್ರರಾಗಿದ್ದಾರೆ. ಈಗ ಅವರು ತಂದೆ ತಾಯಿ ಅನುಮತಿ ಕೇಳಬೇಕೆಂದು ಹೇಳಿದ್ದಾರೆ. ಈಗ ಅವರ ತಾಯಿ ಈ ಮದುವೆಗೆ ಒಪ್ಪಿಕೊಳ್ಳುವುದಿಲ್ಲ ಎನ್ನುತ್ತಾರೆ ಆಗ ಏನು ಮಾಡುತ್ತಾರೆ? ಆದುದರಿಂದ ಇದು ತಪ್ಪಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಮಾನ್ಯ ಸಭಾಪತಿಯವರೇ, ಈಗ ಸದನದಲ್ಲಿ ಈ ಪ್ರಶ್ನೆ ಬಂದಿದೆ. ಗೌರವಾನ್ವಿತ ಮೂರು ಜನ ಸದಸ್ಯರು ಒಂದೇ ರೀತಿಯ ಪ್ರಶ್ನೆ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಈ ಸದನದ ಅಭಿಪ್ರಾಯಗಳು ಸಾರ್ವಜನಿಕ ಅಭಿಪ್ರಾಯಕ್ಕೆ ಪೂರಕವಾಗುತ್ತದೆ ಮತ್ತು ಈ ಕಾರ್ಯಕ್ರಮ ಯಶಸ್ಸು ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗಾಗಿ ಮಾನ್ಯ ಸದಸ್ಯರು ಏನೇನು ಒಳ್ಳೆಯ ಸಲಹೆಗಳನ್ನು ಕೊಡುತ್ತಾರೋ ಅದೆಲ್ಲವನ್ನು ಪರಿಶೀಲನೆ ಮಾಡುವಂತಹ ಅವಕಾಶವನ್ನು ಮುಕ್ತವಾಗಿ ಇಟ್ಟಿದ್ದೇವೆ. ಅವರು ಕೇಳಿರುವಂಥದ್ದು, ಕಾನೂನು ವಿಚಾರಕ್ಕೆ ಸಂಬಂಧಪಟ್ಟಂತೆ, ನಾನು ಹೇಳಿದೆ ಅಂತರ್ ಜಾತಿಯ ವಿವಾಹವಾಗುವಾಗ ಅವರ ತಂದೆ ತಾಯಿಗಳ ಸಹಮತ ಇದ್ದರೆ ಅನುಕೂಲವಾಗುತ್ತದೆ ಅದಕ್ಕೆ ಅದನ್ನು ಅಂಗೀಕರಿಸಬಹುದು ಎಂದು ಹೇಳಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:-**ಮಾನ್ಯ ಸಭಾಪತಿಯವರೇ, No. No. No.., ಸಾಧ್ಯವೇ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಮಾನ್ಯ ಸಭಾಪತಿಯವರೇ, ಕಾನೂನು ಪ್ರಕಾರ 18 ವರ್ಷ ಮೇಲ್ಪಟ್ಟ ಹುಡುಗಿ, 21 ವರ್ಷ ಪ್ರಾಯವಾಗಿರುವಂತಹ ಹುಡುಗನಿಗೆ ಅವರ ತಂದೆ ತಾಯಿಗಳ ಅನುಮತಿ ಬೇಕಾಗಿಲ್ಲ ಎನ್ನುವುದು ನಿಮ್ಮ ವಾದ.

**ಶ್ರೀ ಎಸ್.ಎಲ್.ಭೋಜೇಗೌಡ:-**ಮಾನ್ಯ ಸಭಾಪತಿಯವರೇ, ಅದನ್ನು ನಾವು ಹೇಳುವುದು ಅಲ್ಲ.

**ಶ್ರೀ ಐವನ್ ಡಿ'ಸೋಜಾ:-**ಮಾನ್ಯ ಸಭಾಪತಿಯವರೇ, ಅದನ್ನು ನಾವು ಹೇಳುತ್ತಿಲ್ಲ. ಕಾನೂನು ಹೇಳಿದೆ.

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, ನಿಮಗೆ ಅದನ್ನು ನಾವು ಹೇಳುತ್ತಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ:**-ಮಾನ್ಯ ಸಭಾಪತಿಯವರೇ, ಹುಡುಗಿಗೆ 18 ವರ್ಷ ಮತ್ತು ಹುಡುಗನಿಗೆ 21 ವರ್ಷವೆಂದುಕಾನೂನು ಹೇಳಿದೆ.

**(ಗೊಂದಲ)**

**ಶ್ರೀ ಎಸ್.ರವಿ:**-ಮಾನ್ಯ ಸಭಾಪತಿಯವರೇ, ದಯವಿಟ್ಟು ಅಂತರ್ ಜಾತಿ ವಿವಾಹವನ್ನು ಪ್ರೋತ್ಸಾಹ ಮಾಡಿ ಎಂದು ಹೇಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:**-ಮಾನ್ಯ ಸಭಾಪತಿಯವರೇ, ಅಂತರ್ ಜಾತಿ ವಿವಾಹಕ್ಕೆ 900 ವರ್ಷಗಳ ಇತಿಹಾಸವಿದೆ. We have to respect the law of the land. ಈ ದೇಶದ ಕಾನೂನು ಏನಿದೆ, ಆ ಕಾನೂನಿಗೆ ಅನುಗುಣವಾಗಿ ಮಾಡಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:**-ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಯಾವ್ಯಾವ ರೀತಿಯಾಗಿ ಮಾತನಾಡುತ್ತಿದ್ದಾರೆ.

**ಶ್ರೀ ಟಿ.ಎ.ಶರವಣ:**-ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:**-ಮಾನ್ಯ ಸಭಾಪತಿಯವರೇ, ತಾವು ಮಾನ್ಯ ಮರಿತಿಬ್ಬೇಗೌಡರ ಹೆಸರನ್ನು ಕರೆದಿದ್ದೀರಿ, ಅವರು ಮಾತನಾಡಲಿ.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):**-ಮಾನ್ಯ ಸಭಾಪತಿಯವರೇ, ಇಲ್ಲಿ ಮಾನ್ಯ ಹಿರಿಯ ಸಚಿವರು ಇದ್ದಾರೆ ಅವರನ್ನು ಕೇಳಲಿ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, We have to encourage inter-caste marriage. ಅಂತರ್ ಜಾತಿ ವಿವಾಹವನ್ನು ಪ್ರೋತ್ಸಾಹಿಸಬೇಕು. ಜಾತ್ಯಾತೀತ ಸಮಾಜ ನಿರ್ಮಾಣವಾಗಬೇಕು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೆಗೌಡ:-**ಮಾನ್ಯ ಸಭಾಪತಿಯವರೇ, ಅದನ್ನು ವಾಪಸ್ಸು ತೆಗೆದುಕೊಳ್ಳಲಿ.

**(ಗೊಂದಲ)**

**ಸಭಾಪತಿಯವರು:** ಈಗಮಾನ್ಯ ಶ್ರೀ ಮರಿತಿಬ್ಬೇಗೌಡರು ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಮಾನ್ಯ ಸಭಾಪತಿಯವರೇ, ನಾನು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಹಿರಿಯ ಸದಸ್ಯರು ಕೆಲವು ಕಾನೂನು ನಿಯಮಗಳ ಅಭಿಪ್ರಾಯವನ್ನು ಕೊಡುತ್ತಾರೆ. ಅವರೆಲ್ಲರ ಅಭಿಪ್ರಾಯಗಳನ್ನು ಪರಿಶೀಲನೆ ಮಾಡಲಾಗುವುದು.

**ಶ್ರೀ ಎಸ್.ಎಲ್.ಭೋಜೆಗೌಡ:-**ಮಾನ್ಯ ಸಭಾಪತಿಯವರೇ, ಈಗ ಕಾನೂನಿನ ಪ್ರಕಾರ ಹುಡುಗಿಗೆ 18 ವರ್ಷ ಮತ್ತು ಹುಡುಗನಿಗೆ 21 ವರ್ಷ ತುಂಬಿದ ಮೇಲೆ ಅವರ ತಂದೆ ತಾಯಿಗಳ ಅನುಮತಿ ಏಕೆ ಬೇಕು?

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-**ಮಾನ್ಯ ಸಭಾಪತಿಯವರೇ, ಈಗ ಸರ್ಕಾರ ಒಂದು ನಿಯಮವನ್ನು ತಂದಿದೆ, ಅದನ್ನು ಬದಲಾವಣೆ ಮಾಡಿಕೊಳ್ಳಿ ಎಂದರೆ, ಅವರು ಅದನ್ನು ಬದಲಾವಣೆ ಮಾಡಿಕೊಳ್ಳುತ್ತಾರೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-**ಮಾನ್ಯ ಸಭಾಪತಿಯವರೇ, ಮಾನ್ಯ ಮುಜರಾಯಿ ಸಚಿವರು ಉತ್ತರ ಕೊಡುತ್ತಾ, ನಮಗೆ ಜೋಗಳ ಹಾಡಿ ನಮ್ಮನ್ನು ಮಲಗಿಸುತ್ತಿದ್ದಾರೆ. ಈ 'ಉಚಿತ ಸಾಮೂಹಿಕ ವಿವಾಹ' ನಮ್ಮ ರಾಜ್ಯದಲ್ಲಿ ಬಹಳ ವರ್ಷಗಳಿಂದಲೂ ಸಹ ಇದೆ. ಕೆಲವು ಸ್ವಾಮೀಜಿಗಳು, ಕೆಲವು ಮಠ ಮಾನ್ಯರು, ಕೆಲವು ಖಾಸಗಿ ವ್ಯಕ್ತಿಗಳು, ಕೆಲವು ಸಂಘ-ಸಂಸ್ಥೆಗಳು, ಕೆಲವು ರಾಜಕೀಯ ವ್ಯಕ್ತಿಗಳು, ಕೆಲವು ಶಾಸಕರು, ಕೆಲವು ಸಂಸದರು ಮತ್ತು ಕೆಲವು ಮಂತ್ರಿಗಳು ಎಲ್ಲರೂ ಕೂಡ ಇದನ್ನು ನಡೆಸುತ್ತಿದ್ದಾರೆ. ಈಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನಸಾಮಾನ್ಯರು ಕಾಣಿಕೆ ರೂಪದಲ್ಲಿ ಹುಂಡಿಗೆ ಹಾಕಿದಂತಹ ಹಣದಲ್ಲಿ ಇಷ್ಟೊಂದು ಅಚ್ಚುಕಟ್ಟಾಗಿ ಈ ವಿವಾಹ ಮಾಡುವುದಕ್ಕೆ ಮುಜರಾಯಿ ಇಲಾಖೆಯವರು ಹೊರಟ್ಟಿದ್ದಾರೆ. ಈಗ ಅಂತರ್ ಜಾತಿ ವಿವಾಹವನ್ನು ಮಾಡುತ್ತಾರೆಯೇ ಎಂದು ಮಾನ್ಯ ಸದಸ್ಯರು ಕೇಳಿದರೆ, ಅದಕ್ಕೆ ಮಾನ್ಯ ಸಚಿವರು ಮಡಿವಂತಿಕೆ ಪ್ರದರ್ಶನ ಮಾಡುತ್ತಾರೆ. ಇದಕ್ಕೆ ಶಹಬ್ಬಾಸ್‌ಗಿರಿ ಕೊಡಬೇಕು.

**(ಮುಂದು...)**

(552) 18.03.2020 07.50 LL-BNS

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ:- ಮುಂದುವರೆದಿದ್ದು...**

ಈ ಘಳಿಗೆಯಲ್ಲಿಯೇ, ಅಂತರ್ಜಾತಿ ವಿವಾಹವನ್ನು ಖಂಡಿತವಾಗಿ ನಾವು ಮಾಡುತ್ತೇವೆಂದು ಖುಷಿಯಿಂದ, ಸಂತೋಷದಿಂದ ಈ ಸದನದಲ್ಲಿ ಹೇಳಬೇಕು. ಬದಲಾಗಿ, ನಾವು ಇದರ ಬಗ್ಗೆ ಪರಿಶೀಲಿಸುತ್ತೇವೆಂದು ಹೇಳುತ್ತಾರೆ. ಜಾತ್ಯಾತೀತ ರಾಷ್ಟ್ರ, ಮಹಾನುಭಾವ ಬಸವಣ್ಣನವರನ್ನು ಮನೆಯಲ್ಲಿ ಇಟ್ಟುಕೊಂಡಿರುವ ರೀತಿ ಮಾತನಾಡುತ್ತಾರೆ. ಆದರೆ, ಅಂತರ್ಜಾತಿ ವಿವಾಹದ ವಿಚಾರದಲ್ಲಿ ಹಿಂದೆ-ಮುಂದೆ ನೋಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅಂತರ್ಜಾತಿ ವಿವಾಹದ ವಿಚಾರದಲ್ಲಿ ನಾವು ಹಿಂದೆ-ಮುಂದೆ ನೋಡುತ್ತಿಲ್ಲ.

**(ಗೊಂದಲ)**

**ಶ್ರೀ ಆರ್. ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವಣ್ಣನವರು ಅಂತರ್ಜಾತಿ ವಿವಾಹ ಮಾಡಿಸಿದ್ದಕ್ಕೆ ಅವರನ್ನು ಓಡಿಸಿದರು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಕಾನೂನನ್ನು ಗೌರವಿಸುತ್ತೇವೆಂದು ಹೇಳಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ...

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಾನೂನು ಪರಿಶೀಲನೆ ಮಾಡುತ್ತೇವೆಂದು ಹೇಳಬಾರದು. He is the Leader of the House.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ...

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಾನೂನು ಇದೆ. ಆ ಕಾನೂನಿನ ಪ್ರಕಾರ ನಡೆದುಕೊಳ್ಳುತ್ತೇವೆಂದು ಹೇಳಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ...

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, it is the law of the land. ಈ ದೇಶದ ಕಾನೂನನ್ನು ಗೌರವಿಸುತ್ತೇವೆಂದು ಹೇಳಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ಹೇಳುವುದನ್ನು ಸಹ ಕೇಳಬೇಕಲ್ಲವೇ? ಸರ್ಕಾರದ ಪರವಾಗಿ ನಾನು ಉತ್ತರ ಹೇಳಿದ್ದೇನೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಸರ್ಕಾರದ ಸುತ್ತೋಲೆಗಳು ಕಾನೂನಿಗೆ ವಿರುದ್ಧವಾದರೆ ಅದನ್ನು set aside ಮಾಡುತ್ತೇವೆಂದು ಹೇಳಬೇಕು. It shows the guts of the Leader of the House.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ಈ ಸದನದಲ್ಲಿ ಚರ್ಚೆ ಮಾಡುವ ಉದ್ದೇಶವೇನೆಂದರೆ, ವಿರೋಧ ಪಕ್ಷದವರು ಸರ್ಕಾರಕ್ಕೆ ಸಲಹೆ ನೀಡುತ್ತಾರೆಂದು ನಾನು ತಿಳಿದುಕೊಂಡಿದ್ದೆನು. ಅದರಂತೆ, ಅವರು ಸಲಹೆ ಕೊಟ್ಟಿದ್ದಾರೆ. ಅದನ್ನು ನಾನು ಕಾನೂನು ಪ್ರಕಾರ ಪರಿಶೀಲಿಸುತ್ತೇನೆಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ನಮ್ಮ ಸಲಹೆ ಅಲ್ಲ. ಈ ದೇಶದ ಕಾನೂನನ್ನು ಪಾಲನೆ ಮಾಡಬೇಕೆಂದು ಹೇಳಿದ್ದೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಸರ್ಕಾರಕ್ಕೆ ಸಲಹೆ ಕೊಟ್ಟಿದ್ದಾರೆ. ಅದನ್ನು ನಾವು ಸ್ವೀಕಾರ ಮಾಡುತ್ತೇವೆಂದು ಹೇಳಿದ್ದೇವೆ. ಬೇರೆ ಏನು ಹೇಳಬೇಕು?

**(ಗೊಂದಲ)**

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಇದು ನಮ್ಮ ಸಲಹೆ ಅಲ್ಲ. ಕಾನೂನಿನ ಪ್ರಕಾರ ವಿವಾಹ ನಡೆಸುತ್ತೇವೆಂದು ಹೇಳಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕಾನೂನು ಪ್ರಕಾರವೇ ವಿರೋಧ ಪಕ್ಷದವರು ಕೊಟ್ಟಿರುವಂತಹ ಸಲಹೆಯನ್ನು ಸ್ವೀಕಾರ ಮಾಡಿದ್ದೇವೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಒಂದು ಪ್ರಶ್ನೆಗೆ 20 ನಿಮಿಷ ಆಯಿತು. ಈ ರೀತಿಯಾದರೆ ಉಳಿದ ಪ್ರಶ್ನೆಗಳನ್ನು ಯಾವಾಗ ಮುಗಿಸಬೇಕು?

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ಇರುವ ಕಾನೂನನ್ನು ಬಿಟ್ಟು, ಒಂದು ಪ್ರಶ್ನೆಗೆ 20 ನಿಮಿಷ ಸಮಯ ಆಯಿತು ಎಂದರೆ ಹೇಗೆ?

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದೊಂದು ಸರ್ಕಾರಿ ಕಾರ್ಯಕ್ರಮ. ಇದರಲ್ಲಿ ಶೇಕಡ 100 ರಷ್ಟು ಕಾನೂನು ಪಾಲನೆ ಮಾಡಬೇಕು.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ ತಮ್ಮ ಪ್ರಶ್ನೆ ಮುಗಿಯಿತಾ? ಮುಂದಿನ ಪ್ರಶ್ನೆ ಶ್ರೀ ಎಸ್. ರವಿಯವರದು.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ತಮ್ಮ ಪ್ರಶ್ನೆಗೆ ಅವಕಾಶ ನೀಡಿ, 20 ನಿಮಿಷ ಸಮಯ ಆಗಿದೆ. ಎಲ್ಲರೂ ಭಾಷಣ ಮಾಡಿದರೆ ಹೇಗೆ? ತಮಗೆ ಅವಕಾಶ ಇರುವುದಿಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ತಾವು ಕೊಟ್ಟಿದ್ದೀರಿ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಮದುವೆಗೆ ಬರಬೇಕಾಗಿದೆ. ಅದಕ್ಕಾಗಿ, ಮಾನ್ಯ ಸಚಿವರಿಗೆ ಕೇಳುವುದೇನೆಂದರೆ, 'ಮದುವೆ ಗ್ಯಾರಂಟಿನಾ'? ಏಕೆಂದರೆ, ಎಲ್ಲಾ ಕಡೆಗಳಲ್ಲಿಯೂ ಕೊರೋನಾ ವೈರಸ್ ಗಲಾಟೆ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಉತ್ತರ ಒದಗಿಸಲಾಗಿದೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನನ್ನದೊಂದು ಉಪ ಪ್ರಶ್ನೆ ಇದೆ. ಮಾನ್ಯ ಸದಸ್ಯರೆಲ್ಲರೂ ನನ್ನ ಪ್ರಶ್ನೆಗೆ ಮಾತನಾಡಿ, ನನ್ನ ಪ್ರಶ್ನೆ ಕೇಳುವುದಕ್ಕೆ ನನಗೆ ಅವಕಾಶ ನೀಡುವುದಿಲ್ಲವೆಂದರೆ ಹೇಗೆ? ಹಾಗಾಗಿ, ನಾನು ಸಭಾ ನಾಯಕರಲ್ಲಿ ವಿನಂತಿ ಮಾಡುವುದೇನೆಂದರೆ, ಸಾರ್ವಜನಿಕರು, ಭಕ್ತಾದಿಗಳು ಹಾಕಿದಂತಹ ಹುಂಡಿ ಕಾಣಿಕೆಯಿಂದ 2018-19ನೇ ಸಾಲಿನಲ್ಲಿ ಸುಮಾರು 526.78 ಕೋಟಿ ರೂಪಾಯಿ ಸಂಗ್ರಹವಾಗಿರುತ್ತದೆ. ಈ ಹಣವನ್ನು ಯಾವ ಉದ್ದೇಶಕ್ಕೆ ಬಳಸಲಾಗುತ್ತಿದೆ ಎಂಬ ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಮೂಲಭೂತ ಸೌಕರ್ಯಗಳು, ದೇವಾಲಯಗಳ ವತಿಯಿಂದ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಹಾಗೂ ಸಾರ್ವಜನಿಕ ಕಲ್ಯಾಣ ಉದ್ದೇಶ ಇತ್ಯಾದಿಗಳಿಗೆ ಎಂದು ಉತ್ತರ ಕೊಟ್ಟಿದ್ದಾರೆ. ದಯಮಾಡಿ, ಈ ಮದುವೆ ಎನ್ನುವಂತಹ ಹೊಸ ಯೋಜನೆ ಏನು ತಂದಿದ್ದಾರೆ. ಇದರಲ್ಲಿ ಅಂತರ್ಜಾತಿ ವಿವಾಹಕ್ಕೆ ಅವಕಾಶವಿಲ್ಲ ಎನ್ನುವುದಾದರೆ ಇದಕ್ಕೆ ಅರ್ಥ ಇರುವುದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅಂತರ್ಜಾತಿ ವಿವಾಹಕ್ಕೆ ಅವಕಾಶ ಇಲ್ಲವೆಂದು ಹೇಳಿರುವುದಿಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, **(ಗೊಂದಲ)** ನನ್ನ ಮಾತನ್ನು ಮುಗಿಸುತ್ತೇನೆ. **(ಗೊಂದಲ)** ಈ ರೀತಿಯ ಮದುವೆಗಳನ್ನು ಮಾಡುವುದಕ್ಕೆ ಅನೇಕ ಸಂಘ-ಸಂಸ್ಥೆಗಳು, ಖಾಸಗಿ ವ್ಯಕ್ತಿಗಳು, ಸ್ವಾಮೀಜಿಗಳು ಇತರೆ ವ್ಯಕ್ತಿಗಳು ಮುಂದೆ ಬಂದಿದ್ದಾರೆ. ಮುಜರಾಯಿ ಇಲಾಖೆ ವತಿಯಿಂದ ಇಂತಹ ವಿವಾಹ ಪದ್ಧತಿಯನ್ನು ಕೈಬಿಟ್ಟು...**(ಗೊಂದಲ)** ಏತಕ್ಕೆಂದರೆ, ಮುಂದೊಂದು ದಿನ ತಾಳಿ ಕಟ್ಟಿಸಿಕೊಂಡಂತಹ ಹೆಂಡತಿ, ನೀನು ನಿನ್ನ ಹಣದಿಂದ ತಾಳಿ ಕಟ್ಟಿರುವುದಿಲ್ಲ...

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯಾವುದೋ ಖಾಸಗಿ ವ್ಯಕ್ತಿಗಳು ಮಾಡಿಸುವಂತಹ ವಿವಾಹದಲ್ಲಿ ತಾಳಿ ಕಟ್ಟಿಸಿಕೊಳ್ಳಬಹುದು, ನಮ್ಮ ಪುಣ್ಯ ಕ್ಷೇತ್ರಗಳಲ್ಲಿ ವಿವಾಹ ಮಾಡಬಾರದೆಂದು ಹೇಳುತ್ತಾರೆಯೇ? ಮಾನ್ಯ ಮರಿತಿಬ್ಬೇಗೌಡರವರು ಈ ರೀತಿ ಮಾತನಾಡಬಹುದೇ? ಅವರು ಹೇಳುವುದು ಸರಿಯೇ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಸರ್ಕಾರದವರು ನಂತರ ಉತ್ತರ ನೀಡಬಹುದು.

**(ಗೊಂದಲ)**

**ಸಭಾಪತಿಯವರು:–** ಮುಂದಿನ ಪ್ರಶ್ನೆ ಎಸ್. ರವಿಯವರದ್ದು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯಾವುದೋ ಖಾಸಗಿ ವ್ಯಕ್ತಿಗಳು ಮಾಡಿಸುವಂತಹ ವಿವಾಹದಲ್ಲಿ ಮಾಂಗಲ್ಯ ಕಟ್ಟಿಕೊಳ್ಳಬಹುದು. ಆದರೆ, ದೇವಸ್ಥಾನಗಳಂತಹ ಪುಣ್ಯಕ್ಷೇತ್ರಗಳಲ್ಲಿ ಮದುವೆ ಮಾಡಿಸುವಾಗ ಕೊಟ್ಟಿರುವಂತಹ ಮಾಂಗಲ್ಯವನ್ನು ಕಟ್ಟಿಕೊಂಡರೆ ಹೆಂಡತಿ ಬಿಡುತ್ತಾರೆಂದು ಹೇಳುತ್ತಾರೆ. ಇದು ಯಾವ ನ್ಯಾಯ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸಭಾನಾಯಕರು ದಯಮಾಡಿ ನಾನು ಮಾತನಾಡುವುದನ್ನು ಕೇಳಿಸಿಕೊಳ್ಳಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪುಣ್ಯಕ್ಷೇತ್ರಗಳಲ್ಲಿ ಮಾಂಗಲ್ಯ ಕಟ್ಟಿಸಿಕೊಂಡರೆ ಹೆಂಡತಿ ಬಿಡುತ್ತಾಳೆಂದು ಹೇಳುತ್ತಾರೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು, ಶ್ರೀ ಐವನ್ ಡಿ'ಸೋಜಾರವರು ಅಥವಾ ಡಾ॥ ಜಯಮಾಲರವರು ಇದನ್ನು ಸರಿ ಎನ್ನುತ್ತಾರೆಯೇ? ಅವರು ಈ ರೀತಿ ಹೇಳಬಹುದೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಗೋವಿಂದ ಎಂ. ಕಾರಜೋಳ(ಉಪಮುಖ್ಯಮಂತ್ರಿಗಳು):-** ಮಾನ್ಯ ಮರಿತಿಬ್ಬೇಗೌಡರೇ, ತಾವು ಒಂದು ನಿಮಿಷ ಯೀಲ್ಡ್ ಆಗಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ನನ್ನ ಪ್ರಶ್ನೆ ಕೇಳುತ್ತೇನೆ. ಮಾನ್ಯ ಸಭಾನಾಯಕರು ಶಾಂತವಾಗಿ ನನ್ನ ಪ್ರಶ್ನೆಯನ್ನು ಕೇಳಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ದೊಡ್ಡವರು ಈ ರೀತಿ ಮಾತನಾಡಬಹುದೇ?

**(ಗೊಂದಲ)**

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಸಾಮೂಹಿಕ ವಿವಾಹ ಎನ್ನುವುದು ಪ್ರಾರಂಭವಾದದ್ದು, ಶ್ರೀ ಕ್ಷೇತ್ರ ಧರ್ಮಸ್ಥಳದಿಂದ. ಧರ್ಮಸ್ಥಳದ ಧರ್ಮಾಧಿಕಾರಿಯವರು ಉತ್ತರ ಕರ್ನಾಟಕದಲ್ಲಿ ಪದೇ ಪದೇ ಬರಗಾಲಕ್ಕೆ ತುತ್ತಾಗುವಂತಹ ಜಿಲ್ಲೆಗಳಲ್ಲಿ ರೈತರಿಗೆ ಸುಮಾರು 4-5 ಸಾವಿರ ರೂಪಾಯಿ ಖರ್ಚು ಮಾಡುವುದಕ್ಕೆ ಸಾಧ್ಯವಾಗದೇ ಇರುವಂತಹ ಸಂದರ್ಭದಲ್ಲಿ, ಈ ಸಾಮೂಹಿಕ ವಿವಾಹ ಅತ್ಯಂತ ಜನಪ್ರಿಯವಾಯಿತು. ಇದು 1975-76ರಲ್ಲಿ ಪ್ರಾರಂಭವಾಯಿತು. ಧರ್ಮಸ್ಥಳದ ಧರ್ಮಾಧಿಕಾರಿಯವರು ಪ್ರಾರಂಭ ಮಾಡಿರುವಂತಹ ಈ ಸಾಮೂಹಿಕ ವಿವಾಹ ಯೋಜನೆ ಇಡೀ ರಾಜ್ಯದಲ್ಲಿ ಅಷ್ಟೇ ಅಲ್ಲದೇ, ದೇಶದಲ್ಲಿ ಜನಪ್ರಿಯವಾಯಿತು. ಈ ಸದನದಲ್ಲಿ ನಮ್ಮ ಜಿಲ್ಲೆಯವರಾದ ಶ್ರೀ ಎಸ್.ಆರ್. ಪಾಟೀಲ್ ಮತ್ತು ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸಹ ಇದ್ದಾರೆ. ಆ ಸಂದರ್ಭದಲ್ಲಿ ನಮ್ಮ ಉತ್ತರ ಕರ್ನಾಟಕದಲ್ಲಿ ಭಯಂಕರ ಬಡತನ ಇತ್ತು. ನಾವು ಈಗಿನಷ್ಟು ಅನುಕೂಲವಾಗಿರಲಿಲ್ಲ. 4-5 ಸಾವಿರ ರೂಪಾಯಿ ಖರ್ಚು ಮಾಡಿ ಮದುವೆ ಮಾಡುವುದು ಕಷ್ಟವಾಗುತ್ತಿತ್ತು. ಅದನ್ನು ಸಾಲ-ಸೋಲ ಮಾಡಿ ಮದುವೆ ಮಾಡಬೇಕಾಗಿತ್ತು. ಆ ಸಂದರ್ಭದೊಳಗೆ ಜನ ಹೆಚ್ಚು ಉತ್ತರ ಕರ್ನಾಟಕದವರು ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಹೋಗಿ ಮದುವೆ ಮಾಡಿಕೊಂಡು ಬರುತ್ತಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳು ಮದುವೆ ಮಾಡುವುದಕ್ಕೆ ಹಣವನ್ನು ದೇವಸ್ಥಾನದಲ್ಲಿ ಹುಂಡಿಯಲ್ಲಿ ಸಂಗ್ರಹವಾಗಿರುವ ಹಣದಿಂದಲೇ ಸಾಮೂಹಿಕ ವಿವಾಹ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಸುತ್ತಿದ್ದರು. **(ಗೊಂದಲ)** ನಾನು ಈ ಬಗ್ಗೆ ಉತ್ತರ ಹೇಳುತ್ತೇನೆ. ಅದಕ್ಕಾಗಿ, ನಾವು ಏನು ಹೇಳುತ್ತೇವೆಯೆಂದರೆ, ಸರ್ಕಾರ ದೇವಸ್ಥಾನದ ಹುಂಡಿಯಿಂದ ಹಣ ಖರ್ಚು ಮಾಡಿದರೆ ಏನು ಅಪರಾಧ ಮಾಡಿದಂತೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಸಾಮೂಹಿಕ ವಿವಾಹ ಮಾಡುವುದಕ್ಕೆ ಹಾಗೂ ನಾವು ಸರ್ಕಾರದ ವತಿಯಿಂದ ವಿವಾಹ ಮಾಡುವುದಕ್ಕೆ ವ್ಯತ್ಯಾಸ ಇದೆ. ಇಲ್ಲಿ ಸಾರ್ವತ್ರಿಕವಾಗಿ ಇರಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಏನು ವ್ಯತ್ಯಾಸವಿದೆ ಎನ್ನುವುದನ್ನು ತಿಳಿಸಲಿ.

**(ಗೊಂದಲ)**

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಹುಂಡಿ ಹಣ ಜನರಿಂದಲೇ ಸಂಗ್ರಹವಾಗಿರುತ್ತದೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ದೇವಾಲಯಗಳ ಹುಂಡಿಯಿಂದ 526.78 ಕೋಟಿ ರೂಪಾಯಿ ಹಣ ಕಳೆದ ಸಾಲಿನಲ್ಲಿ ಸಂಗ್ರಹವಾಗಿರುತ್ತದೆ. ಅದನ್ನು ವಿವಿಧ ಉದ್ದೇಶಗಳಿಗೆ ಉಪಯೋಗಿಸುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯಲ್ಲಿ ಪ್ರತಿಯೊಬ್ಬ ಸದಸ್ಯರು ಒಂದೊಂದು ಪ್ರಶ್ನೆಗೆ ಅರ್ಧ ಗಂಟೆ, ಒಂದು ಗಂಟೆ ಸಮಯ ತೆಗೆದುಕೊಂಡರೆ, ಉಳಿದ ಪ್ರಶ್ನೆಗಳನ್ನು ಹೇಗೆ ಕೇಳಬೇಕು? ಮಾನ್ಯ ಮರಿತಿಬ್ಬೇಗೌಡರವರು ಸಹ ಈ ಹಿಂದೆ ಸಭಾಪತಿ ಸ್ಥಾನದಲ್ಲಿ ಕುಳಿತು ಕಾರ್ಯನಿರ್ವಹಿಸಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಆರ್.ಬಿ. ತಿಮ್ಮಾಪುರ:-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಹಣ ಸದುಪಯೋಗವಾಗಲಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರಿಂದ ಸರಿಯಾದ ಉತ್ತರ ಕೊಡಿಸಲಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈ ಹಣವನ್ನು...

**(ಗೊಂದಲ)**

**ಶ್ರೀ ಶರವಣ:-** ಮಾನ್ಯ ಸಭಾಪತಿಯವರೇ, ಬೇರೆ ಬೇರೆ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಸಮಯ ತೆಗೆದುಕೊಳ್ಳುತ್ತಾರೆ. ಅದರಂತೆ, ಈ ವಿಷಯದ ಬಗ್ಗೆಯೂ ಸಹ ಚರ್ಚೆ ಮಾಡಲಿ.

**(ಗೊಂದಲ)**

**ಡಾ॥ ಜಯಮಾಲ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**(ಗೊಂದಲ)**

**ಶ್ರೀ ಎಸ್.ವಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಿಯಮ 72 ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದಾಗಿದೆ.

**(ಗೊಂದಲ)**

**ಡಾ॥ ಜಯಮಾಲ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಹಣದ ಪ್ರಶ್ನೆ ಇರುವುದಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್. ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶಿಕ್ಷಕರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿರುತ್ತಾರೆ. ಅದರಂತೆ, ಇದೊಂದು ಜೀವನ ಪ್ರಶ್ನೆ, ಗಂಡ-ಹೆಂಡತಿ, ಧಾರ್ಮಿಕ ಪ್ರಶ್ನೆಯಲ್ಲವೇ?

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆ ಮಾಡುವುದರ ಬದಲಾಗಿ, ನಿಯಮ 72ರಡಿಯಲ್ಲಿ ಚರ್ಚೆ ಮಾಡಬಹುದಾಗಿರುತ್ತದೆ. ಅದಕ್ಕೆ ಮಾನ್ಯ ಸಚಿವರು ಉತ್ತರ ನೀಡುತ್ತಾರೆ.

**(ಗೊಂದಲ)**

**ಶ್ರೀ ಎನ್. ಅಪ್ಪಾಜಿಗೌಡ:-** ಮಾನ್ಯ ಸಭಾಪತಿವಯರೇ, ವಿಧೇಯಕದ ಬಗ್ಗೆ ಸುಮಾರು ಒಂದೂವರೆ ಗಂಟೆ ಚರ್ಚೆ ಮಾಡಿರುತ್ತಾರೆ.

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ನೀಡಬಹುದು.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ ತಮ್ಮ ಪ್ರಶ್ನೆ ಮುಗಿದಿದೆ. ಮುಂದಿನ ಪ್ರಶ್ನೆ ಶ್ರೀ ಎಸ್.ರವಿಯವರದ್ದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ನನ್ನ ಪ್ರಶ್ನೆಯೇ ಕೇಳಿರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಪರವಾಗಿಲ್ಲ.

**(ಗೊಂದಲ)**

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಮಾನ್ಯ ಸಚಿವರು ನೀಡಿರುವ ಉತ್ತರವನ್ನು ವಾಪಸ್ಸು ತೆಗೆದುಕೊಂಡು, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡಿ. ನಾವೆಲ್ಲರೂ ಮಾತನಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ನೀಡಿರುವ ಎಲ್ಲಾ ಉತ್ತರ ಸರಿಯಾಗಿದೆ. ಆದುದರಿಂದ, ಉತ್ತರವನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲ. ಅಗತ್ಯವಿದ್ದರೆ, ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಹಾಕಲಿ. ನಾನು ಉತ್ತರ ನೀಡುತ್ತೇನೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1306**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂತಹ ಪ್ರಶ್ನೆ ಏನೆಂದರೆ, ನನ್ನ ಮತಕ್ಷೇತ್ರವಾದ ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ...(ಗೊಂದಲ) ಆನ್‌ಲೈನ್ ಮುಖೇನ ಭೂ ಪರಿವರ್ತನೆಗೆ ಹಾಕಿರುವಂತಹ ಅರ್ಜಿಗಳೆಷ್ಟು, ಸ್ವೀಕರಿಸಿರುವ ಅರ್ಜಿಗಳೆಷ್ಟು, ವಿಲೇವಾರಿಯಾದಂತಹ ಅರ್ಜಿಗಳೆಷ್ಟು, ತಿರಸ್ಕೃತವಾದಂತಹ ಅರ್ಜಿಗಳೆಷ್ಟು, ತಿರಸ್ಕೃತವಾದಂತಹ ಅರ್ಜಿಗಳು ಯಾವ ಕಾರಣದಿಂದಾಗಿ ಅವುಗಳು ತಿರಸ್ಕೃತಸಲ್ಪಟ್ಟಿವೆ ಎಂಬ ಬಗ್ಗೆ ನಿರ್ದಿಷ್ಟವಾಗಿ ಪ್ರಶ್ನೆ ಕೇಳಿದ್ದೆನು. ಅದಕ್ಕೆ, ಅಂಕಿ-ಅಂಶಗಳನ್ನು ನೀಡಿದ್ದಾರೆ. ಅದರಂತೆ, ಅರ್ಜಿ ಎಷ್ಟು ಬಂದಿವೆ, ಮಂಜೂರಾತಿ ಎಷ್ಟು ಆಗಿವೆ, ತಿರಸ್ಕೃತ ಎಷ್ಟು ಆಗಿವೆ ಎಂದು ಉತ್ತರ ನೀಡಿದ್ದಾರೆ. ತಿರಸ್ಕೃತವಾದಂತಹ ಅರ್ಜಿಗಳ ಬಗ್ಗೆ ಯಾವ ಕಾರಣಕ್ಕಾಗಿ ತಿರಸ್ಕೃತವಾಗಿದೆಯೆಂದು ನಿರ್ದಿಷ್ಟವಾಗಿ ಪ್ರಶ್ನೆ ಕೇಳಿದ್ದೆನು. ಅದರ ಜೊತೆಗೆ, ಯಾವ ಅಧಿಕಾರಿಗಳ ಹಂತದಲ್ಲಿ ತಿರಸ್ಕೃತವಾಗಿರುತ್ತವೆ ಹಾಗೂ ಅವುಗಳ ಕಾರಣ ಕೂಡ ಸ್ಪಷ್ಟವಾಗಿ ಕೇಳಿದ್ದೇನೆ.

(ಮುಂದುವರೆದಿದೆ...)

(553)18.03.2020/8.00/ವೈಎಲ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ರವಿ(ಮುಂದು):-**

ಆ ಅರ್ಜಿಯು ತಿರಸ್ಕೃತವಾಗಿರುವುದಕ್ಕೆ ಅರಣ್ಯ ಇಲಾಖೆಯಿಂದ, ಭೂಸ್ವಾಧೀನ ಇಲಾಖೆಯಿಂದ ಮತ್ತು ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ಸರಿಯಾದ ಉತ್ತರ ಬರದೇ ಇರುವ ಕಾರಣದಿಂದಾಗಿ ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಎಂದು ಉತ್ತರ ನೀಡಿದ್ದು, ಸ್ಪಷ್ಟವಾಗಿ ಉತ್ತರ ನೀಡಿಲ್ಲ. ಯಾವ್ಯಾವ ಕಾರಣಕ್ಕಾಗಿ ಎಷ್ಟೆಷ್ಟು ಅರ್ಜಿಗಳನ್ನು ಅರಣ್ಯ ಇಲಾಖೆಯಿಂದ ಎನ್.ಓ.ಸಿ. ಬರದೇ ಇರುವುದಕ್ಕಾಗಿಯೋ, ಅರಣ್ಯ ಪ್ರದೇಶಕ್ಕೆ ಸೇರಿದ ಕಾರಣದಿಂದಲೋ, ಆ ಪ್ರದೇಶ ಕೈಗಾರಿಕೆಗಾಗಿ ಅಥವಾ ನಿವೇಶನಗಳಿಗೆ ಮೀಸಲಾತಿ ಇರುವ ಕಾರಣಕ್ಕಾಗಿಯೋ ಅರ್ಜಿ ತಿರಸ್ಕರಿಸಲಾಗಿದೆ ಎಂದು ನಿರ್ದಿಷ್ಟ ಉತ್ತರವನ್ನು ಸಮಾಧಾನಕರವಾಗಿ ಮಾನ್ಯ ಸಚಿವರು ನೀಡಬೇಕಾಗಿತ್ತು. ಆದರೆ, ಆ ರೀತಿ ಉತ್ತರವನ್ನು ನೀಡಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ನೀಡಬೇಕು.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಅದರ ಜೊತೆಗೆ ಇನ್ನೂ ಮೂರು ಪ್ರಶ್ನೆಗಳಿದ್ದು, ಅದನ್ನು ಕೇಳುತ್ತೇನೆ. ಮಾನ್ಯ ಸಚಿವರು ಒಟ್ಟಿಗೆ ಉತ್ತರವನ್ನು ನೀಡಲಿ. 30 ದಿವಸಗಳೊಳಗೆ ಅರಣ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಯಿಂದ ಮತ್ತು ಯೋಜನಾ ಪ್ರಾಧಿಕಾರದಿಂದ ಆನ್‌ಲೈನ್‌ನಲ್ಲಿ ಸರಿಯಾದ ಉತ್ತರ ದೊರಕಲಿಲ್ಲವೆಂದರೆ, ಅವರು ಬರಲಿಲ್ಲವೆಂದು ಭೂ ಪರಿವರ್ತನೆ ಮಾಡುತ್ತೇವೆ ಎಂದು ಉತ್ತರ ನೀಡಿದ್ದಾರೆ. ಇದು ಶುದ್ಧ ಸುಳ್ಳು. ನನಗೆ ತಿಳಿದಿರುವ ಹಾಗೆ ನನ್ನ ಅನುಭವದ ಪ್ರಕಾರ ಭೂ ಪರಿವರ್ತನೆಗೆ ಅರ್ಜಿ ಹಾಕಿದವರಿಗೆ 30 ದಿವಸಗಳೊಳಗೆ ಅರಣ್ಯ ಇಲಾಖೆಯವರು ಯಾವುದೇ ರೀತಿಯ ಪ್ರತಿಕ್ರಿಯೆ ನೀಡುವುದಿಲ್ಲ. ಅರ್ಜಿ ಹಾಕಿದವರು ಯೋಜನಾ ಪ್ರಾಧಿಕಾರಕ್ಕೆ ವೈಯಕ್ತಿಕವಾಗಿ ಹೋಗಿ ಮಾತನಾಡಿಸಲಿಲ್ಲವೆಂದರೆ, ಅದು ಮೂವ್ ಆಗುವುದಿಲ್ಲ. ಜಿಲ್ಲಾಧಿಕಾರಿಯವರು ಸಹ ಅರ್ಜಿದಾರರು ಬರಲಿಲ್ಲವೆಂದರೆ, ಪರಿವರ್ತನೆ ಮಾಡುವುದಿಲ್ಲ. ಹಾಗಾಗಿ, ಮಾನ್ಯ ಸಚಿವರು ನೀಡಿರತಕ್ಕಂಥ ಉತ್ತರವು ಅಪ್ಪಟ ಸುಳ್ಳು ಎಂದು ಹೇಳುತ್ತೇನೆ. ಎಷ್ಟೆಷ್ಟು ಅರ್ಜಿಗಳು ಏನೇನು ಕಾರಣದಿಂದ ತಿರಸ್ಕೃತವಾಗಿದೆ ಎಂದು ನಿರ್ದಿಷ್ಟವಾದ ಉತ್ತರ ನೀಡಿದ್ದರೆ ನಾನೇ ಬಿಡಿಸಿ ಉತ್ತರ ಹೇಳುತ್ತಿದೆ. Citizen portal ನಲ್ಲಿ ಸಾರ್ವಜನಿಕರು ಅರ್ಜಿ ಸಲ್ಲಿಸಬೇಕು. ಆ ಅರ್ಜಿ ಸಲ್ಲಿಸಲು ಬಹುತೇಕ ಸಾಮಾನ್ಯವಾದ ಸಾರ್ವಜನಿಕರಿಗೆ ತಿಳುವಳಿಕೆ ಕೊರತೆ ಇದ್ದು, ಅವರು ಸೈಬರ್ ಕೆಫೆ ಅವಲಂಬಿಸಬೇಕಾಗುತ್ತದೆ. ಹಾಗಾಗಿ ಸಂಬಂಧಪಟ್ಟ ತಾಲ್ಲೂಕು ಕಛೇರಿಗಳಲ್ಲಿ ಇದಕ್ಕಾಗಿಯೇ ಪ್ರತ್ಯೇಕವಾದ ಕೌಂಟರ್ ತೆರೆಯುವುದಕ್ಕೆ ಸರ್ಕಾರದ ಉದ್ದೇಶವೇನಾದರೂ ಇದೆಯೇ ಎಂಬುದರ ಕುರಿತು ಮಾನ್ಯ ಸಚಿವರಿಂದ ಉತ್ತರ ಬಯಸುತ್ತೇನೆ. ಭೂ ಪರಿವರ್ತನೆಯಾಗಿರತಕ್ಕಂಥ ಜಮೀನಿನ ಸರ್ವೇ ನಂಬರ್, ಆದೇಶ ಹೊರಡಿಸಿದ ನಂತರ ಆನ್‌ಲೈನ್ ಮೂಲಕ ಜಮೀನಿನ ಸರ್ವೇ ನಂಬರ್‌ನ್ನು ಪಹಣಿಯಲ್ಲಿ ಇಂಡೀಕರಣಗೊಳಿಸುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕಾಗಿದ್ದು, ಅದನ್ನು ಜಾರಿಗೊಳಿಸುವ ಉದ್ದೇಶವಿದ್ದರೆ ಯಾವಾಗಿನಿಂದ ಜಾರಿಗೊಳಿಸಲಾಗುತ್ತದೆ ಎಂಬುದಕ್ಕೆ ಸ್ಪಷ್ಟವಾದ ಉತ್ತರ ನೀಡಬೇಕು. ಭೂ ಪರಿವರ್ತನೆಯಾಗಿರುವ ಜಮೀನುಗಳಾದ, ಅಂದರೆ, 'ನಿವೇಶನ, ವಾಣಿಜ್ಯ, ಕೈಗಾರಿಕೆಗೆ' ಯಾವುದಾದರೂ ಇರಬಹುದು. ಇವುಗಳಿಗೆ ಬಡಾವಣೆ ನಕ್ಷೆ ಅನುಮೋದನೆಯಾಗಿರುವುದಕ್ಕೆ ಲೋಕೋಪಯೋಗಿ ಇಲಾಖೆ, ಸಿ.ಎಂ.ಸಿ., ಟಿ.ಎಂ.ಸಿ., Pollution Control Board, Fire and Emergency Services Department, ಯೋಜನಾ ಪ್ರಾಧಿಕಾರ, ಪಿ.ಡಿ.ಓ.ಗಳು, ಪಂಚಾಯಿತಿಯ ಆದಿಯಾಗಿ ಈ ರೀತಿಯಾದಂಥ ಎಲ್ಲವನ್ನು ಒಳಗೊಂಡು ಏಕಗವಾಕ್ಷಿ ಸಮಿತಿ ರಚಿಸಿ ಅನುಮೋದನೆ ನೀಡುವಂಥ ವ್ಯವಸ್ಥೆಯನ್ನು ಜಾರಿಗೊಳಿಸುವ ಉದ್ದೇಶವೇನಾದರೂ ಇದೆಯೇ ಎಂಬುದನ್ನು ದಯವಿಟ್ಟು ಹೇಳಬೇಕು. ಇನ್ನೂ ಕಡೆಯ ಪ್ರಶ್ನೆ ಏನೆಂದರೆ, ಭೂ ಪರಿವರ್ತನೆಯಾಗುವುದಕ್ಕೆ,...

**ಸಭಾಪತಿಯವರು:-** ಆಯಿತು. ಮಾನ್ಯ ಸಚಿವರು ಉತ್ತರ ನೀಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು ಉತ್ತರ ನೀಡಿದ ಮೇಲೆ ಏನಾದರೂ ಪ್ರಶ್ನೆ ಇದ್ದರೆ ಆಮೇಲೆ ಕೇಳಿ. ಹೇಗಿದ್ದರೂ ತಾವೂ ಎದ್ದು ನಿಂತುಕೊಳ್ಳುತ್ತಿರುತ್ತೀರಿ.

**ಶ್ರೀ ಎಸ್.ರವಿ:-** ಆಯಿತು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎರಡು ಪ್ರಶ್ನೆಯನ್ನು ಕೇಳಿದ್ದು, ಮೊದಲನೆಯದಾಗಿ, ಎಷ್ಟು ಅರ್ಜಿಗಳು ಬಂದಿವೆ, ಎಷ್ಟು ಅರ್ಜಿಗಳು ತಿರಸ್ಕೃತವಾಗಿವೆ, ಅರ್ಜಿಗಳು ತಿರಸ್ಕೃತವಾಗುವುದಕ್ಕೆ ಇರುವ ಕಾರಣಗಳೇನು ಎಂಬುವುದು ಮಾನ್ಯ ಸದಸ್ಯರ ಪ್ರಶ್ನೆಯಾಗಿದೆ. ಈಗಾಗಲೇ ಪ್ರಶ್ನೆಗೆ ಲಿಖಿತ ಉತ್ತರವನ್ನು ನೀಡಲಾಗಿದೆ. ಎಲ್ಲರಿಗೂ ಗೊತ್ತಿರುವ ಹಾಗೆ, conversion application ತಿರಸ್ಕೃತವಾಗಲು, ಅರ್ಜಿದಾರರು, The Karnataka Scheduled Castes and Scheduled Tribes (Prohibition of Transfer of Certain Lands) Act, 1978 ಇದರ ಅಡಿಯಲ್ಲಿ ಇದ್ದರೆ ಮಾಡುವುದಕ್ಕೆ ಬರುವುದಿಲ್ಲ. ಭೂ ಸುಧಾರಣಾ ಕಾಯ್ದೆ ಕಲಂ 79A, 79B ಯಲ್ಲಿದ್ದರೂ ಮಾಡಲು ಅವಕಾಶ ಇಲ್ಲ. ಭೂ ಸ್ವಾಧೀನಕ್ಕೆ ಒಳಪಟ್ಟಿದ್ದರೆ ಮಾಡಲು ಅವಕಾಶ ಇಲ್ಲ. ಪ್ರಸ್ತಾವಿತ ಜಮೀನು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಅಡಿ ಬಂದರೆ ಮಾಡುವುದಕ್ಕೆ ಅವಕಾಶವಿಲ್ಲ. ಗೇಣಿ ಜಮೀನು ಮಾಡುವುದಕ್ಕೆ ಬರುವುದಿಲ್ಲ ಅಥವಾ ಸದರಿ ಜಮೀನು ಇನಾಮ್ ರದ್ದತಿ ಅಡಿ ಇದ್ದರೆ ಮಾಡುವುದಕ್ಕೆ ಅವಕಾಶ ಇಲ್ಲ. ಸ್ಥಳೀಯ ಯೋಜನಾ ಪ್ರಾಧಿಕಾರದವರು ವಿಂಗಡನೆ ಮಾಡಿರತಕ್ಕಂಥ ಜಮೀನಗಳೇನಿವೆ, yellow zone, green zone, ಈ ರೀತಿ ಮಾಡಿದರೆ, ಅದು ಯಾವ Zone ನಲ್ಲಿರುತ್ತದೆಯೋ ಅದನ್ನು ಮಾಡಬಹುದು. ಇಷ್ಟು ಮಾಹಿತಿಯನ್ನು ಸರಿಯಾಗಿ ನೀಡಿದರೆ ಜಮೀನಿನ ಪರಿವರ್ತನೆ ಆಗುತ್ತದೆ. ಇದು ಮೊದಲಿನಿಂದ ನಡೆದುಕೊಂಡು ಬಂದಿರತಕ್ಕಂಥ ವ್ಯವಸ್ಥೆಯಾಗಿದೆ. ಈ ಮೊದಲು 4 ತಿಂಗಳಿನಲ್ಲಿ ಕಡ್ಡಾಯವಾಗಿ ಜಮೀನಿನ ಪರಿವರ್ತನೆಗೆ ವ್ಯವಸ್ಥೆ ಮಾಡಿಕೊಡಲಾಗುತ್ತಿತ್ತು. 15 ದಿವಸಗಳ ಹಿಂದೆ ಅದನ್ನು 30 ದಿವಸಗಳಿಗೆ ಇಳಿಸಿದ್ದೇವೆ. ಏಕೆಂದರೆ, ಜಮೀನಿನ ಪರಿವರ್ತನೆ ಮಾಡುವುದು ಒಂದು ರೀತಿಯ ದೊಡ್ಡ ದಂಧೆಯಾಗಿದೆ, ತಮಗೂ ಅದು ಗೊತ್ತಿದೆ. ನಾನು ಅದನ್ನು ಮುಚ್ಚುಮರೆ ಮಾಡುವ ಪ್ರಶ್ನೆಯೇ ಇಲ್ಲ. ಅರ್ಜಿ ಸಲ್ಲಿಸಿದ ಮೇಲೆ ಕೆಳಗಡೆಯಿಂದ ಹಿಡಿದು ಮೇಲಿನವರೆಗೂ ತಲುಪುವವರೆಗೂ ಬಹಳ ಕಷ್ಟಗಳಿವೆ. ಅರ್ಜಿದಾರರು ಎಂ.ಎಲ್.ಎ. ಆದರೂ ಕಷ್ಟ, ಸಾಮಾನ್ಯ ಅರ್ಜಿದಾರನಾದರೂ ಕಷ್ಟ. ಬಹಳ ಕಷ್ಟಕರವಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಚಿವರೇ, ಎಷ್ಟು discount ಎಂಬುದನ್ನು ಹೇಳಿ?

**ಶ್ರೀ ಆರ್.ಅಶೋಕ್:-** ಮಾನ್ಯ ಕೆ.ಗೋವಿಂದರಾಜ್‌ರವರು, 'ಫೋನ್ ಮಾಡಿದರೆ ಎಷ್ಟು ವಿನಾಯಿತಿ ನೀಡುತ್ತಾರೆ ಎಂದು ನನ್ನನ್ನು ಕೇಳಿದರು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, Affidavit based conversion ನಲ್ಲಿ extent ಎಷ್ಟು ಎಂಬುದನ್ನು ಮಾನ್ಯ ಸಚಿವರು ಹೇಳಲಿಲ್ಲ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಅವರ ಹೆಸರಿನಲ್ಲಿ ಎಷ್ಟು ಇರುತ್ತದೆಯೋ ಅಷ್ಟಕ್ಕೆ ಮಾಡಿಕೊಡುತ್ತೇವೆ. ಅದರ ಬಗ್ಗೆ ಯಾವುದೇ ಪ್ರಶ್ನೆ ಇಲ್ಲ. ಬಹಳ ಪ್ರಮುಖವಾಗಿ ಜಮೀನಿನ ಪರಿವರ್ತನೆ ಮಾಡಿಕೊಡುವುದಕ್ಕೆ ಮೊದಲಿನಿಂದಲೂ ಕಂದಾಯ ವ್ಯವಸ್ಥೆಯಲ್ಲಿ habit ಆಗಿದೆ. ಅದಕ್ಕಾಗಿ ಏನಾದರೂ ಸರಳೀಕರಣ ಮಾಡಬೇಕೆಂದು ಆನ್‌ಲೈನ್ ಪದ್ಧತಿಯನ್ನು ಮಾಡಲಾಗಿದೆ. ಬೇಗ ವಿಲೇವಾರಿಯಾಗಲಿ, ತೊಂದರೆಯಾಗದಿರಲಿ ಎನ್ನುವ ದೃಷ್ಟಿಯಿಂದ ಅವರೇ, ಏನೇನು ಅರ್ಜಿಗಳು ಸಿಗುತ್ತದೆ ಅದನ್ನು systemನಲ್ಲಿ feed ಮಾಡಿದರೆ ತಿರುಗಾಡುವುದು ತಪ್ಪುತ್ತದೆ ಎನ್ನುವ ದೃಷ್ಟಿಯಿಂದ ಮಾಡಲಾಗಿದೆ. ಅದರಲ್ಲಿಯು ಸಮಸ್ಯೆಗಳಾಗುತ್ತಿವೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಅದಕೋಸ್ಕರ 30 ದಿವಸಗಳೊಳಗೆ ಆ ಕೆಲಸವಾಗುವಂತೆ ಮಾಡಲಾಗಿದೆ. ಅದರಲ್ಲಿಯು ನಾನು ಕಂದಾಯ ಇಲಾಖೆಯನ್ನು ವಹಿಸಿಕೊಂಡ ಮೇಲೆ,... ಏಕೆಂದರೆ, ನನಗೂ ಇದರಲ್ಲಿ ಅನುಭವ ಜಾಸ್ತಿ ಇದೆ. ಏನೇ ಮಾಡಿದರೂ ಚೆಕ್‌ಪೋಸ್ಟ್ ಇಟ್ಟೇ ಇಡುತ್ತಾರೆ. ರೈಲ್ವೆಗೇಟ್ ಕೈಮರ ಹಾಕೆ ಹಾಕುತ್ತಾರೆ. ಅದಕೋಸ್ಕರ ಒಂದು ಸಾಫ್ಟ್‌ವೇರ್ ತರಬೇಕೆಂದು ನಮ್ಮ ಪ್ರಧಾನ ಕಾರ್ಯದರ್ಶಿಯವರ ಜೊತೆ ಒಂದು ವಾರದಿಂದ ಚರ್ಚೆ ಮಾಡುತ್ತಿದ್ದೇನೆ. ಆ ಸಾಫ್ಟ್‌ವೇರ್ ಯಾವ ರೀತಿ ಇರಬೇಕೆಂದರೆ, ಪಹಣಿ, Mutation, ಪರಿವರ್ತನೆಯಾಗುವುದಕ್ಕೆ ಏನೇನು ದಾಖಲೆಗಳು ಬೇಕೋ ಅದನ್ನು ನಾವು ತೆಗೆದುಕೊಂಡಿರುತ್ತೇವೆ. Apply ಮಾಡಿದರೆ, ಆನ್‌ಲೈನ್‌ನಲ್ಲಿಯೇ ಆರ್ಡರ್ ಬರಬೇಕು. ಜಿಲ್ಲಾಧಿಕಾರಿಯವರಿಗೆ ಹೋಗುವುದು ಏನಿದೆ ಅದು ಸಹ ಸಮಸ್ಯೆ. ಮುಂದೆ ಕಾಯ್ದೆಯನ್ನು ಜಾರಿಗೊಳಿಸಲಾಗುವುದು, ಅದಕ್ಕೆ ಸಂಬಂಧಿಸಿದಂತೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ಕಲಂ 109 ರ ಅಡಿ ಅನುಮತಿಯನ್ನು ಒಬ್ಬ Industrialist ತೆಗೆದುಕೊಳ್ಳಬೇಕಾದರೆ, 2 ವರ್ಷಗಳು ಕಾಯಬೇಕು. ಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡಿಗೆ ಹೋದರೆ ಅಲ್ಲಿ ಈ ರೀತಿ ಎಲ್ಲಾ ಏನು ಇಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನರಿಗೆ ಒಳ್ಳೆಯದಾಗಲಿ ಎಂಬ ದೃಷ್ಟಿಯಿಂದ ಕಾನೂನು ಜಾರಿಗೆ ತಂದಿದ್ದೇವೆ. ಆದರೆ, ಈ ಕಾನೂನಿನಿಂದಲೇ ಸಮಸ್ಯೆಯಾಗುತ್ತಿದ್ದು, ಆ ಸಾಫ್ಟ್‌ವೇರ್ ತಯಾರಿಸಲು ಹೇಳಿದ್ದೇನೆ. ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದು, ಪರಿವರ್ತನೆ ಮಾಡುವುದೇನಿದೆ ಅದಕ್ಕಾಗಿ ಬಹಳ ಜನ ವರ್ಷಾನುಗಟ್ಟಳೆ ಕಾಯುತ್ತಿದ್ದಾರೆ. ಜೊತೆಗೆ 1 ಎಕರೆ, ½ ಎಕರೆ ಜಮೀನಿನ ಪರಿವರ್ತನೆ ಮಾಡುವುದಕ್ಕೂ ಸಮಸ್ಯೆಗಳಾಗುತ್ತಿದೆ. ಇದಕ್ಕೆ ಒಂದು ಕಡಿವಾಣ ಹಾಕಬೇಕಾಗಿದೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಚಿವರೇ, ಶುಲ್ಕ ನೀಡುವುದಕ್ಕೂ ಒಂದು ಕಡಿವಾಣ ಹಾಕಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಮಾತು ನನಗೆ ಅರ್ಥವಾಯಿತು. ಅದಕ್ಕಾಗಿಯೇ ಒಂದು ಹೊಸ ಸಾಫ್ಟ್‌ವೇರ್ ತಂದು, ಏನೇನು ದಾಖಲೆಗಳಿವೆಯೋ ಅದನ್ನು feed ಮಾಡಿದರೆ automatically ಆದೇಶ ಬರುವಂತೆ ವ್ಯವಸ್ಥೆಯನ್ನು ಮಾಡಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುತ್ತಿದೆ. ಆ ದೃಷ್ಟಿಯಿಂದ ಇದರಲ್ಲಿರತಕ್ಕಂಥ ನ್ಯೂನ್ಯತೆಗಳೇನಿದೆ, ಅದನ್ನು ಸರಿಪಡಿಸುತ್ತೇವೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನಾನು ಏನು ಹೇಳಬೇಕು ಎಂದು ತಯಾರಿದ್ದೆ, ಅದನ್ನು ಮಾನ್ಯ ಸಚಿವರೇ ಒಪ್ಪಿಕೊಂಡಿದ್ದಾರೆ. ಇದೊಂದು ದೊಡ್ಡ ದಂಧೆ ಎಂದು ಹೇಳಿದ್ದಾರೆ. ಈ ದಂಧೆಯನ್ನು ತಪ್ಪಿಸುವುದಕೋಸ್ಕರವೇ Affidavit ಆಧಾರಿತ ಭೂ ಪರಿವರ್ತನೆಯನ್ನು ಜಾರಿಗೊಳಿಸಿದ್ದು. ಆದರೂ ಸಹ ಈ ದಂಧೆಯನ್ನು ತಪ್ಪಿಸುವುದಕ್ಕೆ ಆಗುತ್ತಿಲ್ಲ. ಅದಕ್ಕಾಗಿ ಜಿಲ್ಲಾವಾರು ಹೋಗಿ ಎಷ್ಟು ಅರ್ಜಿಗಳು, ಎಷ್ಟು ಸಮಯದಲ್ಲಿ ವಿಲೇವಾರಿಯಾಗಿದೆ ಎಂಬುದನ್ನು ಎರಡು ಸಲ review ಮಾಡಿದರೆ ಸರಿ ಹೋಗುತ್ತದೆ. ಏಕಗವಾಕ್ಷಿಯಲ್ಲಿ ನಕ್ಷೆಗೂ ಸಹ ಅನುಮೋದನೆ ಮಾಡಿಕೊಡುವ ಬಗ್ಗೆ ಕೇಳಿದ್ದು, ಅದರ ಬಗ್ಗೆ ದಯಮಾಡಿ ಮಾನ್ಯ ಸಚಿವರು ಗಮನಹರಿಸಬೇಕು. ಎರಡನೆಯದಾಗಿ, ಪಹಣಿಯ ಇಂಡಿಕರಣವಾಗಿ ಬರುವಂಥ ವ್ಯವಸ್ಥೆ ಮಾಡಬೇಕು. ಆದೇಶದ ಪ್ರತಿಯನ್ನು ತೆಗೆದುಕೊಂಡು ಹೋಗಿ ತಾಲ್ಲೂಕು ಕಛೇರಿಗೆ ನೀಡಿ, ಮತ್ತೆ....

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಎಷ್ಟು ಪೂರಕ ಪ್ರಶ್ನೆಯನ್ನು ಕೇಳುತ್ತೀರಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಇದು ನನ್ನ ಮೂರನೇ ಪ್ರಶ್ನೆ.

**ಸಭಾಪತಿಯವರು:-** ಎಷ್ಟು ಪ್ರಶ್ನೆ ಕೇಳಲಾಗಿದೆ ಎಂಬುದು ನೆನಪಿದೆಯೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, 5 ಗುಂಟೆ ಒಳಗೆ ಇರುವ ಪರಿವರ್ತನೆಯಾಗಿರುವ 'ಬಿ ಖರಾಬು' ಜಮೀನು ಏನಿದೆ, ಅದನ್ನು ಸರ್ಕಾರದವರೇ ಇಟ್ಟುಕೊಂಡು ಸಾರ್ವಜನಿಕರ ಉದ್ದೇಶಕ್ಕಾಗಿ ಬಳಸಿಕೊಳ್ಳಬೇಕೆಂದು ಇರುತ್ತದೆ, ಅಂತಹ ಪರಿವರ್ತನೆಯಾಗಿರುವ ಜಮೀನಿನ ಕಡೆ ಗಮನಹರಿಸುತ್ತಿರುವವರ್ಯಾರು? ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ. ಏಕೆಂದರೆ ಅದರ ಬಗ್ಗೆ ಏನು ಆಗುತ್ತಿಲ್ಲ. ಅದಕ್ಕೇನ್ನಾದರೂ ಒಂದು ನಿಯಮಾವಳಿಯನ್ನು ಜಾರಿಗೆ ತಂದು ಅಥವಾ ಹಣವನ್ನು ಕಟ್ಟಿಸಿಕೊಂಡು ಅವರಿಗೇ ನೀಡುವಂಥ ವ್ಯವಸ್ಥೆಯನ್ನು ಮಾಡಿ, ಇದಕ್ಕೆ ಏನಾದರೂ ಮುಕ್ತಿ ನೀಡಬೇಕು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರ ಪ್ರಶ್ನೆಯನ್ನು ಮೀರಿ ಜಾಸ್ತಿಯೇ ಪ್ರಶ್ನೆ ಕೇಳಿದ್ದಾರೆ. ಅವರು ನಮ್ಮ ಸ್ನೇಹಿತರಾದರಿಂದ ಉತ್ತರ ನೀಡುತ್ತೇನೆ.

**ಶ್ರೀ ಎಂ.ಸಿ.ವೇಣುಗೋಪಾಲ್:-** ಬೇರೆಯವರಿಗೂ ಉತ್ತರ ನೀಡಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ರವಿಯವರು ಪ್ರಶ್ನೆ ಕೇಳಿರುವುದರಿಂದ ಅವರನ್ನು ಸ್ನೇಹಿತರೆಂದು ಹೇಳುತ್ತಿದ್ದೇನೆ. ಅದೇ ರೀತಿ ವೇಣುಗೋಪಾಲ್‌ರವರು ಕೇಳಿದರೂ ಅವರನ್ನು ಸ್ನೇಹಿತರೆಂದು ಹೇಳಿ ಉತ್ತರ ನೀಡುತ್ತೇನೆ. ಜೊತೆಗೆ ಮಾನ್ಯ ಹೆಚ್.ಎಂ.ರೇವಣ್ಣನವರು ಸಹ ಮಾನ್ಯ ಸದಸ್ಯರು ಕೇಳುತ್ತಿರುವುದು ಸರಿಯಾಗಿದೆ ಎಂದು ತಲೆ ಅಲ್ಲಾಡಿಸುತ್ತಿದ್ದರು. ಇದೊಂದು ದೊಡ್ಡ ಸಮಸ್ಯೆಯಾಗಿದೆ. ಈ ಜಮೀನಿನಲ್ಲಿ 'ಎ' ಖರಾಬು, 'ಬಿ' ಖರಾಬು ಎಂದು ಮಾಡಲಾಗಿರುತ್ತದೆ. ಅದರಲ್ಲಿಯು ಸಮಸ್ಯೆಗಳಿದ್ದು, ಅದನ್ನು ಸಹ ಪರಿಶೀಲನೆ ಮಾಡುತ್ತಿದ್ದೇನೆ. ಯಾರ ಜಮೀನು 'ಎ' ಖರಾಬು ಆಗಿರುತ್ತದೆಯೋ ಅವರು ಆ ಜಮೀನಿಗೆ ಎರಡು ಪಟ್ಟು ಹಣವನ್ನು ಕಟ್ಟಿ, ಅವರ ಜಮೀನಿಗಾಗಿ ಅರ್ಜಿ ಹಾಕಿ ಓಡಾಡುವುದಕ್ಕೆ ವರ್ಷಾನುಗಟ್ಟಳೆ ಅಲೆಯಬೇಕಾಗುತ್ತದೆ. Sub Registrar Office ನಲ್ಲಿ value ಏನಿದೆ, ಅದಕ್ಕೆ ಎರಡು ಪಟ್ಟು ಹಣವನ್ನು ಕಟ್ಟಿ ಅವರ ಹೆಸರಿಗೆ ಮಾಡಿಕೊಡುವ ವ್ಯವಸ್ಥೆ ತರುವ ಬಗ್ಗೆ ಯೋಚಿಸಲಾಗುತ್ತಿದೆ.

(554)/18.03.2020/8.10/ಎಸ್‌ಕೆ-ಜಿಆರ್ **(ಸಭಾಪತಿಯವರ ಉಪಸ್ಥಿತಿ )**

**ಶ್ರೀ ಆರ್. ಅಶೋಕ್ (ಕಂದಾಯ ಸಚಿವರು) (ಮುಂದು):-**

ಇದಕ್ಕೆ ಮಾನ್ಯ ಸದಸ್ಯರ ಸಲಹೆಗಳು ಏನಾದರೂ ಇದ್ದರೆ, ಅದನ್ನು ನಾನು ಮುಂದಿನ ದಿನಗಳಲ್ಲಿ ಪರಿಶೀಲನೆ ಮಾಡುತ್ತೇನೆ. 'ಬಿ' ಖರಾಬ್ ವಿಚಾರದಲ್ಲಿ ಸ್ವಲ್ಪ ಸಮಸ್ಯೆಯಿದೆ. 'ಬಿ' ಖರಾಬ್ ಸಮಸ್ಯೆ ಏನೆಂದರೆ, ಅಲ್ಲಿ ಕುಂಟೆ, ರಾಜ ಕಾಲುವೆಗಳು, ದೊಡ್ಡ ದೊಡ್ಡ ಬಂಡೆಗಳು ಇರುತ್ತದೆ. ಅದೊಂದು ಸ್ವಲ್ಪ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

sensitive issue. ಇದಕ್ಕೆ ಪರಿಸರವಾದಿಗಳು ಸಮಸ್ಯೆ ಮಾಡುತ್ತಾರೆ. ಅದರ ಬಗ್ಗೆ ಯೋಚನೆ ಮಾಡುವುದನ್ನು ಬಿಟ್ಟು, ಇದನ್ನು ಮಾಡೋಣ. 'ಎ' ಮತ್ತು 'ಬಿ' ಖರಾಬ್ ಬಗ್ಗೆ ಜನರು ಅರ್ಜಿ ಸಲ್ಲಿಸಿ ಅಲೆಯಬೇಕಾಗಿತ್ತು. ಆ ಪಹಣಿಗೆ ಯಾರೂ ಅರ್ಜಿ ಹಾಕದೇ, D.C., ಕೋರ್ಟ್‌ಗೆ ಹೋಗದೇ, ಪಹಣಿಯ ಹೆಸರು ಮತ್ತು ಯಾರ ಮಾಲೀಕತ್ವ ಇರುತ್ತದೆಯೋ, ಅವರ ಹೆಸರಿಗೆ ಕೊಡುವಂತಹದ್ದಕ್ಕೆ ಮುಂದಿನ ದಿನಗಳಲ್ಲಿ ಆ ಒಂದು ಪದ್ಧತಿಯನ್ನು ತರುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1307**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ನಾನು ಕೇಳಿರುವಂತಹ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಬೀದರ್ ಜಿಲ್ಲೆಯಲ್ಲಿ 2016 ರಿಂದ 2019 ರವರೆಗೆ ಎಷ್ಟು ಎಕರೆ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ (ಎನ್.ಎ.,) ಭೂ ಪರಿವರ್ತನೆ ಮಾಡಲಾಗಿದೆ; ಇದರಲ್ಲಿ ಖಾಸಗಿ ಜಮೀನು, ಇನಾಮಿ ಜಮೀನು ಹಾಗೂ ವಕ್ಫ್‌ಗೆ ಸೇರಿದ ಜಮೀನು ಎಷ್ಟು ಎನ್ನುವ ಪ್ರಶ್ನೆಗೆ ಸರ್ಕಾರ ವಿವರವಾದಂತಹ ಮಾಹಿತಿಗಳನ್ನು ಕೊಟ್ಟಿಲ್ಲ. ಇದರಲ್ಲಿ ಇನಾಮಿ ಜಮೀನು ಇಲ್ಲವೆಂದು ಹೇಳಿದ್ದಾರೆ. ಆದರೆ, ಇನಾಮಿ ಜಮೀನು ಹಾಗೂ ವಕ್ಫ್ ಜಮೀನನ್ನು ಎನ್.ಎ., ಮಾಡಿದ್ದಾರೆ. ಮಾನ್ಯ ಸಚಿವರು ಇನಾಮ್ ಹಾಗೂ ವಕ್ಫ್‌ಗೆ ಸೇರಿದ ಜಮೀನು ಇರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅದರ ಬಗ್ಗೆ ಮಾನ್ಯ ಸಚಿವರು clarify ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಆರ್. ಅಶೋಕ್, (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಏನೆಂದರೆ, non-agriculture (N.A.,) ಜಮೀನು ಎಷ್ಟು ಆಗಿದೆ ಎಂದು ಕೇಳಿದ್ದಾರೆ. ಬೀದರ್ ಜಿಲ್ಲೆಯಲ್ಲಿ 2016 ರಿಂದ 2019 ರವರೆಗೆ 1787 ಎಕರೆ 32 ಗುಂಟೆ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ (ಎನ್.ಎ.,) ಭೂಪರಿವರ್ತನೆ ಮಾಡಲಾಗಿರುತ್ತದೆ. ಅದರಲ್ಲಿ ಇನಾಮಿ ಜಮೀನು ಹಾಗೂ ವಕ್ಫ್‌ಗೆ ಸೇರಿದ ಜಮೀನು ಎಷ್ಟು ಎಂದು ಕೇಳಿದ್ದಾರೆ. ಅದರಲ್ಲಿ ಐದು ಎಕರೆ ಜಮೀನು ವಕ್ಫ್ ಬೋರ್ಡಿಗೆ ಸೇರಿದ್ದು ಎಂಬುದು ಇದೆ. ಅದನ್ನು ಭೂಪರಿವರ್ತನೆ ಮಾಡಿರುವಂತಹದ್ದು ತಪ್ಪು ಎಂದು ದಿನಾಂಕ 02.03.2020ರಲ್ಲಿ ಆ ಭೂ ಪರಿವರ್ತನೆ ಆದೇಶವನ್ನು ಹಿಂಪಡೆಯಲಾಗಿರುತ್ತದೆ ಎಂದು ತಿಳಿದು ಬಂದಿರುತ್ತದೆ. ಆ ಭೂ ಪರಿವರ್ತನೆ ಆದೇಶ ಹಿಂಪಡೆದಿದ್ದರೆ, ಅದನ್ನು ವಕ್ಫ್ ಬೋರ್ಡಿಗೆ ವಾಪಸ್ಸು ಕೊಡುವಂತಹ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ವಕ್ಫ್ ಜಮೀನು ಮಾತ್ರವಲ್ಲದೇ, ಸುಮಾರು ಎಕರೆ ಜಮೀನುಗಳು ಕೃಷಿಯೇತರ ಉದ್ದೇಶಕ್ಕೆ ಭೂಪರಿವರ್ತನೆಯಾಗಿವೆ. ಆದರೆ ಇದರಲ್ಲಿ ತಾವು ಆ ವಿಚಾರವನ್ನು mention ಮಾಡಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದಕ್ಕೆ ಮಾಹಿತಿ ಏನಾದರೂ ಕೊಟ್ಟರೆ, ಯಾರು ಇದನ್ನು ಭೂಪರಿವರ್ತನೆ ಮಾಡಿದ್ದಾರೋ, ಅವರ ಮೇಲೆ ತಕ್ಷಣವೇ ಕ್ರಮ ಕೈಗೊಳ್ಳುತ್ತೇನೆ. ಅದನ್ನು ಮತ್ತೆ ಆ ವಕ್ಫ್ ಬೋರ್ಡ್‌ಗೆ ವಾಪಸ್ಸು ಕೊಡುತ್ತೇನೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಇನಾಮಿ ಜಮೀನನ್ನು ಭೂಪರಿವರ್ತನೆ ಮಾಡಿಲ್ಲ. ಆದರೆ ಬೀದರ್ ಜಿಲ್ಲೆಯ ಕುಂಬಾರವಾಡ ಸರ್ವೇ ನಂಬರ್ 35 ಇನಾಮಿ ಜಮೀನು 1955 ರಿಂದ 1974 ರವರೆಗೆ ಅನಧಿಕೃತವಾಗಿ ಅವರ ಹೆಸರಿನಲ್ಲಿತ್ತು.

**ಸಭಾಪತಿಯವರು:-** ತಾವು ಇದಕ್ಕೆ ಸಂಬಂಧಿಸಿದ ಮಾಹಿತಿ ಕೊಡಿ ಎಂದು ಮಾನ್ಯ ಸಚಿವರು ಹೇಳಿದ್ದಾರೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಒಂದು ಕೊಲೆಯಾಗಿದೆ. ಇದೊಂದು ಗಂಭೀರವಾದ ವಿಚಾರ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆಯಲ್ಲಿ ಕೇಳಿರುವಂತಹ ವಿಷಯಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಕೊಟ್ಟರೆ, ನಾನು ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1324**
**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ಎಂ.ಸಿ. ವೇಣುಗೋಪಾಲ್:-**ಮಾನ್ಯ ಸಭಾಪತಿಯವರೇ, ಈ ಸಂಧರ್ಭದಲ್ಲಿ ನಾನು ನೆನಪಿಸಿಕೊಳ್ಳುತ್ತೇನೆ. ಏಕೆಂದರೆ, ತಾವು ಸಭಾಪತಿಗಳಾದ ನಂತರ ತಾವು ಇದ್ದಂತಹ ಸಂದರ್ಭದಲ್ಲಿ ನನ್ನನ್ನು University of Agricultural Sciencesನ Board of Managementಗೆ ಆಯ್ಕೆ ಮಾಡಿ ಕಳುಹಿಸಿದ್ದೀರಿ. ನನ್ನ ಪಾಲಿಗೆ ಇದು ರೈತರು ಮತ್ತು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಕೆಲಸ ಮಾಡುವುದಕ್ಕೆ ಸಿಕ್ಕಿದಂತಹ ಒಂದು ಅವಕಾಶವಾಗಿದೆ. ಆದ್ದರಿಂದ, ನಾನು ತಮಗೆ ಹೇಳಬಯಸುತ್ತೇನೆ. ಈಗಾಗಲೇ ಇದಕ್ಕೆ ಸಂಬಂಧಪಟ್ಟಂತಹ ಕಾರ್ಯದರ್ಶಿ, ವಿಶ್ವವಿದ್ಯಾನಿಲಯದ ಕುಲಪತಿಗಳು ಹಾಗೂ ಸಚಿವರ ಹತ್ತಿರ ಇದರ ಬಗ್ಗೆ ನಾನು ಸುದೀರ್ಘವಾಗಿ ಚರ್ಚೆ ಮಾಡಿದ್ದೇನೆ. ನಾನು ಕೇಳಿರುವಂತಹ ಪ್ರಶ್ನೆ ಸೂಕ್ತವಾಗಿದೆ ಎಂದು ಹೇಳಿ, ನನ್ನನ್ನು ಅವರು ಅಭಿನಂದಿಸಿದ್ದಾರೆ.

ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ರಾಜ್ಯದಲ್ಲಿರುವ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಬೋಧಕ, ಬೋಧಕೇತರ, ಹಣಕಾಸಿನ ಸೌಕರ್ಯ ಮತ್ತು ಸೇವ ನಿಯಮಕ್ಕೆ ಏಕರೂಪ ನಿಯಮವನ್ನು ತರುವುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುವ ಉತ್ತರ ಸಂಪೂರ್ಣವಾದಂತಹ ಸಾರಾಂಶವಿಲ್ಲ. ಇದಕ್ಕೆ ಕಾರಣವಿಷ್ಟೆ. ಈ ಏಕರೂಪ ನಿಯಮವನ್ನು ಮಾಡಬೇಕಾಗಿರುವಂಥದ್ದು.

**ಸಭಾಪತಿಯವರು:-** ಮಾನ್ಯ ಸದಸ್ಯರೇ ಪ್ರಶ್ನೆ ಕೇಳಿ.

**ಶ್ರೀ ಎಂ.ಸಿ. ವೇಣುಗೋಪಾಲ್:-**ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಕೇಳಿರುವಂತಹ ಪ್ರಶ್ನೆಗೆ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರವನ್ನು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಇದಕ್ಕೆ ತಾವೇ ಉತ್ತರ ಕೊಡುತ್ತೀರಾ?

**ಶ್ರೀ ಎಂ.ಸಿ. ವೇಣುಗೋಪಾಲ್:-**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರ ಸಮಂಜಸವಾಗಿಲ್ಲ. ಮಾನ್ಯ ಸಚಿವರಿಗೆ ತೊಂದರೆ ಕೊಡುವುದು ಬೇಡವೆಂದು ನಾನೇ ಉತ್ತರವನ್ನು ಹೇಳುತ್ತಿದ್ದೇನೆ.

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಕೃಷಿ ಇಲಾಖೆಯಡಿಯಲ್ಲಿ ಬೆಂಗಳೂರು, ರಾಯಚೂರು, ಶಿವಮೊಗ್ಗ, ಧಾರವಾಡ ಈ ನಾಲ್ಕು ಕೃಷಿ ವಿಶ್ವವಿದ್ಯಾಲಯಗಳು ಬರುತ್ತದೆ. ಪ್ರತಿಯೊಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೃಷಿ ವಿಶ್ವವಿದ್ಯಾಲಯಗಳಿಗೂ ಬೇರೆ ಬೇರೆ ಕಾಯಿದೆಗಳಿವೆ. ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಿಗೂ Common Statute ಬೇಕೆಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಈ ಸಂಬಂಧವಾಗಿ ಕೃಷಿ ಇಲಾಖೆಯು Board of Management ನವರನ್ನು ಹಲವಾರು ಬಾರಿ ಕರೆದು, ಅವರ ಜೊತೆ ಚರ್ಚೆ ಮಾಡಿ Common Statute ತರಬೇಕೆಂಬುದರ ಬಗ್ಗೆ ಸರ್ಕಾರದ ಉದ್ದೇಶವಾಗಿದೆ. ಅದಕ್ಕೆ ಅವರ ಅಭಿಪ್ರಾಯವನ್ನು ಪಡೆದುಕೊಂಡು ನಂತರ ಹಣಕಾಸು ಇಲಾಖೆ, ಡಿ.ಪಿ.ಎ.ಆರ್., ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಗೆ ಪತ್ರವನ್ನು ಬರೆದು, ಅವರ ಅಭಿಪ್ರಾಯವನ್ನು ಸಹ ನಾವು ಕೇಳಿದ್ದೇವೆ. ಇಲಾಖೆಯವರಿಂದ ಅಭಿಪ್ರಾಯ ಬಂದಿರಲಿಲ್ಲ. ದಿನಾಂಕ 02.01.2020 ರಂದು ನಾವು ಪುನಃ ಇಲಾಖೆಗಳಿಗೆ ಪತ್ರವನ್ನು ಬರೆದಿದ್ದೇವೆ. ಹಣಕಾಸು ಇಲಾಖೆಯವರು ಕೆಲವೊಂದು observations ಮಾಡಿದರು. ಆ observations ಗೆ ಮತ್ತೆ ಉತ್ತರವಾಗಿ ದಿನಾಂಕ 11.03.2020ರಂದು ಹಣಕಾಸಿನ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಹಣಕಾಸು ಇಲಾಖೆ ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಡಿ.ಪಿ.ಎ.ಆರ್., ನಿಂದ ಉತ್ತರ ಬಂದ ತಕ್ಷಣವೇ, ಅದನ್ನು ಪರಿಶೀಲನೆ ಮಾಡಿ, ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಟ್ಟು, ಅಲ್ಲಿಂದ ಈ ಕರಡನ್ನು ಜಾರಿಗೆ ತರುವುದಕ್ಕೆ ಆದಷ್ಟು ಬೇಗ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆಯನ್ನು ಕೇಳಿದ್ದಾರೆ. ಕೃಷಿ ಇಲಾಖೆಯಲ್ಲಿ

**ಶ್ರೀ ಎಂ.ಸಿ. ವೇಣುಗೋಪಾಲ್:-**ಮಾನ್ಯ ಸಭಾಪತಿಯವರೇ, ಇನ್ನೊಂದು ಪ್ರಶ್ನೆಯಿದೆ. ಈ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಿರುವ ಬಗ್ಗೆ ನಾನು ಅವರ ಗಮನಕ್ಕೆ ತರಬಯಸುತ್ತೇನೆ. ಈ Common Statute ತರುವುದಕ್ಕೆ there is no financial implication, ಯಾವುದೇ ಹಣಕಾಸಿನ ಅವಶ್ಯಕತೆಯಿಲ್ಲ. ಈ ನಾಲ್ಕು ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು University of Horticultural Sciences ಬಾಗಲಕೋಟೆ ಜಿಲ್ಲೆಯಲ್ಲಿದೆ. ಈ ವಿಶ್ವವಿದ್ಯಾನಿಲಯಗಳಿಗೆ ಏಕರೂಪ ಕಾಯಿದೆ ನಿಯಮವನ್ನು ತರುವುದರ ಬಗ್ಗೆ ಏನು ಮಾಡುತ್ತಿಲ್ಲ.

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, process ನಡೆಯುತ್ತಿದೆ.

**ಶ್ರೀ ಎಂ.ಸಿ. ವೇಣುಗೋಪಾಲ್:-**ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ಅವರು ಪ್ರೊಸಿಡಿಂಗ್ಸ್ ಮಾಡಿರುವುದು ನನ್ನ ಬಳಿ ಇದೆ.

**ಶ್ರೀ ಬಿ.ಸಿ. ಪಾಟೀಲ್:-**ಇಲ್ಲ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಚಿವರೇ ಹೇಳಿ.

**ಶ್ರೀ ಬಿ.ಸಿ. ಪಾಟೀಲ್:–**ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಯಲ್ಲಿ ಬೋಧಕ, ಬೋಧಕೇತರ, ಹಣಕಾಸಿನ ಸೌಕರ್ಯ ಮತ್ತು ಸೇವಾ ನಿಯಮ ಈ ಎಲ್ಲ ಅಂಶಗಳನ್ನು ಕುರಿತಂತೆ ಪ್ರಶ್ನೆ ಕೇಳಿದ್ದಾರೆ. ಹಣಕಾಸಿನ ಸೌಕರ್ಯ ಎಂದಾಗ, ನಾವು ಹಣಕಾಸಿನ ಇಲಾಖೆಯಿಂದ ಅದಕ್ಕೆ ಅನುಮೋದನೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಪ್ರಸ್ತಾವನೆಯನ್ನು ಹಣಕಾಸಿನ ಇಲಾಖೆಗೆ ಕಳುಹಿಸಿಕೊಡಲಾಗಿದೆ.

**ಶ್ರೀ ಎಂ.ಸಿ. ವೇಣುಗೋಪಾಲ್:–**ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ನಾನು ಮತ್ತೊಂದು ಹೇಳುವುದೇನೆಂದರೆ, ಅವರು ಪ್ರೊಸಿಡಿಂಗ್ಸ್ ಮಾಡಿರುವ ಪ್ರತಿ ನನ್ನ ಬಳಿ ಇದೆ. ಐದು ವಿಶ್ವವಿದ್ಯಾನಿಲಯಗಳ ಕುಲಪತಿಗಳು ಹಾಗೂ ಇದಕ್ಕೆ ಸಂಬಂಧಪಟ್ಟಂತಹ ಇಲಾಖೆಯವರನ್ನು ಕರೆಸಿ ಏನು ಮಾಡಿದ್ದಾರೆಂದರೆ, ಸುಮಾರು ಹತ್ತು ವರ್ಷಗಳಿಂದ ಕಾಯಿದೆ ಮಾಡಬೇಕೆಂಬುದರ ಬಗ್ಗೆ ರೂಪುರೇಷುಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಒಳಗುಟ್ಟೊಂದು ಇದೆ. ವಿಶ್ವವಿದ್ಯಾನಿಲಯಗಳಲ್ಲಿರುವಂತಹ ಸ್ಥಾನಮಾನಗಳಾದ Estate Officer, Registrar ಎನ್ನುವಂತಹ ಕೆಲವೊಂದು ಹುದ್ದೆಗಳು ಅಲ್ಲಿ abolish ಆಗುತ್ತವೆ. ಅದರಿಂದಾಗಿ ಪಟ್ಟಭದ್ರಹಿತಾಸಕ್ತಿಗಳು ಅಲ್ಲಿ ಏನು ಮಾಡುತ್ತಿದ್ದಾರೆಂದರೆ, ಈ ಹುದ್ದೆಗಳು ಹೋಗಿಬಿಡುತ್ತವೆ ಎಂದು ಹೇಳಿ, ಸುಮಾರು ಹತ್ತು ವರ್ಷಗಳಿಂದ ಅದು ನೆನಗುದಿಗೆ ಬಿದ್ದಿದೆ. ನಿವೃತ್ತಿ ಹೊಂದಿದಂತಹ ಕುಲಪತಿಗಳ ಹತ್ತಿರ ನಾನು ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡಿದ ನಂತರ ಇದು ನನಗೆ ಸಿಕ್ಕಿರುವ ಮಾಹಿತಿ..

**ಸಭಾಪತಿಯವರು:–** ಮಾನ್ಯ ಸಚಿವರು ಮಾತನಾಡಿ.

**ಶ್ರೀ ಎಂ.ಸಿ. ವೇಣುಗೋಪಾಲ್:–**ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಮ್ಮ ಮಾನ್ಯ ಬಿ.ಸಿ. ಪಾಟೀಲ್‌ರವರು 'ರೈತರುಈ ದೇಶದ ಬೆನ್ನೆಲುಬು' ಎಂದು ಹೇಳಿದ್ದಾರೆ. ಈ ವಿಶ್ವವಿದ್ಯಾನಿಲಯಗಳು ರೈತರಿಗೆ ಬೆನ್ನೆಲುಬಾಗಬೇಕು. ಮಾನ್ಯ ಬಿ.ಸಿ. ಪಾಟೀಲ್‌ರವರು ಎಂದರೆ Board Commitment ಇರುವ ಪಾಟೀಲ್‌ರವರಾಗಲೀ ಎಂದು ನಾನು ಆಶಿಸುತ್ತೇನೆ.

**ಸಭಾಪತಿಯವರು:–** ಆಯಿತು.

**ಶ್ರೀ ಬಿ.ಸಿ. ಪಾಟೀಲ್:–** ಮಾನ್ಯ ವೇಣುಗೋಪಾಲ್‌ರವರು ಬೋರ್ಡ್‌ನ ಸದಸ್ಯರಾಗಿರುವುದರಿಂದ, ಅದರ ಬಗ್ಗೆ ಆಳವಾದಂತಹ ಅಧ್ಯಯನ ಮಾಡಿ, ವಿಶ್ವವಿದ್ಯಾನಿಲಯಗಳಿಗೆ Common Statute

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತರಬೇಕೆನ್ನುವುದರ ಬಗ್ಗೆ ಬಹಳ ಪರಿಶ್ರಮ ವಹಿಸಿದ್ದಾರೆ. ಅವರನ್ನು ನಾನು ಅಭಿನಂದಿಸುತ್ತೇನೆ. ಇದನ್ನು ಆದಷ್ಟು ಬೇಗೆ ಜಾರಿಗೆ ತರುತ್ತೇವೆ.

**ಶ್ರೀ ಎಂ.ಸಿ. ವೇಣುಗೋಪಾಲ್:–**ಮಾನ್ಯ ಸಭಾಪತಿಯವರೇ, ಇನ್ನೊಂದು ಪ್ರಶ್ನೆಯಿದೆ.

**ಸಭಾಪತಿಯವರು:–** ಇನ್ನೊಂದು ದಿನ ಕೇಳೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1314**
**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):**-ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳಿರುವ ಪ್ರಶ್ನೆಗೆ ಕುರುಗೋಡು-ಮಾರಲಮಡಿಕಿ ಮಾರ್ಗದ ರಸ್ತೆ ಏನಿದೆ, ಇದು ಈ ಕುರುಗೋಡು ತಾಲ್ಲೂಕು ಮತ್ತು ಸಿರಗುಪ್ಪ ತಾಲ್ಲೂಕುಗಳಲ್ಲಿ ಮುಖ್ಯವಾದಂತಹ ರಸ್ತೆಯಾಗಿದೆ. ಈ ರಸ್ತೆಗಳನ್ನು ಎರಡು ಭಾಗಗಳನ್ನಾಗಿ ಮಾಡಿದ್ದಾರೆ. ಒಂದರಲ್ಲಿ ಸುಮಾರು ಹನ್ನೊಂದು ಕಿಲೋ ಮೀಟರ್ ಮಾಡಿದ್ದಾರೆ. ಇನ್ನೊಂದು ಐದು ಕಿಲೋ ಮೀಟರ್ ಮಾಡಿದ್ದಾರೆ. ಅಂದರೆ ಆ ರಸ್ತೆ ಸುಮಾರು 35 ಕಿಲೋ ಮೀಟರ್ ಉದ್ದವಿದೆ. ಅದು ಹೆಚ್ಚಿನದಾಗಿ ಕೃಷಿ ಮತ್ತು ತೋಟಗಾರಿಕೆ ವ್ಯವಸಾಯದ ಕ್ಷೇತ್ರದಲ್ಲಿ ಇರುವಂತಹದ್ದಾಗಿದೆ. ಇಲ್ಲಿ ವ್ಯವಸಾಯ ಮಾಡಲು ಓಡಾಡುವಂತಹ ರೈತರಿಗೆ ಈ ರಸ್ತೆಯಿಂದ ಬಹಳ ಟ್ರಾಫಿಕ್ ಸಮಸ್ಯೆ ಇದೆ. ತಾವು ದಯವಿಟ್ಟು ಈ ಕುರುಗೋಡಿನಿಂದ ಸಿರಿಗೇರಿಯ ರಸ್ತೆಯ ತನಕ ಸುಮಾರು ಒಂಭತ್ತು ಕಿಲೋ ಮೀಟರ್‌ವರೆಗೂ ಒಂದು patch ಇದೆ. ಆ patch ಕಾಮಗಾರಿಯನ್ನು ಮಾಡಬೇಕು.

(ಮುಂದು...)

(555) 18.03.2020 8.20 ಟಿಸಿಹೆಚ್-ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಸಿ.ಕೊಂಡಯ್ಯ(ಮುಂದು)**

3.5 ಮೀಟರ್ width ಇರುವ ಕಾಮಗಾರಿಗಳನ್ನು ಮಾಡಿದ್ದಾರೆ. ಕೆಲವು ಕಡೆ 5.5 ಮೀಟರ್ width ಇರುವ ಕೆಲವು ಕಾಮಗಾರಿಗಳನ್ನು ಮಾಡಿದ್ದಾರೆ. ಇವನ್ನೆಲ್ಲಾ standardise ಮಾಡಿ, recarpeting 35 ಕಿಲೋ ಮೀಟರ್ ಕಾಮಗಾರಿಯನ್ನು ಕೂಡ priority ಮೇಲೆ ಮುಗಿಸಬೇಕು ಎಂಬುದು ನನ್ನ ಆಗ್ರಹವಾಗಿದೆ.

**ಶ್ರೀ ಗೋವಿಂದ ಎಂ.ಕಾರಜೋಳ:** ಮಾನ್ಯ ಸಭಾಪತಿಯವರೇ, ಮುಂದಿನ ವರ್ಷದ ಹಣಕಾಸಿನಲ್ಲಿ ಹೊಸ ಕ್ರಿಯಾ ಯೋಜನೆ ರೂಪಿಸತಕ್ಕಂಥ ಸಂದರ್ಭದಲ್ಲಿ ಪರಿಶೀಲನೆ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿ ನಡೆಯುತ್ತಿದೆ, ಇಲ್ಲಿ ಮಾಧ್ಯಮದವರು ಕೂಡ ಇಲ್ಲ. ಏನು ಇದರ ಅರ್ಥ?

**ಸಭಾಪತಿಯವರು:–** ನಾವು ಸದನವನ್ನು ಜನರ ಪರವಾಗಿ ಮಾಡುತ್ತಿದ್ದೇವೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನೀವು ಪ್ರಶ್ನೋತ್ತರ ಅವಧಿ ಏನೋ ಮಾಡುತ್ತಿದ್ದೀರಿ.

**ಸಭಾಪತಿಯವರು:–** ಶ್ರೀ ಹೆಚ್.ಎಂ.ರೇವಣ್ಣನವರೇ, ನಾವು ಜನತೆಗೋಸ್ಕರ ಪ್ರಶ್ನೋತ್ತರ ಅವಧಿ ಮಾಡುತ್ತಿರುವುದು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ವಿಷಯ ಜನತೆಗೆ ಗೊತ್ತಾಗಬೇಕಲ್ಲವೇ? ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ, ಆದರೆ ಅದು ಜನರಿಗೆ ಗೊತ್ತಾಗಬೇಕಲ್ಲವೇ?

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ದಯವಿಟ್ಟು ಬೆಳಗ್ಗೆ ಪ್ರಶ್ನೋತ್ತರ ಅವಧಿ ತೆಗೆದುಕೊಳ್ಳಿ.

**ಸಭಾಪತಿಯವರು:–** ಆಯಿತು. ಸಂವಿಧಾನದ ಮೇಲಿನ ವಿಶೇಷ ಚರ್ಚೆ ಮುಗಿದ ನಂತರ ತೆಗೆದುಕೊಳ್ಳಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.1354**
**(ಉತ್ತರ ಲಗತ್ತಿಸಿದೆ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ವಿಷಯ ಮಾನವೀಯತೆ ದೃಷ್ಟಿಯಿಂದ ಇರುತ್ತದೆ. ರಾಜ್ಯದಲ್ಲಿ ಕಂದಾಯ ಇಲಾಖೆಯಡಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರು ಕಳೆದ 38 ವರ್ಷಗಳಿಂದ ಕಡಿಮೆ ವೇತನಕ್ಕೆ ಕೆಲಸ ಮಾಡುತ್ತಿದ್ದಾರೆ ಎಂದು ಪ್ರಶ್ನೆ ಕೇಳಿದ್ದೇನೆ. ಮಾನ್ಯ ಸಚಿವರೇ, ಅವರು ಕಳೆದ 38 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೆ 2011 ರಿಂದ 2018ರವರೆಗೆ 7 ವರ್ಷದಲ್ಲಿ ಎರಡು ಸಾವಿರ ರೂಪಾಯಿಗಳನ್ನು ಮಾತ್ರ ಹೆಚ್ಚಿಗೆ ಮಾಡಿದ್ದೀರಿ. ಅವರು ಕೇವಲ 12000/– ರೂಪಾಯಿಗಳಿಗೆ ಇಷ್ಟೂ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಇಷ್ಟು ಸಂಬಳ ತೆಗೆದುಕೊಂದು ಜೀವನ ನಡೆಸುವುದಾದರು ಹೇಗೆ? ಇದನ್ನು ತಾವೇ ವಿಚಾರ ಮಾಡಬೇಕು. ಆದರೆ 38 ವರ್ಷಗಳಿಂದ ಇಲ್ಲಿಯವರೆಗೆ ಎಷ್ಟು ಗ್ರಾಮ ಸಹಾಯಕರು ಉಳಿದುಕೊಂಡಿದ್ದಾರೆ ಮತ್ತು ಎಷ್ಟು ಜನ ಕೆಲಸ ಮಾಡುತ್ತಿದ್ದಾರೆಂದು ಹೇಳಬೇಕು. ಲೋಕೋಪಯೋಗಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ, ದಿನಗೂಲಿ ನೌಕರರನ್ನು ಖಾಯಂ ಮಾಡಿದ್ದಾರೆ. ನೀವು ಕೋರ್ಟ್ ಆದೇಶವಾಗಿದೆಯೆಂದು ಹೇಳುತ್ತಿದ್ದೀರಿ. ಆ ಇಲಾಖೆಗಳಿಗೆ confirm ಮಾಡಿದಂತೆ ಗ್ರಾಮ ಸಹಾಯಕರನ್ನು ಏಕೆ ಮಾಡಿಲ್ಲ? ಅವರು 38 ವರ್ಷಗಳಿಂದ ಗ್ರಾಮ ಸಹಾಯಕರಾಗಿ ಕೆಲಸ ಮಾಡಿದ್ದಾರೆ, ಪಾಪ, ಅವರನ್ನೂ ಕೂಡ ಮಾನವೀಯತೆ ದೃಷ್ಟಿಯಿಂದ 'ಡಿ' ದರ್ಜೆ ನೌಕರರೆಂದು ಪರಿಗಣಿಸಬೇಕಲ್ಲವೇ? ಇದರ ಬಗ್ಗೆ ಸರ್ಕಾರ ಹೇಳಬೇಕು.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆಯಲ್ಲಿ ಹಾಲಿ 9782 ಗ್ರಾಮ ಸಹಾಯಕರು ಕೆಲಸ ಮಾಡುತ್ತಿದ್ದಾರೆ. ಹಿಂದೆ ಯಾರು ಪಾರಂಪರಿಕವಾಗಿ ತಂದೆಯ ನಂತರ ಅವರ ಮಕ್ಕಳು ಕೆಲಸ ಪಡೆದುಕೊಂಡು ಈ ರೀತಿ continuation ಆಗಿ ಬಂದಿರುತ್ತದೆ. 1961ರಲ್ಲಿ ಗ್ರಾಮ ಸಹಾಯಕರನ್ನು ನೇಮಕಾತಿ ಮಾಡಲಾಗಿದೆ. ಇವರು 38 ವರ್ಷಕ್ಕಿಂತಲೂ ಹಿಂದಿನಿಂದ ಕೆಲಸ ಮಾಡುತ್ತಿದ್ದಾರೆ. ಸರ್ಕಾರ ಪ್ರಸ್ತುತ ಇವರಿಗೆ 12000/–ರೂಪಾಯಿಗಳ ವೇತನವನ್ನು ಕೊಡುತ್ತಿದೆ. ಬಹಳ ಪ್ರಮುಖವಾಗಿ ಗೌರವಾನ್ವಿತ ಸುಪ್ರೀಂ ಕೋರ್ಟ್‌ನವರೆಗೆ ಈ ಕೇಸ್ ದಾಖಲಾಗಿತ್ತು. ಆದರೆ ಈ ಕೇಸ್‌ನಲ್ಲಿ ಗೌರವಾನ್ವಿತ ಸುಪ್ರೀಂ ಕೋರ್ಟ್ ಗ್ರಾಮ ಸಹಾಯಕರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಕ್ಲಿಯರ್ ಆಗಿ ಹೇಳಿದೆ. ಕೆಟಗರಿ ಅನ್ವಯ ಇರದೇ, ಎಸ್.ಸಿ., ಎಸ್.ಟಿ., ಈ ರೀತಿ ಬೇರೆ ಸಮಸ್ಯೆಗಳು ಇರುವುದರಿಂದ, ಸರ್ಕಾರ ಇವರನ್ನು 'ಡಿ' ಗ್ರೂಪ್ ನೌಕರರೆಂದು ಪರಿಗಣಿಸಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಧ್ಯವಿಲ್ಲವೆಂದು ತೀರ್ಪು ಕೊಟ್ಟಿದೆ. ಗೌರವಾನ್ವಿತ ಸುಪ್ರೀಂ ಕೋರ್ಟ್ ಆ ರೀತಿ ತೀರ್ಪು ನೀಡಿದ ಮೇಲೆ ನಾವು ಅದನ್ನು ಮರುಪರಿಶೀಲನೆ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಆದರೆ, ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಈ ವಿಷಯನ್ನು ನಮ್ಮ ಗಮನಕ್ಕೆ ತಂದಿರುವುದರಿಂದ, ಗ್ರಾಮ ಸಹಾಯಕರಿಗೆ ವೇತನ ಸೇರಿದಂತೆ ಬೇಕಾದರೆ ಅವರಿಗೆ ಇನ್ನೂ ಬೇರೆ ಏನು ಸೌಲಭ್ಯಗಳನ್ನು ಕೊಡಬಹುದು, ಅದರ ಬಗ್ಗೆ ಯೋಚನೆ ಮಾಡುತ್ತೇವೆ. ಮಾನವೀಯತೆ ದೃಷ್ಟಿಯಿಂದ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ,ಲೋಕೋಪಯೋಗಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಅದೇ ರೀತಿ ಕೆಲಸ ನಿರ್ವಹಿಸತಕ್ಕಂಥವರನ್ನು confirm ಮಾಡಿದ್ದರು. ಗ್ರಾಮ ಸಹಾಯಕರ ಕೇಸ್‌ನಲ್ಲಿ ಗೌರವಾನ್ವಿತ ಸುಪ್ರೀಂಕೋರ್ಟ್‌ಗೆ ಸೂಕ್ತವಾದಂತಹ ಮಾಹಿತಿಯನ್ನು ಸಲ್ಲಿಸಿದ್ದಾರೋ, ಇಲ್ಲವೋ ಗೊತ್ತಿಲ್ಲ. ಮಾನ್ಯ ಸಚಿವರೇ, ನೀವು ಅವರಿಗೆ ಬೇರೆ ಏನಾದರು ಸೌಲಭ್ಯಗಳನ್ನು ಕೊಡಿ. ಏಕೆಂದರೆ, ಅವರು ಬರೀ 12,000/- ವೇತನ ಪಡೆದುಕೊಂಡು ಜೀವನ ನಡೆಸುವುದು ಕಷ್ಟವಾಗುತ್ತದೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಕೋರ್ಟ್‌ಗೆ ಹೋಗಿಲ್ಲ, ಗ್ರಾಮ ಸಹಾಯಕರೇ, ನಮ್ಮನ್ನು 'ಡಿ' ಗ್ರೂಪ್ ನೌಕರರೆಂದು ಪರಿಗಣಿಸಬೇಕೆಂದು ಕೋರ್ಟ್‌ಗೆ ಹೋಗಿದ್ದರು. ಅವರೇ ಕೋರ್ಟ್‌ಗೆ ಹೋಗಿದ್ದು, ಅಲ್ಲಿ failure ಆಗಿದ್ದಾರೆ. ಹಾಗಾಗಿ, ನಾವು ಏನೂ ಮಾಡದಂತಹ ಸ್ಥಿತಿಯಲ್ಲಿದ್ದೇವೆ. ಆದ್ದರಿಂದ ದಯವಿಟ್ಟು ಅವರಿಗೆ ಬೇರೆ ಏನು ಸೌಲಭ್ಯಗಳನ್ನು ಕೊಡಬಹುದು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.1412**
**(ಉತ್ತರ ಲಗತ್ತಿಸಿದೆ)**

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಎಷ್ಟು ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ಖಾಲಿ ಇವೆ, ಅವುಗಳನ್ನು ಯಾವಾಗ ಭರ್ತಿ ಮಾಡುತ್ತೀರಿ? ಅವುಗಳು ಖಾಲಿ ಇರಲು ಕಾರಣಗಳೇನು? ಆ ಹುದ್ದೆಗಳನ್ನು ತುಂಬಲು ಕೆ.ಪಿ.ಎಸ್.ಸಿ., ಗೆ ಪ್ರಸ್ತಾವನೆಯನ್ನು ಯಾವಾಗ ಸಲ್ಲಿಸಿದ್ದೀರಿ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರನ್ನು ಕೊಟ್ಟಿದ್ದಾರೆ. ಆದರೆ, ಸಂಪೂರ್ಣವಾದ ಉತ್ತರ ಕೊಟ್ಟಿಲ್ಲ ಎನ್ನತಕ್ಕಂಥ ಭಾವನೆಯನ್ನು ನಾನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ. ಯಾದಗಿರಿ ಜಿಲ್ಲೆಯಲ್ಲಿ 2 ಹುದ್ದೆಗಳು 5 ವರ್ಷಗಳಿಂದ ಖಾಲಿ ಇದೆ ಹಾಗೂ 1 ಹುದ್ದೆ 3 ವರ್ಷಗಳಿಂದ ಖಾಲಿ ಇದೆಯೆಂದು ಹೇಳಿದ್ದಾರೆ. ಕಲಬುರಗಿಯಲ್ಲಿ 63 ಪ್ರಥಮ ದರ್ಜೆ ಸಹಾಯಕ ಹುದ್ದೆಗಳು 1 ವರ್ಷದಿಂದ ಖಾಲಿ ಇವೆಯೆಂದು ಹೇಳಿದ್ದಾರೆ. ಅದೇ ರೀತಿ ಬಳ್ಳಾರಿಯಲ್ಲಿ 08 ಪ್ರಥಮ ದರ್ಜೆ ಸಹಾಯಕ ಹುದ್ದೆಗಳು 4 ತಿಂಗಳಿಂದ ಖಾಲಿ ಇವೆ, ಬೀದರ್‌ನಲ್ಲಿ 16 ಪ್ರ.ದ.ಸ ಹುದ್ದೆಗಳು 6 ತಿಂಗಳಿನಿಂದ ಖಾಲಿ ಇವೆ, ರಾಯಚೂರಿನಲ್ಲಿ 12 ಪ್ರ.ದ.ಸ ಹುದ್ದೆಗಳು 2015ರಿಂದ ಖಾಲಿ ಇವೆ ಹಾಗೂ ಕೊಪ್ಪಳದಲ್ಲಿ 17 ಪ್ರ.ದ.ಸ ಹುದ್ದೆಗಳು ಆರು ತಿಂಗಳಿನಿಂದ ಖಾಲಿ ಇವೆಯೆಂದು ಹೇಳಿದ್ದಾರೆ. ಈ ರೀತಿ ಪ್ರ.ದ.ಸ ಹುದ್ದೆಗಳು ಖಾಲಿಯಿದ್ದಾಗ, 2016ರಲ್ಲಿ ಸದರಿ ಹುದ್ದೆಗಳ ನೇಮಕಾತಿಗಾಗಿ ಕೆ.ಪಿ.ಎಸ್.ಸಿ., ಗೆ ಪ್ರಸ್ತಾವನೆ ಸಲ್ಲಿಸಲಾಗಿದೆಯೆಂದು ಹೇಳಿದ್ದೀರಿ. ಹಾಗಾಗಿ, ಮಾನ್ಯ ಸಚಿವರು ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಬಗ್ಗೆ ಏಕೆ ಚಿಂತನೆ ಮಾಡಿಲ್ಲ. 2016ರಿಂದ ಇಲ್ಲಿಯವರೆಗೂ ಆ ಹುದ್ದೆಗಳು ನೇಮಕಾತಿ ಆಗುತ್ತಿಲ್ಲ. ಈಗಾಗಲೇ ಸುಮಾರು 4 ವರ್ಷಗಳು ಕಳೆದಿದ್ದೆ. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕು. ತಾವೇ ವಿಚಾರ ಮಾಡಿ, 4 ವರ್ಷಗಳಿಂದ ಹುದ್ದೆಗಳು ಖಾಲಿ ಇವೆ. 03, 63, 08, 16, 12, 17 ಪ್ರ.ದ.ಸ ಹುದ್ದೆಗಳು ಖಾಲಿ ಇದ್ದರೆ, ಕಲಬುರ್ಗಿ ಭಾಗದಲ್ಲಿ ಹೇಗೆ ಕಂದಾಯ ಇಲಾಖೆಯ ಕಾರ್ಯಾಲಯಗಳನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ? ಮಾನ್ಯ ಸಚಿವರು ಸರಿಯಾದ ರೀತಿಯಲ್ಲಿ ಉತ್ತರಗಳನ್ನು ಒದಗಿಸಬೇಕು ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ಹೇಳಬಯಸುತ್ತೇನೆ. ಅದೇ ರೀತಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ, ಕೆಪಿಎಸ್‌ಸಿಯಿಂದ ಖಾಲಿ ಹುದ್ದೆಗಳಿಗೆ ಆಯ್ಕೆಪಟ್ಟಿ ಸ್ವೀಕೃತವಾದ ಕೂಡಲೇ ಶೈಕ್ಷಣಿಕ ಮತ್ತು ಮೀಸಲಾತಿ ಪ್ರಮಾಣ ಪತ್ರಗಳ ನೈಜತೆಯನ್ನು ಪರಿಶೀಲಿಸಿ ನೇಮಕಾತಿ ಆದೇಶ ಹೊರಡಿಸಲಾಗುವುದು ಎಂದು ಹೇಳಿದ್ದೀರಿ. ಆದರೆ, ತಾವು ಬರೀ ಪ್ರಸ್ತಾವನೆಯನ್ನು ಸಲ್ಲಿಸಿದ್ದೀರಿ. ಈ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿ ಇರುವಾಗ, ಪರಿಶೀಲಿಸಿ ನೇಮಕಾತಿ ಆದೇಶ ಹೊರಡಿಸಲಾಗುವುದು ಎಂದು ಹೇಳುವ ಪ್ರಶ್ನೆಯೇ ಬರುವುದಿಲ್ಲ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ನಾನು ಬಯಸುತ್ತಿದ್ದೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕಲ್ಯಾಣ ಕರ್ನಾಟಕದಲ್ಲಿ ಪ್ರಥಮ ದರ್ಜೆ ಸಹಾಯಕರ ನೇಮಕಾತಿ ಬಗ್ಗೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಈಗಾಗಲೇ ನಾವು ಆರು ಜಿಲ್ಲೆಗಳಲ್ಲಿ ಸುಮಾರು ಒಟ್ಟು 119 ಪ್ರ.ದ.ಸ ಹುದ್ದೆಗಳು ಖಾಲಿ ಇವೆ. ಹಾಗಾಗಿ, ನಾವು 2016ರಲ್ಲಿ ಕೆ.ಪಿ.ಎಸ್.ಸಿ.,ಗೆ ಸದರಿ ಹುದ್ದೆಗಳನ್ನು ನೇಮಕಾತಿ ಮಾಡಿಕೊಡುವಂತೆ ಮನವಿಯನ್ನು ಕೂಡ ಕೊಟ್ಟಿದ್ದೇವೆ. ಆದರೆ, ಯಾವುದೇ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ಆ ವಿಷಯ ತಮಗೂ ಕೂಡ ಗೊತ್ತಿದೆ, ಸರ್ಕಾರದ ಆದೇಶದ ಪ್ರಕಾರ ನಾವು ಕೆ.ಪಿ.ಎಸ್.ಸಿ., ಮುಖಾಂತರವೇ ನೇಮಕಾತಿ ಮಾಡಬೇಕಾಗಿರುವುದರಿಂದ, ಕೆ.ಪಿ.ಎಸ್.ಸಿ., ಯವರು ಯಾವ ರೀತಿ ನೇಮಕಾತಿ ಮಾಡುತ್ತಾರೆಂದು ತಮಗೂ ಕೂಡ ಗೊತ್ತಿದೆ. ಆದರೂ ಕೂಡ ನೇಮಕಾತಿ ಮಾಡಿಕೊಳ್ಳುವುದು ಬಹಳ ವಿಳಂಬವಾಗುತ್ತಿದೆ. ನಾವು ಆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸುಮಾರು 4-5 ವರ್ಷಗಳ ಕಾಲ ಕಾಯಬೇಕಾಗಿದೆ. ಅಷ್ಟುಹೊತ್ತಿಗೆ ಇನ್ನಷ್ಟು ಹುದ್ದೆಗಳು ಖಾಲಿಯಾಗಿಬಿಡುತ್ತವೆ. ಪ್ರಸ್ತುತ 119 ಪ್ರ.ದ.ಸ ಹುದ್ದೆಗಳು ಖಾಲಿಯಿವೆ. ನಾವು 5 ವರ್ಷಗಳ ನಂತರ ನೇಮಕಾತಿ ಮಾಡಿಕೊಂಡರೆ, ಅದು 300-400 ಪ್ರ.ದ.ಸ ಹುದ್ದೆಗಳು ಖಾಲಿಯಾಗಿಬಿಡುತ್ತವೆ. ಆ ದೃಷ್ಟಿಯಿಂದ ನಾವು ಡಿ.ಪಿ.ಎ.ಆರ್., ಜೊತೆ ಚರ್ಚೆ ಮಾಡಲಾಗುವುದು. ಗ್ರಾಮಲೆಕ್ಕಿಗರ ಹುದ್ದೆಗಳು ಕೂಡ ಅದೇ ರೀತಿ ಇತ್ತು. ಆ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಆಯಾ ಜಿಲ್ಲಾಧಿಕಾರಿಗಳಿಗೇ ಅನುಮತಿ ಕೊಟ್ಟಿದ್ದೇವೆ. ಬೇರೆ ಯಾವುದಕ್ಕೂ ಅಲ್ಲಿ ಅವಕಾಶ ಇಲ್ಲ. ಪಿ.ಯು.ಸಿ., ಯಲ್ಲಿ ಏನು ಅಂಕಗಳನ್ನು ಪಡೆದುಕೊಂಡಿದ್ದಾರೆ ಅದರ ಆಧಾರ ಮೇಲೆ ನೇಮಕಾತಿ ಮಾಡಿಕೊಳ್ಳುತ್ತಿದ್ದಾರೆ. ಅದರಲ್ಲಿ ಮೆರಿಟ್ ಅಷ್ಟೇ. ಅದರಲ್ಲಿ ಯಾರು ಕೂಡ entry ಆಗುವುದಕ್ಕೆ ಸಾಧ್ಯವಾಗುವುದಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಗ್ರಾಮಲೆಕ್ಕಿಗರ ಹುದ್ದೆಗಳನ್ನು merit-cum-reservation ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುತ್ತಿದ್ದಾರೆ ಎಂದು ಮಾನ್ಯ ಸಚಿವರು ಅಷ್ಟಕ್ಕೆ ಹೇಳಿ ನಿಲ್ಲಿಸಿದರು ಅದಕ್ಕೆ ಹೇಳಿದೆನು.

**ಶ್ರೀ ಆರ್.ಅಶೋಕ್:-** ಮಾನ್ಯ ಹೆಚ್.ಎಂ.ರೇವಣ್ಣನವರೇ, ಮೊದಲು case ಆಯಿತಲ್ಲಾ, ಆ ರೀತಿ ಏನೂ ಆಗುವುದಿಲ್ಲ. ಕಾನೂನು ಪ್ರಕಾರವೇ ನೇಮಕಾತಿ ನಡೆಸುತ್ತಿದ್ದೇವೆ. ಕಾನೂನಿನಲ್ಲಿ ನೇಮಕಾತಿ ಮಾಡಲು ಏನೇನು ಅವಕಾಶ ಇದೆಯೊ, ಅದರ ಪ್ರಕಾರವೇ ಮಾಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ನಮಗೆ ಸಿಗಬೇಕಾದಂತಹ ಮೀಸಲಾತಿ ಸೌಲಭ್ಯ ಸಿಗಬೇಕು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಎಸ್.ಸಿ., ಎಸ್.ಟಿ., Backward Classes, O.B.C., ಈ ಎಲ್ಲಾ ಮೀಸಲಾತಿ ಕೊಟ್ಟುಕೊಂಡು ನೇಮಕಾತಿ ಮಾಡಲಾಗುತ್ತಿದೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, Ok.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಕಾನೂನು ಪ್ರಕಾರ ಏನೇನು ಮೀಸಲಾತಿ ಕೊಡಬೇಕಾಗಿದೆಯೊ ಅದರಲ್ಲಿ ಒಂದು ಸಣ್ಣ ತಪ್ಪು ಆಗದಂತೆ ಮಾಡಲಾಗುವುದು. ಏಕೆಂದರೆ, ತಮಗೂ ಕೂಡ ಗೊತ್ತಿದೆ. ನೇಮಕಾತಿ ಆಗಬೇಕಾದರೆ influence, ದುಡ್ಡು, ಎಲ್ಲಾ ನಡೆಯುತ್ತಿರುತ್ತದೆ. ಆದರೆ, ಇಲ್ಲಿ ಮಾತ್ರ ಆ ಪ್ರಶ್ನೆಯೇ ಬರುವುದಿಲ್ಲ. ಒಬ್ಬರು ನನ್ನ ಹತ್ತಿರ ಕೂಡ ಬಂದು, ಸರ್, ನಾನು ಗ್ರಾಮಲೆಕ್ಕಿಗರ ಹುದ್ದೆಗೆ ಅರ್ಜಿ ಸಲ್ಲಿಸಿದ್ದೇನೆ. ನೀವು ಜಿಲ್ಲಾಧಿಕಾರಿಯವರಿಗೆ ಹೇಳಿ ಎಂದು ಹೇಳಿದರು. ನಾನು ಎಲ್ಲಾ ಜಿಲ್ಲಾಧಿಕಾರಿಗಳಿಗೂ phone ಮಾಡಿ ವಿಚಾರಿಸಿದೆನು. ಅದಕ್ಕೆ ಅವರು ಏನು ಹೇಳಿದರೆಂದರೆ ಸರ್, ಈ ಹುದ್ದೆಗೆ ಅಭ್ಯರ್ಥಿಗಳು ಪಿ.ಯು.ಸಿ., ಯಲ್ಲಿ ಗಳಿಸಿರುವ ಅಂಕಗಳ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ ಎಂದು ಹೇಳಿದರು. ನಾವು ಪೇಪರ್‌ನಲ್ಲಿ ಪತ್ರಿಕಾ ಪ್ರಕಟಣೆ ನೀಡಿ ಅಧಿಸೂಚನೆ ಹೊರಡಿಸಿರುತ್ತೇವೆ. 0.5 ಮಾರ್ಕ್ಸ್ ಏನಾದರೂ ವ್ಯತ್ಯಾಸವಾದರೂ ನಮ್ಮ ಕತೆ ಮುಗಿದು ಹೋಗುತ್ತದೆ ಎಂದು ಹೇಳಿದರು. ಹಾಗಾಗಿ, ನಾವು ಏನೂ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಈ ಹುದ್ದೆಗಳ ನೇಮಕಾತಿಯು ತುಂಬಾ ಪಾರದರ್ಶಕವಾಗಿ ನಡೆಯುತ್ತದೆ.

**(ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.1296 ಕ್ಕೆ ಸಂಬಂಧಪಟ್ಟಂತೆ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರು ಈ ಸಂದರ್ಭದಲ್ಲಿ ಗೈರುಹಾಜರಾಗಿದ್ದರು)**

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ತಾವು ಹೇಳುತ್ತಿರುವಂತೆ, ರೋಸ್ಟರ್ ಪ್ರಶ್ನೆ ಅಲ್ಲ. ಇದರಲ್ಲಿ ಇರುವಂಥದ್ದು ತಮ್ಮ ಇಲಾಖೆಯಿಂದಲೇ ಏಕೆ ಇದನ್ನು roster-cum-merit ಮೇಲೆ ನೇಮಕಾತಿ ಮಾಡಿಕೊಂಡು ಹೋಗಬಹುದು, ಇದು ನನ್ನ ಸಲಹೆ. ಕೆ.ಪಿ.ಎಸ್.ಸಿ., 5-6 ವರ್ಷಗಳ ನಂತರ ನೇಮಕಾತಿ ಮಾಡಿದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್:-** ನಾವು ಡಿ.ಪಿ.ಎ.ಆರ್., ಜೊತೆ ಮಾತನಾಡಿ, ಅದಕ್ಕೆ ತಿದ್ದುಪಡಿಯನ್ನು ತಂದು ನಮ್ಮ ಜಿಲ್ಲಾಧಿಕಾರಿಗಳೇ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇದೆಯೋ ಅಲ್ಲಿ on merit ಹಾಗೂ ಹಾಲಿ ಇರುವ ಸರ್ಕಾರದ ನಿಯಮಾವಳಿಗಳು ಯಾವ ರೀತಿ ಇವೆಯೋ ಅದೇ ರೀತಿ ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.1360+1367+1368+1326**
**(ಉತ್ತರ ಲಗತ್ತಿಸಿದೆ)**

**ಡಾ॥ ಚಂದ್ರಶೇಖರ್ ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಆ ಉತ್ತರ ಕೊಟ್ಟಿರುವುದು ಸರಿಯಾಗಿಲ್ಲ. ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ಅಂತಿಮವಾಗಿರುವುದಿಲ್ಲವೆಂದು ತಿಳಿಸಿದ್ದಾರೆ.

(ಮುಂದು...)

(556)18.3.2020/8.30/ಎಂ.ಎಂ-ಎಂ.ಡಿ

(ಸಭಾಪತಿಯವರ ಉಪಸ್ಥಿತಿ)

**ಡಾ॥ ಚಂದ್ರಶೇಖರ್ ಬಿ.ಪಾಟೀಲ್ (ಮುಂದು):-**

ಪ್ರಕ್ರಿಯೆ ಅಂತಿಮವಾಗದ ಜಮೀನು ಕಬ್ಜದಲ್ಲಿ ಮಾಡಿರುವುದು ಕಾನೂನುಬಾಹಿರವಾಗಿದೆ. ರೈತನು ಹಿಂದೆ 24 ಗುಂಟೆ ಭೂಮಿಯನ್ನು ನೀಡಿದ್ದಾನೆ. ಬಡ ರೈತನ 36 ಗುಂಟೆ ಜಮೀನನ್ನು ವಶಪಡಿಸಿ ಕೊಂಡಿರುವುದು ಅವನಿಗೆ ಮಾಡಿದ ಅನ್ಯಾಯ ಈ ಜಮೀನನ್ನು ಬಡ ರೈತನಿಗೆ ವಾಪಸ್ ಕೊಡಬೇಕೆಂದು ನನ್ನ ವಿನಂತಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, 24 ಗುಂಟೆ ಜಮೀನನ್ನು 1966ರಲ್ಲಿ ಈ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲರು ಲೋಕೋಪಯೋಗಿ ಸಚಿವರಾಗಿದ್ದಾಗ ಸ್ವಾಧೀನ ಪಡಿಸಿಕೊಂಡು ಪಿ.ಡಬ್ಲ್ಯು.ಡಿ ಪ್ರವಾಸಿ ಮಂದಿರವನ್ನು ಕಟ್ಟಿದ್ದಾರೆ. ಅದಾದ ನಂತರ 1993 -94ರಲ್ಲಿ 36 ಗುಂಟೆ ರೈತನ ಜಮೀನು ಏನಿತ್ತು ಅದನ್ನು ಕೂಡ ಕಾಂಪೌಂಡ್ ಹಾಕಿ ಅಲ್ಲಿಯೂ ಒಂದು ಪ್ರವಾಸಿ ಮಂದಿರ ಸೇರಿದಂತೆ ಎರಡು ಕಟ್ಟಡಗಳನ್ನು ಕಟ್ಟಿದ್ದಾರೆ, ಅದನ್ನು 36 ಗುಂಟೆಯಲ್ಲಿ ಅದಕ್ಕೆ ಹೊಂದಿಕೊಂಡ ಜಮೀನಿನಲ್ಲಿಯೇ ಕಟ್ಟಲಾಗಿದೆ, ಪ್ರತ್ಯೇಕ ಜಮೀನು ಅಲ್ಲ. ಈಗಾಗಲೇ ಅಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕಟ್ಟಡಗಳನ್ನು ಕಟ್ಟಿದ್ದರಿಂದ ನಾವು ಬೀದರ್ ಜಿಲ್ಲೆಯ ಉಪವಿಭಾಗಾಧಿಕಾರಿಗಳಿಗೆ ಭೂಸ್ವಾಧೀನ ಮಾಡಿಕೊಡಬೇಕೆಂದು ವಿನಂತಿ ಮಾಡಿದ್ದೇವೆ, ಪತ್ರವನ್ನು ಕೂಡ ಬರೆದಿದ್ದೇವೆ. ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿದೆ, ಅದಕ್ಕಾಗಿ ಅದನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ ಮತ್ತು ಅವರು ಅದನ್ನು ದಾನವಾಗಿ ಕೊಟ್ಟಿಲ್ಲ. 1970ರಲ್ಲಿ ಭೂಸ್ವಾಧೀನದ ದರವನ್ನು 24 ಗುಂಟೆಗೆ ಕೊಡಲಾಗಿದೆ. ಇದು 36 ಗುಂಟೆ, ಸರ್ಕಾರದಿಂದ ಜಿಲ್ಲಾಧಿಕಾರಿಯವರು ನಿಗದಿ ಮಾಡಿದಂತಹ ದರವನ್ನು ಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಉಪಮುಖ್ಯಮಂತ್ರಿಯವರೇ, ತಾವು ಕೊಟ್ಟಿರುವ ಬರವಣಿಗೆಯ ಉತ್ತರಕ್ಕೂ ತಮ್ಮ ಹೇಳಿಕೆಗೂ ಹೊಂದಾಣಿಕೆಯಾಗುತ್ತಿಲ್ಲವೆಂದು ಹೇಳಬಯಸುತ್ತೇನೆ. 1994ರಲ್ಲಿ ತಾವು ಪಕ್ಕದಲ್ಲಿ ಪ್ರವಾಸಿ ಮಂದಿರ ಕಟ್ಟಿದ್ದೇವೆ ಎಂದು ಹೇಳುತ್ತೀರಿ, ಯಾರ ಜಮೀನೆಂದು ಪ್ರವಾಸಿ ಮಂದಿರ ಕಟ್ಟುವುದಕ್ಕೆ ತಮಗೆ ಅಧಿಕಾರ ಇದೆ? ತಾವು as per section 4 and 6, land acquisition proceedings ಮಾಡದೇ 1979ರಲ್ಲಿ ಸರ್ವೆ ನಂ. 162ರಲ್ಲಿ ನೀವು 24 ಗುಂಟೆ ಜಮೀನನ್ನು ತೆಗೆದುಕೊಂಡು 1380 ರೂಪಾಯಿ ಪರಿಹಾರವನ್ನು ನೀಡಿ ಪ್ರವಾಸಿ ಮಂದಿರವನ್ನು ಕಟ್ಟಿದ ನಂತರ ಯಾವುದೇ land acquisition proceedings ಇಲ್ಲದೇ how did you get the rights to encroach the property of others? Where is that proceedings, where you have mentioned it in the statement before this House now.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಶರಣಪ್ಪ ಮಟ್ಟೂರು:–** ಒಂದು ನಿಮಿಷ, ಮಾನ್ಯ ಉಪಮುಖ್ಯಮಂತ್ರಿಯವರೇ, ದಯಮಾಡಿ ತಾವು ಕುಳಿತುಕೊಳ್ಳಬೇಕು. ದಿನಾಂಕ 21–8–2000ರಲ್ಲಿ ಇದೇ ಸರ್ವೆ ನಂಬರಿನಲ್ಲಿ ತಾವು ಪ್ರಸ್ತಾವನೆಯನ್ನು ಕಳುಹಿಸಿ ಅಸಿಂಧುವಾಗಿರುತ್ತದೆ, ದಿನಾಂಕ 10–1–2008ರಲ್ಲಿ ಇದೇ ರೀತಿ proceedings ಮಾಡಿ 36 ಗುಂಟೆಗೆ ಅಸಿಂಧು ಮಾಡಿರುತ್ತೀರಿ. Deputy Commissioner of Bidar district and Tahsildars have visited and made a spot inspection. ಅದು ಕೂಡ ವಿಫಲವಾಗಿದೆ. ಇಷ್ಟಾದರೂ ಕೂಡ ತಾವು 1994ರಲ್ಲಿ ಕಾಂಪೌಂಡನ್ನು ನಿರ್ಮಿಸಿದ್ದೀರಿ ಯಾವ ದಾಖಲೆಗಳನ್ನೂ ತಾವು ಒದಗಿಸಿಲ್ಲ, ತಾವು ಯಾವ ರೀತಿ ಹೇಳಿಕೆಗಳನ್ನು ಕೊಡುತ್ತೀರಿ? ನಾಲ್ಕನೆಯದಾಗಿ ಸರ್ಕಾರವು ಈ ರೀತಿ ಬಡವರ ಜಮೀನನ್ನು ಅಲ್ಲಿ 02 ಎಕರೆ ಜಮೀನನ್ನು court building ಕಟ್ಟುವುದಕ್ಕೆ ಉಚಿತವಾಗಿ ದಾನ ಮಾಡಿದ್ದಾರೆ. ನಿಮಗೆ 1380 ರೂಪಾಯಿಗೆ 24 ಗುಂಟೆ ಜಮೀನನ್ನು ಕೊಟ್ಟಿದ್ದಾರೆ, ಅದನ್ನು ಬಿಟ್ಟು 36 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಸ್ಥಳ ತನಿಖೆ ಮಾಡಿದರೆ ಒಂದು ಎಕರೆ ಜಮೀನನ್ನು ತೆಗೆದುಕೊಂಡಿದ್ದೀರಿ. ಆದ್ದರಿಂದ ನೀವು ನಮಗೆ ಪರಿಹಾರವನ್ನೂ ಕೊಡಬೇಕಾಗುತ್ತದೆ, ಭೂಮಿಯನ್ನೂ ಬಿಟ್ಟುಕೊಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, 1986ರಲ್ಲಿಯೇ ಕಾಂಪೌಂಡನ್ನು ಕಟ್ಟಿದ್ದೇವೆ. 2000 ಇಸವಿಯಲ್ಲಿ 1,30,000 ರೂಪಾಯಿಗಳನ್ನು ಕಟ್ಟಬೇಕೆಂದು ಅವಾಜ್ಞೆಯಾಗಿತ್ತು, ಅದಾದ ನಂತರ 2008ರಲ್ಲಿ 03 ಲಕ್ಷದ 10 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಆಗಿತ್ತು. ಆದರೆ ಅದಾವುದೂ ಪ್ರಕ್ರಿಯೆ ಮುಂದುವರಿಯದೇ ಇರುವುದರಿಂದ ಮತ್ತೆ ಈಗ ನಾವು ಆ ಪ್ರಕ್ರಿಯೆಯನ್ನು ಮುಂದುವರೆಸಿದ್ದೇವೆ, ಭೂಸ್ವಾಧೀನ ಪಡಿಸಿಕೊಳ್ಳುತ್ತೇವೆ;

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೇ, ಅದರ ಪ್ರೊಸೀಡಿಂಗ್ಸ್ ಎಲ್ಲಿದೆ? ಉತ್ತರದಲ್ಲಿ ಅದು ಇಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಶರಣಪ್ಪ ಮಟ್ಟೂರವರೇ, ಒಂದು ನಿಮಿಷ ಕುಳಿತುಕೊಳ್ಳಿ. ತಾವು ಕೂಡ ಅದರಲ್ಲಿ ಇದ್ದೀರಿ. ಅವರು ಯಾವ ಕಾನೂನಿನ ಕೆಳಗಡೆ ಬರುತ್ತದೆ ಎಂದು ಕೇಳುತ್ತಾರೆ, ಕಾನೂನು ಕೇಳಿದರೆ ಅದು adverse possession ದಲ್ಲಿ ನಾವು ಬರುತ್ತೇವೆ, ಆ ಜಮೀನು ನಮಗೇ ಬರುತ್ತದೆ. ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. 1986ರಿಂದಲೂ ಇದು ನಡೆಯುತ್ತಿದೆ. ಆ ಜಮೀನನ್ನು ಬಿಟ್ಟುಕೊಡುವುದಕ್ಕಾಗುವುದಿಲ್ಲ.

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೇ, adverse possession ನಲ್ಲಿ ಇದ್ದೇವೆ ಎಂದು ಒಂದಾದರೂ ಹೇಳಿಕೆಯನ್ನು ಮಾನ್ಯ ಸಚಿವರು ನೀಡಲಿಲ್ಲ. ಇದರಲ್ಲಿ ಯಾವ ಉತ್ತರವೂ ಇಲ್ಲ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮಟ್ಟೂರುರವರ ...

**ಶ್ರೀ ಶರಣಪ್ಪ ಮಟ್ಟೂರು:–** ಸರ್ಕಾರ ಈ ರೀತಿ ದೌರ್ಜನ್ಯ ಮಾಡಿ ಬಡವರ ಜಮೀನನ್ನು ಅತಿಕ್ರಮಣ ಮಾಡಿಕೊಂಡು ತಾವು easement right claim ಮಾಡುವುದಕ್ಕೆ ಕಾನೂನಿನಲ್ಲಿ ಎಲ್ಲಿ ಅವಕಾಶವಿದೆ ಎಂಬುದನ್ನು ಹೇಳಲಿ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮಟ್ಟೂರವರ ಅಭಿಪ್ರಾಯವನ್ನು ನಾನು ಸಮ್ಮತಿ ಮಾಡುತ್ತಾ ಸಚಿವರೇನು ಹೇಳಿದರು, ಸಚಿವರ ಗಮನಕ್ಕೆ ಇಲ್ಲದೇ ಇರುವಂತಹ ಒಂದು ಮಾತನ್ನು ಹೇಳುತ್ತೇನೆ. ಸುಪ್ರೀಂ ಕೋರ್ಟ್ ಒಂದು ತಿಂಗಳ ಹಿಂದೆ ಒಂದು ಆದೇಶ ಕೊಟ್ಟಿದೆ, "you cannot acquire any piece of land of a private property, without

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

acquiring in full, initiate ಆದರೂ ಸಹ ಅಂತಿಮವಾಗಿ ಪರಿಹಾರ ನೀಡುವವರೆಗೂ ಅವರ ಭೂಮಿಯನ್ನು ಮುಟ್ಟುವ ಹಾಗಿಲ್ಲ ಎಂದು ಒಂದು ಆದೇಶವಾಗಿದೆ, ಆ ಆದೇಶಕ್ಕೆ ವಿರುದ್ಧವಾಗಿ ಸದನದಲ್ಲಿ ನಿಮ್ಮ ಹೇಳಿಕೆ ದಾಖಲಾಗಿದೆ. It is really a contempt of court.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಇದೆಲ್ಲಾ ಪ್ರಕ್ರಿಯೆ ನಡೆದಿರುವುದು 1976ರಲ್ಲಿ.

**Sri P.R.RAMESH:-** No, that is overruled.

**ಶ್ರೀ ಗೋವಿಂದ ಎಂ. ಕಾರಜೋಳ:–** ಇವತ್ತು ಇರುವ Land Acquisition Act ಅವತ್ತು ಇರಲಿಲ್ಲ. 2013ರಿಂದ ಹೊಸ Land Acquisition Act ಬಂದಿದೆ. ಅದಾದ ನಂತರ ಯಾವುದೇ ಪ್ರಕ್ರಿಯೆಯನ್ನು ನಾವು ಮಾಡಿಲ್ಲ, ಮೊದಲೇ ಆದುದನ್ನು. . . (ಗೊಂದಲ) ಸರ್ಕಾರದ ಆಸ್ತಿ ಅಲ್ಲಿದೆ.

**Sri P.R.RAMESH:-** All Acts shall be covered under the Supreme Court order.

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಚಿವರೇ, . . . .

**Sri P.R.RAMESH:-** 1894 Land Acquisition Act and present Land Acquisition Act ಎಲ್ಲವೂ ಪರಾಮರ್ಶಿಸಿ ಕೊಟ್ಟಂತಹ ಒಂದು ಆದೇಶವಾಗಿದೆ, ದಯವಿಟ್ಟು ಅದನ್ನು ತಾವು ನೋಡಬೇಕಾಗುತ್ತದೆ, ಅದನ್ನು ನೋಡದೇ ಹೇಳಿಕೆ ನೀಡುತ್ತಿರುವುದು ಬಹಳ ದೊಡ್ಡ ತಪ್ಪಾಗುತ್ತದೆ. It is misleading the House.

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಚಿವರೇ, ದಯಮಾಡಿ ತಮ್ಮ ಹೇಳಿಕೆಯಲ್ಲಿ ಅದು ಇಲ್ಲ. ಯಾವ ಆಧಾರದ ಮೇಲೆ ತಾವು ಹೇಳುತ್ತಿದ್ದೀರಿ ಅದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಹೇಳಿಕೆಯಲ್ಲಿ ಹೇಳುವ ಪ್ರಶ್ನೆ ಬಂದಿಲ್ಲ. ಅವರು ಎಷ್ಟಕ್ಕೆ ಉತ್ತರ ಕೇಳಿದ್ದರು ಅಷ್ಟಕ್ಕೆ ಸೀಮಿತವಾಗಿ ಲಿಖಿತ ಉತ್ತರ ಕೊಟ್ಟಿದ್ದೇನೆ, ಅದನ್ನು ಸದನದಲ್ಲಿಯೇ ಹೇಳಿಕೆ ಕೊಟ್ಟಿದ್ದೇನೆ, ಇದು ಅಧಿಕೃತ ದಾಖಲೆ ಆಗಿದೆ, ಅದನ್ನು ತಾವು ತೆಗೆದುಕೊಳ್ಳಬಹುದು, ತಮಗೇನಾದರೂ ಅನ್ಯಾಯವಾಗಿದ್ದರೆ ಕೋರ್ಟ್ ಮೆಟ್ಟಿಲು ಹತ್ತಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಯವರೇ, ಹೌದು ಅಲ್ಲಿ ಅಕ್ರಮವಾಗಿದೆ ಎಂದು ನಾನು ಹೇಳಬಯಸುತ್ತೇನೆ, ಅಕ್ರಮವಾಗಿ ತಾವು ಹೇಗೆ ಸ್ವಾಧೀನಪಡಿಸಿಕೊಳ್ಳುತ್ತೀರಿ?

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಳ್ಳೆಯ ಆಹಾರವನ್ನು ಕೊಡುತ್ತಿದ್ದಾರೆ. ದಾವೆಗಳು ಯಾವರೀತಿ ಸರ್ಕಾರದ ಮೇಲೆ ಆಗುತ್ತದೆ ಎನ್ನುವುದಕ್ಕೆ ಇದೊಂದು ನಿದರ್ಶನವಾಗಿದೆ. ಜನರು ಬರೀ ಕೋರ್ಟ್‌ನಲ್ಲಿಯೇ ಅಲೆಯಬೇಕೆಂದು ಮಾಡುತ್ತಿದ್ದೀರಿ. ನೀವು ಯಾವುದೇ ಭೂಮಿಯನ್ನು ತೆಗೆದುಕೊಳ್ಳಬೇಕಾದರೆ, you have no right to have a private property. ಭೂಸ್ವಾಧೀನ ಮಾಡುವುದರ ಜೊತೆಗೆ relinquish ಮಾಡತಕ್ಕಂಥ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ, ಅದಾವುದೂ ಇಲ್ಲದೇ ನಾವು ತೆಗೆದುಕೊಂಡಿದ್ದೇವೆ, ಮಾಡಿದ್ದೇವೆ, ಹಾಕಿಕೊಂಡಿದ್ದೇವೆ ಎಂದರೆ ಇದು ಸರ್ಕಾರದ unauthorized occupation ಆಗುತ್ತದೆ.

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಯವರೇ, ಈ ರೀತಿ ದೌರ್ಜನ್ಯ ಮಾಡಿ 34 ಗುಂಟೆ ಜಮೀನನ್ನು ತೆಗೆದುಕೊಂಡು ಮಾನ್ಯ ಸಚಿವರು ಇಲ್ಲಿ ಹೇಳಿಕೆಯನ್ನು ಕೊಡಬೇಕಲ್ಲವೇ? ಇಷ್ಟು ಅನ್ಯಾಯವಾಗಿದೆ, ಇದಕ್ಕೆ ಅರ್ಥವೇ ಇಲ್ಲವೇ? ಸರ್ಕಾರದ್ದು ಈ ರೀತಿ ದೌರ್ಜನ್ಯವೇ? ಜಿಲ್ಲಾಧಿಕಾರಿಯವರು ಮತ್ತು ತಹಶೀಲ್ದಾರರು ರಿಪೋರ್ಟ್ ಹಾಕಿದ್ದು ಕೂಡ ಮಾನ್ಯ ಸಚಿವರ ಗಮನಕ್ಕೆ ಇಲ್ಲವೆಂದರೆ, ಈ ರೀತಿ ತೆಗೆದುಕೊಂಡಿರುವುದು ಹೇಳಿಕೆಯಲ್ಲಿ ಇಲ್ಲವೆಂದರೆ ಏನರ್ಥ?

**ಸಭಾಪತಿಯವರು:-** ಮಾನ್ಯ ಶರಣಪ್ಪ ಮಟ್ಟೂರವರೇ, ಅವರು ನೀಡಿದ ಹೇಳಿಕೆ ಇದಕ್ಕೆ ಆಗುತ್ತದಲ್ಲವೇ?

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಸುಪ್ರೀಂ ಕೋರ್ಟ್ ಆದೇಶವನ್ನು ಅವರು ಉಲ್ಲಂಘನೆ ಮಾಡುತ್ತಿದ್ದಾರೆ. Land acquisition proceedings initiate ಮಾಡಿಲ್ಲ.

**ಶ್ರೀ ವಿ. ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ, .

**(ಗೊಂದಲ)**

ನಿಮ್ಮದೇ ಸರ್ಕಾರ ಇದ್ದಾಗ ಮಾಡಬಹುದಾಗಿತ್ತು, ಆಗ ಏನು ಮಾಡುತ್ತಿದ್ದಿರಿ?

**ಶ್ರೀ ಪಿ.ಆರ್. ರಮೇಶ್:-** ಖಾಸಗಿ ಭೂಮಿ 12 ವರ್ಷಕ್ಕೆ ಬರುತ್ತದೆ ನಿಮಗೆ ಬರುವುದಿಲ್ಲ. ಅದರಲ್ಲಿ ಅದೂ ಇದೆ ಸುಪ್ರೀಂ ಕೋರ್ಟ್ . . .

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಶರಣಪ್ಪ ಮಟ್ಟೂರು:-** ಕರೆಕ್ಟ್, ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು?

**ಶ್ರೀ ಪಿ.ಆರ್. ರಮೇಶ್:-** ಇದು ದಬ್ಬಾಳಿಕೆಯ ಮತ್ತು ದೌರ್ಜನ್ಯದ ಮಾತಾಗಿದೆ.

**ಶ್ರೀ ಶರಣಪ್ಪ ಮಟ್ಟೂರು:-** ಹಿರಿಯ ಸಚಿವರಾಗಿ ತಾವು ಈ ರೀತಿ ಹೇಳುವುದೇ?

**ಶ್ರೀ ಗೋವಿಂದ ಎಂ. ಕಾರಜೋಳ:-** ನಾವು land acquisition proceedings ಪ್ರಾರಂಭ ಮಾಡಿದ್ದೇವೆ. ಜಿಲ್ಲಾಧಿಕಾರಿಯವರು ಯಾವ ದರವನ್ನು ನಿಗದಿ ಪಡಿಸುತ್ತಾರೋ ಆ ದರವನ್ನು ಕೊಡುತ್ತೇವೆ.

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸೋಮಣ್ಣನವರೇ, ಪ್ರೊಸೀಡಿಂಗ್ಸ್ ಇದೆ ಅದನ್ನು ತಾವು ನೋಡಿ.

**ಶ್ರೀ ವಿ. ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಅವರು ಒಂದು ಮಾತನ್ನು ಹೇಳಿದರು, ಇವತ್ತು ಕೂಡ ಜಿಲ್ಲಾಧಿಕಾರಿಗಳು ಯಾವ ದರವನ್ನು ನಿಗದಿ ಮಾಡುತ್ತಾರೋ ಆ ದರವನ್ನು ಸರ್ಕಾರ ಕೊಡುವುದಕ್ಕೆ ತಯಾರಾಗಿದೆ ಎಂಬ ಮಾತನ್ನು ಕೂಡ ಮಾನ್ಯ ಸಚಿವರು ಹೇಳಿದ್ದಾರೆ. ಇದು 1986ರ ಪ್ರಕ್ರಿಯೆ. ಆದ್ದರಿಂದ ತಾವು ಕೂಡ ಹಿರಿಯರಿದ್ದೀರಿ, ಬುದ್ಧಿಜೀವಿಗಳಿದ್ದೀರಿ ಯೋಚನೆ ಮಾಡುವಾಗ 2013ರಲ್ಲಿ ಹೊಸ ಕಾಯಿದೆಗಳು ಬಂದಿವೆ. ಅಲ್ಲಿಯವರೆಗೂ ಹಳೆಯ ಪ್ರಕ್ರಿಯೆಗಳಿಗೂ; ಮಾನ್ಯ ಸಚಿವರು ಒಂದು ದೊಡ್ಡ ಮಾತನ್ನು ಹೇಳಿದರು, ಜಿಲ್ಲಾಧಿಕಾರಿಗಳ ಮನಸ್ಸನ್ನು ಒಲಿಸಿ ಜಿಲ್ಲಾಧಿಕಾರಿಗಳು ಏನನ್ನು ನಿಗದಿ ಮಾಡಿದ್ದಾರೋ ಅದನ್ನು ಕೊಡುವುದಕ್ಕೆ ತಯಾರಾಗಿದ್ದೇವೆ ಎಂದು ಹೇಳಿದ್ದಾರೆ.

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸೋಮಣ್ಣನವರೇ, ಏನನ್ನು ಹೇಳುತ್ತೀರಿ? ತಾವು ಹಿರಿಯ ಸಚಿವರಾಗಿ ಈ ರೀತಿ ನನಗೆ ಸಲಹೆ ಕೊಡುತ್ತೀರಿ. 2013ರ ಕಾಯಿದೆ; ಜಿಲ್ಲಾಧಿಕಾರಿಯವರ ಬಳಿಗೆ ಹೋಗಿ ನಾವು ಬೇಡಿಕೊಳ್ಳಬೇಕೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1391**

**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀ ಆರ್. ಧರ್ಮಸೇನ:-** ಮಾನ್ಯ ಸಭಾಪತಿಯವರೇ, ನಾನು ಕಳೆದ ಎರಡು ವರ್ಷಗಳಲ್ಲಿ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಷ್ಟು ಜನರಿಗೆ ವಸತಿಯನ್ನು ಕಲ್ಪಿಸಿದ್ದೀರಿ ಎಂದು ಪ್ರಶ್ನೆ ಕೇಳಿದ್ದೇನೆ. ಇವರು ಕಳೆದ ಎರಡು ವರ್ಷಗಳಲ್ಲಿ ಒಟ್ಟು 8271 ವಸತಿಯನ್ನು ಕಲ್ಪಿಸಲಾಗಿದೆ ಎಂದು ಹೇಳಿ ಅನುಬಂಧವನ್ನು ನೋಡುವುದಕ್ಕೆ ಹೇಳುತ್ತಾರೆ. ಅನುಬಂಧವನ್ನು ನೋಡುತ್ತಿದ್ದರೆ ಇದರಲ್ಲಿ ಕಳೆದ ಎರಡು ವರ್ಷ ಎಂದರೆ ಯಾವುದು? 2020-21, 2019-20 ಈ ರೀತಿ ಬರಬೇಕು. ಇವರು ಹೇಳಿರುವುದು ಕಳೆದ ವರ್ಷ ಎಂದು ಹೇಳಿ ಕೇವಲ 2017-18 ಅಷ್ಟನ್ನೇ ಕೊಟ್ಟಿದ್ದಾರೆ. 2018-19ಕ್ಕೆ ಯಾವುದೇ ಕಾಮಗಾರಿಗಳನ್ನು ಮಂಜೂರು ಮಾಡಿಲ್ಲ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಹಾಗಾಗಿ ಕಳೆದ ಎರಡು ವರ್ಷದಲ್ಲಿ ಏನನ್ನೂ ಮಾಡದೇ ಉತ್ತರ ಕೊಟ್ಟರೆ ಈ ಉತ್ತರವನ್ನು ತೆಗೆದುಕೊಂಡು ನಾನು ಏನು ಮಾಡಲಿ? ನನ್ನ ಜನರಿಗೆ ಏನು ಹೇಳಲಿ?

**ಶ್ರೀ ವಿ. ಸೋಮಣ್ಣ:-** ಮಾನ್ಯ ಸಭಾಪತಿಯವರೇ, ವಾಸ್ತವಾಂಶವನ್ನು ನಾವು ಯಾವುದೂ ಮರೆಮಾಚುವುದಕ್ಕೆ ಆಗುವುದಿಲ್ಲ. ತಾವು ಕೇಳಿರುವ ಪ್ರಶ್ನೆ ಸ್ಪಷ್ಟವಾಗಿದೆ.

(ಮುಂದು)

(557) 18-03-2020/ 08-40/ ಕೆಹೆಚ್-ಎಂಡಿ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ವಿ.ಸೋಮಣ್ಣ (ಮುಂದು):-**

ಇವತ್ತಿನ ದಿವಸ 2017-18 ಮತ್ತು 2018-19 ಈ ಎರಡು ವರ್ಷಗಳಲ್ಲಿ ಆಗಿರುವ ಪ್ರಗತಿಯ ಬಗ್ಗೆ ಅಷ್ಟೇ ಸ್ಪಷ್ಟವಾಗಿ ನಾವು ಹೇಳಿದ್ದೇವೆ. ಈಗಾಗಲೇ ನಾವು ಈ ಒಂದು ಯೋಜನೆಯ ಬಗ್ಗೆ ಸಾಕಷ್ಟು ಸಮೀಕ್ಷೆಯನ್ನು ಮಾಡಿಸಿದ್ದೇವೆ. ಆ ಸಮೀಕ್ಷೆಯ ಪ್ರಕಾರ 38 ಘೋಷಿತ ಕೊಳಚೆ ಪ್ರದೇಶಗಳು ಮೈಸೂರು ಜಿಲ್ಲೆಯಲ್ಲಿ ಇವೆ. ಅದರಲ್ಲಿ 8 ಕೊಳಚೆ ಪ್ರದೇಶಗಳನ್ನು ಕೈಗೆತ್ತಿಕೊಂಡು, ಮೊದಲು JNNURM (Jawaharlal Nehru National Urban Renewal Mission) ಯೋಜನೆಯಲ್ಲಿ 6328 ಮನೆಗಳನ್ನು ನಿರ್ಮಿಸಿ, ಬಹುತೇಕ ಮನೆಗಳನ್ನು ಹಂಚಿಕೆ ಮಾಡಿದ್ದಾರೆ. ಪ್ರಧಾನಮಂತ್ರಿ ಆವಾಸ್ ಯೋಜನೆ ಜಾರಿಗೆ ಬಂದಮೇಲೆ ಕೊಳಗೇರಿ ಪ್ರದೇಶಗಳಲ್ಲಿ ಬೇಡಿಕೆಗಳ ಬಗ್ಗೆ ಸಮೀಕ್ಷೆಗಳನ್ನು ಮಾಡಿದಾಗ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೈಸೂರು ಜಿಲ್ಲೆಯಲ್ಲಿ 12,822 ಮನೆಗಳಿಗೆ ಬೇಡಿಕೆ ಇರುತ್ತದೆ. ಆ ಪೈಕಿ 7,021 ಮನೆಗಳು ಅನುಮೋದನೆಯಾಗಿದ್ದು, ಬಾಕಿ 5801 ಮನೆಗಳಿಗೆ ಹಾಗೂ ಚಾಮರಾಜನಗರ ಜಿಲ್ಲೆಗೆ 4039 ಮನೆಗಳಿಗೆ ಬೇಡಿಕೆ ಇದ್ದು, ಈ ಪೈಕಿ 1250 ಮನೆಗಳಿಗೆ ಅನುಮೋದನೆಯಾಗಿದ್ದು, ಇನ್ನು ಬಾಕಿ 2789 ಮನೆಗಳಿಗೆ ಬೇಡಿಕೆ ಇರುತ್ತದೆ. ಸರ್ಕಾರದ ಗುರಿ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ 7021 ಮನೆಗಳ ನಿರ್ಮಾಣಕ್ಕೆ ಸರ್ಕಾರವು 354.75 ಕೋಟಿ ರೂಪಾಯಿಗಳನ್ನು ಅನುಮೋದನೆ ಮಾಡಿದ್ದು, ಆ ಪೈಕಿ 58.17 ಕೋಟಿರೂಪಾಯಿಗಳನ್ನು ಖರ್ಚು ಮಾಡಿ, 756 ಮನೆಗಳನ್ನು ನಿರ್ಮಾಣ ಮಾಡಿದ್ದೇವೆ. ಅದೇ ರೀತಿ ಚಾಮರಾಜನಗರ ಜಿಲ್ಲೆಯಲ್ಲಿ 1250 ಮನೆಗಳನ್ನು ನಿರ್ಮಾಣ ಮಾಡಲು ಅನುಮೋದನೆಯಾಗಿದ್ದು, ಅದರಲ್ಲಿ 63.59 ಕೋಟಿ ರೂಪಾಯಿಗಳನ್ನು ಅನುಮೋದನೆ ಮಾಡಿದ್ದು, ಆ ಪೈಕಿ ಅಲ್ಲಿ 7.89 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ನನಗೆ ತಿಳಿದ ಮಟ್ಟಿಗೆ ಈ ವರ್ಷ ನಾವು ಆದ್ಯತೆಯ ಮೇರೆಗೆ ಈ ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ ತೆಗೆದುಕೊಳ್ಳುತ್ತಿದ್ದೇವೆ. ಇದರಲ್ಲಿ ಏನಾಗಿದೆ ಎಂದರೆ, 2017-18 ನೇ ಸಾಲಿನ ನಂತರ ಸಮರೋಪಾದಿಯಲ್ಲಿ ಯಾವುದೇ ಕೆಲಸಗಳು ಆಗಿಲ್ಲ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಆದ್ಯತೆಯ ಮೇರೆಗೆ ಮಾಡುತ್ತಿದ್ದೇವೆ. ಇದರಲ್ಲಿ ಒಂದು ಸತ್ಯವೇನೆಂದರೆ, ಇದು ಬಹಳ ಹಿಂದೆಯೇ ಆಗಬೇಕಾದಂತಹ ಯೋಜನೆಗಳಾಗಿವೆ. ಈ ಯೋಜನೆಗಳು ಈಗಾಗಲೇ ನಿಂತಿವೆ. ಇದರಲ್ಲಿ ಬಾಕಿ ಇರುವಂತಹ ಮನೆಗಳನ್ನು ಈ ಎರಡು ವರ್ಷಗಳಲ್ಲಿ ಅಂದರೆ, ನಾವು ಈಗಾಗಲೇ ಸಮೀಕ್ಷೆಯನ್ನು ಮುಗಿಸಿದ್ದೇವೆ. ಆ ಎಲ್ಲಾ ಮನೆಗಳನ್ನು ನಿರ್ಮಾಣ ಮಾಡಿ, ಬಡವರಿಗೆ ಹಂಚುವಂತಹ ಕೆಲಸವನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1376**
**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಚೆನ್ನಾಗಿ ಉತ್ತರವನ್ನು ಒದಗಿಸಿದ್ದಾರೆ. ಆದರೆ ನಾನು ಯಾವುದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆಯೋ, ಅದರ ಬಗ್ಗೆ ನನಗೆ ಉತ್ತರ ದೊರೆತಿರುವುದಿಲ್ಲ. ನಾನು ಕೇಳಿರುವ ಪ್ರಶ್ನೆಯೇನೆಂದರೆ, ಕಳೆದ 5 ವರ್ಷಗಳು ಎಂದು ಹೇಳಿದ್ದೇನೆ. ಮಾನ್ಯ ಸಚಿವರು ಲಿಖಿತ ಉತ್ತರದಲ್ಲಿ ಕೊಟ್ಟಿರುವಂತಹದ್ದು,

**ಸಭಾಪತಿಯವರು:–** ಮಾನ್ಯ ಟಿ.ಎ.ಶರವಣರವರೇ, ಕಳೆದ 5 ವರ್ಷಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ಕೇಳುವ ಆಗಿಲ್ಲ. 3 ವರ್ಷಗಳ ಬಗ್ಗೆ ಮಾತ್ರ ಮಾಹಿತಿಯನ್ನು ಕೇಳಬೇಕು.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಆಯಿತು. ನನಗೆ 2 ವರ್ಷಗಳ ಮಾಹಿತಿಯನ್ನು ಮಾನ್ಯ ಸಚಿವರು ಒದಗಿಸಲಿ. ನನಗೆ 3 ವರ್ಷಗಳ ಮಾಹಿತಿಗಳು ಬೇಡ. ಮಾನ್ಯ ಸಚಿವರು ಕೊಟ್ಟಿರುವಂತಹ ಲಿಖಿತ ಉತ್ತರದಲ್ಲಿ 2018–19 ರವರೆಗಿನ ಮಾಹಿತಿ ಇದ್ದು, 2019–20ನೇ ಸಾಲಿನ ಮಾಹಿತಿ ಇರುವುದಿಲ್ಲ. ಏಕೆಂದರೆ, ಬಸವ ವಸತಿ ಯೋಜನೆಯಲ್ಲಿ ಅದರ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದಿಲ್ಲ. ಈಗ ಶೇಕಡಾ 50 ರಷ್ಟು ಪ್ರಗತಿಯನ್ನು ಮಾತ್ರ ತೋರಿಸುತ್ತಿದ್ದಾರೆ. ಆದರೆ, 2019–20ನೇ ಸಾಲಿನಲ್ಲಿ ಸೇರಿರುವಂತಹ ಶೇಕಡಾ 40 ಕ್ಕೂ ಕಡಿಮೆ ಪ್ರಗತಿಯಾಗುತ್ತಿದೆ ಎನ್ನುವುದು ನನಗೆ ಬಂದಿರುವಂತಹ ವರದಿಯಾಗಿದೆ. ನಾನು ಒಂದು ಮಾಹಿತಿಯನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ರಾಜೀವ್ ಗಾಂಧಿ ವಸತಿ ನಿಗಮದಲ್ಲಿ 2.75,778 ಮನೆಗಳು ಪ್ರಾರಂಭಗೊಳ್ಳಬೇಕಿದ್ದು, 36,908 ಮನೆಗಳಿಗೆ ವಿವಿಧ ಕಾರಣಗಳಿಂದ ಬ್ಲಾಕ್ ಆಗಿವೆ. 2014ನೇ ಸಾಲಿನ ಒಳಗೆ ಅಗತ್ಯ ದಾಖಲೆಗಳನ್ನು ಸಲ್ಲಿಸಿದ್ದರೆ ಮಾತ್ರ. ಈಗ ಅನುದಾನಕ್ಕೂ ಕೂಡ ಬಂದ್‌ಯಾಗಿದೆ ಎಂದು ವಿಜಯವಾಣಿ ಮತ್ತು ಪ್ರಜಾವಾಣಿ ಹಾಗೂ ಇನ್ನಿತರ ಪತ್ರಿಕೆಗಳಲ್ಲಿ ಈಗಾಗಲೇ ವರದಿ ಬಂದಿದೆ. ವಸತಿ ಯೋಜನೆಗಳಿಗೆ ಗ್ರಹಣ, ಈ ವರ್ಷದಲ್ಲಿ 4.12 ಲಕ್ಷ ಮನೆಗಳ ನಿರ್ಮಾಣ ಕಾಮಗಾರಿ ಸ್ಥಗಿತಗೊಂಡಿದೆ ಎಂದು ತಮ್ಮ ಇಲಾಖೆಯ ಅಧಿಕಾರಿಗಳಿಗೆ ಹೇಳಿಕೆಯನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರೇ ತಮಗೆ ಅಗತ್ಯವಿದ್ದರೆ ಪತ್ರಿಕೆಯಲ್ಲಿ ಬಂದಿರುವ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ. ನಾನು ಕೇಳುತ್ತಿರುವಂತಹದ್ದು, ಬಹುಶಃ ಇವತ್ತು 5 ವರ್ಷಗಳಲ್ಲಿ 19,50 ಲಕ್ಷ ಫಲಾನುಭವಿಗಳು ಇರುವುದರಲ್ಲಿ ಕೇವಲ 2 ಲಕ್ಷ ಫಲಾನುಭವಿಗಳನ್ನು ಮಾತ್ರ ಆಯ್ಕೆ ಮಾಡಿಕೊಂಡಿದ್ದಾರೆ. ಮಾನ್ಯ ಸಚಿವರು ಇನ್ನು 17.50 ಲಕ್ಷ ಫಲಾನುಭವಿಗಳಿಗೆ ಯಾವುದೇ ರೀತಿ ಕ್ರಮ ತೆಗೆದುಕೊಂಡಿಲ್ಲ. ನಿಜವಾಗಿಯೂ ಬಡವರಿಗೆ ಮೋಸ ಮಾಡಿದ ಹಾಗೆ ಆಗುವುದಿಲ್ಲವೇ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಸದಸ್ಯರಾದ ಟಿ.ಎ.ಶರವಣರವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರ ಮೊದಲನೇ ಪ್ರಶ್ನೆಯೇನೆಂದರೆ, ರಾಜ್ಯದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿನ ಬಡವರಿಗಾಗಿ ಸೂರು ಕಲ್ಪಿಸಲು ಯಾವ್ಯಾವ ವಸತಿ ಯೋಜನೆಗಳು ಪ್ರಸ್ತುತ ಜಾರಿಯಲ್ಲಿವೆ ಎಂದು ಕೇಳುತ್ತಾರೆ. ಅದೆಲ್ಲಾ ಯೋಜನೆಗಳು ಜಾರಿಯಲ್ಲಿವೆ. ಕಳೆದ 5 ವರ್ಷಗಳಲ್ಲಿ ಸದರಿ ಯೋಜನೆಗಳಡಿಯಲ್ಲಿ ಹಂಚಿಕೆ ಮಾಡಲಾದ ಗುರಿಯ ಪ್ರಮಾಣ ಎಷ್ಟು; ಮತ್ತು ಅದಕ್ಕೆ ಎದುರಾಗಿ ಸಾಧಿಸಲಾದ ಪ್ರಗತಿಯ ಪ್ರಮಾಣ ಎಷ್ಟು ಎಂದು ಎರಡನೆಯ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿರುತ್ತಾರೆ. ಕಳೆದ 5 ವರ್ಷಗಳಲ್ಲಿ ಅಂದರೆ 2014–2015 ರಿಂದ 2018–19ರವರೆಗೆ ನಾನು ವಿವಿಧ ವಸತಿ ಯೋಜನೆಗಳಡಿಯಲ್ಲಿ ಇದರ ಜೊತೆಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ಸಹ ಸೇರಿಸಿಕೊಂಡು, 19,42,024 ಮನೆಗಳ ಗುರಿಯನ್ನು ಹಂಚಿಕೆ ಮಾಡಲಾಗಿದ್ದು, 17,06,440 ಮನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಈ ಪೈಕಿ 9,68,672 ಮನೆಗಳು ಪೂರ್ಣಗೊಂಡಿದೆ. ಅದಲ್ಲದೆ, 4,25,082 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ. 2,75,778 ಮನೆಗಳು ಇನ್ನು ಕೂಡ ಪ್ರಾರಂಭವಾಗಿರುವುದಿಲ್ಲ. ಈ ಪೈಕಿ 36,908 ಮನೆಗಳು ಅನೇಕ ಕಾರಣಗಳಿಂದ ಅವರ ಹೆಸರುಗಳು ಇಲ್ಲ, ಕೆಲವರು ಅಲ್ಲಿ ಇರುವುದಿಲ್ಲ. ಇನ್ನು ಅನೇಕ ತೊಂದರೆಗಳು ಕಂಡುಬಂದಿದ್ದರಿಂದ, ಅದನ್ನೆಲ್ಲ ನಾವು ಬ್ಲಾಕ್ ಮಾಡಿದ್ದೇವೆ. ಇದರ ಮಧ್ಯದಲ್ಲಿ ಬಸವ ವಸತಿ ಯೋಜನೆಯಲ್ಲಿ, ಡಾ|| ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾ), ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ), ದೇವರಾಜ ಅರಸು ವಸತಿ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆ, ಹೀಗೆ ವಿವಿಧ ಹಂತದಲ್ಲಿಯೂ ಕೂಡ ನಾವು ಮಾಹಿತಿಯನ್ನು ಒದಗಿಸಿದ್ದೇವೆ.

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಸವ ವಸತಿ ಯೋಜನೆಯಲ್ಲಿ ಮನೆಗಳನ್ನು ನಿರ್ಮಾಣ ಮಾಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ ಎನ್ನುವ ಬಗ್ಗೆ ಮಾಹಿತಿ ಬಂದಿದೆ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಆರ್. ಧರ್ಮಸೇನರವರೇ ಒಂದು ನಿಮಿಷ. ನಾನು ಇದರ ಬಗ್ಗೆ ಹೇಳುತ್ತೇನೆ. ನಾವು ಇದಕ್ಕೋಸ್ಕರವಾಗಿ ಈಗಾಗಲೇ ಈ 2,23,729 ಮನೆಗಳಿಗೆ Geo ಆಧಾರಿತ"Vigil App" ನ್ನು ಮಾಡಿ, ಹಣವನ್ನು ಹಂತ ಹಂತವಾಗಿ ಬಿಡುಗಡೆ ಮಾಡುವಂತಹ ಸಂದರ್ಭದಲ್ಲಿ 39,733 ಫಲಾನುಭವಿಗಳಿಗೆ ಒಟ್ಟು 183.72 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದಲ್ಲದೆ, ಇನ್ನು 845.27 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಬಾಕಿ ಉಳಿದಿದೆ. ಈಗಾಗಲೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರತಿಯೊಂದನ್ನು ಕೂಡ ಒಂದು ಮಾಡಿ, ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಕಾಲಾವಕಾಶವನ್ನು ಸಹ ನೀಡಿದ್ದು, ಮೊದಲು ಅರ್ಧ ಗಂಟೆ ಚರ್ಚೆ ಆಗಲಿ. ಇದು ಬಡವರಿಗೋಸ್ಕರ ಇರುವಂತಹ ಯೋಜನೆಯಾಗಿದೆ. ಸುಮಾರು ವರ್ಷಗಳಿಂದ ಇದು ಬಡವರಿಗಾಗಿ ಕಾಯುತ್ತಿರುವಂತಹ ಒಂದು ಯೋಜನೆಯಾಗಿದೆ. ನಾವು ಜಿಲ್ಲಾಧಿಕಾರಿಗಳನ್ನು ಗ್ರಾಮೀಣ ಪ್ರದೇಶದಲ್ಲಿರುವಂತಹ ಬಡವರಿಗೆ, ಹಳ್ಳಿಗಾಡಿನಲ್ಲಿ ಇರುವಂತಹ ಜಿಲ್ಲಾಧಿಕಾರಿಗಳನ್ನು ನಗರ ಪ್ರದೇಶದಲ್ಲಿರುವಂತಹವರಿಗೆ, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರನ್ನು ಗ್ರಾಮೀಣ ಪ್ರದೇಶದಲ್ಲಿರುವಂತಹ ಮನೆಗಳಿಗೆ ಇನ್ನು ಮುಂದೆ ದುಡ್ಡನ್ನು ಬಿಡುಗಡೆ ಮಾಡುವ ಮುಂಚಿತವಾಗಿ, ಇದರ ಪ್ರಕಾರ ಸರ್ವೆ ಮಾಡಿಸಿ, ಯಾವುದನ್ನೂ "Vigil App" ಗೆ ಮತ್ತು ಜಿ.ಪಿ.ಎಸ್.,ಗೆ ಅಳವಡಿಸುತ್ತಾರೋ, ಆಗ ಹಣವನ್ನು ಬಿಡುಗಡೆ ಮಾಡುವಂತಹ ಯೋಜನೆಯನ್ನು ಜಾರಿ ಮಾಡಿದ ಮೇಲೆ ತಾವು ನಂಬುತ್ತಿರೋ, ಇಲ್ಲವೋ, ಇನ್ನೂ ಒಂದೂವರೆ, ಎರಡು ತಿಂಗಳಿನಲ್ಲಿ ಇವತ್ತು ಮಾಡಿರುವ ಯೋಜನೆಯಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವಂತಹದ್ದು, ಎಷ್ಟರ ಮಟ್ಟಿಗೆ ನನಗೆ ವೈಯಕ್ತಿಕವಾಗಿ ಆಗಿರುವಂತಹ ನೋವನ್ನು ನಾನು ಇಲ್ಲಿ ಹೇಳಿಕೊಳ್ಳುವುದಕ್ಕೆ ತಯಾರಿಲ್ಲ. ನನ್ನ ಉದ್ದೇಶ ಇಷ್ಟೇ. ಯಾವ ಒಂದು ಯೋಜನೆಗಳು ಯಾರಿಗೋಸ್ಕರ ಇದೆಯೋ, ಅವರಿಗೆ ತಲುಪಬೇಕಾಗಿರುವುದು ನಮ್ಮ ಉದ್ದೇಶವಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಸಂದೇಶವನ್ನು ಕೊಟ್ಟಿದ್ದಾರೆ. ಮಾನ್ಯ ಕಂದಾಯ ಸಚಿವರು ಪ್ರಾಯಶಃ ಎಲ್ಲೆಲ್ಲಿ ಸರ್ಕಾರಿ ಜಾಗಗಳು ಲಭ್ಯವಿದೆಯೋ, ಆ ಎಲ್ಲಾ ಜಾಗಗಳಲ್ಲಿ ಬಡವರಿಗಾಗಿ ಮನೆಗಳನ್ನು ಕಟ್ಟುವುದಕ್ಕೆ ಮತ್ತು ಬೆಂಗಳೂರು ಹಾಗೂ ರಾಜ್ಯದ ಬೇರೆ ಬೇರೆ ಭಾಗದಲ್ಲಿ ಕೊಡುತ್ತಿದ್ದೇವೆ. ಇದರಲ್ಲಿ ಒಂದು ಸತ್ಯವೇನೆಂದರೆ, ಇದರಲ್ಲಿ ಪಾರದರ್ಶಕತೆಯನ್ನು ವ್ಯವಸ್ಥಿತವಾಗಿ ಕಾಪಾಡುವುದಕ್ಕೆ ನನಗಾದಂತಹ ಅನುಭವವನ್ನು ಹಂಚಿಕೊಂಡಿದ್ದೇನೆ. ದಯಮಾಡಿ ತಮ್ಮ ಅನುಭವವನ್ನು ಹಂಚಿಕೊಳ್ಳುವುದು ಒಳ್ಳೆಯದು.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ತಾವು ಬಹಳ ಸಮರ್ಥರಿದ್ದೀರಿ. ತಮ್ಮ ಬಗ್ಗೆ ನಾವು ಅನುಮಾನಪಡುತ್ತಿಲ್ಲ. ತಮ್ಮ ಮೇಲೆ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದೇನೆ. ನಾನು ಕೇಳುತ್ತಿರುವುದೇನೆಂದರೆ, ಮಾನ್ಯ ಸಚಿವರು ನೀಡಿರುವಂತಹ ಲಿಖಿತ ಉತ್ತರದಲ್ಲಿ 2018–19ನೇ ಸಾಲಿನ ಬಗ್ಗೆ ಮಾಹಿತಿಯನ್ನು ಒದಗಿಸಿದ್ದಾರೆ. ಆದರೆ, 2019–20ನೇ ಸಾಲಿನಲ್ಲಿ ಏನು ನಡೆದಿದೆ ಎನ್ನುವ ಬಗ್ಗೆ ಲಿಖಿತ ಉತ್ತರದಲ್ಲಿ ಇರುವುದಿಲ್ಲ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಆರ್. ಧರ್ಮಸೇನರವರೇ, . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣ:-** ಮಾನ್ಯ ಸಚಿವರೇ ನಾನು ಮಾತನಾಡುವುದನ್ನು ಮುಗಿಸಿಬಿಡುತ್ತೇನೆ. ಎರಡನೆಯದಾಗಿ, 2,23,729 ಮನೆಗಳನ್ನು "Vigil App" ಮೂಲಕ ಪರಿಶೀಲಿಸಲು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕರಿಗೆ ಅವಕಾಶ ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಅದು ಇಲ್ಲ ಎಂದಲ್ಲ. ಮಾನ್ಯ ಸಚಿವರಿಗೆ ಬಂದಿರುವಂತಹ ಫಲಾನುಭವಿಗಳ ಸಂಖ್ಯೆ ಎಷ್ಟು? ನನ್ನ ಪ್ರಕಾರ 19.50 ಲಕ್ಷ ಫಲಾನುಭವಿಗಳು ಇದ್ದು, ಕೇವಲ 2 ಲಕ್ಷ ಫಲಾನುಭವಿಗಳಿಗೆ ಮಾತ್ರ ಕೊಡುತ್ತಿದ್ದಾರೆ. ಇನ್ನುಳಿದ 17.50 ಲಕ್ಷ ಫಲಾನುಭವಿಗಳಿಗೆ ಕೊಡಬೇಕಾಗಿದೆ. ಇದನ್ನು ನೋಡಿದರೆ ಎಲ್ಲೋ ಒಂದು ಕಡೆ 'ಎತ್ತಿಗೆ ಜ್ವರ ಬಂದರೆ, ಎಮ್ಮೆಗೆ ಬರೆ' ಎಂದು ಹೇಳುತ್ತಾರೆಯಲ್ಲವೇ, ಆ ರೀತಿ ನನಗೆ ಅನಿಸುತ್ತಿದೆ. ಅದಕ್ಕೋಸ್ಕರ ಮಾನ್ಯ ಸಚಿವರನ್ನು ಪ್ರಶ್ನೆ ಮಾಡಿದ್ದೇನೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಒಂದು ವಿಷಯದ ಬಗ್ಗೆ ಚರ್ಚೆ ಆಗುತ್ತಿದೆ. ರಾಜೀವ್ ಗಾಂಧಿ ವಸತಿ ನಿಗಮದಿಂದ ನಿರ್ಮಾಣ ಮಾಡುತ್ತಿರುವ ಮನೆಗಳನ್ನು 6 ತಿಂಗಳ ಹಿಂದೆ ಸರ್ಕಾರದವರು ಎಲ್ಲಾ ಕಾಮಗಾರಿಗಳನ್ನು ನಿಲ್ಲಿಸಿ ಎನ್ನುವುದರ ಬಗ್ಗೆ ಒಂದು Circular ಇದೆ. ಸರ್ಕಾರವೇ ಈ Circular ಯನ್ನು ಹೊರಡಿಸಿರುವಂತಹದ್ದು, ಇದಕ್ಕೆ ಕಾರಣವೇನೆಂದರೆ, ಇದರಲ್ಲಿ ಹಣ ಬರುತ್ತಿಲ್ಲ. ಈಗ ಸದ್ಯಕ್ಕೆ lintel ನಲ್ಲಿ ಇರುವವರು lintelನಲ್ಲಿಯೇ ಬಿಟ್ಟಿದ್ದಾರೆ. Plinth ನಲ್ಲಿ ಇರುವವರು Plinth ನಲ್ಲಿಯೇ ಬಿಟ್ಟಿದ್ದಾರೆ. ಕಿಟಕಿಗಳನ್ನು ಹಾಗೆಯೇ ಬಿಟ್ಟಿದ್ದಾರೆ.

(ಮುಂದು)

**(558) 18/03/2020/8:50/ಎಸ್‌ಪಿಆರ್/ಎಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಆರ್.ರಮೇಶ್(ಮುಂದು):-**

ಇದು ಇಡೀ ರಾಜ್ಯದ ಅಂದರೆ ಎಲ್ಲಾ ಜಿಲ್ಲೆಗಳಲ್ಲಿನ ವಾಸ್ತವಾಂಶವಾಗಿದ್ದು, ಹೀಗೇಕೆ ಎಂದು ಮಾನ್ಯ ಶರವಣರವರು ಪ್ರಶ್ನೆ ಕೇಳುತ್ತಿದ್ದಾರೆ. ಇದು ಹೌದು ಅಥವಾ ಇಲ್ಲ ಎಂದು ಒಂದು ಶಬ್ದದಲ್ಲಿ ಮಾನ್ಯ ಸಚಿವರು ಉತ್ತರಿಸಬೇಕು.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ನಾನು ಅಧಿಕಾರಕ್ಕೆ ಬರುವುದಕ್ಕೆ ಮುಂಚಿತವಾಗಿ ಈ ಹಿಂದೆ ಅಧಿಕಾರದಲ್ಲಿದ್ದ ಸರ್ಕಾರ ರಾಜ್ಯದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ನಡೆಸಿತು. ಆಗಿನ ಸಂದರ್ಭದಲ್ಲಿ ಜಿ.ಪಿ.ಎಸ್.ಕೂಡ ಅಧ್ವಾನವಾಗಿತ್ತು. ಆಗ ಅನುದಾನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಡುಗಡೆ ಮಾಡಬೇಡಿ ಎಂದು ಈ ಹಿಂದಿನ ಸರ್ಕಾರ ಆದೇಶಿಸಿದೆ. ಅವಶ್ಯವಿದ್ದರೆ ಇದಕ್ಕೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ಕಳುಹಿಸಿಕೊಡುತ್ತೇನೆ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ, ಈ ವಿಚಾರದಲ್ಲಿ ಪಾರದರ್ಶಕತೆ ಇಲ್ಲವೆಂದು ತಿಳಿದು ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಸಿ.ಇ.ಓ.ರವರಿಗೆ ಅಧಿಕಾರವನ್ನು ಹಸ್ತಾಂತರಿಸಲಾಗಿದೆ. ನಿನ್ನೆಯ ದಿನ 150 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ 550 ಕೋಟಿ ರೂಪಾಯಿಗಳನ್ನು ಆರ್.ಟಿ.ಜಿ.ಎಸ್. ಮುಖಾಂತರ ಬಿಡುಗಡೆ ಮಾಡಲಾಗುವುದು. 2013-14 ನೇ ಸಾಲಿನಿಂದ 2018-19 ರ ವರೆಗೆ ಶ್ರೀ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರವು 17 ಲಕ್ಷ ಮನೆಗಳಿಗೆ ಆದೇಶಿಸಿ, ಕೇವಲ 10 ಸಾವಿರ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. 17 ಲಕ್ಷ ಮನೆಗಳನ್ನು ಪೂರ್ಣಗೊಳಿಸಲು 20 ಸಾವಿರ ಕೋಟಿ ರೂಪಾಯಿಗಳ ಅವಶ್ಯಕತೆ ಇತ್ತು. ಇನ್ನೂ ನಾಲ್ಕು ಲಕ್ಷ ಮನೆಗಳಿಗೆ ಎಲ್ಲಿಯೂ ಆದೇಶವಾಗಿರಲಿಲ್ಲ. ಕೆಲವು ಕ್ಷೇತ್ರಗಳಲ್ಲಿ 25-30 ಸಾವಿರ ಮನೆಗಳಿದ್ದವು. ಮತ್ತೆ ಕೆಲವು ಕ್ಷೇತ್ರಗಳಲ್ಲಿ 15-18 ಸಾವಿರ ಮನೆಗಳಿದ್ದವು. ಈ ರೀತಿಯಾಗಿ ಆದೇಶವಿರದ ಮನೆಗಳು ಎಲ್ಲಿವೆ ಎಂಬುದನ್ನು ಪರಿಶೀಲಿಸಿ ಅಂತಹ ನಾಲ್ಕು ಲಕ್ಷ ಮನೆಗಳ ಆದೇಶಗಳನ್ನು ಹಿಂಪಡೆಯಲಾಗಿದೆ. 2,75,000 ಮನೆಗಳಿಗೆ ಆದೇಶ ಪತ್ರವಾಗಿದ್ದು ಅವುಗಳನ್ನು ಆನ್‌ಲೈನ್‌ನಲ್ಲಿ ಬಿಡುಗಡೆ ಮಾಡಿದ್ದೇವೆ. ನಾನು ಈ ಸದನದ ಗಮನಕ್ಕೆ ತರುವುದೇನೆಂದರೆ, 2018-19 ಮತ್ತು 2019-2020 ನೇ ಸಾಲುಗಳವರೆಗೆ ನಮ್ಮ ಇಲಾಖೆಯಲ್ಲಿನ ಕಾರ್ಯವೈಖರಿಯಲ್ಲಿ ಸ್ವಲ್ಪ ಲೋಪಗಳಾಗಿದ್ದರಿಂದ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳಲ್ಲಿ ನಾನು ಹಿಂದೆ-ಮುಂದೆ ನೋಡುವುದಿಲ್ಲ. ನಮಗೆ ಅದರ ಅವಶ್ಯಕತೆ ಇಲ್ಲ. ಯಾರನ್ನೂ ದೂಷಿಸುವ ಭಾವನೆ ನನ್ನಲ್ಲಿಲ್ಲ. ಈ ವಿಚಾರದಲ್ಲಿ ಸರ್ಕಾರವು ಪಾರದರ್ಶಕತೆಯನ್ನು ತರುತ್ತಿದೆ. ಒಮ್ಮೆಲೆ 7-8 ಲಕ್ಷ ಮನೆಗಳನ್ನಿಟ್ಟುಕೊಂಡು ಸಾವಿರಾರು ಕೋಟಿ ರೂಪಾಯಿಗಳನ್ನು ಅದಕ್ಕೆ ಬಿಡುಗಡೆ ಮಾಡದಿರುವ ಸಂದರ್ಭದಲ್ಲಿ ನಾವು ಮುಖ್ಯಮಂತ್ರಿಗಳು, ರಾಜ್ಯದ ಮುಖ್ಯ ಕಾರ್ಯದರ್ಶಿ ಮತ್ತು ಆರ್ಥಿಕ ಹಾಗೂ ಕಂದಾಯ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ಮಾತನಾಡಿದ್ದು, ವ್ಯವಸ್ಥೆಯು ಈಗ ಒಂದು ಹಂತಕ್ಕೆ ಬಂದಿದೆ. ನಗರ ಪ್ರದೇಶಗಳಲ್ಲಿ 1,80,000 ಮನೆಗಳು ಏನು ಹಂಚಿಕೆಯಾಗದೆ ವ್ಯರ್ಥವಾಗಿದ್ದವು ಅವುಗಳನ್ನು ಇಂತಹ ಎಲ್ಲಾ ಯೋಜನೆಗಳನ್ನು ಕೈಗೆತ್ತಿಕೊಂಡು ಮುಂದಿನ ಐದಾರು ತಿಂಗಳಿನಲ್ಲಿ ಅರ್ಹರಿರುವ ಮತ್ತು ಅವಶ್ಯಕತೆಯಿರುವವರಿಗೆ ಹಂಚಿಕೆ ಮಾಡಲಾಗುತ್ತದೆ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ನಗರದ ಮಂತ್ರಿಮಾಲ್‌ಗಳಂತಹ ಅಕ್ರಮ ಕಟ್ಟಡಗಳ ಬಗ್ಗೆ ಸರ್ಕಾರವು ಕ್ರಮ ತೆಗೆದುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಅಂಶವು ನನ್ನ ಖಾತೆಗೆ ಸಂಬಂಧಪಡುವುದಿಲ್ಲ. ಇದನ್ನು 'ಯಾರು ಮಾಡಿದರು ಎತ್ತ ಮಾಡಿದರು' ಎನ್ನುವ ಅಂಶಕ್ಕಿಂತ ಹೆಚ್ಚಾಗಿ ನಾನು ಅಧಿಕಾರ ವಹಿಸಿಕೊಂಡ ಮೇಲೆ ಪ್ರತಿಯೊಂದು ಯೋಜನೆಗಳನ್ನು ಹಂತ ಹಂತವಾಗಿ ಕೈಗೆತ್ತಿಕೊಂಡು ಅದರಲ್ಲಿ ಪಾರದರ್ಶಕತೆಯನ್ನು ತರಲಾಗಿದೆ. ಇನ್ನೂ ಆರು ಲಕ್ಷ ಮನೆಗಳನ್ನು ನಿರ್ಮಿಸಬೇಕಾಗಿದ್ದು, ಇದಕ್ಕೆ 6½– 7 ಸಾವಿರ ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಇದಲ್ಲದೇ ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಒಂದು ಲಕ್ಷ ಮನೆಗಳ ನಿರ್ಮಾಣಕ್ಕಾಗಿ ಪ್ರಸ್ತಾವನೆಯನ್ನು ಶ್ರೀ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸಿತ್ತು. ಇದಕ್ಕೆ ಪ್ರತಿಯಾಗಿ ಕೇಂದ್ರ ಸರ್ಕಾರವು ತನ್ನ ಭಾಗದ 600 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿತು. ಹಣ ಬಿಡುಗಡೆಗೊಂಡರೂ ಸಹ ಯೋಜನೆಯ ಕೆಲಸಗಳು ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿಯೂ ಸಹ ಪ್ರಾರಂಭವಾಗಿರಲಿಲ್ಲ. ಆದರೆ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಆದ್ಯತೆಯ ಮೇಲೆ ಕೆಲವು ಕ್ಷೇತ್ರಗಳಲ್ಲಿ ಅದರಲ್ಲೂ ವಿಶೇಷವಾಗಿ ದಾಸರಹಳ್ಳಿ, ಅನೇಕಲ್ ಮತ್ತು ಯಲಹಂಕ ವಲಯಗಳಲ್ಲಿ ಮನೆಗಳನ್ನು ನಿರ್ಮಿಸಲು ಪ್ರಾರಂಭಿಸಿದ್ದೇವೆ. ಯಾವ ಉದ್ದೇಶಕ್ಕಾಗಿ ಸರ್ಕಾರ ಹಣವನ್ನು ಬಿಡುಗಡೆ ಮಾಡುತ್ತಿತ್ತು ಮತ್ತು ಇಲಾಖೆಯಲ್ಲಿ ಯಾವ ಯೋಜನೆಗಳನ್ನು ಕೈಗೊಳ್ಳಲಾಗಿದೆ ಎನ್ನುವುದರ ಬಗ್ಗೆ ಪುಸ್ತಕವೊಂದನ್ನು ಬಿಡುಗಡೆ ಮಾಡುತ್ತಿದ್ದೇವೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಪ್ರತಿಯೊಬ್ಬ ಶಾಸಕರಿಗೆ ಪತ್ರವನ್ನು ಬರೆದಿದ್ದೇನೆ. ಕೆಲವು ಶಾಸಕರಿಗೆ ಮುಂದಿನ ದಿನಗಳಲ್ಲಿ ಆ ಪತ್ರ ತಲುಪುತ್ತದೆ. ಆಯಾಯ ಜಿಲ್ಲೆ, ತಾಲ್ಲೂಕುಗಳಲ್ಲಿ ಎಷ್ಟು ಪಂಚಾಯಿತಿಗಳಿವೆ, ಅಲ್ಲಿ ಎಷ್ಟೆಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ; ಅವುಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಹಾಗೂ ಇನ್ನೂ ಎಷ್ಟು ಹಣ ಬಿಡುಗಡೆಯಾಗಬೇಕಾಗಿದೆ ಎಂಬ ಮಾಹಿತಿಯನ್ನು ಕೇಳಲಾಗಿದೆ. ಈ ಮಧ್ಯೆ ಸುಮಾರು ಜಿಲ್ಲಾ ಪಂಚಾಯಿತಿಗಳನ್ನು ಪರೀಕ್ಷೆ ಮಾಡಿ, ಅಲ್ಲಿನ ಲೋಪದೋಷಗಳೇನು, ಶೇಕಡಾವಾರು ಎಷ್ಟು ಅನಾನುಕೂಲವಾಗಿದೆ, ಎಷ್ಟು ಬಡ ಜನರಿಗೆ ತೊಂದರೆಯಾಗಿದೆ ಎನ್ನುವ ಅಂಶಗಳ ಬಗ್ಗೆ ಮಾಹಿತಿಯನ್ನು ಪಡೆದಿದ್ದೇವೆ.

**(ಗೊಂದಲ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಅರ್ಧ ಗಂಟೆಗಳ ಕಾಲ ಚರ್ಚೆ ಮಾಡಲು ಮಾನ್ಯ ಸದಸ್ಯರಿಗೆ ಅವಕಾಶವನ್ನು ನೀಡಲಾಗಿದೆ. ಆದರೂ ಸಹ ಈಗ ಚರ್ಚೆ ಮಾಡುವುದು ಏನಿದೆ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಆಗಲೇ ಆರೋಗ್ಯ ಸಚಿವರಾದ ಶ್ರೀರಾಮುಲುರವರು ಸದನಕ್ಕೆ ಬಂದಿದ್ದರು. ಆಗ ತೆಲಂಗಾಣ ರಾಜ್ಯದ ವ್ಯಾಪ್ತಿಯಿಂದ ಹೈದರಾಬಾದ್‌ಗೆ ವಿಮಾನದ ಮೂಲಕ ಬರುವ ಪ್ರಯಾಣಿಕರಿಗೆ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳಿ ಎಂದು ನಾನು ಹೇಳಿದೆ. ಆಗ ಉಪ ಮುಖ್ಯಮಂತ್ರಿಗಳು ಎದ್ದು, **XXX** ಎಂದು ನನಗೆ ಹೇಳುತ್ತಾರೆ. ಆ ರೀತಿಯಾಗಿ ನನಗೆ ಹೇಳುವುದಕ್ಕೆ ಅವರು ಯಾರು? ನನ್ನ ಬಳಿ ನಡವಳಿಗಳಿವೆ. ಇದರಿಂದಾಗಿ ನನಗೆ ಬಹಳ ನೋವಾಗಿದೆ. ಅವರ ಮೇಲೆ ಹಕ್ಕುಚ್ಯುತಿ ಆಗುತ್ತದೆ. ಇದು ಒಳ್ಳೆಯದಲ್ಲ. ನಾನು ನಡವಳಿಗಳನ್ನು ಆಧಾರವಾಗಿಟ್ಟುಕೊಂಡು ಮಾತನಾಡುತ್ತಿದ್ದೇನೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಹಿರಿಯರಿದ್ದಾರೆ.

**(ಗೊಂದಲ)**

**ಶ್ರೀ ಗೋವಿಂದ ಎಂ.ಕಾರಜೋಳ(ಉಪಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ನಾನು ಆ ರೀತಿಯಾಗಿ ಹೇಳಿಲ್ಲ. ನಾನು ಹೇಳುವುದನ್ನು ಪೂರ್ಣವಾಗಿ ಕೇಳಬೇಕು.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಅವರಿಂದ ನಾನು ಇದನ್ನು ನಿರೀಕ್ಷೆ ಮಾಡಿರಲಿಲ್ಲ.

**(ಗೊಂದಲ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಉದ್ದೇಶಪೂರ್ವಕವಾಗಿ ಹೇಳಿದ್ದಲ್ಲ. ಆದರೆ friendly ಆಗಿ ಹೇಳಿದ್ದಾರೆ.

**(ಗೊಂದಲ)**

**ಶ್ರೀ ಅರುಣ ಶಹಾಪುರ:-**ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಆತ್ಮೀಯತೆಯಲ್ಲಿ ಆ ರೀತಿಯಾಗಿ ಹೇಳಿದ್ದಾರೆ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಅವರು ದರ್ಪ ತೋರಿಸುತ್ತಾರೆ. ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಜವಾಬ್ದಾರಿ ಇಲ್ಲ.

**(ಗೊಂದಲ)**

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ನಾನು ಸದಸ್ಯರಿಗೆ ಆ ರೀತಿಯಾಗಿ ಹೇಳಿಲ್ಲ. **XXX** ಎಂಬುದಾಗಿ ನಾನು ಹೇಳಿದ್ದೇನೆ. **(ಗೊಂದಲ) XXX** ಎಂದು ನಾನು ಹೇಳಿಲ್ಲ.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಇದು ಒಳ್ಳೆಯದಲ್ಲ.

**(ಗೊಂದಲ)**

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಸದಸ್ಯರು ನಾನು ಹೇಳುವುದನ್ನು ಪೂರ್ಣವಾಗಿ ಕೇಳಬೇಕು. ಒಂದು ವೇಳೆ ನಾನು ತಪ್ಪು ಮಾತನಾಡಿದ್ದರೆ ಅದನ್ನು ಒಪ್ಪಿಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಏನು ಅರ್ಥ?

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣರವರೇ, **XXX** ಎಂದು ನಾನು ಹೇಳಿದ್ದೇನೆ. ಇದರಲ್ಲಿ ತಪ್ಪು ಏನಿದೆ?

**(ಗೊಂದಲ)**

**ಡಾ|| ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಉಪ ಮುಖ್ಯಮಂತ್ರಿಗಳು ಹೇಳಿದ್ದರಲ್ಲಿ ಏನೂ ತಪ್ಪಿಲ್ಲ.

**(ಗೊಂದಲ)**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾನು ಜನರ ಮೇಲಿನ ಕಳಕಳಿಯಿಂದ ಪ್ರಶ್ನೆಯನ್ನು ಮಾಡಿದ್ದೇನೆ.

**(ಗೊಂದಲ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-**ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಸ್ಯವಾಗಿ ಹೇಳಿದ್ದಾರೆ. **(ಗೊಂದಲ)** ಅವರು ಆತ್ಮೀಯತೆಯಲ್ಲಿ ಆ ರೀತಿಯಾಗಿ ಹೇಳಿದ್ದಾರೆ. ಇದಕ್ಕೆ ಏಕೆ ಅಷ್ಟೊಂದು seriousness?

**(ಗೊಂದಲ)**

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, **XXX** ಎಂದು ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಅವರು ಏಕೆ ಆ ರೀತಿಯಾಗಿ ಮಾತನಾಡುತ್ತಾರೆ. ಅವರೇನು ಬಂಡವಾಳ ಹಾಕಿದ್ದಾರೆಯೇ? ನನ್ನನ್ನು ಕೇಳುವುದಕ್ಕೆ ಅವರು ಯಾರು? **(ಗೊಂದಲ)** ಅವರು ನನ್ನ ವೃತ್ತಿಯ ಬಗ್ಗೆ ಮಾತನಾಡಿದ್ದಾರೆ. ಅವರು ಹಾಗೇಕೆ ಹೇಳಬೇಕು?

**(ಗೊಂದಲ)**

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಇದರಲ್ಲಿ unparliamentary ಏನಿದೆ?

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಉಪ ಮುಖ್ಯಮಂತ್ರಿಗಳು ವೃತ್ತಿಯ ಬಗ್ಗೆ ಮಾತನಾಡಿದ್ದಾರೆ. ವೈಯಕ್ತಿಕ ವೃತ್ತಿಯ ಬಗ್ಗೆ ಮಾತನಾಡುವುದು ಬೇಡ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಗೊಂದಲ)**

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು **XXX** ಎಂದು ಸದಸ್ಯರಿಗೆ ಹೇಳಿದ್ದೇನೆ. ನಡವಳಿಗಳನ್ನು ಅವರು ತೆಗೆದು ನೋಡಲಿ.

**(ಗೊಂದಲ)**

**ಉಪ ಸಭಾಪತಿಯವರು:-** ವಸತಿ ಸಚಿವರು ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರ ಹೇಳುತ್ತಿದ್ದಾರೆ. ಆದರೆ ಮಾನ್ಯ ಶರವಣರವರು ಮಧ್ಯದಲ್ಲಿ ಇದ್ದಕ್ಕಿದ್ದಂತೆ ಹೀಗೆ ಮಾಡಿದರೆ ಹೇಗೆ? ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಸಹಜವಾಗಿ 'ಬಂಗಾರದ ಅಂಗಡಿಗೆ ಯಾರೂ ಬರುವುದಿಲ್ಲ' ಎಂದು ಮಾತನಾಡಿದ್ದು, ವಿನಃ ಬೇರೆ ಯಾವುದೇ ಉದ್ದೇಶವನ್ನಿಟ್ಟುಕೊಂಡು ಮಾತನಾಡಿಲ್ಲ. ಉದ್ಯೋಗಕ್ಕೆ ಸಂಬಂಧಪಟ್ಟಂತೆ ಉಪ ಮುಖ್ಯಮಂತ್ರಿಗಳು ಏನನ್ನೂ ಹೇಳಿಲ್ಲ. 'ಮಾನ್ಯ ಸದಸ್ಯರ ಬಂಗಾರದ ಅಂಗಡಿಯನ್ನು ಮುಚ್ಚುತ್ತಾರೆ, ನಾಳೆ ಬರುವುದು ಬೇಡ' ಎಂದು ಹೇಳಿದ್ದಾರೆ. ಇದು ಯಾವುದೇ ದೊಡ್ಡ ವಿಷಯವಲ್ಲ. ದಯಮಾಡಿ ಇದನ್ನು ಬೆಳೆಸುವುದು ಬೇಡ.

**(ಮುಂದು)**

(559)/18-3-2020/9-00/ಎಲ್‌ಎನ್/ಎಕೆ

(ಗೊಂದಲ)

**ಶ್ರೀ ಸಂದೇಶ್ ನಾಗರಾಜ:-** ವ್ಯಕ್ತಿ ಬಗ್ಗೆ ಮಾತನಾಡಲಿ, ವೃತ್ತಿ ಬಗ್ಗೆ ಯಾಕೆ ಮಾತನಾಡವೇಕು.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, **XXX** ಎಂದು ಸಾಮಾನ್ಯವಾಗಿ ಹೇಳಿದ್ದಾರೆ. ಅದರಲ್ಲೇನು ತಪ್ಪು ಇಲ್ಲ. ಇದನ್ನು ಬೆಳೆಸುವುದು ಬೇಡ.

**ಶ್ರೀ ಗೋವಿಂದ ಎಂ.ಕಾರಜೋಳ:-** ಅದರಲ್ಲಿ ಏನು ಅವಮಾನವಾಗುವಂತಹ ವಿಷಯವಿದೆ.

**(ಗೊಂದಲ)**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ವೈ.ಎ.ನಾರಾಯಣಸ್ವಾಮಿ:–** ಅದರಲ್ಲಿ ಅವಮಾನವಾಗುವಂತಹದು ಏನು ಇಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್**(ವಿರೋಧ ಪಕ್ಷದ ನಾಯಕರು) :– ಮಾನ್ಯ ಸಭಾಪತಿಗಳೆ, ಮಾನ್ಯ ಉಪಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳರವರು ಬೇರೆ ಯಾವುದೇ ಉದ್ದೇಶದಿಂದ ಹೇಳಿರುವುದಿಲ್ಲ ನಮಗೆ ಅರ್ಥವಾಗುತ್ತದೆ. ಆದರೆ Treasury Bench ನವರ ಬಗ್ಗೆ ಮೊನ್ನೆ ಸಚಿವರಾದ ಶ್ರೀ ಜೆ.ಸಿ.ಮಾಧುಸ್ವಾಮಿಯವರು, "ತಾವು Treasury Bench ನವರು ಮಾತನ್ನು ಕಡಿಮೆ ಮಾಡಿ" ಎಂದು ಹೇಳಿದರು. ಸಂಬಂಧಪಟ್ಟ ಮಂತ್ರಿಗಳು ಉತ್ತರ ಹೇಳುತ್ತಾರೆ. ಸುಮ್ಮನೆ ನೀವು ಏಕೆ ಸಮಸ್ಯೆಗೆ ಸಿಕ್ಕುಹಾಕಿಕೊಳ್ಳುತ್ತೀರಿ. There is bona fide intention. ದುರುದ್ದೇಶವಿಲ್ಲ ಎನ್ನುವುದು ನಮಗೆ ಗೊತ್ತು. ಮಾನ್ಯ ಶ್ರೀ ಶರವಣರವರ ನೋವಿನಲ್ಲಿ ನಾವು ಭಾಗಿಗಳಾಗಿದ್ದೇವೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಗಳೆ, ಎಲ್ಲರೂ ಹೀಗೆ ಮಾತನಾಡುತ್ತಾರೆ. ಬೆಳಿಗ್ಗೆ ಡಾ: ವೈ.ಎ. ನಾರಾಯಣಸ್ವಾಮಿಯವರು 'ಟಿವಿ ಯವರು ಬಂದು ನೀನನ್ನು ಕರೆಯುತ್ತಾರೆನಪ್ಪಾ' ನನ್ನ ಬಗ್ಗೆ ಮಾತನಾಡಿದರು. ನನ್ನ ವೃತ್ತಿ ಧರ್ಮದ ಬಗ್ಗೆ ಏಕೆ ಮಾತನಾಡಬೇಕು. ಇದರಿಂದ ನನ್ನ ಮನಸ್ಸಿಗೆ ತುಂಬಾ ನೋವಾಗಿದೆ. ನನನ್ನು ಏನೆಂದು ತಿಳಿದುಕೊಂಡಿದ್ದಾರೆ?

(ಗೊಂದಲ)

**ಡಾ:ವೈ.ಎ.ನಾರಾಯಣಸ್ವಾಮಿ:–** ನಾನು ಏನು ಹೇಳಿದ್ದೇನೆ ಎನ್ನುವ ರೆಕಾರ್ಡ್ ತಂದು ತೋರಿಸಲಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ನಾರಾಯಣಸ್ವಾಮಿಯವರೆ ನೀವೆ ಇಷ್ಟೆಲ್ಲಾ ದೊಡ್ಡದಾಗಿ ಮಾಡುವುದು. ಸ್ವಲ್ಪ ಶಾಂತರಾಗಿ ಕುಳಿತುಕೊಳ್ಳಿ. ಮಂತ್ರಿಗಳು ಸಮರ್ಥರಾಗಿದ್ದಾರೆ, ಅವರು ಉತ್ತರ ಹೇಳುತ್ತಾರೆ. ದಯಮಾಡಿ ಇದನ್ನು ಇಲ್ಲಿಗೆ ಮುಕ್ತಾಯಗೊಳಿಸಿ.

(ಗೊಂದಲ)

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಗಳೆ, ನನಗ ಉಪಮುಖ್ಯಮಂತ್ರಿಗಳ ಮೇಲೆ ಬಹಳ ಗೌರವವಿದೆ. ಆದರೆ ಅವರು ಆಡಿರುವ ಮಾತಿನಿಂದ ನನಗೆ ಬಹಳ ನೋವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಕಡತದಲ್ಲಿ ಇರುವುದನ್ನು **expunge** ಮಾಡಿಬಿಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಉಪಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರೇವಣ್ಣನವರೆ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, whether it was spoken with or without intention, ದಯಮಾಡಿ ಅದನ್ನು **ಕಡತದಿಂದ ತೆಗೆದು ಹಾಕಿ**.

**ಉಪ ಸಭಾಪತಿಯವರು:-** **ಆಯಿತು, ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.**

**(ಗೊಂದಲ)**

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ಪ್ರಶ್ನೋತ್ತರ ತೆಗೆದುಕೊಳ್ಳಬೇಕಾದರೆ ಇನ್ನು ಸಮಯವಾಗುತ್ತದೆ. ಅರ್ಧ ಗಂಟೆ ಸದನವನ್ನು ಮುಂದೂಡಿ ನಾವು ಊಟ ಮಾಡಿಕೊಂಡು ಬರುತ್ತೇವೆ.

(ಗೊಂದಲ)

**ಉಪ ಸಭಾಪತಿಯವರು:-** ಯಾಕೆ ನಾರಾಯಣಸ್ವಾಮಿಯವರೆ ಈ ರೀತಿ ಗೊಂದಲ ಉಂಟು ಮಾಡುತ್ತಿದ್ದೀರಾ, ಈ ರೀತಿ ಆದರೆ ಸದನವನ್ನು ಹೇಗೆ ನಡೆಸುವುದು. ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ಶಾಂತವಾಗಿರುವಾಗ ನೀವು ಮತ್ತೆ ಏನಾದರೂ ಹೇಳಿ ಗೊಂದಲವನ್ನು ಉಂಟುಮಾಡುತ್ತೀರಾ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ಮಾನ್ಯ ವಸತಿ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಐದು ವರ್ಷಗಳಿಂದ ಸರ್ಕಾರ ಏನೇನು ಮಾಡಿದೆ, ಎಷ್ಟು ಮನೆಗಳಿಗೆ ಬೇಡಿಕೆ ಇತ್ತು, ಎಷ್ಟು ಮನೆಗಳಿಗೆ ಅನುಮೋದನೆ ಕೊಟ್ಟಿದ್ದಾರೆ ಎನ್ನುವುದನ್ನು ಹೇಳಿದ್ದಾರೆ. ಒಂಬತ್ತುವರೆ ಲಕ್ಷ ಮನೆಗಳನ್ನು ಕಟ್ಟಿಸಲಾಗಿದೆ ಎಂದು ಹೇಳಿದ್ದಾರೆ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನೀವು ಮತ್ತೆ ಏಕೆ ಹಿಂದಕ್ಕೆ ಹೋಗುತ್ತೀರಿ. ನೇರವಾಗಿ ವಿಷಯವನ್ನು ಹೇಳಿಬಿಡಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ಎರಡು ನಿಮಿಷದಲ್ಲಿ ಹೇಳಿಬಿಡುತ್ತೇನೆ. ಮೊನ್ನೆ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಗಾಣಿಗರ ಹಳ್ಳಿಯಲ್ಲಿ ವಸತಿ ಯೋಜನೆ ಅಡಿಯಲ್ಲಿ 923

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನೆಗಳ ನಿರ್ಮಾಣದ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದರು, ಮಾನ್ಯ ಕಂದಾಯ ಸಚಿವರು ಬಂದಿದ್ದರು, ಮಾನ್ಯ ವಸತಿ ಸಚಿವರು ಇದ್ದರು. ನಾನು ಕೂಡಾ ಆ ಸಮಾರಂಭದಲ್ಲಿ ಅಥಿತಿಯಾಗಿ ಬಂದಿದ್ದೆ. ನನಗೆ ಭಾಷಣ ಮಾಡಲು ಅವಕಾಶವನ್ನು ಕೊಡಲಿಲ್ಲ. ಮಾನ್ಯ ವಸತಿ ಸಚಿವರು ಅಲ್ಲಿ ಮಾತನಾಡುತ್ತಾ ಹಿಂದಿನ ಸರ್ಕಾರ ಏನು ಮಾಡಲೇ ಇಲ್ಲ, ನಾವು ಅಧಿಕಾರಕ್ಕೆ ಬಂದ ಮೇಲೆ ಎಲ್ಲವನ್ನು ಮಾಡುತ್ತಿದ್ದೇವೆ ಎಂದು ಹೇಳಿದರು. ಆದರೆ ಹಿಂದಿನ ಸರ್ಕಾರ ಒಂಬತ್ತುವರಿ ಲಕ್ಷ ಮನೆಗಳನ್ನು ನಿರ್ಮಿಸಲಾಗುತ್ತದೆ ಎಂದು ಸದನದಲ್ಲಿ ಹೇಳುತ್ತಿದ್ದೀರಿ. ಫಲಾನುಭವಿಗಳನ್ನು ಗುರುತಿಸಬೇಕಾದರೆ ಗ್ರಾಮ ಪಂಚಾಯಿತಿಯಲ್ಲಿ ಏನೇನು ಮಾಡಲಾಗಿದೆ ಅದಲ್ಲೆವನ್ನು ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ಈಗ ಹೊಸ ಸಂಪ್ರದಾಯವನ್ನು ತಂದಿದ್ದೀರಾ, ಫಲಾನುಭವಿಗಳು ಯಾರು ಎನ್ನುವುದು ಗ್ರಾಮಸಭೆಯವರಿಗೆ ಗೊತ್ತಿರುತ್ತದೆ. ಅವರು ಒಂದು ಪಟ್ಟಿಯನ್ನು ಮಾಡಿದ್ದಾರೆ. ಇದೆಲ್ಲವನ್ನು ಬಿಟ್ಟು ಈಗ ಎಂಎಲ್ಎ ಗಳಿಗೆ ಕೊಡಲು ಹೊರಟ್ಟಿರುವುದನ್ನು ದಯಮಾಡಿ ನಿಲ್ಲಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ವಿ.ಸೋಮಣ್ಣ(ವಸತಿ ಸಚಿವರು):-** ಮಾನ್ಯ ಸಭಾಪತಿಗಳೆ, ಒಂದು ವಿಷಯವನ್ನು ಸದನದ ಗಮನಕ್ಕೆ ತರುತ್ತೇನೆ. ಶ್ರೀ ನಾರಾಯಣಸ್ವಾಮಿಯವರು ಸಭೆ ಮುಕ್ತಾಯವಾಗುವ ಸಮಯದಲ್ಲಿ ಬಂದರು. ಇವರನ್ನು ಸಭೆಗೆ ಆಹ್ವಾನಿಸಿ garland ಮಾಡಿ ಗೌರವಿಸಲಾಯಿತು. ಇಲ್ಲಿ ಬಂದು ನಾನು ಏನು ಮಾತನಾಡಿದೆ ಎನ್ನುವುದನ್ನು ಹೇಳುತ್ತಿದ್ದಾರೆ. ನಾನು ಏನು ಮಾತನಾಡಿದೆ ಎನ್ನುವುದು ನನಗೆ ಗೊತ್ತಿದೆ. ನನಗೂ 40 ವರ್ಷಗಳ ರಾಜಕೀಯ ಇತಿಹಾಸವಿದೆ. ಸಭೆ ಮುಗಿಯುವ ಸಮಯದಲ್ಲಿ ಬಂದರು ಸ್ವಾಗತ ಮಾಡಿಸಿ, garland ಮಾಡಿ ಎಲ್ಲವನ್ನು ಮಾಡಲಾಗಿದೆ. ನಾವು ಏನು ಮಾಡಬೇಕು ಎನ್ನುವುದು ಸರ್ಕಾರದ ವಿವೇಚನೆಗೆ ಬಿಟ್ಟಿದು. ನಮಗೆ ದಿ:ರಾಜೀವ್ ಗಾಂಧಿಯವರ ಬಗ್ಗೆ ಅಪಾರವಾದ ಗೌರವವಿದೆ. ಬೇಲೂರ ಘೋಷಣೆ ಬಗ್ಗೆಯು ಅಪಾರವಾದ ಗೌರವವಿದೆ. ಪ್ರತಿಯೊಂದನ್ನು ನಾನು ತನಿಖೆ ಮಾಡಿಸಿದ್ದೇನೆ. ಒಂದು ಪಂಚಾಯಿತಿ ವ್ಯಾಪ್ತಿಯಲ್ಲಿ 670 ಮನೆಗಳಲ್ಲಿ 380 ಮನೆಗಳು bogus ಮನೆಗಳಾಗಿವೆ. ಇಂತಹ ಅನೇಕ ಸಮಸ್ಯೆಗಳು ಇವೆ ಅವುಗಳನ್ನು ಬದಲಾವಣೆಗಳನ್ನು ಮಾಡಬೇಕಾಗಿದೆ. ಇದು ಯಾರದೊ ದುಡ್ಡಲ್ಲ, ಇದು ಬಡ ಬೋರೇಗೌಡನ ದುಡ್ಡು. ಯಾರಿಗೆ ತಲುಪಬೇಕು ಅವರಿಗೆ ತಲುಪಬೇಕು. ಏನೊ ಕಾಯಿದೆ ಮಾಡಿದ್ದೇವೆ ಎಂದು ಅದಕ್ಕೆ ನೇಣು ಹಾಕಿಕೊಳ್ಳಲು ನಾನು ತಯಾರಿಲ್ಲ. ಎಲ್ಲಿಯು ನಾನು ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುತ್ತೇನೆ ಎಂದು ಹೇಳಿರುವುದಿಲ್ಲ. ಆದರೆ ಇರುವ ಅವ್ಯವಸ್ಥೆಯನ್ನು ನಾನು ಆ ಇಲಾಖೆಯ ಮಂತ್ರಿಯಾಗಿ ಸರಿಪಡಿಸದೆ ಹೋದರೆ ಆ ಇಲಾಖೆಗೆ ನಾನು ಅಪಚಾರ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ನಾನು ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಎಷ್ಟು ದಿನ ಈ ಖಾತೆಯಲ್ಲಿರುತ್ತೇನೆ ಎನ್ನುವುದು ಮುಖ್ಯವಲ್ಲ. ನನ್ನ ಕಾಲದಲ್ಲಿ ಆಗಿರುವ ಅವ್ಯವಸ್ಥೆಯನ್ನು ಸರಿಪಡಿಸಿ, ಸಾಮಾನ್ಯರಿಗೂ ಸೌಲಭ್ಯ ದೊರೆಯುವ ಹಾಗೆ ಮಾಡುವ ನನ್ನ ಪ್ರಯತ್ನ ಸಾಗುತ್ತಿರುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ಸಚಿವರು ಮಾತನಾಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಸಭೆಗೆ ಯಾವ ರೀತಿ ಎಂಎಲ್ಎ ಗಳನ್ನು ಕರೆಯುತ್ತೀರಿ ಅದೇ ರೀತಿ ಎಂಎಲ್‌ಸಿ ಗಳನ್ನು ಕರೆದು ಚರ್ಚೆ ಮಾಡಬೇಕೆಂದು ವಿನಂತಿ.

**ಶ್ರೀ ವಿ,ಸೋಮಣ್ಣ:-** ಮಾನ್ಯ ಸಭಾಪತಿಗಳೆ, ನಾನು ಎರಡು ಸಾರಿ ವಿಧಾನ ಪರಿಷತ್ತಿನ ಸದಸ್ಯನಾಗಿದ್ದೆ, ಮಂತ್ರಿಯಾಗಿದ್ದೆ. ತಾವು ಒಂದು ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ಆ ಕ್ಷೇತ್ರಗಳು ಯಾವುವು ಎನ್ನುವ ಮಾಹಿತಿಯನ್ನು ತರಿಸಿಕೊಳ್ಳುತ್ತಿದ್ದೇನೆ. ಈ ಕ್ಷೇತ್ರದ ವ್ಯಾಪ್ತಿ ಯಾವ ಜಿಲ್ಲೆಯಲ್ಲಿ ಬರುತ್ತದೆ, ಆ ಜಿಲ್ಲೆಯಲ್ಲಿ ಮೊಟ್ಟಮೊದಲ ಬಾರಿಗೆ ವಿಧಾನ ಪರಿಷತ್ತಿನ ಸದಸ್ಯರಿಗೆ, ವಿಧಾನ ಸಭಾ ಸದಸ್ಯರಿಗೆ ಎಷ್ಟು ಜವಾಬ್ದಾರಿ ಇದೆ, ಅಷ್ಟು ಜವಾಬ್ದಾರಿಯನ್ನು ವಿಧಾನ ಪರಿಷತ್ತಿನ ಶಾಸಕರಿಗೆ ಕೊಡದೆ ಇರಬಹುದು, ಆದರೆ ಎಂಎಲ್‌ಸಿ ಗಳನ್ನು ಗೌರವಿಸುವಂತಹ ಕೆಲಸವನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1300**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಸಚಿವರು ಪರಿಸರ ಪ್ರೇಮಿಗಳು, 173 ಬಹಳ ಒಳ್ಳೆಯ ಹೆದ್ದಾರಿ. ಕಡೂರಿನಿಂದ ಮೂಡಗೆರೆಗೆ ಸೇರುತ್ತದೆ. ಬಹಳ ಹಿಂದೆ ಅಂದರೆ, ಮಾನ್ಯ ಕೆಂಗಲ್ ಹನಮಂತಯ್ಯನವರ ಕಾಲದಲ್ಲಿ ಕಾಂಕ್ರೀಟ್ ರೋಡ್ ಮಾಡಿರುವುದು. ಅವತ್ತು ಚಿಕ್ಕಮಗಳೂರಿಗೆ ರೈಲ್ವೆ ಲೈನ್ ಹಾಕಿಕೊಡಲು ಆಗಲಿಲ್ಲ ಎಂದು ಕಾಂಕ್ರೀಟ್ ರೋಡ್ ಮಾಡಿಕೊಟ್ಟಿರುವುದು ಇವತ್ತಿಗೂ ಉಳಿದುಕೊಂಡು ಬಂದಿದೆ. ಇವತ್ತು ಸುಮಾರು 200 ಕೋಟಿ ರೂ.ಗಳಲ್ಲಿ ಆ ರಸ್ತೆಯ ಕಾಮಗಾರಿ ನಡೆದಿದೆ. ಬಹಳ ಮುಖ್ಯವಾದ ವಿಚಾರ ಎಂದರೆ, ಕ್ವಾಲಿಟಿಯನ್ನು ನೋಡುವಂತಹ ಇಂಜಿನೀಯರ್‌ಗಳು ನಮಗೆ ಎಲ್ಲಿಯೂ ಕಾಣಲಿಲ್ಲ. ಅದರ ಕಡೆಗೆ ಗಮನಕೊಡಬೇಕು. ಎರಡನೆ ಪ್ರಶ್ನೆ ಎಂದರೆ, ಈ ಕಾಮಗಾರಿಗೆ ಒಟ್ಟು 3455 ಮರಗಳನ್ನು ತೆರವುಗೊಳಿಸಲು ಅರಣ್ಯ ಇಲಾಖೆಯು ಅನುಮತಿ ನೀಡಿದ್ದು, ಇದರಲ್ಲಿ 1447 ಮರಗಳನ್ನು ತೆರವುಗೊಳಿಸಲಾಗುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಚಿಕ್ಕಮಗಳೂರು, ಸಖರಾಯಪಟ್ಟಣದಿಂದ ಮುಂದಕ್ಕೆ ಪೂರ್ತಿ ಮಲೆನಾಡು ಬರುತ್ತದೆ. ಸಖರಾಯಪಟ್ಟಣದಿಂದೀಚೆಗೆ ಕಡೂರು... ಮಾನ್ಯ ಅಶೋಕರವರೆ ತಾವು ಪರಿಸರ ಪ್ರೇಮಿಗಳು ನಾನು ಹೇಳುವುದನ್ನು ದಯಮಾಡಿ ಕೇಳಬೇಕು. ಇತ್ತೀಚೆಗೆ ಮಳೆ ಏಕೆ ಬರುತ್ತಿಲ್ಲ ಎಂದರೆ, ಅಲ್ಲಿ ಇರುವ ನೂರಾರು ವರ್ಷಗಳ ಮರಗಳೆಲ್ಲವನ್ನು ಕಡೆದು ಹಾಕಿದ್ದಾರೆ.

**ಶ್ರೀ ಆರ್.ಅಶೋಕ:-** ಭೋಜೇಗೌಡರು ಬೇಗನೆ ಮನೆಗೆ ಹೋದರೆ ಹೊಡೆಯುತ್ತಾರೆಯೇ ಎಂದು ಶ್ರೀ ಅರುಣ ಶಹಾಪೂರ ಕೇಳುತ್ತಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ಈ ಪ್ರಶ್ನೆ ಕೇಳುವುದನ್ನು ಬಿಟ್ಟು ಏಕೆ ಮನೆಗೆ ಹೋಗುತ್ತಿಲ್ಲ ಎನ್ನುವುದಕ್ಕೆ ತಾವು ಹೀಗೆ ಹೇಳುತ್ತಿದ್ದಿರಿ ಎಂದು ನನಗೆ ಗೊತ್ತು. ನಮ್ಮ ಮನೆಯವರು ಬೆಂಗಳೂರಿನಲ್ಲಿ ಇಲ್ಲ. ಚಿಕ್ಕಮಗಳೂರಿನಲ್ಲಿದ್ದಾರೆ. 3455 ಮರಗಳನ್ನು ತೆರವುಗೊಳಿಸಲು ಗುರುತಿಸಿದ್ದಾರೆ. 1447 ಮರಗಳನ್ನು ತೆರವುಗೊಳಿಸಿದ್ದಾರೆ. ರಸ್ತೆ ಇಕ್ಕೆಲುಗಳಲ್ಲಿ ಈಗ ಕಾಮಗಾರಿ ನಡೆದಿರುವ ಕಡೆಗಳಲ್ಲಿ ಒಂದೇ ಒಂದು ಮರವನ್ನು ಉಳಿಸಿರುವುದಿಲ್ಲ. ಬೇಕು-ಬೇಡವಾದ ಎಲ್ಲಾ ಮರಗಳನ್ನು ಗುರುತಿಸಿದ್ದಾರೆ. ಒಳ್ಳೆಯ ಜಾತಿಯ ಮರಗಳು ಅಲ್ಲಿ ಇವೆ. 100-150 ವರ್ಷಗಳ ಹಿಂದಿನ ಮರಗಳು ಅಲ್ಲಿ ಇದ್ದವು. ಒಂದೊಂದು ಮರ ಕಡಿಯಲು 10 ದಿವಸ ಕಷ್ಟಪಟ್ಟಿದ್ದಾರೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(560)18-03-2020(09-10)ಬಿಎಸ್‌ಡಿ-ಆರ್‌ಎನ್**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಇದೇ ಭಾಷೆಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ, ಕೆಲವರು ಅದೇ ಭಾಷೆಯಲ್ಲಿ ಮಾತನಾಡುತ್ತಾರೆ. ಅದು ಸಹಜವಾಗಿ ಬರುತ್ತದೆ. ಸಹಜವಾಗಿ ಬಂದಾಗ ಮಾನ್ಯ ನಾರಾಯಣಸ್ವಾಮಿಯವರು ತಪ್ಪು ತಿಳಿದುಕೊಳ್ಳುವ ಪ್ರಶ್ನೆ ಬರುವುದಿಲ್ಲ ಎಂದು ಹೇಳಿದೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ನಮಗೂ ಅವರಿಗೂ ಬಹಳ ವಿಶ್ವಾಸ ಇದೆ.

**ಶ್ರೀ ಹೆಚ್.ಎಂ. ರೇವಣ್ಣ:-** ಇಲ್ಲ ಮಾನ್ಯ ನಾರಾಯಣಸ್ವಾಮಿ ಸ್ವಲ್ಪ misuse ಮಾಡಿದ್ದಾರೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಆ ಜಾಗದಲ್ಲಿ ಬಹಳ ಹಲಸಿನ ಮರಗಳು ಮತ್ತು ನೂರಾರು-ಸಾವಿರಾರು ಹಣ್ಣಿನ ಮರಗಳು ಇದ್ದವು. 3,455 ಮರಗಳಿಗೆ Forest ಇಲಾಖೆಯವರು ರೂ.28 ಲಕ್ಷಗಳ ಬೆಲೆ ಕಟ್ಟಿದ್ದಾರೆ. ಇದು ಎಲ್ಲಿಯಾದರೂ ಉಂಟೇ? ಒಂದು ಮರಕ್ಕೆ ಒಂದು ಸಾವಿರ ರೂಪಾಯಿ ಲೆಕ್ಕ ಹಾಕಿದರೂ ರೂ.34 ಲಕ್ಷಗಳಾಗುತ್ತದೆ. ಇವತ್ತು Silver ಮರಕ್ಕೆ cubic feet ಗೆ ರೂ.400 rate ಇದೆ. Jungle wood, fire wood ಮಾರಿದರೆ ಒಂದೊಂದು ಮರಕ್ಕೆ ಹತ್ತತ್ತು ಸಾವಿರ ರೂಪಾಯಿಗಳು ಸಿಗುತ್ತದೆ. ಇದರ valuation ಕಡಿಮೆ ಮಾಡಿದ್ದಾರೆ. ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳು ನಷ್ಟವಾಗಿದೆ. ರಸ್ತೆಯ ಇಕ್ಕೆಲೆಗಳಲ್ಲಿ ಬರುವ ಎಲ್ಲಾ ಮರಗಳನ್ನು ಕಡಿದಿದ್ದಾರೆ. ಮರಗಳನ್ನು ನೆಡುವ ಬಗ್ಗೆ ಕೇಳಿದರೆ ರಸ್ತೆ ಕಾಮಗಾರಿ ಮುಗಿದ ಮೇಲೆ ಹಾಕುತ್ತೇವೆ ಎಂದು ಹೇಳಿದ್ದಾರೆ. ಈ ಮಳೆಗಾಲಕ್ಕೆ ಹಾಕುತ್ತೇವೆ ಎಂದು ಉತ್ತರ ಹೇಳಬೇಕಲ್ಲವೇ? ಹೋಗಲಿ, ರಸ್ತೆ ಕಾಮಗಾರಿ ಮುಗಿದಿರುವ ಕಡೆಗಳಲ್ಲಿ ಹಾಕಬೇಕಲ್ಲವೇ? ಕಾಮಗಾರಿ ಮುಗಿಯದೇ ಇರುವ ಕಡೆ next ಮಳೆಗಾಲದಲ್ಲಿ ಹಾಕುತ್ತೇವೆ ಎಂದು ಹೇಳಬೇಕು. ಮಾನ್ಯ ಸಚಿವರು ಈ ವಿಷಯವನ್ನು ಬಹಳ serious ಆಗಿ ತೆಗೆದುಕೊಳ್ಳಬೇಕು. ಕಳಪೆ ಕಾಮಗಾರಿ ಬಗ್ಗೆ ನೋಡಬೇಕು ಮತ್ತು ಮರದ valuation ಅನ್ನು ಸರಿಯಾಗಿ ಮಾಡಬೇಕು. ಮುಂದೆ ನೆಡುವ ಎಲ್ಲಾ ಮರಗಳು ಹಣ್ಣಿನ ಮರಗಳಾಗಿರಬೇಕು.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾವು 1,36,00,000 ಹೊಸ ಮರಗಳನ್ನು ಹಾಕಲು Forest ಇಲಾಖೆಗೆ ಹಣವನ್ನು ಕೊಟ್ಟಿದ್ದೇವೆ. ಮಳೆಗಾಲ ಪ್ರಾರಂಭ ಆದಮೇಲೆ ಹಾಕುವ ಕೆಲಸ ಮಾಡಬೇಕೆಂದು ಸರ್ಕಾರ ಸೂಚನೆ ಕೊಡುತ್ತದೆ. ಎರಡನೆಯದಾಗಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಳಪೆ ಕಾಮಗಾರಿ ಬಗ್ಗೆ ನಮ್ಮ ಅಧಿಕಾರಿಗಳನ್ನು ನಾಳೆಯೇ ಸಭೆ ಕರೆಯುತ್ತೇನೆ, ಜೊತೆಗೆ quality control ನವರನ್ನು ಸಭೆ ಕರೆದು ಗುಣಮಟ್ಟ ಪರೀಕ್ಷೆ ಮಾಡಲು ಸೂಚನೆ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ; 1411**

**ಉತ್ತರದ ಪ್ರತಿ ಲಗತ್ತಿಸಿದೆ.**

**ಶ್ರೀ ಎನ್.ಎಸ್. ಬೋಸರಾಜುಃ-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದು, ಪರಿಶಿಷ್ಟ ಜಾತಿಯವರಿಗೆ 1193.03 ಎಕರೆ ಮತ್ತು ಪರಿಶಿಷ್ಟ ಪಂಗಡದವರಿಗೆ 803.06 ಎಕರೆ ಕೃಷಿ ಭೂಮಿ ಮಂಜೂರು ಮಾಡಿರುವ ಬಗ್ಗೆ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. 2014ರಿಂದ 2019ರ ವರೆಗೆ 280 proposals, Scheduled Caste Department ನಿಂದ ಬಂದಿವೆ. ಅದರಲ್ಲಿ ಒಂದು ಮುಗಿದಿದ್ದು, 2,233 ಎಕರೆಗೆ ಸಂಬಂಧಪಟ್ಟಂತೆ Rate Fixation Committee ಯಲ್ಲಿ under the Chairmanship of the Deputy Commissioner ಮಾಡಿ proposals ಬಂದು ಇಲಾಖೆಯಲ್ಲಿದೆ. ಅದೇರೀತಿ ಪರಿಶಿಷ್ಟರಿಂದ 1,143 ಎಕರೆ proposals ಬಂದಿದೆ. ಅದರಲ್ಲಿ 451 ಎಕರೆಯದ್ದು central office ಗೆ ಕಳುಹಿಸಿದ್ದಾರೆ. 639 ಎಕರೆ ರಾಯಚೂರಿನಲ್ಲಿದೆ. Rate Fixation Committee ಯಲ್ಲಿ complete ಆಗಿದೆ. ಆ ಜನರು ಏನಾಗುತ್ತಿದೆ ಎಂದು ದಿನಾ ತಿರುಗುತ್ತಿದ್ದಾರೆ. ತಾವು Director ಗೆ ಹೇಳಿ, Secretary ಗೆ ಹೇಳಿ ಎಂದು ಹೇಳುತ್ತಿದ್ದಾರೆ. Last time Principal Secretary 2-3 ಸಭೆ ಮಾಡಿ, reviewಮಾಡಿ, ಕ್ರಮ ತೆಗೆದುಕೊಂಡು suspend ಮಾಡಿದ್ದಾರೆ. ದೇವದುರ್ಗದ ಅಧಿಕಾರಿಗಳನ್ನು suspend ಮಾಡಿದ್ದಾರೆ. ಇವತ್ತು pending ಇರುವುದನ್ನು ಆದಷ್ಟು ಬೇಗ clear ಮಾಡಬೇಕು. ಕೆಲವು land ಗಳನ್ನು ಇಲಾಖೆಯಿಂದ ಈಗಾಗಲೇ purchase ಮಾಡಿದ್ದು, ಆ land ಅನ್ನು beneficiary ಗಳಿಗೆ ಕೊಟ್ಟಿಲ್ಲ. ಅದನ್ನು ಮಾರಿರುವವರ handover ನಲ್ಲಿಯೇ cultivation ನಡೆಯುತ್ತಿವೆ. ಈ ವಿಷಯದ ಬಗ್ಗೆ ದಯವಿಟ್ಟು ಪರಿಶೀಲನೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳಃ-** ಮಾನ್ಯ ಸಭಾಪತಿಯವರೆ, ಜಿಲ್ಲಾಧಿಕಾರಿಗಳ ದರ ನಿಗದಿ ಮಾಡುವ Committee ಯಲ್ಲಿ ಮಾಡಿ ಕಳುಹಿಸಿದ್ದಾರೆ. ಅದನ್ನು ಮುಂದಿನ ವರ್ಷದಲ್ಲಿ ಹಂತಹಂತವಾಗಿ ಖರೀದಿ ಮಾಡುವ ಪ್ರಕ್ರಿಯೆ ಮಾಡುತ್ತೇನೆ. ಇನ್ನೊಂದು ಗಂಭೀರವಾದ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದು, land purchase ಮಾಡಿದ land ಗಳು owners ಹತ್ತಿರ ಉಳಿದಿದ್ದು, ಫಲಾನುಭವಿಗಳಿಗೆ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಅದನ್ನು ಕೂಡಲೇ ಜಿಲ್ಲಾಧಿಕಾರಿಗಳಿಗೆ

ಸೂಚನೆ ಕೊಟ್ಟು, ಖರೀದಿ ಮಾಡಿರುವ ಜಮೀನನ್ನು ಫಲಾನುಭವಿಗಳಿಗೆ ಕೂಡಲೇ handover ಮಾಡಲು ಆದೇಶ ಕೊಡುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ; 1357**
**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ), (ಶ್ರೀ ಪುಟ್ಟಣ್ಣನವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಒಂದು ಸಣ್ಣ ಮುಜುಗರದೊಂದಿಗೆ ಈ ಪ್ರಶ್ನೆಯನ್ನು ಕೇಳಬೇಕಾಗಿದೆ. ಶಾಸಕರ Personal Assistants ಗಳಿಗೆ 6 ತಿಂಗಳುಗಳಿಂದ ಸಂಬಳ ಇಲ್ಲ. ' ಕಳ್ಳನಿಗೆ ಒಂದು ಪಿಳ್ಳೆ ನೆವ' ಎಂಬಂತೆ ಆ ಒಂದು office ಗೆ ಸಂಬಂಧಪಟ್ಟಂತೆ ಅಸ್ವಸ್ಥತೆ ಇದೆ. ನವೆಂಬರ್‌ನಿಂದ ಸಂಬಳ ಇಲ್ಲ. 2018 ಮತ್ತು 2019 ಎರಡು ವರ್ಷಗಳ Dearness Allowance ಸೇರ್ಪಡೆಯಾಗಿಲ್ಲ. Medical Reimbursement ಇಲ್ಲ. ಮಾರ್ಚ್ 31ರೊಳಗೆ ಆದರೂ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಮಾನ್ಯ ಸಚಿವರು positive ಉತ್ತರವನ್ನು ಕೊಟ್ಟಿದ್ದಾರೆ. ಮಾರ್ಚ್ 31ರೊಳಗೆ ಸಲ್ಲಬೇಕಾಗಿರುವುದು ಸಲ್ಲಬೇಕು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಶಾಸಕರ PA ಗಳಿಗೆ ಪರದಾಡುವ ಪರಿಸ್ಥಿತಿ ಬಂದರೆ ಇನ್ನು ಜನರ ಗತಿ ಏನು? ದಯವಿಟ್ಟು ಇದನ್ನು ಮಾಡಿಕೊಡಬೇಕು.

**ಶ್ರೀ ಆರ್. ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭಾ ಸದಸ್ಯರ ಆಪ್ತ ಸಹಾಯಕರುಗಳಿಗೆ ಖಜಾನೆ–1 ರಡಿಯಲ್ಲಿ ನೇರವಾಗಿ ಖಜಾನೆಯಿಂದ ಹಣ ಪಾವತಿಯಾಗುತ್ತಿತ್ತು. ಈಗ ಲೆಕ್ಕ ಶೀರ್ಷಿಕೆಯನ್ನು ಕಂದಾಯ ಇಲಾಖೆಗೆ ಹಾಕಿರುವುದರಿಂದ ಸಮಸ್ಯೆ ಬಂದಿದೆ. ಈಗಾಗಲೇ ಕಂದಾಯ ಇಲಾಖೆ mapping ಮಾಡಿದ್ದು, ಜನವರಿ ತಿಂಗಳವರಗೆ ಸುಮಾರು ರೂ.96 ಲಕ್ಷಗಳನ್ನು ಆಯಾ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದೇನೆ. ಉಳಿದ ಪಾವತಿಯನ್ನು ಆದಷ್ಟು ಶೀಘ್ರವಾಗಿ ಅಂದರೆ ನನಗನಿಸಿದಂತೆ 10–12 ದಿನಗಳಲ್ಲಿ ಈ ತಿಂಗಳೊಳಗೆ ಅವರಿಗೆ ಸಿಗಬೇಕಾದ ಹಣವನ್ನು ತಲುಪಿಸುತ್ತೇವೆ. ಖಜಾನೆ–1 ನಿಂದ ಖಜಾನೆ–2 ಗೆ transfer ಮಾಡಿರುವುದರಿಂದ ಈ ಸಮಸ್ಯೆ ಉದ್ಭವವಾಗಿದೆ. ಲೆಕ್ಕ ಶೀರ್ಷಿಕೆಯಡಿ DPAR ಗೆ ಬರುತ್ತಿತ್ತು. ಈಗ ನಮಗೆ ಬಂದಿದ್ದು, ಅದನ್ನು ಸರಿಪಡಿಸುತ್ತೇನೆ. ಈ ತಿಂಗಳೊಳಗೆ ಎಲ್ಲವನ್ನು ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ತಕ್ಷಣ ಕೊಡುವಂತೆ ಮಾಡಿ.

**ಶ್ರೀ ಆರ್. ಅಶೋಕ್:–**Immediate ಆಗಿ ಮಾಡುತ್ತೇನೆ ಎಂದು ಹೇಳಿದ್ದೇನೆ. ಈಗಾಗಲೇ ರೂ.96 ಲಕ್ಷಗಳನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರುಣ ಶಹಾಪುರಃ–** ಮಾನ್ಯ ಸಚಿವರಿಗೆ ವಿನಂತಿ ಏನೆಂದರೆ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿರುವವರಿಗೆ ವಿಶೇಷವಾಗಿ ತೊಂದರೆಯಾಗಿದ್ದು, ಅಲ್ಲಿ ಏನಿದೆ ಎಂಬುದನ್ನು ಗಮನಿಸಬೇಕು.

**ಶ್ರೀ ಆರ್. ಅಶೋಕ್ಃ–** ಎಲ್ಲರಿಗೂ ಈ ಸಮಸ್ಯೆ ಆಗಿದ್ದು, ಅದನ್ನು ಸರಿಪಡಿಸುತ್ತೇನೆ.

**ಸಭಾಪತಿಯವರುಃ–** ಶ್ರೀ ಪ್ರಕಾಶ್ ಕೆ. ರಾಥೋಡ್‌ರವರ ಪ್ರಶ್ನೆಗೆ ಕಾಲಾವಕಾಶ ಕೇಳಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ; 634**

**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)(ಶ್ರೀ ಯು.ಬಿ. ವೆಂಕಟೇಶ್‌ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಉತ್ತರ ಬಂದಿದ್ದು, ಪ್ರಶ್ನೆ (ಆ) ರಲ್ಲಿ ನಿಗಮಗಳ ಸ್ಥಾಪನೆಯಿಂದ ಜಾತಿವಾರು ಅಭಿವೃದ್ಧಿ ಆಗಿರುವುದನ್ನು, ಆಗದಿರುವುದನ್ನು ಸರ್ಕಾರ ಗಮನಿಸಿದೆಯೇ ಎಂಬ ಪ್ರಶ್ನೆಗೆ ಈ ನಿಗಮಗಳನ್ನು ಇತ್ತೀಚೆಗೆ ಸ್ಥಾಪಿಸಲಾಗಿರುವುದರಿಂದ ಜಾತಿವಾರು ಅಭಿವೃದ್ಧಿ ಬಗ್ಗೆ ನಿರ್ಧರಿಸಲು ಸಮಯ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಅದೇರೀತಿ Annexure ನಲ್ಲಿ ಯಾವ್ಯಾವುದಕ್ಕೆ ಎಷ್ಟು raise ಮಾಡಿದ್ದೇವೆ ಎಂದು ಕೊಟ್ಟಿದ್ದಾರೆ. ಇದು ಕೊಟ್ಟಿರುವುದು ಸರಿಯಿದೆಯೋ ಇಲ್ಲವೋ ಗೊತ್ತಿಲ್ಲ. ಎರಡನೆಯದಾಗಿ ಬ್ರಾಹ್ಮಣ ಸಮಾಜಕ್ಕೆ ರೂ.28 ಕೋಟಿಗಳನ್ನು ಕೊಟ್ಟಿದ್ದು, ಅದರಲ್ಲಿ ರೂ. 3 ಕೋಟಿಗಳನ್ನು ಖರ್ಚು ಮಾಡಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ವಿಪ್ರ ಸಮಾಜದ ಒಂದು ಸಭೆಯಲ್ಲಿ ಸಮಾಜಕ್ಕೆ ರೂ.100 ಕೋಟಿಗಳನ್ನು ಬಿಡುಗಡೆ ಮಾಡುತ್ತೇನೆ ಎಂದು assurance ಕೊಟ್ಟಿದ್ದಾರೆ. ಈ ಆಶ್ವಾಸನೆಯನ್ನು ಪರಿಪಾಲಿಸುತ್ತಾರೆಯೇ?

**ಶ್ರೀ ಎಸ್.ಆರ್. ಪಾಟೀಲ್:-** ಹೊರಗಡೆ ಆಶ್ವಾಸನೆ ಕೊಟ್ಟಿದ್ದಾರೆ.

**ಶ್ರೀ ಕೆ.ಸಿ. ಕೊಂಡಯ್ಯ:-**House ನಲ್ಲಿ ಕೊಟ್ಟಿಲ್ಲ, ಹೊರಗಡೆ ಕೊಟ್ಟಿದ್ದಾರೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಸಾರ್ವಜನಿಕರ ಸಭೆಗಳಲ್ಲಿ ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರೆ ಗಂಭೀರವಾಗಿ ಪರಿಗಣಿಸುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನಿಯಮ 59ರ ಪ್ರಕಾರ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕು.

**ಸಭಾಪತಿಯವರು:-** ನಾಳೆ ಅವಕಾಶ ಕೊಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಈಗ ಪ್ರಸ್ತಾಪ ಮಾಡಿದರೆ ನಾಳೆ ಉತ್ತರ ಬರುತ್ತದೆ.

**ಸಭಾಪತಿಯವರು:-** ನಾಳೆ ಪ್ರಸ್ತಾಪ ಮಾಡಿ ನಾಳೆಯೇ ಕೊಡುವುದಕ್ಕೆ ಆಗುವುದಿಲ್ಲವೇ?

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಬೆಳಿಗ್ಗೆ ಬಂದ ತಕ್ಷಣ ತೆಗೆದುಕೊಳ್ಳಿ.

**ಸಭಾಪತಿಯವರು:-** ತಾವು ಇಷ್ಟೊತ್ತು ಗಲಾಟೆ ಮಾಡುತ್ತಿದ್ದೀರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ದಿನಾಂಕ 18ನೇ ಮಾರ್ಚ್ 2020, ಸಮೂಹ 3 ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 106 ಪ್ರಶ್ನೆಗಳ ಪೈಕಿ 84 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಲಿಖಿತ ಉತ್ತರಗಳನ್ನು ಲಗತ್ತಿಸಬೇಕು)**

**ಸಭಾಪತಿಯವರುಃ–** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 11. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 18–3–2020ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2020

2) ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕ, 2020

(ಮುಂದು)

(561)/18–3–2020/9–20/ಎಚ್‌ವಿ(ಎಲ್‌ಎಂ)/ಆರ್‌ಎನ್

## 12. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ)ದತ್ತಾಂಶಗಳ ಮಾಹಿತಿ ಮತ್ತು ಮಧ್ಯಾಹ್ನ ಉಪಹಾರ ಯೋಜನೆ ಅಡಿ ಸಾರ್ವಜನಿಕ ಶಿಕ್ಷಣ ಇಲಾಖೆಯಡಿ ಹೊರಗುತ್ತಿಗೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್ ಹಾಗೂ ಡಿ ದರ್ಜೆ ನೌಕರರ ಸೇವೆಯನ್ನು ಮುಂದುವರೆಸಿ, ಗೌರವಧನ ಹೆಚ್ಚಿಸುವ ಕುರಿತು.**

-----

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ ಕಛೇರಿ ಮತ್ತು ತಾಲ್ಲೂಕು ಪಂಚಾಯಿತಿ ಕಛೇರಿಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಉಪಹಾರ ಹಂಚಿಕೆ, ವಿತರಣೆ ಮುಂತಾದ ದತ್ತಾಂಶಗಳ ಸಂಪೂರ್ಣ ಮಾಹಿತಿಯನ್ನು ಕ್ರೋಢಿಕರಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಒಬ್ಬ ಡಾಟಾ ಎಂಟ್ರಿ ಆಪರೇಟರ್ ಮತ್ತು ಒಬ್ಬ ಡಿ ದರ್ಜೆ ನೌಕರರನ್ನು ರಾಜ್ಯದಲ್ಲಿ ಒಟ್ಟು 416 ಸಿಬ್ಬಂದಿಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ಕಳೆದ 10 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಶಿಕ್ಷಣ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಸಂಪೂರ್ಣವಾಗಿ ಇವರುಗಳ ಮೇಲೆ ಅವಲಂಬಿತರಾಗಿರುತ್ತಾರೆ. ಆದರೆ ಸದರಿ ಡಾಟಾ ಎಂಟ್ರಿ ಆಪರೇಟರ್ ಮತ್ತು ಡಿ ದರ್ಜೆ ನೌಕರರ ಸೇವೆಯನ್ನು ತಿಂಗಳ ಅಂತ್ಯದವರೆಗೆ ಮಾತ್ರ ಮುಂದುವರೆಸುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ದಿನಾಂಕ: 9–10–2019ರ ಜ್ಞಾಪನದಲ್ಲಿ ತಿಳಿಸಲಾಗಿದೆ. ಹಾಗೊಮ್ಮೆ ಇವರ ಸೇವೆಯನ್ನು ರದ್ದುಗೊಳಿಸಿದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯ ಸಂಪೂರ್ಣವಾಗಿ ನಿಷ್ಕ್ರೀಯಗೊಳ್ಳಲಿದೆ. ಏಕೆಂದರೆ ಮಧ್ಯಾಹ್ನ ಉಪಹಾರ ಯೋಜನೆಯ ಕಾರ್ಯಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಸಿಬ್ಬಂದಿ ನಿರ್ವಹಿಸುವುದು ಕಷ್ಟಸಾಧ್ಯವಾಗಿರುತ್ತದೆ. ಆದಕಾರಣ, ಡಾಟಾ ಎಂಟ್ರಿ ಆಪರೇಟರ್ ಮತ್ತು ಡಿ ದರ್ಜೆ ನೌಕರ ಈ ಎರಡೂ ಹುದ್ದೆಗಳನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದುವರೆಸುವಂತೆ ಹಾಗು ಗೌರವಧನವನ್ನು ಹೆಚ್ಚಿಸುವಂತೆ ಮಾನ್ಯ ಪ್ರಾಥಮಿಕ, ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರನ್ನು ಕೋರುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಕರ್ನಾಟಕ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾದ ಅಕ್ಷರ ದಾಸೋಹ ಕಾರ್ಯಕ್ರಮದಡಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು ಮತ್ತು ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಅಕ್ಷರ ದಾಸೋಹ ವಿಭಾಗ ಕಛೇರಿಯಲ್ಲಿ ತಲಾ ಒಬ್ಬರು ಡಾಟಾ ಎಂಟ್ರಿ ಆರಪರೇಟರ್ಸ್‌ಗಳು ಮತ್ತು ಗ್ರೂಪ್-ಡಿ ನೌಕರರುಗಳು ಕರ್ತವ್ಯ ನಿರ್ವಹಿಸುತ್ತಿದ್ದು, ರಾಜ್ಯಾದ್ಯಾಂತ 208 ಡಾಟಾ ಎಂಟ್ರಿ ಆಪರೇಟರ್ಸ್‌ಗಳು ಹಾಗೂ 208 ಡಿ ಗ್ರೂಪ್ ಸಿಬ್ಬಂದಿಗಳು ಒಟ್ಟು 416 ಸಿಬ್ಬಂದಿಗಳು ಹೊರ ಸಂಪನ್ಮೂಲ ಸೇವೆ ಆಧಾರದ ಮೇಲೆ ಸುಮಾರು 8-10 ವರ್ಷಗಳಿಂದ ಕಡಿಮೆ ಸಂಬಳಕ್ಕೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಸಿಬ್ಬಂದಿಗಳಲ್ಲಿ ವಿಧವೆಯರು, ಅಂಗವಿಕಲರು ಸಹ ಇದ್ದು, ತುಂಬಾ ಬಡಕುಟುಂಬಗಳಿಂದ ಬಂದವರಾಗಿದ್ದಾರೆ. ಅಲ್ಲದೆ ಈ ಸಿಬ್ಬಂದಿಗಳು ಈ ಕೆಲಸವನ್ನೇ ನಂಬಿ 10 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ, ಇವರುಗಳ ಸೇವೆ ಅತ್ಯಂತ ಅವಶ್ಯಕವಾಗಿ ಬೇಕಾಗಿದೆ. ಆದರೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ತಮ್ಮ ಜ್ಞಾಪನಾ ಸಂಖ್ಯೆ: ಎಂ5/ಮ.ಉ.ಯೋ/ಯೋ.ಗು.ಸಿ.ಸೇ.ವೆ 25 ಭಾಗ(1)/17-18 ದಿ: 9-10-2019ರಂದು ತಮ್ಮ ಜ್ಞಾಪಾನದಲ್ಲಿ 31.3.2020ರ ನಂತರ ಈ ಹೊರಗುತ್ತಿಗೆ ನೌಕರರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಇದರಿಂದ ಈ ಕೆಲಸವನ್ನು ನಂಬಿ ಬದುಕುತ್ತಿರುವ ಈ ಸಿಬ್ಬಂದಿಗಳು ಹಾಗೇ ಇವರ ಕುಟುಂಬಗಳು ಕೆಲಸ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ ಆದ್ದರಿಂದ ಇವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸದೆ ಮುಂದುವರಿಸಬೇಕು ಮತ್ತು ಇವರ ಸೇವಾ ಭದ್ರತೆಗೆ ಕ್ರಮ ವಹಿಸಬೇಕೆಂದು ಈ ಮೂಲಕ ಮಾನ್ಯ ಶಿಕ್ಷಣ ಸಚಿವರಲ್ಲಿ ಆಗ್ರಹಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಮತ್ತು ಶ್ರೀ ಕೆ.ಟಿ.ಶ್ರೀಕಂಠೇಗೌಡರು ಪ್ರಸ್ತಾಪಿಸಿರುವ ಶೂನ್ಯವೇಳೆ ಪ್ರಸ್ತಾವಕ್ಕೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಕಾಳಿ ನದಿ ಮಲಪ್ರಭ ಮತ್ತು ಘಟಪ್ರಭ ನದಿಗಳ ಜೋಡಣೆ ಮಾಡುವ ಕುರಿತು.**

---------

**ಶ್ರೀ ಹಣಮಂತ್ ರುದ್ರಪ್ಪ ನಿರಾಣಿ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಕರ್ನಾಟಕದ ಒಟ್ಟು ಜಲರಾಶಿಯಲ್ಲಿ 2000 ಟಿಎಂಸಿ ಯಷ್ಟು ಹೇರಳವಾದ ಜಲಸಂಪತ್ತು ಇದ್ದು, ನಮ್ಮ ರಾಜ್ಯದ ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ, ನಮ್ಮ ರಾಜ್ಯದ ಸಮುದ್ರ ತೀರಗಳನ್ನೆ ಸೇರುತ್ತದೆ. ಅದರಲ್ಲೂ ಪ್ರಮುಖವಾಗಿ ಕಾಳಿ ನದಿಯೂ ಉತ್ತರ ಕನ್ನಡ ಜಿಲ್ಲೆಯ ಜೋಯ್ಡಾ ತಾಲ್ಲೂಕಿನ ಕುಶಾವಳಿ ಗ್ರಾಮದ ಬಳಿ 'ದಿಗ್ಗಿ' ಎಂಬಲ್ಲಿ ಹುಟ್ಟಿ, ಜಲವಿದ್ಯುತ್ ತಯಾರಿಕೆಗಷ್ಟೆ ಬಳಕೆಯಾಗಿ ಪಶ್ಚಿಮಾಭಿಮುಖವಾಗಿ 159 ಕಿ.ಮೀ ಹರಿದು ಕಾರವಾರ ಬಳಿಯ ಸದಾಶಿವಗಡ ಎಂಬಲ್ಲಿನಿಂದ ಅರಬ್ಬೀ ಸಮುದ್ರ ಸೇರುತ್ತದೆ. ಈ ರೀತಿಯಾಗಿ ಕೃಷಿ ಚಟುವಟಿಕೆಗಳಿಗೆ ಉಪಯೋಗವಾಗದೇ ಸಮುದ್ರ ಸೇರುತ್ತಿರುವ ಕಾಳಿ ನದಿಯ ನೀರನ್ನು ಮಲಪ್ರಭಾ ಮತ್ತು ಘಟಪ್ರಭಾ ನದಿಗಳಿಗೆ ಜೋಡಣೆ ಮಾಡಿದಲ್ಲಿ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಶಾಶ್ವತವಾಗಿ ಕುಡಿಯುವ ನೀರನ್ನು ಪೂರೈಸುವುದರೊಂದಿಗೆ ಬೆಳಗಾವಿ, ಧಾರವಾಡ, ಗದಗ ಮತ್ತು ಬಾಗಲಕೋಟಿ ಜಿಲ್ಲೆಗಳ ಸುಮಾರು 15ಕ್ಕೂ ಹೆಚ್ಚು ತಾಲ್ಲೂಕುಗಳಿಗೆ ಕುಡಿಯುವ ನೀರಿಗಾಗಿ ಮತ್ತು ಕೃಷಿ ಚಟುವಟಿಕೆಗಳಿಗಾಗಿ ಬಳಕೆ ಮಾಡಿಕೊಳ್ಳಬಹುದಾಗಿದೆ. ಇದರಿಂದಾಗಿ ಆ ಭಾಗದ ಜನಜೀವನಕ್ಕೆ ಮಾತ್ರವಲ್ಲದೇ ಜಾನುವಾರಗಳಿಗೆ ಮತ್ತು ಪಕ್ಷಿ ಸಂಕುಲಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕ ಸಮಗ್ರ ನೀರಾವರಿ ಹೋರಾಟ ಸಮಿತಿಯ ಅಧ್ಯಕ್ಷರಾದ ಶ್ರೀ ಸಂಗಮೇಶ ಆರ್.ನಿರಾಣಿಯವರ ನೇತೃತ್ವದಲ್ಲಿ ಮತ್ತು ನಮ್ಮ ರಾಜ್ಯದ ಕೇಂದ್ರ ಸಚಿವರುಗಳು ಮತ್ತು ಸಂಸದರ ಮುಖಂಡತ್ವದಲ್ಲಿ ನಿಯೋಗವು ಕೇಂದ್ರ ಸರ್ಕಾರದ ಜಲಶಕ್ತಿ ಮುಂತ್ರಾಲಯದ ಹಿರಿಯ ಅಧಿಕಾರಿಗಳನ್ನು ಮತ್ತು ಕೇಂದ್ರದ ಜಲಶಕ್ತಿ ಸಚಿವರಾದ ಮಾನ್ಯ ಶ್ರೀ ಗಜೇಂದ್ರಸಿಂಗ್ ಶೇಖಾವತ್‌ರವರುಗಳನ್ನು ಭೇಟಿ ಮಾಡಿ, ಸಭೆಯಲ್ಲಿ ಪಾಲ್ಗೊಂಡು ಎಂಆರ್‌ಎನ್ ಫೌಂಡೇಶನ್ ವತಿಯಿಂದ ತಯಾರಿಸಿರುವ "ವಿಸ್ತೃತ ಯೋಜನಾ ವರದಿ(ಡಿಪಿಆರ್)'ಯೊಂದಿಗೆ ಮನವಿ ಮಾಡಿಕೊಳ್ಳಲಾಗಿದೆ. ಹಾಗೂ ಕೇಂದ್ರ ಸರ್ಕಾರದ ನೀತಿ ಆಯೋಗಕ್ಕೂ ಸಹ ಸದರಿ ಮನವಿಯನ್ನು ಸಲ್ಲಿಸಲಾಗಿದೆ. ಕಾಳಿ ನದಿಯಿಂದ ಮಲಪ್ರಭಾ ಮತ್ತು ಘಟಪ್ರಭಾ ನದಿಗಳಿಗೆ ನೀರು ಹರಿಸಲು ಒಟ್ಟು ವೆಚ್ಚ 5,500 ಕೋಟಿ ರೂ.ಗಳಷ್ಟು ಬೇಕಾಗುತ್ತದೆ. ಅಲ್ಲದೆ, ಮಲಪ್ರಭಾ ನದಿಗೆ ಕಟ್ಟಲಾಗಿರುವ ನವಿಲತೀರ್ಥ ಜಲಾಶಯವೂ 37 ಟಿಎಂಸಿ ಸಾಮರ್ಥ್ಯವನ್ನು ಹೊಂದಿದ್ದು, 1972ರಿಂದ ಇಲ್ಲಿಯವರೆಗೂ ಪ್ರಸಕ್ತ ವರ್ಷವೂ ಸೇರಿ ಕೇವಲ 4-5 ಬಾರಿ ಮಾತ್ರ ಸಂಪೂರ್ಣವಾಗಿ ಭರ್ತಿಯಾಗಿರುವುದನ್ನು ನಾವು ಅರ್ಥೈಸಿಕೊಳ್ಳಬೇಕು. ಆದುದರಿಂದ ನೇತ್ರಾವತಿಯ ನದಿಯ ಉಪ ನದಿಗಳನ್ನು ಉಪಯೋಗಿಸಿಕೊಂಡು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎತ್ತಿನಹೊಳೆ ಯೋಜನೆಯಡಿಯಲ್ಲಿ ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರು ಪೂರೈಸುವ ಮತ್ತು ಕೆರೆಕಟ್ಟೆಗಳನ್ನು ತುಂಬಿಸುವ ಮಾದರಿಯಲ್ಲಿ ಸದರಿ ಕಾಳಿ ನದಿಯಿಂದ ಮಲಪ್ರಭಾ ಮತ್ತು ಘಟಪ್ರಭಾ ನದಿಗಳನ್ನು ಜೋಡಣೆ ಮಾಡಿ, ಆ ಭಾಗದ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದರೊಂದಿಗೆ ಕುಡಿಯುವ ನೀರಿನ ಬವಣೆಯನ್ನು ಹೋಗಲಾಡಿಸಬಹುದಾಗಿರುವುದರಿಂದ ಸರ್ಕಾರವು ಅತ್ಯಗತ್ಯವಾಗಿ ನದಿ ಜೋಡಣೆ ಕಾರ್ಯವನ್ನು ನೀರು ಲಿಫ್ಟ್ ಮಾಡುವ ಮುಖಾಂತರ ಕೈಗೆತ್ತಿಕೊಳ್ಳಲು ಕೂಡಲೇ ಕ್ರಮಕೈಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಜಲಸಂಪನ್ಮೂಲ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಇ)ಬೆಂಗಳೂರು ನಗರಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ಹೊಸಕೋಟೆ ತಹಶೀಲ್ದಾರ್‌ನಿರ್ಬಂಧ ವಿಧಿಸಿರುವುದರಿಂದ ಆಸ್ಪತ್ರೆಗಳಲ್ಲಿ ನೀರಿಲ್ಲದೆ ತೊಂದರೆಯಾಗಿರುವ ಬಗ್ಗೆ.**

------

**ಶ್ರೀ ಎಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಯಲ್ಲಿ ಟ್ಯಾಂಕರ್ ನೀರು ಪೂರೈಕೆಯಾಗದ ಹಿನ್ನಲೆಯಲ್ಲಿ ವೈಟ್‌ಫೀಲ್ಡ್‌ನ ವೈದೇಹಿ ಆಸ್ಪತ್ರೆ ಸೇರಿದಂತೆ ಸುತ್ತ–ಮುತ್ತಲಿನ ಕಂಪನಿಗಳಲ್ಲಿ ಮಂಗಳವಾರ ನೀರಿನ ಸಮಸ್ಯೆ ಎದುರಾಯಿತು. ವೈದ್ಯರು, ರೋಗಿಗಳು ಮತ್ತು ಉದ್ಯೋಗಿಗಳು ಕೈ ತೊಳೆಯಲೂ ನೀರಿಲ್ಲದೆ ಪರದಾಡಬೇಕಾಯಿತು. ಹೊಸಕೋಟೆಯ ಮೂರು ಗ್ರಾಮಗಳಿಂದ ಮಹದೇವಪುರ ಕ್ಷೇತ್ರದ ವಿವಿಧ ಪ್ರದೇಶಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿತ್ತು. ಆದರೆ, ಇಲ್ಲಿನ ಕೊಳವೆ ಬಾವಿಗಳಿಂದ ನೀರು ಸಾಗಿಸಲು ತಹಶೀಲ್ದಾರ್ ನಿರ್ಬಂಧ ವಿಧಿಸಿ ಆದೇಶ ನೀಡಿದ್ದರಿಂದ, ಟ್ಯಾಂಕರ್ ಮಾಲೀಕರು ಮುಷ್ಕರ ನಡೆಸುತ್ತಿದ್ದಾರೆ. 1,600 ಹಾಸಿಗೆ ವ್ಯವಸ್ಥೆಯುಳ್ಳ ವೈದೇಹಿ ಆಸ್ಪತ್ರೆಯಲ್ಲಿ ನಿತ್ಯ ಮೂರು ಸಾವಿರಕ್ಕೂ ಹೆಚ್ಚು ಹೊರ ರೋಗಿಗಳು ಹಾಗೂ ಸಾವಿರಕ್ಕೂ ಹೆಚ್ಚು ಒಳರೋಗಿಗಳು ಇದ್ದಾರೆ. ಈಗ ನೀರಿಲ್ಲದೆ ತುಂಬಾ ಸಮಸ್ಯೆಯಾಗಿದೆ. ಆಸ್ಪತ್ರೆಗೆ ದಿನಕ್ಕೆ 10ಲಕ್ಷ ಲೀಟರ್ ನೀರಿನ ಅವಶ್ಯಕತೆ ಇದೆ ಎಂದ ವೈದೇಹಿ ಆಸ್ಪತ್ರೆ ವೈದ್ಯಾಧಿಕಾರಿ ಡಾ: ಕೆ.ರವಿ ಹೇಳಿದರು. ಕರೋನಾ ಸೋಂಕು ಹಾಗೆ ಕಾಲರಾದಂತಹ ಮಾರಕ ರೋಗಗಳು ಹರಡುತ್ತಿರುವ ಪರಿಸ್ಥಿತಿಯಲ್ಲಿ ರೋಗವನ್ನು ಖಚಿತಪಡಿಸಿಕೊಳ್ಳಲು ನಿತ್ಯ ಆಸ್ಪತ್ರೆಗೆ ನೂರಾರು ಮಂದಿ ಬಂದು ದಾಖಲಾಗುತ್ತಿದ್ದಾರೆ. ಕಾಲರಾ ವಾರ್ಡ್‌ನಲ್ಲಿ ರೋಗಿಗಳು ವಾಂತಿ, ಭೇದಿ ಮಾಡಿದಾಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೊಳೆಯಲು ನೀರಿಲ್ಲದೆ ಪರದಾಡುವಂತಾಗಿದೆ ಎಂದು ಅವರು ಹೇಳಿದರು. ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆ ಬಗೆಹರಿಸಿ, ನೀರು ಪೂರೈಕೆಗೆ ವ್ಯವಸ್ಥೆ ಮಾಡಬೇಕು ಎಂದು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಎಚ್.ಎಂ.ರೇವಣ್ಣವರ ಶೂನ್ಯ ವೇಳೆ ಪ್ರಸ್ತಾಪಕ್ಕೆ ಮಾನ್ಯ ಕಂದಾಯ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**<u>13. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು</u>**

**ಅ) ಗೋವಾದಲ್ಲಿರುವ ಕನ್ನಡಿಗರ ಬಗ್ಗೆ.**

......

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಶಾಸಕರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ದಿನಾಂಕ: 13-3-2020ರಂದು "ಗೋವಾದಲ್ಲಿರುವ ಕನ್ನಡಿಗರ ಬಗ್ಗೆ" ಕೇಳಿರುವ ಶೂನ್ಯವೇಳೆ ಪ್ರಸ್ತಾಪಕ್ಕೆ, ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಮೈಸೂರು ಮತ್ತು ದಾವಣಗೆರೆಯಲ್ಲಿ ಹಕ್ಕಿಜ್ವರದ ಸೋಂಕು ಹರಡಿರುವ ಬಗ್ಗೆ.**

......

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಡಾ: ವೈ.ಎ.ನಾರಾಯಣಸ್ವಾಮಿಯವರ ದಿನಾಂಕ: 17–3–2020ರಂದು ಪ್ರಸ್ತಾಪಿಸಿದ ಶೂನ್ಯವೇಳೆ ಪ್ರಸ್ತಾಪಕ್ಕೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

(ಹೇಳಿಕೆಯನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, 'ಗೋವಾದಲ್ಲಿ ಕನ್ನಡಿಗರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ' ಎನ್ನುವ ವಿಚಾರವನ್ನು ನಾನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿರುವುದಿಲ್ಲ. ಅದರ ಬಗ್ಗೆ ಸದನದಲ್ಲಿ ಮಾತನಾಡಿದ್ದೇನೆ. ಅದಕ್ಕೆ ಮಾನ್ಯ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಉತ್ತರವನ್ನು ಕೊಡಿಸುತ್ತೇನೆ ಎಂದು ಹೇಳಿದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಶೂನ್ಯವೇಳೆ ಪ್ರಸ್ತಾಪ ಎಂದು ತಿಳಿದು ನಾನು ಉತ್ತರವನ್ನು ಒದಗಿಸಿದ್ದೇನೆ. ಇದು ಬೇಡ ಎಂದರೆ, ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ನಾಳೆ ಉತ್ತರವನ್ನು ಕೊಡುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಗೋವಾದಲ್ಲಿರುವ ಕನ್ನಡಿಗರ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ನಾಳೆಯೇ ಉತ್ತರವನ್ನು ಕೊಡಬೇಕು.

**(ಮುಂದು)**

(562) 18.3.2020 9.30 ಪಿಕೆ:ವಿಕೆ

**<u>14, ಗಮನ ಸೆಳೆಯುವ ಸೂಚನೆ</u>**

**ವಿಷಯ:** ರಾಜ್ಯ ಸರ್ಕಾರಿ ನೌಕರರಿಗೆ ವಸತಿ ಗೃಹ ಹಂಚಿಕೆ ಮಾಡುವ ಹಾಗೂ ಹಂಚಿಕೆಯಲ್ಲಿರುವ ನ್ಯೂನತೆಗಳ ಕುರಿತು.

**ಡಾ|| ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರವೂ ಸೇರಿದಂತೆ ರಾಜ್ಯ ಸರ್ಕಾರದ ವತಿಯಿಂದ ರಾಜ್ಯ ಸರ್ಕಾರಿ ನೌಕರರಿಗೆ ವಸತಿ ಗೃಹಗಳನ್ನು ನಿರ್ಮಿಸಲಾಗಿದೆ. ಇದರ ಉದ್ದೇಶ, ರಾಜ್ಯ ಸರ್ಕಾರಿ ನೌಕರರು ತಮ್ಮ ಕಾರ್ಯನಿರ್ವಹಣೆಯ ಕೇಂದ್ರ ಸ್ಥಾನದಲ್ಲಿದ್ದು ಸಾರ್ವಜನಿಕರಿಗೆ ಸದಾ ಕಾಲ ಲಭ್ಯವಿರಬೇಕೆಂದು, ಅವರ ಸೇವೆ ದೊರಕಲಿ ಎಂದು, ಅಷ್ಟೇ ಅಲ್ಲದೇ, ಸ್ವಂತ ಮನೆಗಳನ್ನು ಹೊಂದಿರದೇ ಇರುವ ಸರ್ಕಾರಿ ನೌಕರರುಗಳಿಗೆ, ಅಧಿಕಾರಿಗಳಿಗೆ ಹಂಚಿಕೆ ಮಾಡಬೇಕೆಂದು ನಿಯಮಾವಳಿಗಳಲ್ಲಿ ಸ್ಪಷ್ಟವಾಗಿದೆ. ಆದರೆ ಕೆಲವು ನೌಕರರು, ಅಧಿಕಾರಿಗಳು ಸ್ವಂತ ಮನೆಗಳನ್ನು ಹೊಂದಿದ್ದರೂ, ನಿಯಮಾವಳಿಗಳನ್ನು ಉಲ್ಲಂಘಿಸಿ, ಸರ್ಕಾರಕ್ಕೆ ನೈಜ ಮಾಹಿತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒದಗಿಸದೇ ವಸತಿ ಗೃಹಗಳನ್ನು ಹಂಚಿಕೆ ಮಾಡಿಸಿಕೊಂಡು ವಾಸವಾಗಿರುವುದು ಕಂಡುಬರುತ್ತಿದೆ. ಇದರಿಂದ ನೈಜವಾಗಿ ವಸತಿ ಗೃಹಗಳನ್ನು ಪಡೆಯಲಾಗದೇ ಬಹಳ ಮಂದಿ ನೌಕರರು, ಅಧಿಕಾರಿಗಳು ಹಲವಾರು ಸಲ ಅರ್ಜಿಗಳನ್ನು ಸಲ್ಲಿಸಿದರೂ ಅವರಿಗೆ ಮನೆಗಳು ಸಿಕ್ಕಿಲ್ಲ. ಸ್ವಂತ ಮನೆಗಳು ಇದ್ದರೂ ನಿಯಮಾವಳಿಗಳನ್ನು ಉಲ್ಲಂಘಿಸಿ ವಸತಿ ಗೃಹಗಳನ್ನು ಪಡೆದಿರುವ ಅಧಿಕಾರಿ, ನೌಕರರ ವಿರುದ್ಧ ಶಿಸ್ತು ಕ್ರಮ ಮತ್ತು ಅರ್ಹರಿಗೆ ವಸತಿ ಗೃಹಗಳನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಗೋವಿಂದ ಎಂ ಕಾರಜೋಳ (ಉಪಮುಖ್ಯಮಂತ್ರಿಯವರು ಹಾಗೂ ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಸರ್ಕಾರಿ ವಸತಿ ಗೃಹಗಳನ್ನು ಕಟ್ಟುವ ಉದ್ದೇಶವೇನೆಂದರೆ, ಕೆಲªÀÅ essential service ಗಳಿರುತ್ತವೆ; ಅವರ ಸೇವೆ 24 ಗಂಟೆಗಳ ಕಾಲ ಬೇಕಾಗುತ್ತದೆ. ಉದಾಹರಣೆಗೆ, ನೀರು ಸರಬರಾಜು ಮಂಡಳಿಯಲ್ಲಿ ಕೆಲಸ ಮಾಡುವವರು, ಆಸ್ಪತ್ರೆಗಳಲ್ಲಿ ಕೆಲಸ ಮಾಡುವವರು ಇತ್ಯಾದಿ. ಇನ್ನು ಕೆಲವು ಅಧಿಕಾರಿಗಳಿಗೆ designated quarters ಇರುತ್ತದೆ. ಜಿಲ್ಲಾಧಿಕಾರಿಗಳು, ತಹಸೀಲ್ದಾರರು, ಅಸಿಸ್ಟೆಂಟ್ ಕಮಿಷನರ್, ಎಗ್ಸಿಕ್ಯುಟಿವ್ ಇಂಜಿನಿಯರ್‌ಗಳು ಇಂಥವರಿಗೆ essential service ಎಂದು ವಸತಿ ಗೃಹಗಳನ್ನು ಕೊಡುತ್ತೇವೆ. ಇನ್ನುಳಿದವರಿಗೆ ಸಾಮಾನ್ಯ ನಿಯಮದಡಿ ಹಂಚಿಕೆ ಮಾಡುತ್ತೇವೆ. ಹಂಚಿಕೆ ಮಾಡುವಾಗ ಅವರಿಂದ, ಸದರಿ ಊರಿನಲ್ಲಿ ನನ್ನ ಸ್ವಂತ ಮನೆಯಿಲ್ಲ ಎಂದು declaration ತೆಗೆದುಕೊಳ್ಳುತ್ತೇವೆ. ಸ್ವಂತ ಮನೆ ಇದ್ದವರಿಗೆ ಹಂಚಿಕೆ ಮಾಡಿಲ್ಲ ಎಂದು ನಮ್ಮ ಇಲಾಖೆಯ ಮಾಹಿತಿಯಲ್ಲಿದೆ. ಅಕಸ್ಮಾತ್ ನಿಯಮಾವಳಿಗಳನ್ನು ಮೀರಿ ವಸತಿ ಗೃಹಗಳನ್ನು ಪಡೆದಿದ್ದರೆ ಖಂಡಿತವಾಗಿ ತನಿಖೆ ಮಾಡಿಸುತ್ತೇವೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಂತ್ರಿಗಳ ಉತ್ತರ ಹೇಗಿದೆ ಎಂದರೆ, ಗೊತ್ತಿದ್ದು ಗೊತ್ತಿಲ್ಲದ ಹಾಗೆ, ವಾಸ್ತವಿಕತೆಗೆ ದೂರವಾಗಿರುವ ಉತ್ತರ ಕೊಟ್ಟಿದ್ದಾರೆ. 2011ರ ಒಳಗೆ ಈ ವಸತಿ ಗೃಹಗಳನ್ನು ಹಂಚಿಕೆ ಮಾಡಲಾಗಿದೆ. ಆಮೇಲೆ ಯಾವುದೂ ಮಾಡಿಲ್ಲ. ನನ್ನ ಹತ್ತಿರ ಒಂದು ಪಟ್ಟಿ ಇದೆ. ಗ್ರೂಪ್-ಎ ಅಧಿಕಾರಿಗಳು 650 ಜನ, ಐಎಎಸ್, ಐಪಿಎಸ್, ಐಎಫ್‌ಎಸ್ ಇವರು ವಸತಿ ಗೃಹಗಳಲ್ಲಿದ್ದಾರೆ. 390 ಜನ ಗ್ರೂಪ್-ಬಿ ಅಧಿಕಾರಿಗಳು ವಸತಿ ಗೃಹಗಳಲ್ಲಿ ಇದ್ದಾರೆ. ಮಾನ್ಯ ಮಂತ್ರಿಗಳಿಗೆ ನನ್ನದೊಂದು ಪ್ರಶ್ನೆ ಇದೆ. 25 ವರ್ಷ ಸೇವೆ ಮಾಡಿರುವಂತಹ ಗ್ರೂಪ್-ಎ ಅಧಿಕಾರಿಗಳು ಬೆಂಗಳೂರಿನಲ್ಲಿ ಮನೆ ಮಾಡದೇ ಇರುವುದಕ್ಕೆ ಸಾಧ್ಯವೇ? ದಯವಿಟ್ಟು ಹೇಳಿ. Additional Chief Secretary ಅಧ್ಯಕ್ಷತೆಯಲ್ಲಿ ಗ್ರೂಪ್-ಎ ನೌಕರರಿಗೆ ವಸತಿ ಗೃಹಗಳನ್ನು ಹಂಚಿಕೆ ಮಾಡಲಾಗುವುದು. ಸಿ ಮತ್ತು ಡಿ ಗುಂಪಿನ ನೌಕರರಿಗೆ Chief Engineer ರವರ ಅಧ್ಯಕ್ಷತೆಯಲ್ಲಿರುವ ಸಮಿತಿಯ ಮೂಲಕ ವಸತಿ ಗೃಹಗಳನ್ನು ನೀಡಲಾಗುವುದು ಎಂದಿದೆ. ಆದರೆ, ಅವರು ನಿಜವನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಚ್ಚಿಟ್ಟು, Affidavit ನಲ್ಲಿ ಸುಳ್ಳು ಮಾಹಿತಿ ಕೊಟ್ಟಿರುತ್ತಾರೆ. ನನಗಿರುವ ಮಾಹಿತಿ ಪ್ರಕಾರ ಕೆಲವು ಹಿರಿಯ ಅಧಿಕಾರಿಗಳು ಹೆಚ್‌ಎಸ್‌ಆರ್ ಲೇಔಟ್‌ನಲ್ಲಿ ಸ್ವಂತ ಬಂಗಲೆಗಳನ್ನು ಕಟ್ಟಿ 2-3 ಲಕ್ಷ ರೂಪಾಯಿಗಳ ಬಾಡಿಗೆ ತೆಗೆದುಕೊಳ್ಳುತ್ತಿದ್ದರೂ ಸರ್ಕಾರಿ ವಸತಿ ಗೃಹಗಳಲ್ಲಿ ವಾಸ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಯಾವ ಉದ್ದೇಶಕ್ಕಾಗಿ ಸತ್ಯವನ್ನು ಬಚ್ಚಿಟ್ಟು ನಿಮ್ಮ ಅಧಿಕಾರಿಗಳು ನಿಮ್ಮ ಬಾಯಿಂದ ಈ ರೀತಿ ಉತ್ತರ ಕೊಡಿಸುತ್ತಿದ್ದಾರೋ ಗೊತ್ತಿಲ್ಲ. ಅರ್ಹ ಫಲಾನುಭವಿಗಳು ಪ್ರಾಮಾಣಿಕರಾಗಿದ್ದು, ದುಡ್ಡು ಮಾಡುವುದಕ್ಕೆ ಆಗದೇ ಇರುವವನು ಬೆಂಗಳೂರಿಗೆ ಕೆಲಸ ಮಾಡಲು ಬಂದಾಗ ಅವನಿಗೆ ವಸತಿ ಗೃಹ ಸಿಕ್ಕದೇ ಹೋದರೆ ಅವನ ಗತಿ ಏನಾಗುತ್ತದೆ? ಮಾನ್ಯ ಸಭಾಪತಿಯವರೇ, ನನ್ನ ಹತ್ತಿರ ಎಲ್ಲಾ ಮಾಹಿತಿಗಳು ಇವೆ. ಇದರಲ್ಲಿ ದೊಡ್ಡ ಮಾಫಿಯಾ ಇದೆ. ಎಂಎಲ್‌ಎ, ಎಂಎಲ್‌ಸಿ, ಎಂಪಿಗಳು 'ಉ' Category ನಿವೇಶನವನ್ನು ತೆಗೆದುಕೊಂಡರೆ ಅದನ್ನು Judicial Committee ಗೆ ಕಳುಹಿಸುತ್ತಾರೆ. Affidavit ಸರಿಯಾಗಿದೆಯೋ ಇಲ್ಲವೋ, ಇವರಿಗೆ ಮನೆ ಇದೆಯೋ ಇಲ್ಲವೋ, ಇವರ ಹೆಂಡತಿ-ಮಕ್ಕಳ ಹೆಸರಿನಲ್ಲಿ ಮನೆ ಇದೆಯೋ ಇಲ್ಲವೋ ಎಂಬ ಬಗ್ಗೆ ವಿಚಾರಣೆ ಮಾಡುತ್ತಾರೆ. ನಾವೂ ಕೂಡ ಸ್ಕ್ರೂಟಿನಿಗೆ ಒಳಗಾಗಿದ್ದೇವೆ. ಮಾನ್ಯ ಸಭಾಪತಿಯವರೇ, Gazette Notification ನಲ್ಲಿ, ಬೆಂಗಳೂರಿನಲ್ಲಿ ಅಥವಾ ಅವರು ಕೆಲಸ ಮಾಡುವ ಜಾಗದಲ್ಲಿ, ಅವರ ಹೆಸರಲ್ಲಿ, ಅವರ ಮನೆಯವರ ಹೆಸರಲ್ಲಿ, ಅವರ ಮಕ್ಕಳ ಹೆಸರಲ್ಲಿ ಸ್ವಂತ ಮನೆಯಿದ್ದರೆ ಅವರು ಅರ್ಹರಲ್ಲ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಆತ್ಮಸಾಕ್ಷಿಯಾಗಿ ನಾವೆಲ್ಲರೂ ಯೋಚನೆ ಮಾಡಬೇಕಿದೆ. ಇಲ್ಲಿ ವಾಸ ಮಾಡುತ್ತಿರುವ ಗ್ರೂಪ್-ಎ ನ 650 ಅಧಿಕಾರಿಗಳು ಮತ್ತು ಗ್ರೂಪ್-ಬಿ ಯ 390 ಅಧಿಕಾರಿಗಳು ಯಾರಿದ್ದಾರೆ, ಇವರಲ್ಲಿ ಎಷ್ಟು ಜನ ಸುಳ್ಳು ಮಾಹಿತಿ ಕೊಟ್ಟಿದ್ದಾರೆ? ಎಷ್ಟು ಜನ ನೈಜ ಮಾಹಿತಿ ಕೊಟ್ಟಿದ್ದಾರೆ ಎಂದು ಮಾನ್ಯ ಮಂತ್ರಿಗಳು ವಿಚಾರಣೆ ಮಾಡಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ನನ್ನ ಹತ್ತಿರ ಒಂದು ಮಾಹಿತಿ ಇದೆ. ನಾನು ಆ ಅಧಿಕಾರಿಯ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಹೆಚ್‌ಎಸ್‌ಆರ್ ಲೇಔಟ್‌ನಲ್ಲಿ ಒಂದು ಮನೆ ಹೊಂದಿದ್ದಾರೆ. ರಿಚ್‌ಮಂಡ್ ರಸ್ತೆಯಲ್ಲಿ ಒಂದು ನಿವೇಶನ, RMV Clusters ನಲ್ಲಿ ಒಂದು ಮನೆ ಹೊಂದಿದ್ದಾರೆ. ಆದರೂ ಅವರು ವಸತಿ ಗೃಹದಲ್ಲಿ ವಾಸವಾಗಿದ್ದಾರೆ. ನಾನು ನೋಡಿದ ಹಾಗೆ ಸುಮಾರು ಜನ ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳು ಹೆಚ್‌ಎಸ್‌ಆರ್ ಲೇಔಟ್‌ನಲ್ಲಿ ಮನೆಗಳನ್ನು ಹೊಂದಿದ್ದಾರೆ. ಮಾನ್ಯ ಹೊರಟ್ಟಿಯವರೇ ನಮಗೆ-ನಿಮಗೆ 40 X 60 ವಿಸ್ತೀರ್ಣದ ನಿವೇಶನಗಳನ್ನು ಕೊಡುವುದಿಲ್ಲ, 50 ಫಿ 80 ವಿಸ್ತೀರ್ಣದ ನಿವೇಶನಗಳನ್ನು ಕೊಡುವುದಿಲ್ಲ. ಆದರೆ ಕೋರಮಂಗಲ ಕಾಂಪ್ಲೆಕ್ಸ್ ಎದುರಿಗೆ 60 ಫಿ 90 ವಿಸ್ತೀರ್ಣದ ನಿವೇಶನದಲ್ಲಿ ಮನೆ ಕಟ್ಟಿಕೊಂಡಿರುವ ಅಧಿಕಾರಿಗಳು ಇದ್ದಾರೆ. ಇಂಥವರೂ ಕೂಡ ಸರ್ಕಾರಿ ವಸತಿಗೃಹದಲ್ಲಿ ವಾಸ ಮಾಡುತ್ತಿದ್ದಾರೆ. ಇದರ ಬಗ್ಗೆ ಸ್ಪಷ್ಟವಾದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರಣೆ ನಡೆಸಬೇಕು. ಅವರ್ಯಾರು ನಮ್ಮ ನೆಂಟರು ಅಲ್ಲ, ನಿಮ್ಮ ನೆಂಟರೂ ಅಲ್ಲ. ನಮಗೂ ಅವರಿಗೂ ಯಾವುದೇ ಸಂಬಂಧ ಇಲ್ಲ. ಎಷ್ಟೋ ಜನ ಪ್ರಾಮಾಣಿಕ ಅಧಿಕಾರಿಗಳಿಗೆ ಸರ್ಕಾರಿ ವಸತಿ ಗೃಹ ಸಿಕ್ಕಿಲ್ಲ. ಏಕೆಂದರೆ ಅವರಿಗೆ ಇನ್‌ಫ್ಲೂಯೆನ್ಸ್ ಇಲ್ಲ. ಆದ್ದರಿಂದ ನಾನು, Enquiry Committee ನೇಮಕ ಮಾಡಿ, ನಿರ್ದಿಷ್ಟ ಸಮಯದ ಒಳಗೆ enquiry ಮಾಡಿಸಿ ಎಂದು ಕೇಳಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಗಂಭೀರವಾದ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಜುಡಾಔಥಿ ಮಾಡಿಸಿ ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಕ್ರಮ ಕೈಗೊಳ್ಳಬೇಕು.

**ಡಾ॥ ವೈ.ಎ.ನಾರಾಯಣಸ್ವಾಮಿ:-** ನಿರ್ದಿಷ್ಟ ಸಮಯದಲ್ಲಿ ಎಲ್ಲಾ affidavit ಗಳನ್ನು ಪರಿಶೀಲನೆ ಮಾಡಿ, ಯಾರು ಸುಳ್ಳು affidavit ಕೊಟ್ಟಿದ್ದಾರೋ ಅವರ ಮೇಲೆ ಕೆಸಿಎಸ್‌ಆರ್ ನಿಯಮಗಳ ಪ್ರಕಾರ ಕ್ರಮ ಕೈಗೊಂಡು, ಅವರನ್ನು vacate ಮಾಡಿಸಿ ಅರ್ಹರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಚಿವರಲ್ಲಿ ನನ್ನದೊಂದು ಮನವಿ ಇದೆ. ಮಾನ್ಯ ಸದಸ್ಯರು ಏನು ಹೇಳಿದರೋ ಆ ಕುರಿತಂತೆ ನನ್ನಲ್ಲೂ ಕೆಲವು ಮಾಹಿತಿಗಳಿವೆ. ತಪ್ಪು ಮಾಹಿತಿಗಳನ್ನು ಕೊಟ್ಟು ಮನೆಗಳನ್ನು ಪಡೆದುಕೊಳ್ಳುವುದು ಒಂದು ಕಡೆಯಾದರೆ ಇನ್ನೊಂದು ಕಡೆ, ಒಬ್ಬನೇ ಅಧಿಕಾರಿ 2-3 ಇಲಾಖೆಯ ಉನ್ನತ ಹುದ್ದೆಗಳನ್ನು ನಿರ್ವಹಿಸುವ ಇಂಥವರು, ಮೂರ್ಮೂರು ಸರ್ಕಾರಿ ವಾಹನಗಳನ್ನು ಪಡೆದುಕೊಂಡು ಅವರಿಗೆ, ಅವರ ಮನೆಯವರಿಗೆ ಮತ್ತು ಅವರ ಮಕ್ಕಳ ಉಪಯೋಗಕ್ಕೆಂದು ಬಳಸಿಕೊಳ್ಳುತ್ತಿದ್ದಾರೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ಆಗಲೇ ಉತ್ತರ ಕೊಡುವಾಗ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಿಯಮಾವಳಿಗಳನ್ನು ಮೀರಿ ಯಾರಾದರೂ ಮನೆಗಳನ್ನು ಪಡೆದಿದ್ದರೆ ಅದರ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಈ enquiry ಯನ್ನು ಒಂದು ತಿಂಗಳ ಅವಧಿಯೊಳಗೆ ಮುಗಿಸಬೇಕು. ಎಲ್ಲಾ affidavit ಗಳನ್ನು ಪರಿಶೀಲನೆ ಮಾಡಿ, ತಪ್ಪಿತಸ್ಥರನ್ನು ಗುರುತಿಸಿ ಈ ಸದನಕ್ಕೆ ಮಾಹಿತಿ ಕೊಡಬೇಕೆಂದು ಮನವಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ನಾರಾಯಣಸ್ವಾಮಿಯವರೇ ನಿಮ್ಮ ಹತ್ತಿರ ಇರುವ ದಾಖಲೆಗಳನ್ನು ಮಾನ್ಯ ಸಚಿವರಿಗೆ ಕಳುಹಿಸಿ ಕೊಡಿ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಕಳುಹಿಸಿ ಕೊಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸದಸ್ಯರು ಗಂಭೀರವಾದ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಎ ಗ್ರೂಪ್ ಮತ್ತು ಬಿ ಗ್ರೂಪ್‌ನ ಎಷ್ಟು ಅಧಿಕಾರಿಗಳು ಈ ರೀತಿ ವಸತಿ ಗೃಹಗಳನ್ನು ಪಡೆದುಕೊಂಡಿದ್ದಾರೆ ಎನ್ನುವ ಮಾಹಿತಿ ಕೊಟ್ಟರು. ಇಂತಹ ಅಧಿಕಾರಿಗಳ ಯಾರು ಎಂಬುದರ ಪಟ್ಟಿ ನಮಗೆ ಕೊಟ್ಟರೇ, ಬೆಂಗಳೂರಿನಲ್ಲಿ ಅವರು ಎಲ್ಲೆಲ್ಲಿ ಸ್ವಂತ ಮನೆಗಳನ್ನು ಮಾಡಿದ್ದಾರೆ ಎನ್ನುವ ವರದಿಯನ್ನು ನಾವೇ ನಿಮಗೆ ಕೊಡುತ್ತೇವೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಇದೆಲ್ಲಾ ಇಂದು-ನಿನ್ನೆ ಆಗಿರುವಂಥದ್ದಲ್ಲ. ಬೆಂಗಳೂರಿನಲ್ಲಿ ಸುಮಾರು 50-60 ವರ್ಷಗಳಿಂದ ನಡೆದುಕೊಂಡು ಬಂದಿರುವ ಪದ್ಧತಿ ಇದಾಗಿದೆ. ಸುಳ್ಳು affidavit ಗಳನ್ನು ಕೊಟ್ಟು ವಸತಿ ಗೃಹಗಳಲ್ಲಿ ವಾಸ ಮಾಡುವ ಪರಿಪಾಠ ಸಾಮಾನ್ಯವಾಗಿರುವ ವಿಚಾರ ನನಗೂ ಗೊತ್ತಿದೆ. ಆದರೆ, ನಾನು ಬಹಳ ಸ್ಪಷ್ಟವಾಗಿ ಈ ಸದನಕ್ಕೆ ಹೇಳುವುದೇನೆಂದರೆ, ಸೂಕ್ತ ರೀತಿಯಲ್ಲಿ enquiry ನಡೆಸಿ, ಯಾರ್ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಕೂಡಲೇ ಕ್ರಮ ಕೈಗೊಳ್ಳುತ್ತೇನೆ.

**ಸಭಾಪತಿಯವರು:-** ನಿಯಮ 330ರ ಮೇರೆಗೆ ಚರ್ಚೆ ಮಾಡಲು ಮಾನ್ಯ ಆರೋಗ್ಯ ಸಚಿವರು ಇಲ್ಲ. ನಾಳೆ ಮಾರ್ಚ್ 19, ಗುರುವಾರ ಬೆಳಗ್ಗೆ 10.30 ಗಂಟೆಯವರೆಗೆ ಸದನವನ್ನು ಮುಂದೂಡುತ್ತಿದ್ದೇನೆ.

**(ಸದನವು ರಾತ್ರಿ 9 ಗಂಟೆ 39 ನಿಮಿಷಕ್ಕೆ
ಮುಕ್ತಾಯಗೊಂಡು ಪುನಃ ದಿನಾಂಕ 19ನೇ ಮಾರ್ಚ್ ಮಾಹೆ
2020ರ ಗುರುವಾರದಂದು ಬೆಳಿಗ್ಗೆ 10.30 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~~~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~